ಮಾನವಿಕ ಕರ್ಣಾಟಕ

ಸಂಪುಟ ೭ ಸಂಚಿಕೆ ೧

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೬

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಆವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಆವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು-೫೭೦೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೭ ಸಂಚಿಕೆ ೧

೨೫

ನವಂಬರ್ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೬

MANAVIKA KARNATAKA, Kannada quarterly of the University of Mysore. Volume 7, Number 1, November 1976. Edited by Dr. B.R. Gopal and Dr. B. S. Srikantharadhya.

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಡಾ. ಬಾ. ರಾ. ಗೋಪಾಲ್

ಡಾ. ಬಿ. ಎಸ್. ಶ್ರೀಕಂಠಾರಾಧ್ಯ

ಪ್ರಕಾಶಕರು

ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು

ಎಚ್. ನರಸಣ್ಣ

ಡೈರೆಕ್ಟರ್, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ

ವಿಷಯಸೂಚಿ

ಈ ಸಂಚಿಕೆಯ ಲೇಖಕರು

ಡಾ. ಎ. ಎಲ್. ಶಿವರುದ್ರಪ್ಪ	ರೀಡರ್, ತತ್ವಶಾಸ್ತ್ರವಿಭಾಗ ಮೈಸೂರು ವಿಶ್ವ ವಿದ್ಯಾನಿಲಯ ಮಾನಸಗಂಗೋತ್ರಿ, ಮೈಸೂರು-೬
ಶ್ರೀಧರಮೂರ್ತಿ	ಸಹಾಯಕ ಸಂಶೋಧಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೬.
ದಾಮೋದರ ಕೃಷ್ಣ ಪೊದುವಲ್	ಅಧ್ಯಾಪಕ, ವಾಣಿಜ್ಯವಿಭಾಗ, ಮೈಸೂರು ವಿಶ್ವ ವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ, ಮಂಗಳ ಗಂಗೋತ್ರಿ, ಮಂಗಳೂರು-೫೭೪೧೯೯.
ಎಸ್. ಎನ್. ಶಿವರುದ್ರಸ್ವಾಮಿ	ಇತಿಹಾಸದ ಅಧ್ಯಾಪಕ, ಕಲ್ಪತರು ಕಾಲೇಜು, ತಿಪಟೂರು.
ಡಾ. (ಶ್ರೀಮತಿ) ಕೆ. ಪದ್ಮ ಉಮಾಪತಿ	ಪ್ರಾಧ್ಯಾಪಕಿ ಹಾಗೂ ವಿಭಾಗ ಮುಖ್ಯಸ್ಥೆ, ಗೃಹ ವಿಜ್ಞಾನವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು-೬.
ಪ್ರಧಾನ ಗುರುದತ್ತ	ರೀಡರ್, ಭಾಷಾಂತರ ವಿಭಾಗ ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ.
ಡಾ. ಗೊರೂರು ರಾಮಸ್ವಾಮಯ್ಯಂಗಾರ್	ಸುಪ್ರಸಿದ್ಧ ಸಾಹಿತಿ ಗೊರೂರು, ಹಾಸನಜಿಲ್ಲೆ.
ಕೆ. ರಘುಪತಿಭಟ್ಟ	ಕನ್ನಡದ ಅಧ್ಯಾಪಕ, ಮಣಿಪಾಲ ಜೂನಿಯರ್ ಕಾಲೇಜು, ಮಣಿಪಾಲ, ದಕ್ಷಿಣ ಕನ್ನಡ ಜಿಲ್ಲೆ.
ಎನ್. ಪ್ರಹ್ಲಾದರಾವ್	ಸಂಯೋಜಕ ಸಂಪಾದಕರು, ಕನ್ನಡ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೬

ಎ. ಎಲ್. ಶಿವರುದ್ರಪ್ಪ

ಜ್ಞಾನ ಮತ್ತು ವಿಜ್ಞಾನ

ಪ್ರಜ್ಞಾಶೀಲತೆ ಮಾನವನ ಸಹಜಧರ್ಮ. ಅದರಿಂದಾಗಿ ಅವನು ವಿಚಾರವಂತನೆನಿಸಿದ್ದಾನೆ. ಈ ವೈಚಾರಿಕ ಪ್ರವೃತ್ತಿ ಮಾನವನಲ್ಲಿ ಒಮ್ಮಿಂದೊಮ್ಮೆಗೇ ಮೂಡಿಬರಲಿಲ್ಲ. ಮಾನವಶಿಶುವಿನಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ಮೊದಲಾದ ಈ ಪ್ರವೃತ್ತಿ ಹಂತಹಂತವಾಗಿ ವಿಕಾಸಗೊಂಡು ಪ್ರಬುದ್ಧ ಗೊಳ್ಳುತ್ತಾ ಬಂದಿದೆ.

ಈ ಪ್ರಜ್ಞಾಶೀಲತೆಯ ಮೂಲಸ್ವರೂಪವೇನಿರಬಹುದೆಂಬುದನ್ನು ಕುರಿತು ಅನೇಕ ಮನಶ್ಶಾಸ್ತ್ರಜ್ಞ ಹಾಗೂ ದಾರ್ಶನಿಕರೂ ಚಿಂತಿಸಿದ್ದಾರೆ. ಇದನ್ನು ಕುರಿತು ದಾರ್ಶನಿಕ ಹಾಗೂ ಮನಶ್ಶಾಸ್ತ್ರಜ್ಞನಾದ ಜಾನ್ ಡ್ಯೂಯಿಯ ಚಿಂತನೆ ಗಣನೀಯವಾದದ್ದು. ಮಾನವನಲ್ಲಿ ಸಾರ್ವತ್ರಿಕವಾಗಿ ಕಂಡು ಬರುವ ಕುತೂಹಲ ಪ್ರವೃತ್ತಿ (curiosity)ಯೇ ಅವನ ಪ್ರಜ್ಞಾಶೀಲತೆಗೆ ಮೂಲ ಕಾರಣ ಎಂದು ಡ್ಯೂಯಿ ಗುರುತಿಸಿದನು.

ಬುದ್ಧಿಶಕ್ತಿಗೆ ಬೀಜರೂಪವಾದ ಈ ಕುತೂಹಲ ಪ್ರವೃತ್ತಿಯು ಮೊಟ್ಟಮೊದಲಿಗೆ ಮಗುವಿನಲ್ಲಿ ಅದರ ಅಂಗಾಂಗಗಳ ಚಲನೆಯ ರೂಪದಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಮಗುವಿನ ಅಂಗವಿನ್ಯಾಸಕ್ಕೆ ಅದರ ಮನಸ್ಸಿನಲ್ಲಿ ಸುಪ್ತವಾದ ಪ್ರೇರಣೆಯೊಂದಿರುತ್ತದೆ. ಆಗಂತುಕನಾಗಿ ಈ ಜಗತ್ತಿಗೆ ಬಂದ ಮಾನವರೂಪಿಯಾದ ಈ ಶಿಶುವಿನಲ್ಲಿ ತಾನು ಮುಂದೆ ಈ ವಿಶ್ವವನ್ನೆಲ್ಲಾ ಅರಿತು ಪ್ರಾಜ್ಞನಾಗಬೇಕೆಂಬ ಬಯಕೆ ಅಡಗಿದೆ. ಅಜ್ಞತೆಯಿಂದ ಪ್ರಾಜ್ಞತೆಯತ್ತ, ತಮಸ್ಸಿನಿಂದ ಜ್ಯೋತಿಯತ ಸಾಗಬೇಕೆಂಬ ಬಯಕೆಗೆ ಅದೇ ನಾಂದಿ.

ಮಾನವನ ಈ ಪ್ರಯತ್ನದಲ್ಲಿ ಅವನಿಗೆ ನೆರವಾಗುವ ಈ ಕುತೂಹಲ ಪ್ರವೃತ್ತಿಯ ಮೊದಲ ಹಂತವನ್ನು organic curiosity ಅಂದರೆ, ಅಂಗಾಂಗಗಳ ಚಲನೆಯ ಮೂಲಕ ವ್ಯಕ್ತ ಗೊಂಡ ಕುತೂಹಲ ಎಂದು ಕರೆಯಲಾಗಿದೆ. ಮಾತನಾಡಲು ಕಲಿಯುವ ಮುನ್ನ ಮಗುವಿನ ಕಣ್ಣು, ಕಿವಿ, ಕೈಕಾಲುಗಳ ಚಲನೆಯನ್ನು ನೋಡಿ ಅದರ ಆಸಕ್ತಿ ಅಭಿಲಾಷೆಗಳನ್ನು ತಿಳಿಯುತ್ತೇವಷ್ಟೆ! ತನ್ನ ಪರಿಸರದಲ್ಲಿ ಕಾಣುವ ಬಣ್ಣಗಳ ವೈವಿಧ್ಯತೆ, ರೂಪಗಳ ನಾವೀನ್ಯತೆ, ಶಬ್ದಗಳ ಲಯಬದ್ಧತೆ ಇವುಗಳಿಂದಾಗಿ ಮಗುವಿನಲ್ಲಿ ಸುಪ್ತವಾಗಿದ್ದ ಜ್ಞಾನದಾಹ ಸಚೇತನಗೊಳ್ಳುತ್ತದೆ. ಮಾನವಶಿಶು ವೆಂಬುದು ಕೇವಲ ಯಾಂತ್ರಿಕ ಪ್ರವೃತ್ತಿಯ ಮಾಂಸದ ಮುದ್ದೆಯಲ್ಲ. ಅದು ಸಚೇತನಾತ್ಮಕವಾದ ಭೌತಿಕ ಸೃಷ್ಟಿ. ಅದನ್ನು ಕುರಿತ ಅಧ್ಯಾತ್ಮದ ವಿವರಗಳು ಬೇಕಾದಷ್ಟಿವೆ. ಈಗ ಅವುಗಳ ಮಾತು ಇಲ್ಲಿ ಅಪ್ರಕೃತ.

ಮಗುವು ಮಾತನಾಡಲು ಕಲಿತಂತೆಲ್ಲಾ ಅದು ಕೇಳುವ ಪ್ರಶ್ನೆಗಳಿಗೆ ಕೊನೆಮೊದಲಿರುವುದಿಲ್ಲ. ತಾನು ಕಂಡದ್ದನ್ನೆಲ್ಲಾ ಕುರಿತು ಪ್ರಶ್ನೆ ಕೇಳುತ್ತದೆ. ತಾನು ಕೇಳಿದ ಪ್ರಶ್ನೆಗೆ ದೊರೆತ ಉತ್ತರವನ್ನು ಪರಿಶೀಲಿಸುವ ಸಹನೆಯೂ ಮಗುವಿಗೆ ಅನೇಕ ವೇಳೆ ಇರುವುದಿಲ್ಲ. ಮಗುವಿನ ಈ ಮುಗ್ಧ ಕುತೂಹಲ ದಿಂದಾಗಿ ಹಿರಿಯರು ಅನೇಕ ವೇಳೆ ಪೇಚಿಗೆ ಸಿಕ್ಕುವುದುಂಟು. ಅದರ ಫಲವಾಗಿ ಹುಸಿಮುನಿಸನ್ನು

ತಳೆದು ಪ್ರಾಜ್ಞತೆಯ ಸೋಗಿನಲ್ಲಿ ಪಾರಾಗುತ್ತಾರೆ. ಆದರೆ ಹಿರಿಯರ ಈ ಕೋಪ, ಗದರಿಕೆ ಇಲ್ಲವೆ ಸೋಗಿನ ಉತ್ತರದಿಂದ ಮಗುವಿಗಾದ ನಿರಾಶೆಯ ಸ್ವರೂಪ ಅನೇಕ ತಂದೆತಾಯಿಯರಿಗೆ ತಿಳಿಯದು. ಹಸುವಿಗೆ ಬಾಲ ಏಕೆ? ಅದಕ್ಕೆ ಕೊಂಬು ಬೇಕೆ? ಮನುಷ್ಯನಿಗೆ ಅದೇಕೆ ಇಲ್ಲ? ಈ ಮುಂತಾದ ಪ್ರಶ್ನೆಗಳು ಮಗುವಿನ ಸಹಜ ಹಾಗೂ ನೈಜಕುತೂಹಲದ ಪ್ರತೀಕವೇ ಹೊರತು ಹಿರಿಯರಲ್ಲಿ ಕಾಣುವ ಪ್ರತಿಷ್ಠೆಯಿಂದಲ್ಲ. ತನಗಿಂತಲೂ ಮೊದಲೇ ಹುಟ್ಟಿ ಬೆಳೆದ ಈ ಹಿರಿಯರು ತನಗಿಂತ ಬಲ್ಲಿದರೆಂಬ ವಿಶ್ವಾಸ ಮಗುವಿಗಿರುವಂತಿದೆ. ಅದರ ಫಲವೇ ಈ ಪ್ರಶ್ನೆ.

ಈ ರೀತಿ ಪ್ರಶ್ನಿಸುವ ಮಗುವಿನ ಕುತೂಹಲವನ್ನು social curiosity ಅಂದರೆ ಸಮಾಜವನ್ನವಲಂಬಿಸಿ ಬೆಳೆದ ಕುತೂಹಲ ಎಂದು ಕರೆಯಲಾಗಿದೆ. ಮಗುವು ಮುಂದೆ ಬೆಳೆದು ಅದರಲ್ಲಿ ಅವಧಾನ, ಸ್ಮರಣ, ಧಾರಣಾದಿ ಮಾನಸಿಕ ಸಾಮರ್ಥ್ಯಗಳು ಉದ್ದೀಪನಗೊಂಡು ಕಾರ್ಯಪ್ರವೃತ್ತವಾದಂತೆಲ್ಲಾ ಅದರ ಕುತೂಹಲ ಪ್ರವೃತ್ತಿ ಹೆಚ್ಚು ಕ್ರಿಯಾಶೀಲಗೊಳ್ಳುತ್ತದೆ. ತನ್ನಲ್ಲಿ ಕುತೂಹಲಕ್ಕೆ ಕಾರಣವಾದ ಸಮಸ್ಯೆಗಳನ್ನು ಕುರಿತು ದೀರ್ಘಕಾಲ ಚಿಂತಿಸಿ ಪರಿಹಾರವನ್ನು ಪಡೆಯುವಂತಹ ಧಾರಣಶಕ್ತಿ ವಿಚಾರವಂತ ಮಾನವನಲ್ಲಿ ಬೆಳೆಯುತ್ತದೆ. ಅದನ್ನು intellectual curiosity ಅಂದರೆ ಪ್ರಜ್ಞಾವಂತ ಕುತೂಹಲ ಎಂದು ಕರೆದಿದ್ದಾರೆ. ಈ ಕುತೂಹಲ. ಕೇವಲ ಪ್ರಶ್ನೆಗಳನ್ನು ಕೇಳುವುದರಿಂದಲೇ ತೃಪ್ತಿಗೊಳ್ಳುವಂತಹುದಲ್ಲ. ಕೇಳಿದ ಪ್ರಶ್ನೆಗೆ ಪರಿಹಾರ ದೊರೆಯುವವರೆಗೂ ಅದರ ಉತ್ಕಟತೆ ಕ್ಷೀಣಿಸುವುದಿಲ್ಲ. ಧಾರಣ, ಸ್ಮರಣಾದಿ ಮಾನಸಿಕ ಶಕ್ತಿಗಳು ಇದಕ್ಕೆ ಸಹಕಾರಿಯಾಗಿ ನಿಲ್ಲುತ್ತವೆ. ಇಂತಹ ಪ್ರಜ್ಞಾತ್ಮಕ ಕುತೂಹಲವೇ ನಿಜವಾದ ಜ್ಞಾನಸಾಧನ, ಇದು ಜ್ಞಾನವಾಹಿನಿಯೂ ಅಹುದು. ಇದರ ಫಲವಾಗಿ ಮಾನವನಲ್ಲಿ ವೈಚಾರಿಕತೆ, ವೈಜ್ಞಾನಿಕತೆ, ದಾರ್ಶನಿಕತೆ ಮುಂತಾದ ಬೌದ್ಧಿಕಸಾಮರ್ಥ್ಯಗಳು ಮತ್ತು ಪ್ರವೃತ್ತಿಗಳು ಬೆಳೆದು ಬರಲು ಸಾಧ್ಯವಾಗಿದೆ.

ವಿಜ್ಞಾನದ ಸ್ವರೂಪ

ಮಾನವನ ಈ ಕುತೂಹಲ ಪ್ರವೃತ್ತಿಯ ಫಲವಾಗಿ ಅವನಲ್ಲಿ ಸತ್ಯಾನ್ವೇಷಣೆಯ ಮನೋಭಾವ ಸಾಧ್ಯವಾಯಿತು. ಸತ್ಯಾನ್ವೇಷಣೆಗೆ ಹಲವು ಹನ್ನೊಂದು ಮಾರ್ಗಗಳನ್ನು ಇವನು ಕಂಡುಕೊಂಡನು. ವಿಜ್ಞಾನ, ದರ್ಶನ, ಇತಿಹಾಸ, ಧರ್ಮ ಮುಂತಾದ ವಿವಿಧ ಪ್ರಕಾರಗಳಲ್ಲಿ ಸತ್ಯಾನ್ವೇಷಣೆ ನಡೆಯುತ್ತಿದೆ. ಈ ಎಲ್ಲ ಅನ್ವೇಷಣೆಗೆ ವಸ್ತುವಾಗಿರುವ ಈ ವಿಶ್ವವು ಚೇತನ ಅಚೇತನಗಳನ್ನೊಳಗೊಂಡು ಸದಾ ಚಲನಾತ್ಮಕವಾಗಿದೆ. ಜೀವ ಅಜೀವರಿಂದ ರೂಪಗೊಂಡಿರುವ ಈ ಜಗತ್ತು ಅತ್ಯಂತ ಗಹನ ಹಾಗೂ ಗಂಭೀರತರವಾಗಿದ್ದು ದಿಗ್ಭ್ರಮೆಗೊಳಿಸುವಂತಿದೆ. ಜಗತ್ತನ್ನು ಕಂಡು ಭಯಭೀತನಾಗಿ ದಿಗ್ಭ್ರಮೆಗೊಂಡು ಮಾನವನು ಅಷ್ಟರಿಂದ ಅಸಹಾಯಕನಾಗಿ ಕೈಕಟ್ಟಿ ಕುಳಿತುಕೊಳ್ಳಲಿಲ್ಲ. ಈ ವಿಶ್ವದ ವೈಚಿತ್ರವೇನಿರಬೇಕೆಂಬುದನ್ನು ತಿಳಿಯಲು ತನಗೆ ಬೇಕಾದ ಬೌದ್ಧಿಕ ಸಾಮರ್ಥ್ಯಗಳನ್ನು ಬೆಳೆಸಿಕೊಂಡು ಅದರ ಸಹಾಯದಿಂದ ಜಗತ್ತನ್ನು ತಿಳಿಯಲು ಬಹು ಹಿಂದಿನಿಂದಲೂ ಪ್ರಯತ್ನಮಾಡುತ್ತಲೇ ಬಂದಿದ್ದಾನೆ.

ಇಂದ್ರಿಯಗ್ರಾಹ್ಯವಾದ ಈ ವಿಶ್ವದ ಪ್ರತಿಯೊಂದು ಆಗುಹೋಗುವಿನಲ್ಲಿಯೂ ಒಂದಲ್ಲ ಒಂದು ನಿಯಮ ಅಡಗಿದೆ ಎಂಬುದನ್ನು ತಿಳಿಯಲು ಮಾನವನು ಶಕ್ತನಾದನು. ಬುದ್ಧಿಗೆ ವೇದ್ಯವಾಗುವ ಈ ನಿಯಮವನ್ನು ಅರಿತಾಗ ಇಂದ್ರಿಯಗ್ರಾಹ್ಯವಾದ ಈ ಭೌತಿಕ ವಿಶ್ವದ ವಿವರಣೆ ನಮಗೆ ದೊರೆತಂತಾಗುತ್ತದೆ. ವಸ್ತುವಿನ ಹಿಂದೆ ಅಡಗಿರುವ ನಿಯಮದ ಅರಿವು ನಮಗಾಗದಿದ್ದಾಗ ಆ ವಸ್ತುವು ನಮಗೆ ರಹಸ್ಯವಾಗಿ ಕಾಣುತ್ತದೆ. ಈ ರಹಸ್ಯವನ್ನು ಬಿಡಿಸುವ ಪ್ರಯತ್ನವೇ ವಿಜ್ಞಾನ.

ವಿಜ್ಞಾನ ಎಂಬುದು ಒಂದು ದೃಷ್ಟಿ. ವಿಶ್ವದ ರಹಸ್ಯವನ್ನು ಬಿಡಿಸಲು ಮಾನವನು ಈ ವೈಜ್ಞಾನಿಕ ದೃಷ್ಟಿಯನ್ನು ಬೆಳೆಸಿಕೊಂಡಿದ್ದಾನಷ್ಟೆ. ವಿಜ್ಞಾನಕ್ಕೆ ಆಧಾರವಾದ ಮೂಲ ಸಿದ್ಧಾಂತಗಳು ಎರಡು. ಅವು ವಿಜ್ಞಾನದ ಗೃಹೀತತತ್ವಗಳು (postulates) ಎಂದೆನಿಸಿವೆ. ಆ ತತ್ವಗಳಾವುವೆಂದರೆ:

೧. ಕಾರ್ಯಕಾರಣ ನಿಯಮ (Law of Causation)
೨. ವಿಶ್ವದ ಏಕರೂಪತೆ (Uniformity of Nature)

ಈ ಜಗತ್ತಿನಲ್ಲಿ ಯಾವ ಘಟನೆ ನಡೆಯಬೇಕಾದರೂ ಅದಕ್ಕೆ ಬೇಕಾದ ಒಂದು ಕಾರಣ ಇರಲೇಬೇಕು. ಕಾರಣವಿಲ್ಲದೆ ಯಾವ ಕಾರ್ಯವೂ ಸಾಧ್ಯವಾಗಲಾರದು. ಇದು ವಿಜ್ಞಾನದ ಮೂಲ ನಂಬಿಕೆ. ಈ ನಂಬಿಕೆಗೆ ಅನುಗುಣವಾಗಿ ಇನ್ನು ಉಳಿದೆಲ್ಲ ವೈಜ್ಞಾನಿಕ ಸಿದ್ಧಾಂತಗಳು ರೂಪಿತಗೊಳ್ಳುತ್ತವೆ. ನೀರು ಎಂಬ ಒಂದು ದ್ರವ ಸಾಧ್ಯವಾಗಬೇಕಾದರೆ ಅದಕ್ಕೆ ಕಾರಣವಾದ ಮೂಲದ್ರವ್ಯಗಳಾವುವು ಮತ್ತು ಅವು ಯಾವ ಪ್ರಮಾಣದಲ್ಲಿ ಸಂಯೋಗಗೊಳ್ಳಬೇಕು ಎಂಬುದನ್ನು ವಿಜ್ಞಾನಿಯು ಪ್ರಯೋಗಾತ್ಮಕವಾಗಿ ಪರಿಶೀಲಿಸಿ ನಿರ್ಣಯಿಸುತ್ತಾನೆ. ಆದರೆ ನೀರು ಎಂಬುದು ಕೇವಲ ಆಕಸ್ಮಿಕವಾದ ವಸ್ತುವಲ್ಲ, ಅದರ ಅಸ್ತಿತ್ವಕ್ಕೆ ಬೇಕಾದ ಕಾರಣಗಳಿವೆ ಎಂಬುದು ವಿಜ್ಞಾನದ ಮೂಲ ಸಿದ್ಧಾಂತ.

ಹಾಗೆಯೇ ವಿಜ್ಞಾನದ ಮತ್ತೊಂದು ಮೂಲ ಸಿದ್ಧಾಂತವೆಂದರೆ–ವಿಶ್ವವು ಏಕರೂಪಾತ್ಮಕವಾದದ್ದು–ಎಂಬುದು. ಅಂದರೆ ವಿಶ್ವದ ಯಾವುದೇ ಭಾಗದಲ್ಲಿಯಾಗಲಿ,ಯಾವುದೇ ಕಾಲದಲ್ಲಿಯಾಗಲಿ ಈ ಭೌತಿಕ ಜಗತ್ತಿನ ವಸ್ತುಗಳ ಸ್ಥಿತಿ ಒಂದೇ ರೂಪದಲ್ಲಿರುತ್ತದೆ. ಉದಾಹರಣೆಗೆ, ನಾಯಿಯ ಮೂಲಸ್ವರೂಪ ಮತ್ತು ಅದರ ಅಂಗಾಂಗಳ ರಚನೆ ಜಗತ್ತಿನ ಯಾವ ಭಾಗದಲ್ಲಿದ್ದರೂ ಒಂದೇ ರೀತಿ ಇರುತ್ತದೆ. ಹಾಗೇನಾದರೂ ವೈವಿಧ್ಯತೆ ಕಂಡುಬಂದಲ್ಲಿ ಅದಕ್ಕೆ ಸೂಕ್ತವಾದ ಕಾರಣವಿರಲೇ ಬೇಕಾಗುತ್ತದೆ. ಈ ನಿಯಮದಿಂದಾಗಿಯೇ ವಿಶ್ವವು ಸುವ್ಯವಸ್ಥಿತ ಹಾಗೂ ಕ್ರಮಬದ್ಧವಾಗಿದೆ. ಹಾಗಿಲ್ಲವಾದರೆ ಈ ವಿಶ್ವವು ಕೇವಲ ವೈವಿಧ್ಯತೆಯಿಂದ ಕೂಡಿದ್ದು ಅತ್ಯಂತ ಗೊಂದಲಮಯವಾಗಿರಬೇಕಾಗುತ್ತಿದ್ದಿತು. ವಿಶ್ವದ ವೈವಿಧ್ಯತೆಯಲ್ಲಿ ಏಕತೆ ಸಾಧ್ಯವಾಗಿದೆ. ಕೇವಲ ಅನೇಕತೆಯೇ ವಿಶ್ವಧರ್ಮವಾಗಿದ್ದರೆ ಅನೈಕ್ಯತೆಯು ಪ್ರಕೃತಿಧರ್ಮವಾಗುತ್ತಿದ್ದಿತು. ಅನೈಕತೆಯಲ್ಲಿ ಏಕತೆ ಇರುವುದರಿಂದಲೇ ವಿಶ್ವವು ನಿಯಮಬದ್ಧವಾಗಿರುವುದು.

ಇಂತಹ, ನಿಯಮಬದ್ಧವಾದ ಈ ವಿಶ್ವದಲ್ಲಿ ಅಡಗಿರುವ ನಿಯಮಗಳಾವುವೆಂಬುದನ್ನು ಗುರುತಿಸಿ ಅನ್ವೇಷಣೆ ಮಾಡುವುದೇ ವಿಜ್ಞಾನ. ಈ ನಿಯಮಗಳನ್ನು ಪ್ರಕೃತಿ ನಿಯಮ ಇಲ್ಲವೆ ಪ್ರಕೃತಿಯ ಸತ್ಯ ಎಂದು ಹೇಳಲಾಗಿದೆ. ಆದ್ದರಿಂದಲೇ ವಿಜ್ಞಾನಿಯೂ ಒಬ್ಬ ಸತ್ಯಾನ್ವೇಷಕ.

ವಿಜ್ಞಾನಿಯು ಸತ್ಯವನ್ನು ಸೃಷ್ಟಿಸುವವನಲ್ಲ. ಅವನು ಅದನ್ನು ಗುರುತಿಸುವವನು. ಸೃಷ್ಟಿಯ ಈ ರಹಸ್ಯ ಗ್ರಂಥದಲ್ಲಿ ಲಿಖಿತಗೊಂಡಿರುವ ಈ ತತ್ವಗಳನ್ನು ಓದುವ ಕಲೆ ಇವನಿಗೆ ಗೊತ್ತು. ವಿಶ್ವದ ಅವಲೋಕನ (observation), ವಸ್ತುಗಳನ್ನು ಕುರಿತು ಪ್ರಯೋಗ (experiment) ಉಪಕಲ್ಪನೆ (hypothesis), ಮುಂತಾದ ವೈಜ್ಞಾನಿಕ ಮಾರ್ಗಗಳ ಸಹಾಯದಿಂದ ವಿಶ್ವದ ಸತ್ಯಗಳನ್ನು ಕಾಣಲು ಇವನು ಶಕ್ತನಾಗುತ್ತಾನೆ.

ಪವಾಡಗಳು

ವಿಜ್ಞಾನದ ಮೂಲ ಸಿದ್ಧಾಂತಗಳಾದ, ಕಾರ್ಯಕಾರಣ ನಿಯಮ ಮತ್ತು ವಿಶ್ವದ ಏಕತೆ ಎಂಬ ಎರಡು ತತ್ವಗಳಿಗೆ ವಿರುದ್ಧವಾಗಿ ವಿಶ್ವದ ಘಟನೆಗಳು ಜರುಗುವುದಾದರೆ ಆಗ ವಿಜ್ಞಾನಿ ತುಂಬಾ ಅಸಹಾಯಕನಾಗುತ್ತಾನೆ. ಕಾರಣವೇ ಇಲ್ಲದೆ ಒಂದು ಘಟನೆ ನಡೆದಲ್ಲಿ ಆಗ ಅದು ವಿಜ್ಞಾನದ ತಳಹದಿಯನ್ನೇ ಅಲುಗಿಸಿದಂತಾಗುತ್ತದೆ. ಇಂತಹ ಘಟನೆಗಳನ್ನು ತನ್ನ ಪರಿಸರದಲ್ಲಿ ಕಂಡಾಗ ವಿಜ್ಞಾನಿಯಾದವನು ಸುಮ್ಮನಿರಲು ಸಾಧ್ಯವಿಲ್ಲ. ಅದನ್ನು ಕುರಿತು ಪರಿಶೀಲಿಸುವುದು ಅವನ ವೈಜ್ಞಾನಿಕ ಧರ್ಮಕ್ಕೆ ಅವನು ತೋರಿಸುವ ಗೌರವವಷ್ಟೆ. ಹಾಗೆ ಮಾಡದಿದ್ದಲ್ಲಿ ಅವನು ತನ್ನ ನಂಬಿಕೆಯ ವಿಜ್ಞಾನವನ್ನೇ ಶಂಕಿಸಬೇಕಾಗುತ್ತದೆ.

ವಿಶ್ವದ ಘಟನೆಗಳನ್ನು ನಿಯಂತ್ರಿಸುವ ಕಾರ್ಯಕಾರಣ ನಿಯಮಕ್ಕೆ ಹೊರತಾದ ಘಟನೆಗಳು ಪವಾಡ ಎಂದೆನಿಸಿವೆ. ಕಾರ್ಯಕಾರಣನಿಯಮದಲ್ಲಿ ಪರಿಪೂರ್ಣ ಶ್ರದ್ಧೆಯನ್ನು ಹೊಂದಿರುವ

ವಿಜ್ಞಾನಿಯ ದೃಷ್ಟಿಯಿಂದ ಪವಾಡಗಳು ಅಸಹಜವೆನಿಸುತ್ತವೆ (unnatural) ವಿಜ್ಞಾನಿಯಾದವನು ಈ ರೀತಿಯ ಅಸಹಜವಾದ ಘಟನೆಗಳನ್ನು ಕಂಡು ಸುಮ್ಮನಿರುವಂತಿಲ್ಲ. ಅವುಗಳನ್ನು ಕಣ್ಣುಮುಚ್ಚಿಕೊಂಡು ಒಪ್ಪುವುದು ಅವನ ವೈಜ್ಞಾನಿಕ ದೃಷ್ಟಿಗೆ ಒಂದು ಅಪಚಾರ.

ಒಂದು ವೇಳೆ ಪವಾಡಗಳು ವಿಜ್ಞಾನದ ನಿಯಮಗಳಿಗೆ ಮೀರಿದ ಘಟನೆಗಳು ಎಂದೆನ್ನುವುದಾದರೆ ಆಗ ಅದನ್ನಾದರೂ ವಿಜ್ಞಾನಿಯು ಸಂಶಯಾತೀತ ರೀತಿಯಲ್ಲಿ ಪರಿಶೀಲಿಸಬೇಕು. ನಿಜವಾಗಿಯೂ ಇದು ವಿಜ್ಞಾನಕ್ಕೆ ಮೀರಿದ ಘಟನೆ ಎಂಬುದನ್ನು ವೈಚಾರಿಕತೆಯ ಎಲ್ಲ ಸಾಧನಗಳನ್ನೂ ಬಳಸಿ ಪರೀಕ್ಷಿಸಬೇಕು. ವಿಜ್ಞಾನದ ಎಲ್ಲ ನಿಯಮಗಳಿಗೂ ಮೀರಿದುದೆಂಬುದನ್ನು ಸಂಶಯಾತೀತವಾಗಿ ಅವನು ಮನಗಂಡಾಗ ವಿಜ್ಞಾನಕ್ಕೆ ಇರಬಹುದಾದ ಮಿತಿಯೇನೆಂಬುದರ ಸೂಕ್ಷ್ಮ ಪ್ರಜ್ಞೆ ಅವನಿಗೆ ಸಾಧ್ಯವಾಗುತ್ತದೆ. ನಿಜವಾಗಿಯೂ ಲೌಕಿಕ ನಿಯಮಗಳನ್ನೆಲ್ಲಾ ಮೀರಿ, ಪವಾಡರೂಪದಲ್ಲಿ ಯಾವುದಾದರೂ ಘಟನೆ ನಡೆಯುವುದು ಖಂಡಿತ ಸಾಧ್ಯ ಎಂಬುದನ್ನು ಪ್ರತ್ಯಕ್ಷವಾಗಿ ಕಂಡಾಗ ವಿಜ್ಞಾನಿಯು ಅಲೌಕಿಕತೆಯ ಅವಶ್ಯಕತೆಯನ್ನು ಒಪ್ಪಿಯಾನು. ಆದರೆ ಆ ರೀತಿ ಒಪ್ಪುವ ಮುನ್ನ ಆ ಘಟನೆಯು ವಿಜ್ಞಾನಕ್ಕೆ ಮೀರಿದುದು ಎಂಬುದಂತೂ ಸಿದ್ಧಾಂತವಾಗಬೇಕು.

ವಿಜ್ಞಾನಕ್ಕೆ ಮೀರಿದ ಅಲೌಕಿಕ ಸಾಧನದಿಂದ ನಡೆಯುವ ಕಾರ್ಯಗಳು ವಿಜ್ಞಾನಿಯ ಕುತೂಹಲವನ್ನು ಕೆರಳಿಸುವುದಷ್ಟೇ ಅಲ್ಲ, ವಿಜ್ಞಾನಕ್ಕೆ ಮೀರಿದ ಸಾಮರ್ಥ್ಯ ಒಂದಿರಲು ಸಾಧ್ಯ ಎಂಬುದನ್ನು ತೋರಿಸಿದಂತಾಗುತ್ತದೆ. ಆದ್ದರಿಂದ ಪವಾಡಪುರುಷರು ವಿಜ್ಞಾನಿಯ ಸತ್ಯಾನ್ವೇಷಣೆಯ ವಿಚಾರದಲ್ಲಿ ಸಂಶಯಗ್ರಸ್ತರಾಗಬೇಕಾಗಿಲ್ಲ. ಅದು ಅಲೌಕಿಕತೆಗೆ ಭೂಷಣವೂ ಅಲ್ಲ.

ಎಸ್. ಶ್ರೀಧರಮೂರ್ತಿ

ಜನಪದ ಇಬ್ಬಂದಿ ಕಥೆಗಳು

> ಮೂವರು ಗಂಡಸರು. ಒಬ್ಬನ ಬಳಿ ಸೇದುನಳಿಗೆ ಇತ್ತು, ತಂಬಾಕು ಇರಲಿಲ್ಲ. ಇನ್ನೊಬ್ಬ ಹೇಳಿದ: "ನನ್ನ ಬಳಿ ತಂಬಾಕು ಇದೆ. ಆದರೆ ಬೆಂಕಿಕಡ್ಡಿ ಇಲ್ಲ." ಮತ್ತೊಬ್ಬ ಹೇಳಿದ: "ನನ್ನ ಬಳಿ ಕಡ್ಡಿ ಇದೆ." ನಳಿಗೆ ಇದ್ದವನಿಗೆ ತಂಬಾಕು ಇದ್ದವನು ತಂಬಾಕು ಕೊಟ್ಟ. ಇನ್ನೊಬ್ಬ ಕಡ್ಡಿ ಕೊಟ್ಟ. ಮೊದಲನೆಯವನು ನಳಿಗೆಗೆ ತಂಬಾಕು ತುಂಬಿ ಬೆಂಕಿ ಹಚ್ಚಿದ. ಮೂವರೂ ಅದನ್ನು ಸೇದಿದರು. ಸೇದುವಿಕೆ ಮುಗಿಯಿತು. ನಳಿಗೆಯವನು ಅದನ್ನು ಕೈಗೆತ್ತಿಕೊಂಡು ಅದರಲ್ಲಿನ ಬೂದಿಯನ್ನು ಕೊಡವಿದ. ಈ ಬೂದಿಯಿಂದ ಸುಂದರವಾದ ಹೆಣ್ಣೊಬ್ಬಳು ಎದ್ದುಬಂದಳು. ಈ ಮೂವರಲ್ಲಿ ಇವಳು ಯಾರಿಗೆ ಸೇರಬೇಕು?

ಇದು ಬೇತಾಳ ಪಂಚವಿಂಶತಿಯ ಕಥೆಯಲ್ಲ! ಆಫ್ರಿಕದ ಸಿಯರ್ ಲಿಯೋನ್ ರಾಷ್ಟ್ರದಲ್ಲಿ ಇರುವ ಲಿಂಬಾ ಬುಡಕಟ್ಟಿನ ಜನರಲ್ಲಿ ಪ್ರಚಲಿತವಿರುವ ಜನಪದ ಇಬ್ಬಂದಿ ಕಥೆ. ಈ ಕಥೆಯ ಕೊನೆಯಲ್ಲಿ ಮೂಡುವ ಪ್ರಶ್ನೆಗೆ ಕರಾರುವಾಕ್ ಉತ್ತರವಿಲ್ಲ. ಮೂರೂ ಮಂದಿಯ ಪರವಹಿಸಿ ಮೂರು ಬಗೆಯಲ್ಲಿ ವಾದ ಮಂಡಿಸಬಹುದು. ಈ ವರ್ಗದ ಕಥೆಗಳು ಜನಪದ ಕಥಾಸಾಹಿತ್ಯದ ವಿಶಿಷ್ಟ ಪ್ರಕಾರ.

ಇವುಗಳನ್ನು ಇಂಗ್ಲಿಷಿನಲ್ಲಿ ಡೈಲೆಮ ಕಥೆಗಳು ಎನ್ನುತ್ತಾರೆ. ಕನ್ನಡದಲ್ಲಿ ಡೈಲೆಮ ಎನ್ನುವುದಕ್ಕೆ ಸಂವಾದಿ ಪದಗಳಾಗಿ ಉಭಯಸಂಕಟ, ಉಭಯತರ, ಇಕ್ಕಟ್ಟು, ಇಕ್ಕೋಡು, ಡೋಲಾಯಮಾನ, ಇಬ್ಬಗೆ ಮೊದಲಾದವು ಇವೆ. ಆದರೆ ಇವು ಯಾವುವೂ ಅಷ್ಟು ಸೂಕ್ತವಾಗಿ ಕಾಣಲಿಲ್ಲವಾದ್ದರಿಂದ ಈ ಪ್ರಕಾರದ ಕಥೆಗಳನ್ನು "ಇಬ್ಬಂದಿ ಕಥೆಗಳು" ಎಂದೇ ಕರೆಯಲು ಉದ್ದೇಶಿಸಿದ್ದೇನೆ. ಈ ಪದಕ್ಕೆ ಕಿಟೆಲ್ ಕೊಡುವ ಅರ್ಥ ಇದು: "two opinions, two manners or ways (My, ಎರಡು ತರ)–ಇಬ್ಬನ್ನಿ."

ಈ ಬಗೆಯ ಕಥೆಗಳು ಆಫ್ರಿಕದಲ್ಲಿ ವಿಪುಲವಾಗಿ ದೊರೆಯುತ್ತವೆ.[1] (ಈ ಲೇಖನದ ಅನುಬಂಧದಲ್ಲಿ ಆಫ್ರಿಕದ ವಿವಿಧ ಬುಡಕಟ್ಟುಗಳಲ್ಲಿ ಪ್ರಚಲಿತವಿರುವ ೫೦ ಇಬ್ಬಂದಿ ಕಥೆಗಳನ್ನು ಕೊಡಲಾಗಿದೆ). ಇವು ಆ ಜನರ ಸಾಂಸ್ಕೃತಿಕ ಹಾಗೂ ಸಾಮಾಜಿಕ ಪರಿಸರದಲ್ಲಿ ಪ್ರಬಲ ಪಾತ್ರವನ್ನು ವಹಿಸುತ್ತವೆ. ಆಫ್ರಿಕಕ್ಕೆ ವಿಶಿಷ್ಟವಾದ ಕಥೆಗಳಾದರೂ ಅಲ್ಲಿಗೇ ಸೀಮಿತ ಕಥೆಗಳೇನಲ್ಲ. ಇವು ಎಲ್ಲೆಡೆಯಲ್ಲಿಯೂ ಸಿಗುವ ಸಾಧ್ಯತೆಗಳಿವೆ. ಇಂಥ ಕಥೆಗಳು ಕನ್ನಡದಲ್ಲಿ ಇವೆಯೋ ಇಲ್ಲವೋ ಎಂದು ಚರ್ಚಿಸುವ ಮೊದಲು ಈ ಕಥೆಗಳ ಸ್ವರೂಪ ಎಂಥದು ಎಂಬುದನ್ನು ಆಫ್ರಿಕದ ಹಿನ್ನೆಲೆಯಲ್ಲಿಯೇ ನೋಡುವುದು ಉಚಿತ.

---

1 ಆಫ್ರಿಕದ ಬೇರೆ ಬೇರೆ ಬುಡಕಟ್ಟುಗಳ ಜನಪದ ಕಥೆಗಳ ಸಂಕಲನ ಕೃತಿಗಳಲ್ಲಿ ಇಂಥವನ್ನು ಅಲ್ಲಲ್ಲಿ ಕಾಣಬಹುದು. ಇಂಥ ಕಥೆಗಳನ್ನೇ ಇವನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ, ೮೫ ಬುಡಕಟ್ಟುಗಳ ೧೬೮ ಕಥೆಗಳ ೩೪೯ ಪಾಠಪ್ರಭೇದಗಳನ್ನು ಬಾಸ್ಕಂ ಕೊಟ್ಟಿದ್ದಾನೆ. ನೋಡಿ: Bascom, William.R, *African Dilemma Tales.*

ಸಾವಿರಾರು ಭಾಷೆಗಳ ಸಾವಿರಾರು ಬುಡಕಟ್ಟುಗಳ ಸಂಕೀರ್ಣ ಸಮುದಾಯವನ್ನು ಹೊಂದಿರುವ ಆಫ್ರಿಕ ಎಂಥ ಜಾನಪದ ಖಣಿಯಾಗಿದೆ ಎಂದರೆ ಉತ್ಪ್ರೇಕ್ಷೆ ಮಾಡಿದಂತಲ್ಲ. ನಾಗರಿಕತೆ ಇನ್ನೂ ಈ ಸಮುದಾಯದ ಒಳಗೆ ಪ್ರವೇಶಿಸದೆ ಅಂಚಿನಲ್ಲಿಯೇ ಸುಳಿದಾಡುತ್ತಿರುವುದರಿಂದ, ಶಿಷ್ಟ ಸಂಸ್ಕೃತಿಗೆ ಹೊಗಲು ತಾವು ಸಿಗದಿರುವುದರಿಂದ, ದಟ್ಟ ಜನಪದ ಸಂಸ್ಕೃತಿಯು ಗಟ್ಟಿ ಪೊರೆಯಲ್ಲಿ ಬದುಕುತ್ತಿರುವ ಈ ಸಮಾಜದಲ್ಲಿ ಜನಪದ ಸಾಹಿತ್ಯ ಜೀವಂತವಾಗಿ ಕ್ರಿಯಾಶೀಲವಾಗಿದೆ. ಕಾಡುಗಳ ಹಳುವಿನ ನಡುವಣ ಗ್ರಾಮಗಳಲ್ಲಿ ಇರುಳು ಮಾತು ಗರಿಗೆದರುತ್ತದೆ. ಜನಪದ ಸಾಹಿತ್ಯ ಅನೇಕ ಮುಖಗಳಾಗಿ ಹೊರ ಚೆಲ್ಲುತ್ತದೆ. ಇಲ್ಲಿಯ ಕಥಾಸಾಹಿತ್ಯದ ಒಂದು ವಿಶಿಷ್ಟ ವರ್ಗವಾಗಿ ಜನಪದ ಇಬ್ಬಂದಿ ಕಥೆಗಳು ಕಾಣಿಸಿಕೊಳ್ಳುತ್ತವೆ. ಆಫ್ರಿಕದ ಪ್ರತಿಭೆಯ ಹಾಗೂ ಚಿಂತನ ಧಾಟಿಯ ಪ್ರತಿಫಲನವನ್ನು ಈ ಕಥೆಗಳಲ್ಲಿಯೂ ಕಾಣಬಹುದು.

ಈ ಲೇಖನದ ಆರಂಭದಲ್ಲಿ ಕೊಟ್ಟಿರುವ ಕಥೆಯನ್ನು ಗಮನಿಸಿದರೆ ಇಂಥ ಕಥೆಗಳ ಸ್ವರೂಪದ ಬಗ್ಗೆ ಗೊತ್ತಾಗುತ್ತದೆ. ಇವು ಗದ್ಯಕಥನಗಳು. ವಸ್ತುವಿಗಾಗಲಿ ಅದರ ನಿರೂಪಣೆಯ ತಂತ್ರಕ್ಕಾಗಲಿ ಪ್ರಾಧಾನ್ಯವಿರುವುದಿಲ್ಲ. ಕಥೆಯ ಕೊನೆಯಲ್ಲಿ ಎರಡು ಅಥವಾ ಎರಡಕ್ಕಿಂತ ಹೆಚ್ಚು ಪರ್ಯಾಯಗಳು ಕಾಣಿಸಿಕೊಳ್ಳುತ್ತವೆ. ಯಾವ ಪಾತ್ರ ಮಾಡಿದ ಕೆಲಸ ಹೆಚ್ಚಿನದು. ಯಾರಿಗೆ ಪ್ರತಿಫಲ ಸಲ್ಲಬೇಕು. ಯಾರಿಗೆ ದಂಡ ಲಭಿಸಬೇಕು. ಯಾವುದು ಸರಿ. ಮುಂತಾದ ಪ್ರಶ್ನೆಗಳು ಎದುರಾಗುತ್ತವೆ. ಈ ಕ್ಲಿಷ್ಟ ಸಮಾನಾಂತರ ಪರ್ಯಾಯಗಳಲ್ಲಿ ಆಯ್ಕೆ ಮಾಡುವಾಗ ನೈತಿಕ. ಧಾರ್ಮಿಕ ಹಾಗೂ ನ್ಯಾಯಿಕ ಮೌಲ್ಯಗಳು ಕೆಲಸಮಾಡುತ್ತವೆ. ಕೆಲವು ಕಥೆಗಳು ಅದ್ಭುತ ಕಥೆಗಳ ಸಾಲಿಗೂ ಸೇರುವಂತೆ ಇರುತ್ತವೆ. ನಂಬಲಸದಳ ಕಾರ್ಯಗಳನ್ನು ಮಾಡಿದವರಲ್ಲಿ ಯಾರು ಹೆಚ್ಚು ಎಂಬ ಪ್ರಶ್ನೆಯನ್ನು ಒಡ್ಡಲಾಗುತ್ತದೆ. ಕಥೆ ಹೇಳುವವನು ಹೀಗೆ ಡೋಲಾಯಮಾನ ಸ್ಥಿತಿಯಲ್ಲಿ ಕಥೆಯನ್ನು ಕೊನೆಗೊಳಿಸುತ್ತಾನೆ. ಅನೇಕ ಸಂದರ್ಭಗಳಲ್ಲಿ ಸ್ಪಷ್ಟ ಪ್ರಶ್ನೆಯನ್ನು ಒಡ್ಡುತ್ತಾನೆ. ಅನೇಕ ಸಲ ಶ್ರೋತೃವೃಂದದಿಂದ ಭಿನ್ನ ಭಿನ್ನ ಉತ್ತರಗಳು. ಅಭಿಪ್ರಾಯಗಳು ಬಂದಮೇಲೆ ತನ್ನದೇ ಒಂದು ಉತ್ತರವನ್ನು ಹೇಳಿದರೂ ಹೇಳಬಹುದು.

ಪ್ರಶ್ನೆಗಳಿಂದ ಕೊನೆಗೊಳ್ಳುವ ಕಥೆಗಳೆಲ್ಲವೂ ಇಬ್ಬಂದಿ ಕಥೆಗಳಾಗಲಾರವು. ನೈತಿಕ. ಧಾರ್ಮಿಕ. ಸಾಮಾಜಿಕ ಹಾಗೂ ನ್ಯಾಯಿಕ ಆಧಾರಗಳಿಂದ ವಾದಮಾಡಲು ಅವಕಾಶಗಳನ್ನು ಕಲ್ಪಿಸುವ ಪ್ರಶ್ನೆಗಳಿಂದ ಅಂತ್ಯವಾಗುವ ಕಥೆಗಳೇ ಇಬ್ಬಂದಿ ಕಥೆಗಳು. ಇಬ್ಬಂದಿ ಕಥೆಗಳೊಂದಿಗೆ ತಪ್ಪಾಗಿ ಭ್ರಮಿಸುವ ಸಾಧ್ಯತೆ ಇರುವ ಇತರ ವರ್ಗದ ಕಥೆಗಳೆಂದರೆ ಒಗಟು ಕಥೆಗಳು ಮತ್ತು ಗಣಿತಾತ್ಮಕ ಕಥೆಗಳು. ಈ ಕಥೆಗಳಲ್ಲಿಯೂ ಶ್ರೋತೃವಿನ ಮುಂದೆ ಪ್ರಶ್ನೆಗಳನ್ನು ಒಡ್ಡಲಾಗುತ್ತದೆ. ಈ ಕಥೆಗಳೂ ಸಾಮಾನ್ಯವಾಗಿ ಗದ್ಯಕಥನಗಳು. ಒಗಟುಕಥೆಗಳಲ್ಲಿ ಕೆಲವು ಪದ್ಯರೂಪದಲ್ಲಿರಬಹುದು. ಈ ಎರಡು ಬಗೆಯ ಕಥೆಗಳ ಪ್ರಶ್ನೆಗಳಿಗೆ ನೇರವಾದ ಖಾತರಿ ಉತ್ತರವಿರುತ್ತದೆ. ಇಬ್ಬಂದಿ ಕಥೆಗಳು ಇವುಗಳಿಂದ ಭಿನ್ನವಾಗುವುದು ಈ ಅಂಶದಿಂದಲೇ ಎನ್ನಬಹುದು. ಇವುಗಳಿಗೆ ಉತ್ತರವೇ ಇರುವುದಿಲ್ಲ. ಒಂದುವೇಳೆ ಇದ್ದರೂ ಸಹ ಅಂಥ 'ಉತ್ತರದ' ಸ್ವರೂಪ ಭಿನ್ನ ಬಗೆಯದಾಗಿರುತ್ತದೆ. ಒಗಟಿನ ಹಾಗೂ ಗಣಿತಾತ್ಮಕ ಕಥೆಗಳನ್ನು ಹೇಳಿದ ಮೇಲೆ ಶ್ರೋತೃಗಳಿಂದ ಹಲವು ಉತ್ತರಗಳು ಬಂದ ಮೇಲೆ ಪಕ್ಕಾ ಸರಿಯಾದ ಉತ್ತರವನ್ನು ಕೊಟ್ಟನೆಂದರೆ ಮುಗಿಯಿತು. ಮುಂದೆ ಮಾತಿಗೆ ಅವಕಾಶವೇ ಇರುವುದಿಲ್ಲ. ಆದರೆ ಇಬ್ಬಂದಿ ಕಥೆಗಳಲ್ಲಿ ಒಂದು ವೇಳೆ 'ಸಿದ್ಧ ಉತ್ತರ'ವನ್ನು ಕೊಟ್ಟರೂ ವಾದ ಹಾಗೂ ಚರ್ಚೆಗಳಿಗೆ ಅಪಾರ ಅವಕಾಶವಿರುತ್ತದೆ. ಅಂದರೆ ಒಗಟಿನ ಕಥೆಗಳನ್ನು ಉತ್ತರಿಸಬಹುದು. ಗಣಿತಾತ್ಮಕ ಕಥೆಗಳನ್ನು ಪರಿಹರಿಸಬಹುದು. ಆದರೆ ಇಬ್ಬಂದಿ ಕಥೆಗಳಲ್ಲಿ ಚರ್ಚಿಸಿ ಬಹುಮತ ನಿರ್ಣಯದಿಂದ 'ಉತ್ತರ ನಿರ್ಧರಿಸಬೇಕು: ಇಲ್ಲವೇ ಅನುತ್ತರರಾಗಬೇಕು. ಇಬ್ಬಂದಿ ಕಥೆಗಳನ್ನು ಆಫ್ರಿಕದ ಜನ ಉತ್ತಮ ಮಟ್ಟದ ಬೌದ್ಧಿಕ ಕ್ರಿಯೆಯಾಗಿ ಮಹತ್ವದ್ದೆಂದು ಭಾವಿಸುತ್ತಾರೆ. ಆದರೆ ಒಗಟುಗಳನ್ನು ಮಕ್ಕಳ ಆಟದ ಕ್ರಿಯೆ ಎಂದು ಪರಿಗಣಿಸುತ್ತಾರೆ.

ಅನೇಕ ಇಬ್ಬಂದಿ ಕಥೆಗಳಲ್ಲಿ ಪರಂಪರಾಗತವಾಗಿ ಇಟ್ಟುಕೊಂಡು ಬಂದ. ಆ ಸಮುದಾಯ ಸಂಸ್ಕೃತಿಯ ದೃಷ್ಟಿಕೋನಕ್ಕೆ ಅನುಗುಣವಾದ ಒಂದು ಉತ್ತರವಿರುತ್ತದೆ. ಇಂಥ ಸಿದ್ಧ ಉತ್ತರಗಳೇ

ಖಚಿತ ಉತ್ತರಗಳಿಲ್ಲ ಎನ್ನುವುದು ಗಮನಾರ್ಹ. ಸಾರ್ವತ್ರಿಕ ಹಾಗೂ ಸಾರ್ವಕಾಲಿಕ ಬೆಲೆ ಅವುಗಳಿಗಿರುವುದಿಲ್ಲ. ಇಂಥ ಬಿಡಿ ಉತ್ತರಗಳನ್ನು ಹೊಂದಿರುವ ಕಥೆಗಳೂ ಸಾಕಷ್ಟು ಚರ್ಚೆಗೆ ಒಳಗಾಗುತ್ತವೆ.

ಈ ಕಥೆಗಳ ವಿಶಿಷ್ಟತೆಯೇ ಶ್ರೋತೃಗಳು ಚರ್ಚೆಯಲ್ಲಿ ಪಾಲುಗೊಳ್ಳುವಿಕೆ. ಕಥಾವಕ್ತೃವಿನ ಸುತ್ತ ನೆರೆದ ಜನ ನಾಲ್ಕಿರಬಹುದು, ನಾಲ್ವತ್ತಿರಬಹುದು. ವಕ್ತೃವಿನ ಜೊತೆಗೆ ತಾವೂ ದನಿಗೂಡಿಸುತ್ತಾರೆ. ಅವರ ಭಾಗವಹಿಸುವಿಕೆ ಅದ್ವಿತೀಯವಾದದ್ದು. ಕಥೆಯ ಒಂದೊಂದು ಪಾತ್ರದ ಪಕ್ಷವನ್ನು ಒಬ್ಬೊಬ್ಬರು ವಹಿಸಿಕೊಂಡು ಅನೇಕ ನಿದರ್ಶನಗಳ ಸಹಿತವಾಗಿ ವಾದಗಳನ್ನು ಮಂಡಿಸುತ್ತಾರೆ, ವಿರೋಧಪಕ್ಷವನ್ನು ಖಂಡಿಸುತ್ತಾರೆ. ಉದ್ವೇಗಪೂರ್ಣವಾಗಿ, ಭಾವಾತಿರೇಕದಿಂದ ನಡೆಯುವ ಈ ಚರ್ಚೆಗಳು ಬೆಳಕು ಹರಿಯುವವರೆಗೆ ಮುಂದುವರಿಯಬಹುದು. ಇಂಥ ಚರ್ಚೆಗಳಲ್ಲಿ ಭಾಗವಹಿಸುವುದರಿಂದ, ಭಾಗಿಗಳ ವಾದಶೀಲತೆ ಹಾಗೂ ಚರ್ಚಾ ಕುಶಲತೆಗೆ ಒಳ್ಳೆಯ ತರಬೇತಿ ಸಿಕ್ಕಿದಂತಾಗುತ್ತದೆ. ಈ ತರಬೇತಿಯಿಂದ ಅವರು ಕೌಟುಂಬಿಕ ವ್ಯಾಜ್ಯಗಳಲ್ಲಿ, ಗ್ರಾಮನ್ಯಾಯಾಲಯಗಳಲ್ಲಿ ವಾದ ಮಂಡಿಸಲು ಸಾಮರ್ಥ್ಯ ಪಡೆಯುತ್ತಾರೆ. ಈ ದೃಷ್ಟಿಯಿಂದ ಸಾಮಾಜಿಕ ಕಾರ್ಯದಲ್ಲಿ ಇಬ್ಬಂದಿ ಕಥೆಗಳ ಪಾತ್ರ ಪ್ರಮುಖವಾದುದು.

ಇಂಥದೊಂದು ಚರ್ಚೆಯ ಪ್ರತ್ಯಕ್ಷದರ್ಶಿಗಳಾದ ಗೇ ಮತ್ತು ಕೋಲ್ ಎಂಬ ವಿದ್ವಾಂಸರ ವಿವರಣೆಯನ್ನು ಗಮನಿಸಬಹುದು. ಅವರು ಕೇಳಿದ ಕಥೆ ಕಪೆಲ ಎಂಬ ಬುಡಕಟ್ಟಿನಲ್ಲಿ ಪ್ರಚಲಿತವಿರುವಂಥದು:

> ವಿವೇಕಿ, ವೀರ ಹಾಗೂ ವಿಟ ಎಂಬ ಹೆಸರುಗಳ ಮೂರು ಮಂದಿ ಪಟ್ಟಣವೊಂದಕ್ಕೆ ಬಂದರು. ವಿಟ ಎಂಬುವವನು ಸ್ವಲ್ಪ ಹೊತ್ತಿನಲ್ಲಿಯೇ ತನ್ನ ಹೆಸರಿನ ಔಚಿತ್ಯವನ್ನು ಸಮರ್ಥಿಸಿಕೊಂಡು, ಸಿಕ್ಕಿಬಿದ್ದ. ಇನ್ನೇನು ಅವನನ್ನು ಸದೆಬಡಿಯಬೇಕು ಎಂದಿದ್ದಾಗ, ಇವನನ್ನು ಕಾಪಾಡಲು ವೀರನು ಊರನ್ನು ಕಾಡುತ್ತಿದ್ದ ದೆವ್ವವನ್ನು ಕೊಂದ ಎಂದು ಊರಿನವರಿಗೆ ಗೊತ್ತಾಯಿತು. ಅಲ್ಲಿಗೆ ಬಂದ ವಿವೇಕಿ ತಮ್ಮೆಲ್ಲರ ಪರವಾಗಿ ವಾದಿಸಿ, ತಮ್ಮ ಬರುವಿಕೆಯಿಂದ ಊರಿಗೆ ಒಳ್ಳೆಯದೇ ಆಗಿದೆ ಎಂದು ಅವರನ್ನು ನಂಬಿಸಿದ. ಕೃತಜ್ಞರಾದ ಊರಿನವರು ಅವರೆಲ್ಲರಿಗೂ ಹೆಣ್ಣುಕೊಟ್ಟು ಮದುವೆಮಾಡಿದರು. ಮೂವರಿಗೂ ಸೇರಿ ಒಂದು ಹಸುಕೊಟ್ಟರು. ಸುಖವಾಗಿ ಬಾಳುತ್ತ ಇದ್ದು, ಮಕ್ಕಳು ಮರಿಗಳಾದ ಮೇಲೆ ಸತ್ತುಹೋದರು. ತಂದೆಯಂದಿರ ತಿಥಿ ಹಬ್ಬಕ್ಕೆ ಮಕ್ಕಳೆಲ್ಲ ಸೇರಿ ಹಸುವನ್ನು ಕೊಂದರು. ಆಮೇಲೆ, ಹಸುವಿನ ಬಾಲ–ಆ ಊರಿನ ಅಧಿಕಾರಸ್ಥ ಸಂಕೇತವಾದ್ದರಿಂದ ಅದು ಯಾರಿಗೆ ಸೇರಬೇಕು ಎಂಬ ವಾದ ಶುರುವಾಯಿತು.

ಈ ಕಥೆ ಕೇಳಿಯಾದ ಮೇಲೆ ನಡೆದ ಚರ್ಚೆ ಇದು: "ಚರ್ಚೆ ಬಹಳ ಕಾವಿನಿಂದ ಕೂಡಿದ್ದಿತು. ಕೆಲವರು ವಿಟನನ್ನು ಸಮರ್ಥಿಸಿದರು. ಏಕೆಂದರೆ ಊರಿನಲ್ಲಿ ಈ ಘಟನೆಯನ್ನು ಆರಂಭಿಸಿದವನು ಅವನೇ ತಾನೆ. ದೆವ್ವವನ್ನು ವೀರ ಕೊಲ್ಲುವುದಾಗಲಿ, ಜನರನ್ನು ವಿವೇಕಿ ಸಾಂತ್ವನ ಮಾಡುವುದಾಗಲಿ ವಿಟನ ಕಾರ್ಯಕ್ಕೆ ಕೇವಲ ಪೂರಕ ಕ್ರಿಯೆಗಳಾದಂತಾಯಿತು ಎನ್ನುವುದು ಅವರ ತರ್ಕ. ಒಬ್ಬನಂತೂ ಎದ್ದುನಿಂತು ಪ್ರತಿಯೊಬ್ಬನ ಅಸ್ತಿತ್ವಕ್ಕೆ ಮೂಲಕಾರಣ ಹಾದರವೇ; ಏಕೆಂದರೆ ಲೈಂಗಿಕ ಸಂಬಂಧಗಳಿಲ್ಲದೆ ಇದ್ದರೆ ಯಾರಿಗೂ ಮಕ್ಕಳೇ ಆಗದು ಎಂದು ವಾದಿಸಿದ. ಕೆಲವರು ವೀರನ ಪಕ್ಷ ವಹಿಸಿದರು. ಹೋರಾಡುವವರ ಮೂಲಕ ತಾನೆ ನಾವು ಎಲ್ಲವನ್ನು ಸಾಧಿಸುವುದು; ಹಾದರ ಮಾಡಲೂ ಹೋರಾಟ ಅಗತ್ಯ ಎಂದು ಪ್ರತಿಪಾದಿಸಿದರು. ಆಮೇಲೆ ಹಿರಿಯನಾದವನೊಬ್ಬ ಎದ್ದು ನಿಂತು ವಿವೇಕಿಯ ಪಕ್ಷವಹಿಸಿ ವಾದಿಸಿ ಗೆದ್ದ. ನಾವು ದಡ್ಡತನ ಮಾಡದಿರಲಿ ಎಂದು ದೇವರು ನಮಗೆ ವಿವೇಕವನ್ನು ಕರುಣಿಸಿದ್ದಾನೆ. ಜ್ಞಾನದ ಮೂಲಕವೇ ತಾನೆ ಹೆಂಡತಿಯನ್ನು ಸಂಪಾದಿಸಲು ಸಾಧ್ಯ. ವಿಜಯಗಳಿಸಲು ಸಾಧ್ಯ. ಆದ್ದರಿಂದ ದನದ ಬಾಲದ ಲಾಂಛನ ವಿವೇಕಿಯ ಮಗನಿಗೆ ಸಲ್ಲಬೇಕು ಎಂದು ಘೋಷಿಸಿದ. ಅಲ್ಲಿ ನೆರೆದವರೆಲ್ಲ ತಮ್ಮ ಸಮ್ಮತಿಯ ದನಿಗೂಡಿಸಿದರು."

ವೀಕ್ಸ್ ಎಂಬ ವಿದ್ವಾಂಸ ಕಾಂಗೊ ಬುಡಕಟ್ಟಿನಲ್ಲಿ ಪ್ರಚಲಿತವಿರುವ ಕಥೆಯನ್ನೂ, ಅದರ ಬಗ್ಗೆ ತಾನು ಕೇಳಿದ ಚರ್ಚೆಯನ್ನೂ ವಿವರಿಸುತ್ತಾನೆ:

> "ಒಬ್ಬ ಹುಡುಗ ಹುಟ್ಟಿದ ದಿನವೇ ಎದ್ದು ನದಿಯ ತೀರಕ್ಕೆ ಹೋದ. ಅಲ್ಲೊಬ್ಬ ಬೇಟೆಗಾರ ಬಂದು ಕೋವಿ ಹಾರಿಸುತ್ತಿದ್ದ. ಹುಡುಗ ಅವನನ್ನು ಏನು ಮಾಡುತ್ತಿದ್ದಿ ಎಂದು ಕೇಳಿದ. ಅದಕ್ಕೆ ಬೇಟೆಗಾರ ತಾನು ತನ್ನ ಹೆಂಡತಿಯ ಹಣ್ಣುಗಳನ್ನು ತಿನ್ನುವ ಸೊಳ್ಳೆಗಳಿಗೆ ಗುಂಡಿಡುತ್ತಿರುವುದಾಗಿ ಹೇಳಿದ. ಆಗ ಸೊಳ್ಳೆಗಳಿಗೆ ಕೋವಿ ಹಾರಿಸುವುದರ ಮೂಲಕ ಬೇಟೆಗಾರ ಜಗತ್ತಿನ ಸಹಜಸ್ಥಿತಿಯನ್ನು ತಲೆಕೆಳಗು ಮಾಡುತ್ತಿದ್ದಾನೆ ಎಂದು ಹುಡುಗ ದೂಷಿಸಿದ. ಅದಕ್ಕೆ ಬೇಟೆಗಾರ ಹುಟ್ಟಿದ ದಿನವೇ ನದಿಗೆ ಸ್ನಾನಕ್ಕೆ ಬಂದಿರುವ ಹುಡುಗನೇ ಸಹಜಸ್ಥಿತಿಯನ್ನು ತಲೆಕೆಳಗು ಮಾಡುತ್ತಿದ್ದಾನೆ ಎಂದ. ಇಬ್ಬರೂ ತಮ್ಮ ವ್ಯಾಜ್ಯವನ್ನು ಪ್ರಮುಖನ ಬಳಿಗೆ ಒಯ್ದರು. ಅವರ ವ್ಯಾಜ್ಯವನ್ನು ಕೇಳಿದ ಮೇಲೆ ಪ್ರಮುಖ ತನ್ನ ಬಾಯನ್ನು ಒಂದು ಕೋಣೆಯಲ್ಲಿಟ್ಟು ಬೀಗ ಹಾಕಲಾಗಿದೆಯೆಂದೂ ಕೀಲಿಯನ್ನು ಹೆಂಡಿರು ಒಯ್ದಿದ್ದಾರೆಂದೂ ಘೋಷಿಸಿದ. ಪ್ರಮುಖನೇ ಸಹಜಸ್ಥಿತಿಯನ್ನು ತಲೆಕೆಳಗು ಮಾಡುತ್ತಿದ್ದಾನೆ ಎಂದು ಹುಡುಗ ಮತ್ತು ಬೇಟೆಗಾರ ದೂಷಿಸಿದರು. ಅವರು ಮತ್ತೆ ತಮ್ಮ ವ್ಯಾಜ್ಯ ಪರಿಹಾರಕ್ಕೆ ಜನ ಹುಡುಕಿದರು. ತಾಳೆಹೆಂಡ ಇಳಿಸುವವನನ್ನು ಕೇಳಿದರು. ಅವನು ಅವರ ಕಥೆ ಕೇಳಿದ ಮೇಲೆ, ಒಂದು ದಿನ ತಾನು ತಾಳೆಮರದಿಂದ ಬಿದ್ದು ಚೂರುಚೂರಾದನೆಂದೂ ಆಮೇಲೆ ಆ ಚೂರುಗಳನ್ನು ಆಯ್ದು ಮನೆಗೆ ಹೊತ್ತೊಯ್ಯಲು ಯಾರನ್ನಾದರೂ ಕರೆತರಲು ಊರಿಗೆ ಬಂದೆನೆಂದೂ ಹೇಳಿದ. ಆಗ ಜಗತ್ತಿನ ಸಹಜಸ್ಥಿತಿಯನ್ನು ತಲೆಕೆಳಗು ಮಾಡುತ್ತಿದ್ದಾನೆ ಎಂದು ಅವನನ್ನು ದೂಷಿಸಿದರು. ಯಾರನ್ನು ಹೆಚ್ಚು ದೂಷಿಸಬೇಕು ಎಂದು ಇನ್ನೂ ವಾದಮಾಡುತ್ತಿದ್ದಾರೆ.

ಚರ್ಚೆ: ಕಥೆಯನ್ನು ಕೇಳಿಯಾದ ಮೇಲೆ ಅಲ್ಲಿ ನೆರೆದಿದ್ದ ಪುಟ್ಟ ಶ್ರೋತೃಸಮೂಹದಲ್ಲಿ ಈ ಅದ್ಭುತಗಳ ಕಥೆಯಲ್ಲಿನ ಪ್ರತಿಯೊಂದು ಪಾತ್ರಕ್ಕೂ ಬಲವಾದ ಬೆಂಬಲಿಗರು ಕಂಡುಬಂದರು. ಕೆಲವರ ಅಭಿಪ್ರಾಯದ ಪ್ರಕಾರ ಅತ್ಯಂತ ವಿಸ್ಮಯಕಾರಕ ಸಾಹಸವನ್ನು ಮಾಡಿದವನೆಂದರೆ ಹುಡುಗನೇ. ಆದ್ದರಿಂದ ಅವನನ್ನೇ ದೂಷಿಸಬೇಕು. ಇತರ ಕೆಲವರು ಬೇಟೆಗಾರನ ಪರವಹಿಸಿದರು. ಏಕೆಂದರೆ "ಸೊಳ್ಳೆಗಳಿಗೆ ಗುಂಡು ಹೊಡೆಯುವುದನ್ನು ಯಾರಾದರೂ ಕಂಡಿದ್ದಾರೆಯೆ?" "ಇನ್ನೊಂದು ಕೋಣೆಯಲ್ಲಿ ತನ್ನ ಬಾಯನ್ನು ಬೀಗ ಹಾಕಿಟ್ಟು ಮಾತನಾಡುವುದನ್ನು ಎಂದಾದರೂ ಕೇಳಿದ್ದೀಯಾ?" ಎಂದು ಈ ಅದ್ಭುತದ ಬೆಂಬಲಿಗನೊಬ್ಬ ಗದ್ದರಿಸಿ ಕೇಳಿದ. ಇನ್ನೊಬ್ಬ ದೊಡ್ಡ ಗಂಟಲಿನ ದೊಡ್ಡ ಕಾಯದ ವ್ಯಕ್ತಿಯೊಬ್ಬ ಕಿರುಚಿದ "ನೀವು ಹೇಳುವುದೆಲ್ಲ ತಪ್ಪು. ಮರದಿಂದ ಬಿದ್ದು ಚೂರಾಗಿ, ಮತ್ತೆ ಆ ಚೂರುಗಳನ್ನೊಯ್ಯಲು ಜನ ತರಲು ಊರಿಗೆ ಬಂದವನು ಎಲ್ಲ ಅದ್ಭುತ ಕೆಲಸಗಳನ್ನೂ ಮೀರಿದ ಅದ್ಭುತ ಮಾಡಿದ್ದಾನೆ" ಎಂದು. ಭಾವಾತಿರೇಕದಿಂದ ಕೂಗಾಡಿದರು ಇನ್ನೊಬ್ಬನಿಗೆ ತಲೆ ಇಲ್ಲ ಎಂದು ಬೈದಾಡಿದರು. ಸ್ವಚ್ಛಂದವಾದ ಮಾತಿನ ಕಾಳಗವೇ ನಡೆಯಿತು."

ಇನ್ನೊಂದು ಕಥೆಯನ್ನು ನೋಡಿ:

> ಒಬ್ಬನಿಗೆ ನಾಲ್ಕು ಜನ ಹೆಂಡಿರಿದ್ದರು. ಒಬ್ಬಳು ಬಾಣದ ತುದಿ ತಂದಳು; ಇನ್ನೊಬ್ಬಳು ಬಾಣದ ಕಡ್ಡಿ ತಂದಳು; ಮತ್ತೊಬ್ಬಳು ಬಿಲ್ಲು ತಂದಳು; ಮಗದೊಬ್ಬಳು ಬಿಲ್ಲಿನ ನಾರಿ ತಂದಳು. ಇವನು ಪ್ರಾಣಿಯೊಂದನ್ನು ಕೊಂದ. ಪ್ರತಿಯೊಬ್ಬ ಹೆಂಡತಿಯೂ ಅದು ತನಗೇ ಸೇರಬೇಕೆಂದಳು. ಯಾವ ಹೆಂಡತಿಗೆ ಅದು ಸೇರಬೇಕು?

ಸಿದ್ಧ ಉತ್ತರ: ಪ್ರಾಣಿಯನ್ನು ಎಲ್ಲರೂ ಹಂಚಿಕೊಳ್ಳಬೇಕು. ಆದರೆ ದೊಡ್ಡಪಾಲು ಮೊದಲ ಹೆಂಡತಿಗೆ ಹೋಗಬೇಕು. ಏಕೆಂದರೆ ಬಾಣದ ತುದಿ ಅತ್ಯಂತ ಅಮೂಲ್ಯವಾದದ್ದು. ನುರಿತ ಕುಶಲಕರ್ಮಿಗಳಿಂದ

ತಮಾಷೆಯನ್ನು. ಅಲ್ಲದೆ ಬಾಣದ ತುದಿಯೇ ಇಲ್ಲದಿದ್ದಾಗ ಬಾಣದ ಕಡ್ಡಿಗಾಗಲಿ, ಬಿಲ್ಲಿಗಾಗಲಿ, ನಾರಿಗಾಗಲಿ ಯಾರೂ ಕೇಳರು.

ಸರಳ ಸಾಮಾನ್ಯ ಜನಪದ ಕಥೆಗಳ ಕೊನೆಯಲ್ಲಿ ವಾದಗಳನ್ನು ಅಥವಾ ಪ್ರಶ್ನೆಗಳನ್ನು ಸೇರಿಸುವುದರ ಮೂಲಕ ಅವುಗಳನ್ನು ಇಬ್ಬಂದಿ ಕಥೆಗಳನ್ನಾಗಿ ಪರಿವರ್ತಿಸಲು ಸಾಧ್ಯವಿದೆಯೆ? ಆಫ್ರಿಕದ ಈ ಕಥೆಗಳನ್ನು ಪರಿವರ್ತಿಸಲು ಸಾಧ್ಯವೇ? ಆಫ್ರಿಕದ ಈ ಕಥೆಗಳನ್ನು ಗಮನಿಸಿದರೆ ಕೊನೆಯಲ್ಲಿನ ಇಬ್ಬಂದಿ ಸಮಸ್ಯೆಯನ್ನು ತೆಗೆದರೆ ಆ ಕಥೆಯಲ್ಲಿ ಸತ್ವಸ್ವಾರಸ್ಯವೇ ಉಳಿಯಲಾರದು; ಅದು ವಾಚಿಕ ಪರಂಪರೆಯಲ್ಲಿ ಉಳಿದುಕೊಂಡೂ ಬರಲಾರದು. ಕೆಲವು ಕಥೆಗಳಲ್ಲಿ ಮಾತ್ರ ಈ ಸಮಸ್ಯೆಗಳನ್ನು ತೆಗೆದರೂ ಕಥೆ ಸ್ವತಂತ್ರವಾಗಿ ನಿಲ್ಲಬಹುದಾಗಿ ಕಾಣುತ್ತವೆ. ಅಂಥ ಕಥಗಳನ್ನು ಪರಿವರ್ತಿತ ಕಥೆಗಳೆಂದು ಬೇಕಾದರೆ ಕರೆಯಬಹುದು. ಕೆಲವು ಕಥೆಗಳಿಗೆ ಇಬ್ಬಂದಿ ಅಂತ್ಯ ಅತ್ಯಗತ್ಯ ಅಂಶವಾದರೆ, ಇನ್ನು ಕೆಲವು ಕಥೆಗಳಲ್ಲಿ ಇಬ್ಬಂದಿ ಸಮಸ್ಯೆ ಕಥೆಯ ಅಂತರ್ಗತ ಲಕ್ಷಣವಾಗಿರದೆ, ಅದು ಕೇವಲ ಕಥಾವಕ್ತೃವಿನ ಇಚ್ಛೆಗೆ ಬಿಟ್ಟದ್ದಾಗಿರುತ್ತದೆ ಎಂದು ರೂತ್ ಫಿನ್ನೆಗನ್ ಹೇಳುತ್ತಾಳೆ.[1]

ಇಬ್ಬಂದಿ ಕಥೆಗಳಲ್ಲಿ ಸಾಹಿತ್ಯ ಮೌಲ್ಯವಿರುವುದಿಲ್ಲ. ಈ ಕಥೆಗಳನ್ನು ಗಮನಿಸಿದಾಗ ಇಬ್ಬಂದಿ ಸಮಸ್ಯೆಯನ್ನು ಒಡ್ಡಲು ವಿಸ್ತಾರ ಕಥಾ ಹಂದರವಾಗಲಿ, ಸ್ವಾರಸ್ಯ ನಿರೂಪಣವಾಗಲಿ ಅಗತ್ಯವಿಲ್ಲವೆನಿಸುತ್ತದೆ. ಈ ಸಂದರ್ಭದಲ್ಲಿ ಈ ಕಥೆಗಳನ್ನು ಕುರಿತು ಆ್ಯಡಂ ಎಂಬ ವಿದ್ವಾಂಸ ಹೇಳಿರುವ ಮಾತು. ಒಂದು ದೃಷ್ಟಿಯಿಂದ ಅಂದರೆ ಸಾಹಿತ್ಯಕ ದೃಷ್ಟಿಯಿಂದ ಅರ್ಥಪೂರ್ಣವಾಗುತ್ತದೆ: “ಇವು ನಮಗೆ ಏನೇನೂ ಆಸಕ್ತಿ ಉಂಟುಮಾಡುವುದಿಲ್ಲ. ಬಹುಶಃ ಕರಿಯರು (ನೀಗ್ರೋಗಳು) ಇವುಗಳನ್ನು ಹೆಚ್ಚು ಇಷ್ಟಪಡುತ್ತಾರೇನೊ?” ಆದರೆ ಬೌದ್ಧಿಕ ಕಸರತ್ತಿಗೆ ಅವು ನೀಡುವ ಸರಕು ಹಾಗೂ ನೈತಿಕ ಮಟ್ಟ ನಿರ್ಧಾರದಲ್ಲಿ ಅವುಗಳ ಔಚಿತ್ಯ ಈ ಕಾರಣಗಳಿಂದಾಗಿ ಅವು ಆಸಕ್ತಿ ಕುದುರಿಸುತ್ತವೆ.

ಆಫ್ರಿಕದ ಜನಪದ ಕಥೆಗಳ ಸರ್ವಸಾಮಾನ್ಯ ಲಕ್ಷಣವಾದ ನೀತಿಪರತೆ ಹಾಗೂ ಬೋಧಪರತೆಗಳು ಈ ಕಥೆಗಳಲ್ಲಿಯೂ ಕಾಣಿಸಿಕೊಳ್ಳುತ್ತವೆ. ಈ ಕಥೆಗಳ ಮತ್ತೊಂದು ವಿಶೇಷ ಲಕ್ಷಣ ಎಂದರೆ ಮಾನವಪಾತ್ರಗಳೇ ಪ್ರಧಾನವಾಗಿರುವುದು. ಅಲ್ಲಲ್ಲಿ ಕೆಲವು ಕಥೆಗಳಲ್ಲಿ ಪ್ರಾಣಿಗಳೂ ಪ್ರಮುಖ ಪಾತ್ರ ವಹಿಸುವುದುಂಟು. ಅತ್ತೆಯನ್ನು ಪಾತ್ರವಾಗುಳ್ಳ ಇಬ್ಬಂದಿ ಕಥೆಗಳೂ ಹೇರಳವಾಗಿ ದೊರೆಯುತ್ತವೆ. ಅತ್ತೆಯ ಬಗ್ಗೆ ಈ ಸಮಾಜದಲ್ಲಿರುವ ಮನೋಧರ್ಮ ಇವುಗಳಲ್ಲಿ ಸ್ಪಷ್ಟವಾಗಿ ಒಡಮೂಡಿರುತ್ತದೆ. (ನೋಡಿ: ಅನುಬಂಧ ಕಥೆ ೯)

ಇಬ್ಬಂದಿ ಕಥೆಗಳನ್ನು ಸ್ಥೂಲವಾಗಿ ಎರಡು ಬಗೆ ಎಂದು ವರ್ಗೀಕರಿಸಬಹುದು ಎಂದು ಬಾಸ್ಕಂ ಹೇಳುತ್ತಾನೆ.[2] ಸ್ಪರ್ಧೆ ಅಥವಾ ಪೈಪೋಟಿ ಇರುವ ಕಥೆಗಳಾಗಿದ್ದು ಕೊನೆಯಲ್ಲಿ ಯಾವ ಪಾತ್ರ ಹೆಚ್ಚು ಕೌಶಲ್ಯಪೂರ್ಣ, ಯಾರು ಹೆಚ್ಚು ಬಲಿಷ್ಠ, ಯಾರು ಹೆಚ್ಚು ದುರಾಶಾಪೂರಿತ ಇತ್ಯಾದಿ ಬಗೆ ನಿರ್ಣಯಿಸುವ ಕೆಲಸವನ್ನು ಶ್ರೋತೃಗಳ ಪಾಲಿಗೇ ಬಿಡುವಂಥವು ಮೊದಲನೆಯ ಬಗೆಯ ಕಥೆಗಳು. ಅದ್ಭುತ ಕಥೆಗಳಂತೆ ಕಾಣುವ ಕಥೆಗಳೂ ಈ ಜಾತಿಯವೇ. ಈ ಕಥೆಗಳಿಗೆ ಉತ್ತರವನ್ನು ನೀಡುವುದು ಅತ್ಯಂತ ವಿರಳವಾಗಿ ಕಂಡುಬರುವುದು.

ಎರಡನೆಯ ಬಗೆಯ ಕಥೆಗಳಲ್ಲಿ ನೈತಿಕ ಹಾಗೂ ಧಾರ್ಮಿಕ ತೀರ್ಮಾನಗಳು ಹೊಸೆದುಕೊಂಡಿರುತ್ತವೆ. ಬಹುತೇಕವಾಗಿ ಈ ಕಥೆಗಳಿಗೆ ಕಥಾವಕ್ತೃವೇ ಒಂದು ಉತ್ತರವನ್ನು ನೀಡುತ್ತಾನೆ. ಆ ಸಂಸ್ಕೃತಿಯ ಸಾಂಸ್ಕೃತಿಕ ಮೌಲ್ಯ ಹಾಗೂ ಧೋರಣೆಗಳ ಮೇಲೆ ಬೆಳಕು ಚೆಲ್ಲುವುದರಿಂದ ಈ ಕಥೆಗಳ ಅಧ್ಯಯನವು ಕುತೂಹಲಕಾರಿಯಾಗುತ್ತದೆ.

ಇಬ್ಬಂದಿ ಕಥೆಗಳು ಆಫ್ರಿಕದಲ್ಲಿ ಅಪಾರ ಪ್ರಮಾಣದಲ್ಲಿ ಕಂಡುಬರುತ್ತವೆ. ಆಫ್ರಿಕದ ಹೊರಗೂ

---

[1] Finnegan, Ruth. *Limba Stories and Story Telling*, p. 30

[2] Bascom, William, R. *African Dilemma Tales*, p. 14

ಅವುಗಳ ಅಸ್ತಿತ್ವ ಇದೆ. ಬರ್ಮಾ ದೇಶದಲ್ಲಿಯೂ ಇವುಗಳು ಪ್ರಚಲಿತವಿದ್ದು ಜನಪದ ನ್ಯಾಯ ನಿರ್ಣಯಗಳಲ್ಲಿ ವಾದಿ ಪ್ರತಿವಾದಿಗಳಿಗೆ ಬಹಳವಾಗಿ ಸಹಾಯಕವಾಗುತ್ತಿದ್ದವೆಂದು ತೋರುತ್ತದೆ.[1] ಭಾರತದಲ್ಲಿಯೂ ಇಬ್ಬಂದಿ ಕಥೆಗಳಿವೆ ಎನ್ನುವುದು ನಿರ್ವಿವಾದ ಅಂಶ.

ಬೇತಾಳ ಪಂಚವಿಂಶತಿಯ ಕಥೆಗಳು ನಮ್ಮ ಸಾಹಿತ್ಯ ಕಥಾರಾಶಿಯಲ್ಲಿ ಅಪರೂಪ ಸ್ಥಾನ ಗಳಿಸಿಕೊಂಡಿವೆ. ಹೆಣವನ್ನು ಮರದ ಮೇಲಿಂದ ಬಿಡದೆ ಇಳಿಸಿ ಹೊತ್ತುತರುವ ತ್ರಿವಿಕ್ರಮನಿಗೆ ಆ ಹೆಣದಲ್ಲಿನ ಬೇತಾಳ ಕಥೆಗಳನ್ನು ಹೇಳುತ್ತ ಹೋಗುತ್ತದೆ. ಇವೆಲ್ಲವೂ ಇಬ್ಬಂದಿ ಕಥೆಗಳೇ. ಆದರೆ ಅವುಗಳಿಗೆ ತ್ರಿವಿಕ್ರಮ ಉತ್ತರ ನೀಡುತ್ತಾನೆ. ಈ ಉತ್ತರ ಸಂಸ್ಕೃತಿಯ ಹಿನ್ನೆಲೆಯಲ್ಲಿ ಧರ್ಮ ಹಾಗೂ ನೀತಿಯ ಚೌಕಟ್ಟುಗಳ ಆಧಾರದಿಂದ ಒಪ್ಪಗೊಂಡದ್ದು. ಈ ಕಥೆಗಳಲ್ಲಿಯೂ ಚರ್ಚೆಗೆ ಅವಕಾಶವಿದೆ ಎನ್ನುವುದು ಗಮನಾರ್ಹ.

ಒಗಟು ಕಥೆ ಮತ್ತಿತರ ತೊಡಕು ಸಮಸ್ಯೆಗಳುಳ್ಳ ಕಥೆಗಳ ಬಗ್ಗೆ ಹೇಳುತ್ತ ಇವುಗಳೆಲ್ಲ ಮೊದಲು ಸಾಹಿತ್ಯಕವಾಗಿದ್ದು ನಂತರ ವಾಚಿಕ ಪರಂಪರೆಗೆ ಹೋಗಿವೆ. ಅಲ್ಲಿ ಅತ್ಯಂತ ಜನಪ್ರಿಯತೆ ಗಳಿಸಿಕೊಂಡು ಜನಪದ ಪರಂಪರೆಯ ಗಟ್ಟಿಭಾಗವಾಗಿ ಉಳಿದಿವೆ ಎಂದು ಸ್ಟಿತ್ ಥಾಂಪಸನ್ ಹೇಳುತ್ತಾನೆ.[2] ಈ ಹೇಳಿಕೆ ಖಂಡಿತವಾಗಿ ಚರ್ಚಾಸ್ಪದ. ಬೇತಾಳ ಪಂಚವಿಂಶತಿಯ ಕಥೆಗಳು ಮೊದಲು ಜನಪದಕಥೆಗಳೇ ಆಗಿದ್ದು, ನಂತರ ಸಾಹಿತ್ಯದಲ್ಲಿ ನುಸುಳಿರಬೇಕೆಂಬುದೇ ಬಲವಾದ ಅನಿಸಿಕೆ. ಇದರ ಬಗ್ಗೆ ಅಧ್ಯಯನ ನಡೆಯಬೇಕಾಗಿದೆ.

ಕನ್ನಡದಲ್ಲಿ ಇಂಥ ಕಥೆಗಳು ಇದ್ದೇ ತೀರಬೇಕು ಎಂದು ನನಗೆ ಅನ್ನಿಸಿದ್ದಕ್ಕೆ ಕಾರಣ ದ್ರಾವಿಡ ಕಥಾ ಜಾನಪದದ ಜಾಯಮಾನದಲ್ಲಿ ಆಫ್ರಿಕದ ಜಾನಪದದ ಅಂತರ್ಭೂತ ಅಂಶಗಳನೇಕ ಹಾಸುಹೊಕ್ಕಾಗಿರುವುದೇ ಆಗಿದೆ. ಕುತೂಹಲಕ್ಕಾಗಿ ಕನ್ನಡ ಜನಪದ ಕಥಾ ಸಂಕಲನಗಳ ಮೇಲೆ ಕಣ್ಣಾಡಿಸಿದಾಗ ಎರಡು ಕತೆಗಳಲ್ಲಿ ಇಂಥ ಕಥೆಗಳು ಇರುವುದು ಗಮನಕ್ಕೆ ಬಂದಿತು. ಒಂದೆಡೆಯಲ್ಲಿ ಅದ್ಭುತ ಕಥೆ ಎಂದು. ಇನ್ನೊಂದೆಡೆಯಲ್ಲಿ ಒಗಟಿನ ಕಥೆ ಎಂದು ವರ್ಗೀಕರಣ ಮಾಡಲಾಗಿದೆ.

ಡಾ. ಜೀಶಂಪ ಅವರ ಸಂಕಲನದಲ್ಲಿನ 'ಯಾರು ಹೆಚ್ಚು' ಕಥೆ ಅದ್ಭುತದ ಅಂಶವನ್ನು ವಸ್ತುವಾಗಿಸಿಕೊಂಡು. ಅಸಾಧಾರಣ ಕೆಲಸಮಾಡಿದವರ ಪೈಕಿ ಯಾರು ಹೆಚ್ಚು ಎಂಬ ಪ್ರಶ್ನೆಯನ್ನು ಮುಂದಿಡುತ್ತದೆ. ಅದರ ಪೂರ್ಣಪಾಠ ಹೀಗಿದೆ:

> ಒಂದು ಊರಿನಲ್ಲಿ ಒಬ್ಬ ರೈತನಿಗೆ ಒಬ್ಬ ಮಗ ಇದ್ದ. ಆ ಮಗನಿಗೆ ಮದುವೆ ಮಾಡಬೇಕಾಯಿತು. ಪಕ್ಕದ ಹಳ್ಳಿಯ ಮತ್ತೊಬ್ಬ ರೈತನ ಮನೆಗೆ ಹೆಣ್ಣಿಗೆ ಹೋದ. ಹೆಣ್ಣು ಗೊತ್ತಾಯಿತು. ಅವರ ಮನೆಯಲ್ಲಿ ಒಂದು ಊಟಕ್ಕೆ ನೂರು ಪಲ್ಲ ಮೆಣಸಿನಕಾಯಿ ಅರೆಯುತ್ತಿದ್ದರು. ಇವರ ಮನೆಯಲ್ಲಿ ಒಂದು ಹೊತ್ತಿಗೆ ನೂರು ಕಂಡುಗ ಅವರೆಕಾಳು ಹಾಕುತ್ತಿದ್ದರು. ಮದುವೆಗೆ ಏರ್ಪಾಡಾಯಿತು. ಈ ಊರಿನ ರೈತ ಸಾವಿರ ಗಾಡಿ ಹೂಡಿಕೊಂಡು ಸೌದೆಗೆ ಹೊರಟ. ದಾರಿಯಲ್ಲಿ ಒಬ್ಬ ಸಾಹುಕಾರ ಸಿಕ್ಕಿ "ಇಷ್ಟೊಂದು ಗಾಡಿ ಎಲ್ಲಿಗೆ?" ಎಂದು ಕೇಳಿದ. "ಮಗನ ಮದುವೆ ಮಾಡುತ್ತಿದ್ದೇನೆ. ಅದಕ್ಕೆ ಸೌದೆ ತರುವುದಕ್ಕಾಗಿ ಹೋಗುತ್ತಿದ್ದೇನೆ." ಎಂದ ಈ ರೈತ. ಸಾಹುಕಾರ. "ಗಾಡಿ ಇಲ್ಲೇ ಬಿಡಿ. ಊಟಮಾಡಿಕೊಂಡು ಹೋಗುವಿರಂತೆ" ಎಂದು ಗಾಡಿ ಬಿಡಿಸಿ ಸಾವಿರ ಜನಕ್ಕೂ ಊಟವಾಯಿತು. ಊಟವಾದ ಮೇಲೆ ಸಾಹುಕಾರರು ಆಳುಗಳನ್ನು ಕರೆದು "ನನ್ನ

---

[1] ನೋಡಿ Maung Htin Aung, *Burmese Law Tales*. ಈ ಗ್ರಂಥದ ಮೂರು ಕಥೆಗಳ ಕನ್ನಡ ಅನುವಾದಕ್ಕೆ ನೋಡಿ: ಡಾ. ದೇ. ಜವರೇಗೌಡ, ಜಾನಪದ ಅಧ್ಯಯನ ಪು. ೬೮–೧೦೩. ಈ ಮೂರೂ ಕಥೆಗಳು ಇಬ್ಬಂದಿ ಕಥೆಗಳೇ ಎನ್ನುವುದರಲ್ಲಿ ಅನುಮಾನವಿಲ್ಲ.

[2] Thompson, Stiih, *The Folk Tale*, p. 158.

[3] ಜೀ. ಶಂ. ಪರಮಶಿವಯ್ಯ, ಕನ್ನಡ ಜನಪದ ಕಥೆಗಳು, ಪು. ೧೫೫

ಮೊನ್ನೆ ಮುರಿದ ಮೇಣಿಗಳು ಅಲ್ಲಿಯೇ ಇರಲಿ; ಇವತ್ತು ಮುರಿದ ಮೇಣಿಗಳನ್ನು ಸಾವಿರ ಗಾಡಿಗೂ ಭರ್ತಿಮಾಡಿ" ಎಂದ. ಸರಿ, ಆಳುಗಳು ಸಾವಿರ ಗಾಡಿಗೂ ತುಂಬಿದರು. ರೈತ ಗಾಡಿಯನ್ನು ಹೊಡೆದುಕೊಂಡು ಹಿಂದಿರುಗುತ್ತಿದ್ದ. ದಾರಿಯಲ್ಲಿ ಮಳೆ ಬಂದಿತು. ಅದೇ ವೇಳೆಗೆ ಸರಿಯಾಗಿ ಒಬ್ಬಳು ಮುದುಕಿ ಅಲ್ಲಿಗೆ ಬಂದಳು. ರೈತನಿಗೆ "ಸ್ವಾಮಿ ಮಳೆ ಬಂತು. ಎತ್ತು ಗಾಡಿ ಸೌದೆ ಎಲ್ಲಾ ನೆನೆದು ಹೋಗುತ್ತವೆ. ನಾನು ಒಂದು ಸೋರೆ ಬುರುಡೆ ಕೊಡುತ್ತೇನೆ, ಅದಕ್ಕೆ ಎಲ್ಲವನ್ನು ತುಂಬಿ" ಎಂದಳು. ರೈತ ಹಾಗೆಯೇ ಮಾಡಿದ. ಆ ವೇಳೆಗೆ ಸರಿಯಾಗಿ ಅದೇ ದಾರಿಯಲ್ಲಿ ತಾಯಿ ಮಗು ಹೋಗುತ್ತಿದ್ದರು. ಆ ಮಗು ಮೂತ್ರ ವಿಸರ್ಜನೆ ಮಾಡಿತು. ಆ ಸೋರೆಯ ಬುರುಡೆ ಮೂತ್ರದಲ್ಲಿ ಕೊಚ್ಚಿಹೋಯಿತು. ಹತ್ತಿರದಲ್ಲೇ ಇದ್ದ ದೊಡ್ಡಕೆರೆ ಮಗುವಿನ ಮೂತ್ರದಿಂದ ತುಂಬಿ ಕೋಡಿಯಾಯಿತು. ಬೆಸ್ತರವನೊಬ್ಬ ಮೀನು ಹಿಡಿಯಲು ಹೋಗಿ ಬೀಸುಬಲೆ ಎಸೆದ. ಸೋರೆಬುರುಡೆ ಬಲೆಗೆ ಸಿಕ್ಕಿತು. ಬೆಸ್ತ ಆ ಬುರುಡೆಯನ್ನು ಎಡಗೈಯಲ್ಲಿ ತೆಗೆದು ಕೋಡಿಯ ಹಿಂದಕ್ಕೆಸೆದ.

ಈಗ ಮೂರು ಪಲ್ಲ ಮೆಣಸಿನಕಾಯಿ ಅರೆಯುತ್ತಿದ್ದರಲ್ಲ ಅವರು ಹೆಚ್ಚೊ? ಮೂರು ಖಂಡುಗ ಅವರೆಕಾಳು ಹಾಕುತ್ತಿದ್ದ ಇವರು ಹೆಚ್ಚೊ? ಬೆಣ್ಣೆಯೊಳಗೆ ಸಾವಿರ ಜನಕ್ಕೆ ಊಟ ಮುಗಿಸಿ, ಸಾವಿರ ಗಾಡಿಗೂ ಒಂದೇ ದಿನದಲ್ಲಿ ಮುರಿದ ಮೇಣಿಗಳನ್ನು ತುಂಬಿಸಿದ ಸಾಹುಕಾರರು ಹೆಚ್ಚೊ? ಸೋರೆ ಬುರುಡೆಯಲ್ಲಿ ಸಾವಿರ ಗಾಡಿಗಳನ್ನು ತುರುಕಿದ ಮುದುಕಿ ಹೆಚ್ಚೊ? ಮೂತ್ರದಲ್ಲಿ ಆ ಸೋರೆಬುರುಡೆಯನ್ನು ಕೊಚ್ಚಿಸಿದ ಮಗು ಹೆಚ್ಚೊ? ಆ ಬುರುಡೆಯನ್ನು ಎಡಗೈಯಿಂದ ಎತ್ತಿ ಎಸೆಯ ಹಿಂದಕ್ಕೆಸೆದ ಬೆಸ್ತ ಹೆಚ್ಚೋ ನೀವೇ ಯೋಚಿಸಿ!

ರಾಜಪ್ಪನವರ ಸಂಕಲನದಲ್ಲಿರುವ ಒಗಟಿನ ಕಥೆಯ[1] ವಸ್ತುವನ್ನು ಗಮನಿಸಿದರೆ ಜರ್ಮನ್ ಸಾಹಿತಿ ಥಾಮಸ್‌ಮನ್‌ನ ರಚನೆಯೊಂದಕ್ಕೆ ಸ್ಫೂರ್ತಿ ನೀಡಿದ ಭೇತಾಳ ಪಂಚವಿಂಶತಿಯ ಕಥೆಯು ನೆನಪಾಗುತ್ತದೆ.

ಒಬ್ಬ ಹಾರೂರ ಹುಡುಗ. ದೀಪಾವಳಿ ಹಬ್ಬಕ್ಕೆ ತಂಗೀನ ಕರ್ಕಂಡು ಬರಬೇಕಂತ ಬೀಗರೂರಿಗೆ ಹೊರಟ. ಬೀಗರ ಊರು ಹನ್ನೆರಡು ಹರದಾರಿ ಇತ್ತು. ನಾಕು ಹರದಾರಿ ಹೋದ. ದಾರೀಲಿ ಕಾಳಿಕಾದೇವಿ ಗುಡಿ. ದೇವಿಗೆ ನಮಸ್ಕಾರ ಮಾಡಿ, "ಕಾಳಿಕಾದೇವಿ. ನನ್ನ ತಂಗೀನ ಮಾಡಿಕೊಟ್ಟು ಏಳೆಂಟು ವರ್ಷ ಆತು. ಬೀಗರಿಗೂ ನಮಗೂ ಜಗಳ ಬಂದು ಯಾವ ಹಬ್ಬಕ್ಕೂ ನಮ್ಮ ತಂಗೀನ ಕಳಸಲಿಲ್ಲ. ಈಗ ನಾ ತಂಗೀನ ಕರ್ಕಂಡು ಬರಬೇಕಂತ ಹೊರಟೇನಿ. ದೇವಿ ನಮ್ಮ ಬೀಗರ ಮನಸ್ಸು ಪವಿತ್ರ ಮಾಡಿ, ನಮ್ಮ ತಂಗೀನ ಕಳುಸುವಂತೆ ಮಾಡು. ನಮ್ಮ ತಂಗೀನ ಕಳಸುವಾದರೆ ಹೊಳ್ಳಿ ಬರ ಮುಂದ, ನಿನಗ ಭೆಟ್ಟಿಯಾಗಿ ನನ್ನ ಶಿರಸ್ಸು ಕೊಡತೀನಿ" ಅಂತ ಗಟ್ಟಿಯಾಗಿ ದೇವಿಪಾದ ಹಿಡಿದ. ಊಟ ಮುಗಿಸಿಕೊಂಡು ಸಂಜೆ ಮುಂದ ಬೀಗರ ಊರಿಗೆ ಹೋದ.

ಬೀಗರ ಮನೆಗೋಗಿ ಎರಡು ದಿನ ಸಂತೋಷದಿಂದ ಇದ್ದು ಮೂರನೆಯ ದಿನ ತಂಗೀನ ಕಳಸಕ ಅವರು ತಯಾರಾದರು. ಆದರೆ ಇಂದ "ತಂಗೀನ ಒಬ್ಬಾಕೀನ ಕರ್ಕಂಡು ಹೋಗುಕಿಲ್ಲ. ಭಾಳ ದಿವಸ ಆತು. ಭಾವಮೈದುನ ಬರಬೇಕಂತ ವಿನಂತಿ ಮಾಡ್ಕಂಡ". ಇವನ ವಿನಂತಿಗೆ ಕಿಮ್ಮತ್ತು ಕೊಟ್ಟ ಭಾವಮೈದುನ. ತಂಗಿ ತಾನು ತಮ್ಮ ಊರಿಗೆ ಹೊರಟರು. ಐದಾರು ಹರದಾರಿ ಬಂದರು. ಭವಾನಿ ಗುಡಿ ನೋಡಿದ. ತಾನು ಕೊಟ್ಟ ವಚನ ನೆನಪಿಗೆ ಬಂತು. ಗುಡಿ ಮುಂದ ಒಂದು ಭಾವಿ ಹತಿವಾಗಿತ್ತು. ಮೂವರು ಊಟ ಮಾಡಬೇಕಂತ ಕುಂತರು. "ನಾನು ದೇವಿಗೋಗಿ ನಮಸ್ಕಾರ ಮಾಡಿ ಬಕ್ತೀನಿ" ಅಂತ ತಂಗಿ ಅವಳ ಗಂಡನಿಗೆ ಹೇಳಿ ಗರ್ಭಗುಡಿಗೆ ಬಂದ. ದೇವಿ ಕೈಲಿ ಖಡ್ಗ ಇತ್ತು.

1 ಟಿ. ಎಸ್. ರಾಜಪ್ಪ, ಧಾರವಾಡ ಜಿಲ್ಲೆಯ ಜನಪದ ಕಥೆಗಳು. ಪು. ೧೩೩

> ಅದ್ನ ಕಸುದುಕೊಂಡು ತನ್ನ ಶಿರ ಹರಕೊಂಡ. ಇತ್ಲಿ ಊಟಕೆ ಕುಂತ ಭಾವ ಮೈದುನ "ನಿಮ್ಮ ಅಣ್ಣ ಬರಲಿಲ್ಲಂತ" ಗುಡಿಗೆ ಬಂದು ನೋಡಿದ. ರಕ್ತ ಹರೀತಿತ್ತು, ರುಂಡ ಒಂದು ಕಡೆ ಬಿದ್ದಿತ್ತು. ಅದ್ನ ನೋಡಿ ಇವನು ತನ್ನ ಮನಸ್ಸಿನಲ್ಲಿ ಅಂದ. ಬೀಗರು ನಮಗೆ ಮೊದಲೆ ಜಗಳ. ಹಿಂದಿನ ದರ್ಪದಿಂದ ಅವರದು ನಮ್ಮದು ಭೆಟ್ಟಿ ಇರಲಿಲ್ಲ. ನಾನೇ ಇವನನ್ನು ಕೊಂದನೆಂದು ಫೌಜುದಾರರು ತಾಪಿಕೊಡುತ್ತಾರೆ. ಮರ್ಯಾದೆ ಕಳಕೊಳ್ಳಕ್ಕಿಂತ ಪಾರಾಗಿ ಸಾಯಿಕೊಳ್ಳದೇ ಚಲೋ ಅದ. ಅಂದು ಖಡ್ಗ ತಗೊಂಡು ತನ್ನ ಶಿರ ಹರಕೊಂಡ. ಎರಡೂ ಹೆಣ ಗುಡಿಯಾಗ ಬಿದ್ವೊ. ಅಕ್ಕ, ಗಂಡ ಬರಲಿಲ್ಲಂತ ಬಂದು ಗಳಿಗೆ ಮ್ಯಾಲ ಇವಳು ಗುಡಿಯಾಗ ಬಂದು ನೋಡಿದ್ಲು, ಎರಡು ಹೆಣ ಬಿದ್ದಿದ್ದುವು. ಪ್ರೇಮದ ಗಂಡ್ನ ಕಳಕೊಂಡು ಒಡಹುಟ್ಟಿದ ಅಣ್ಣನನ್ನ ಕಳೆದುಕೊಂಡು ಜಗದ ಅಪವಾದ ಹೊತ್ತು ನಾನಾದು ಯಾಕ ಉಳೀಬೇಕು. ನನ್ನ ಪ್ರಾಣ ದೇವಿಗೆ ನೀಡೋಣವೆಂದು ಅವಳು ಅದೇ ಖಡ್ಗದಿಂದ ಶಿರ ಹರಕೊಳ್ಳಲು ಹೋದಳು. ಆಗ ದೇವಿ ಪ್ರತ್ಯಕ್ಷವಾಗಿ "ಏನು ಬೇಕು ಮಗಳೇ ಕೇಳು" ಅಂದ್ಲು. ಆಗ ಅವಳು "ನನ್ನಣ್ಣನನ್ನು ನನ್ನ ಗಂಡನನ್ನು ಬದುಕಿಸಿ" ಅಂದ್ಲು. ಆಗ ದೇವಿ "ಅವರವರ ದೇಹಕ್ಕೆ ರುಂಡ ಜೋಡಿಸು" ಅಂದ್ಲು. ಅಣ್ಣನು, ಗಂಡನು ಬದುಕುವರು ಎಂಬ ಆನಂದದಲ್ಲಿ ಏನೂ ವಿಚಾರ ಮಾಡದೆ ಗಂಡನ ಶಿರ–ಅಣ್ಣನ ದೇಹ. ಅಣ್ಣನ ಶಿರ–ಗಂಡನ ದೇಹಕ್ಕಿಟ್ಟು ಮ್ಯಾಲೆ ಶಾಲು ಹೊಚ್ಚಿದಳು. ದೇವಿ ತನ್ನ ವರಹಸ್ತ ಇವರ ಮ್ಯಾಲೆ ಎಳೆದಳು. ಇಬ್ಬರು ಎದ್ದುನಿಂತರು. ನೋಡುತ್ತಾಳೆ. ಗಂಡನ ದೇಹಕ್ಕೆ ಅಣ್ಣನ ರುಂಡ, ಅಣ್ಣನ ದೇಹಕ್ಕೆ ಗಂಡನ ರುಂಡ. ಆದರೆ ಅವಳು ಯಾರ ಕೂಡ ಬಾಳ್ವೆ ಮಾಡಬೇಕು?

ಇದು ಒಂದು ಪರಿಪೂರ್ಣ ಇಬ್ಬಂದಿ ಕಥೆ. ಮನುಷ್ಯನಿಗೆ ರುಂಡ ಮುಖ್ಯವೇ ಮುಂಡ ಮುಖ್ಯವೇ? ದೇಹದಾರ್ಢ್ಯಕ್ಕೆ ಪ್ರಾಧಾನ್ಯವೋ. ಬುದ್ಧಿ ಶಕ್ತಿಗೆ ಪ್ರಾಧಾನ್ಯವೇ ಎಂಬ ಪ್ರಶ್ನೆಗಳು ಏಳುತ್ತವೆ. ಎರಡೂ ಕಡೆಯಿಂದಲೂ ವಾದ ಮಾಡಬಹುದು. ಆದರೆ ಭಾರತೀಯ ಸಂಸ್ಕೃತಿಯ ಕಣ್ಣಿನಿಂದ ರುಂಡ ಬದಲಾದ ಈ ಇಬ್ಬರಲ್ಲಿ ಯಾರನ್ನೂ ಗಂಡನೆಂದು ಅರಿಸಿಕೊಳ್ಳುವಂತಿಲ್ಲ. ಹಾಗಾಗಿ ಈ ಕಥೆಯು ಕೊನೆಯಲ್ಲಿನ ಶಿಷ್ಟ ಉತ್ತರ ಪಲಾಯನವಾದ ಸೂತ್ರವನ್ನು ಕೊಡುತ್ತದೆ.

> ಶಿಷ್ಟ ಉತ್ತರ: ಮೂವರು ಕೂಡಿ ಆ ದಿನ ಕುಂಭಯುಕ್ತವಾಗಿ "ದೇವಿ, ಮೂರ್ಖತನದಿಂದ ಯಾವುದನ್ನೂ ವಿಚಾರಮಾಡದೆ ರುಂಡಗಳು ಅದಲು ಬದಲು ಮಾಡಿದ್ದೇವೆ. ಇದು ಜನರಿಗೆ ಪರಿಹಾಸ್ಯ. ಜನರಲ್ಲಿ ನಗೆಗೇಡು" ಎಂದು ಪರಿಪರಿಯಿಂದ ಬೇಡಿಕೊಂಡರು. ಪುನಃ ದೇವಿ ಪ್ರತ್ಯಕ್ಷಳಾದಳು. "ಈ ಜನ್ಮದಲ್ಲಿ ನಿಮಗೆ ರುಂಡಗಳು ಬದಲಾಗುವುದಿಲ್ಲ. ನೀವು ಮೂವರೂ ಪಾಪ ಇಲ್ಲದ ಪಿಂಡಗಳಾಗಿ ಕಾಲ ಕಳೆಯಿರಿ. ಮುಂದಿನ ಜನ್ಮದಲ್ಲಿ ಅಣ್ಣ, ತಂಗಿ, ಗಂಡ, ಮಾನವರಾಗಿ ಹುಟ್ಟಿ"ರೆಂದು ಮೂವರಿಗೂ ನವಿಲಿನ ಜನ್ಮ ಕೊಟ್ಟಳು.

ಕನ್ನಡದಲ್ಲಿ ಇನ್ನೂ ಇಬ್ಬಂದಿ ಕಥೆಗಳಿವೆಯೋ ಎಂದು ಹುಡುಕುವುದಕ್ಕೆ ಮೊದಲು, ಎಂಥ ಕಥೆಗಳು ಇಬ್ಬಂದಿ ಕಥೆಗಳಾಗುವುದಿಲ್ಲ ಎನ್ನುವುದನ್ನು ಗಮನಿಸಬೇಕು. ಇಬ್ಬಂದಿ ಸಮಸ್ಯೆಯನ್ನು ಒಡ್ಡುವ ಕಥೆಗಳಲ್ಲಿ ಪ್ರಶ್ನೆ ಯಾರ ಮುಂದಿದೆ ಎನ್ನುವುದು ಮುಖ್ಯವಾಗುತ್ತದೆ. ಉದಾಹರಣೆಗೆ, ಕನ್ನಡದಲ್ಲಿನ ಕೆಲವು ಗಾದೆಗಳನ್ನು ನೋಡಿ: ಇತ್ತ ದರಿ ಅತ್ತ ಪುಲಿ; ಅಕ್ಕಿಯ ಮೇಲೆ ಆಸೆ ನೆಂಟರ ಮೇಲೆ ಪ್ರೀತಿ ಇತ್ಯಾದಿ. ಈ ಗಾದೆಗಳ ಹಿಂದೆ ಒಂದೊಂದು ಕಥೆ ಗರಿಗೆದರುತ್ತದೆ ಎಂದಿಟ್ಟುಕೊಳ್ಳುವುದಾದರೆ. ಈ ಕಥೆಗಳೂ ಇಬ್ಬಂದಿ ಕಥೆಗಳಂತೆ ಭಾಸವಾಗುತ್ತವೆ. ಆದರೆ ಇಂಥ ಕಥೆಗಳಲ್ಲಿ ಮೂಡುವ ಇಬ್ಬಂದಿ ಪ್ರಶ್ನೆ ಆ ಕಥೆಗಳಲ್ಲಿನ ಪಾತ್ರಕ್ಕೆ ಎದುರಾಗುವಂಥದೇ ಹೊರತು ಕಥಾಶ್ರೋತೃಗಳಿಗಲ್ಲ. ಆದ್ದರಿಂದ ಇವು ಶುದ್ಧ ಇಬ್ಬಂದಿ ಕಥೆಗಳೆನಿಸಿಕೊಳ್ಳುವುದಿಲ್ಲ.

"ರಾಮನ ಹುಂಜ ಭೀಮನ ಮನೆಗೆ ಹೋಗಿ ಅಲ್ಲಿ ಮೊಟ್ಟೆ ಇಟ್ಟರೆ ಮೊಟ್ಟೆ ಯಾರಿಗೆ ಸೇರಬೇಕು"

ಎನ್ನುವಂಥ ಸಮಸ್ಯೆಗಳನ್ನಿಡುವ ಕಥೆಗಳಲ್ಲಿ ಸಮಸ್ಯೆಯೇ ಇರುವುದಿಲ್ಲ: ಹುಂಜ ಮೊಟ್ಟೆ ಇಟ್ಟೀತೇ ಎಂಬ ಅಂಶದಿಂದ ಶ್ರೋತೃವನ್ನು ಪೆದ್ದುಗೊಳಿಸುವ ಯತ್ನದ ಕಥೆಗಳಿವು.

"ಒಬ್ಬ ಹೊಳೆ ದಾಟಬೇಕಾಗಿದೆ. ಅವನ ಬಳಿ ಜಿಂಕೆ, ಹುಲಿ, ಹುಲ್ಲಿನ ಹೊರೆ ಇದೆ. ದೋಣಿಯ ಮೂಲಕ ದಾಟಬೇಕು. ಒಂದು ಬಾರಿಗೆ ಒಂದು ವಸ್ತುವನ್ನು ಮಾತ್ರ ಒಯ್ಯಬಹುದು. ಹಾಗೆ ಮಾಡುವಾಗ ಯಾವುದೇ ದಡದಲ್ಲಿ ಹುಲಿ–ಜಿಂಕೆ ಅಥವಾ ಜಿಂಕೆ–ಹುಲ್ಲಿನ ಹೊರೆಗಳನ್ನು ಒಟ್ಟೊಟ್ಟಾಗಿ ಬಿಡು ವಂತಿಲ್ಲ. ಅವನು ಹೇಗೆ ಎಲ್ಲವನ್ನು ಆಚೆಗೆ ಸಾಗಿಸಿದ" ಎಂಬಂಥ ಕಥೆಗಳಲ್ಲಿ ಬುದ್ಧಿವಂತಿಕೆಯಿಂದ ಬಿಡಿಸಬೇಕಾದ ಸಮಸ್ಯೆ ಇದೆಯೇ ಹೊರತು ಇಬ್ಬಂದಿ ಸಮಸ್ಯೆ ಇರುವುದಿಲ್ಲ.

ನಿಜವಾದ ಇಬ್ಬಂದಿ ಕಥೆಗಳು ಯಾವುವು ಎನ್ನುವುದಕ್ಕೆ ಈ ಲೇಖನದ ಅನುಬಂಧದಲ್ಲಿ ಕೊಟ್ಟಿರುವ ಆಫ್ರಿಕದ ಕಥೆಗಳನ್ನು ನೋಡಬಹುದು. ಮೇಲೆ ಕೊಟ್ಟಿರುವ ಕನ್ನಡದ ಎರಡು ಕಥೆಗಳನ್ನು, ನಾನು ಅವರಿವರಿಂದ ಕೇಳಿ ಸಂಗ್ರಹಿಸಿದ ಕೆಳಗಿನ ಎರಡು ಕಥೆಗಳನ್ನು ಗಮನಿಸಬಹುದು.

ಹಾಸನ ಜಿಲ್ಲೆಯಲ್ಲಿ ದೊರೆಯುವ ಕಥೆ :

> ಮೂವರು ಸೋದರರಿದ್ದರು. ಮೂವರಲ್ಲಿಯೂ ಒಂದೊಂದು ಬಗೆಯ ಅಸಾಧಾರಣ ಶಕ್ತಿ ಇತ್ತು. ಒಬ್ಬನ ನಾಲಗೆಯ ರುಚಿಯನ್ನು, ಇನ್ನೊಬ್ಬನ ವಾಸನಾಶಕ್ತಿಯನ್ನು, ಮತ್ತೊಬ್ಬನ ಸ್ಪರ್ಶಸೂಕ್ಷ್ಮವನ್ನು ಮೀರಿಸುವವರೇ ಇರಲಿಲ್ಲ. ಮೂವರೂ ಒಂದು ಊರಿಗೆ ಬರುತ್ತಾರೆ. ಅಲ್ಲಿಯ ದೊರೆ ಇವರ ಶಕ್ತಿ ಪರೀಕ್ಷೆ ಮಾಡಲು ಬಯಸುತ್ತಾನೆ. ಮೂವರನ್ನೂ ಕರೆದು ಸತ್ಕರಿಸುತ್ತಾನೆ. ಅನ್ನವನ್ನು ತಿನ್ನುವಾಗ ಮೊದಲ ತುತ್ತು ಬಾಯಿಗಿಟ್ಟೊಡನೆಯೆ ಮೊದಲ ಸೋದರ ಈ ಅಕ್ಕಿಯಲ್ಲಿ ಹೆಣದ ವಾಸನೆ ಬರುತ್ತಿದೆ ಎಂದ. ವಿಚಾರಿಸಿ ನೋಡಿದಾಗ ಆ ಅಕ್ಕಿಯನ್ನು ಸ್ಮಶಾನದ ಮಗ್ಗುಲಲ್ಲಿ ಬೆಳೆದದ್ದು ಎಂದು ಗೊತ್ತಾಯಿತು. ಆಮೇಲೆ ರಾಜನರ್ತಕಿಯಿಂದ ನರ್ತನವಾದ ಮೇಲೆ ಒಳಗೆ ಬಂದ ನರ್ತಕಿಯ ಉಸಿರು ತಾಗಿದೊಡನೆ ಇವಳು ಆಡಿನ ಹಾಲು ಕುಡಿದು ಬೆಳೆದವಳು ಎಂದ ಎರಡನೆಯವನು. ವಿಚಾರಿಸಿ ನೋಡಿದಾಗ ಅವಳು ಚಿಕ್ಕಂದಿನಲ್ಲಿ ಕುರುಬರ ಹಳ್ಳಿಯಲ್ಲಿ ಬೆಳೆದವಳು ಎಂದು ಗೊತ್ತಾಯಿತು. ಆಮೇಲೆ ವಿಶ್ರಮಿಸಿಕೊಳ್ಳಲೆಂದು ಮೂರನೆಯವನಿಗೆ ಏಳು ಮೆತ್ತನೆಯ ಹಾಸಿಗೆಗಳನ್ನು ಒಂದರ ಮೇಲೊಂದು ಹಾಸಿ ಕೊಟ್ಟರು. ಅವನು ಮಲಗುತ್ತಿದ್ದಂತೆಯೇ ಅಯ್ಯಪ್ಪ ಎಂದು ಎದ್ದು ಕುಳಿತ. ಅವನ ಬೆನ್ನ ಮೇಲೆ ಕೆಂಪನೆಯ ಒತ್ತು ಗುರುತು ಮೂಡಿತ್ತು. ಎಲ್ಲ ಹಾಸಿಗೆಗಳನ್ನು ತೆಗೆದು ನೋಡಿದಾಗ ಏಳನೆಯ ಹಾಸಿಗೆಯಡಿಯಲ್ಲಿ ಒಂದು ಕೂದಲು ಕಾಣಿಸಿತು. ಈ ಮೂವರಲ್ಲಿ ಯಾರ ಅಸಾಧಾರಣ ಶಕ್ತಿ ಹೆಚ್ಚಿನದು?[2]

ಅಸ್ಸಾಂತ ಕಥೆಯ ಅಂಚಿನಲ್ಲಿ ಬರುವ ಈ ಕಥೆ ಬಾಸ್ಕಂನ ವರ್ಗೀಕರಣದ ಪ್ರಕಾರ ಮೊದಲ ಬಗೆಯ ಇಬ್ಬಂದಿ ಕಥೆಯಾಗುತ್ತದೆ. ಎರಡನೆಯ ಬಗೆಯ ಇಬ್ಬಂದಿ ಕಥೆಗೂ ಕನ್ನಡದಲ್ಲಿ ಉದಾಹರಣೆ ದೊರೆಯುತ್ತದೆ.

> ಗಂಡಹೆಂಡಿರಿದ್ದರು. ಗಂಡ ವ್ಯಾಪಾರಕ್ಕೆಂದು ಊರುಬಿಟ್ಟು ದೂರ ಹೋಗಬೇಕಾಯಿತು ಒಬ್ಬಂಟಿ ಹೆಂಡತಿಯನ್ನು ಗೆಳೆಯನ ಮನೆಯಲ್ಲಿ ಬಿಟ್ಟುಹೋದ. ಆಮೇಲೆ ಹೆಂಡತಿ

---

1 ಈ ಕಥೆಯನ್ನು ಮಿತ್ರರಾದ ಶ್ರೀ ಹಿ. ಚಿ. ರಾಮಚಂದ್ರೇಗೌಡ ಅವರು ಹೇಳಿದರು. ಇದನ್ನು ಅವರ ತಾಯಿ ಹೇಳುತ್ತಿದ್ದರಂತೆ.

> ಗೆಳೆಯನಿಗೆ ಬಸಿರಾಗಿ ಮಗನನ್ನು ಹಡೆದಳು. ಗಂಡ ಪ್ರವಾಸದಿಂದ ಬಂದ ಮೇಲೆ ತನ್ನ ಹೆಂಡತಿಯನ್ನು ಮತ್ತು ಮಗನನ್ನು ಕರೆದೊಯ್ಯಲು ಯತ್ನಿಸಿದ. ಅದಕ್ಕೆ ಗೆಳೆಯ "ನಿನ್ನ ಹೆಂಡತಿಯನ್ನು ಬೇಕಾದರೆ ಕರೆದುಕೊಂಡು ಹೋಗು. ನನಗೆ ಹುಟ್ಟಿದ ಮಗನನ್ನು ಬಿಟ್ಟು ಹೋಗು" ಎಂದ. ಆಗ ಗಂಡ ತನ್ನ ಹೆಂಡತಿಗೆ ಹುಟ್ಟಿದ ಮಗು ತನ್ನದೇ ಆಗುತ್ತದೆ ಎಂದು ವಾದಿಸಿದ. ವ್ಯಾಜ್ಯ ತೀರ್ಪುಗಾರರ ಬಳಿಗೆ ಹೋಯಿತು. ಇಬ್ಬರೂ ತಮ್ಮ ತಮ್ಮ ವಾದಗಳನ್ನು ಮಂಡಿಸಿದರು. ಗೆಳೆಯನ ವಾದ ಹೀಗೆ: "ಒಬ್ಬ ಇನ್ನೊಬ್ಬನ ಬಳಿ ತನ್ನದೊಂದು ಪೆಟ್ಟಿಗೆಯನ್ನು ಕೊಟ್ಟು ಹೋಗುತ್ತಾನೆ ಎಂದಿಟ್ಟುಕೊಳ್ಳಿ. ಇನ್ನೊಬ್ಬ ತನ್ನ ಪದಾರ್ಥಗಳನ್ನು ಆ ಪೆಟ್ಟಿಗೆಯಲ್ಲಿ ಇಟ್ಟುಕೊಂಡಿರುತ್ತಾನೆ. ಆಮೇಲೆ ಪೆಟ್ಟಿಗೆ ಯಜಮಾನ ಬಂದು ಕೇಳಿದಾಗ ಪೆಟ್ಟಿಗೆಯನ್ನು ಮಾತ್ರ ಕೊಡಬೇಕೋ. ಅದರಲ್ಲಿರುವ ವಸ್ತುಗಳನ್ನು ಕೊಡಬೇಕೋ?" ಇದಕ್ಕೆ ಪ್ರತಿಯಾಗಿ ಗಂಡನ ತರ್ಕ ಹೀಗೆ: "ಒಬ್ಬನ ಕೋಳಿ ಇನ್ನೊಬ್ಬನ ಮನೆಯಲ್ಲಿ ಹೋಗಿ ಮೊಟ್ಟೆಯಿಟ್ಟರೆ ಆ ಮೊಟ್ಟೆ ಯಾರಿಗೆ ಸೇರಬೇಕು. ಕೋಳಿಯ ಒಡೆಯನಿಗೊ. ಮನೆಯಾತನಿಗೊ?"[1]

ಈ ಕಥೆಯಲ್ಲಿ ನೈತಿಕ ಹಾಗೂ ನ್ಯಾಯಿಕ ಸಮಸ್ಯೆ ಇದೆ. ಇದನ್ನು ಬಿಡಿಸಬಹುದಾದರೆ ಧರ್ಮದ ನೀತಿಯ ಸೂತ್ರಗಳ ಸಹಾಯದಿಂದ ಬಿಡಿಸಬೇಕು. ಇಂಥ ಕಥೆಗಳನ್ನು ಅರಸಿ ಹೋದರೆ ವಿಪುಲವಾಗಿ ದೊರೆಯುವ ಸಾಧ್ಯತೆ ಇದೆ.

ಕನ್ನಡದಲ್ಲಿಯೂ ಇರಬಹುದಾದ ಇಬ್ಬಂದಿ ಕಥೆಗಳ ಕಡೆಗೆ ಜಾನಪದ ಅಭ್ಯಾಸಿಗಳ ಗಮನ ಹೋಗದಿರುವುದಕ್ಕೆ ಕಾರಣ ಅವುಗಳಲ್ಲಿ ಸಾಹಿತ್ಯಕ ಮೌಲ್ಯವಿಲ್ಲ ಎನ್ನುವುದೇ ಆಗಿರಬಹುದು; ಅಥವಾ ಇಂಥದೊಂದು ಪ್ರಕಾರ ಜನಪದ ಸಾಹಿತ್ಯದಲ್ಲಿ ದೊರೆಯಬಹುದು ಎಂಬ ಕಲ್ಪನೆ ಇಲ್ಲದಿರುವುದೂ ಆಗಿರಬಹುದು.

ಅನುಬಂಧ

ಆಫ್ರಿಕದ ಇಬ್ಬಂದಿ ಕಥೆಗಳು :

(ಕಥೆಗಳ ಕೊನೆಯಲ್ಲಿ ಕೊಟ್ಟಿರುವ ಹೆಸರುಗಳಲ್ಲಿ ಮೊದಲನೆಯದು ಕಥೆ ಪ್ರಚಲಿತವಿರುವ ಆಫ್ರಿಕದ ಬುಡಕಟ್ಟನ್ನು, ಎರಡನೆಯದು ಆ ಬುಡಕಟ್ಟು ವಾಸಿಸುವ ರಾಷ್ಟ್ರವನ್ನು ಸೂಚಿಸುತ್ತವೆ).

೧

ಅಪ್ಪ ಬೇಟೆಗೆ ಹೋದ. ಮರಳಿ ಬರಲಿಲ್ಲ. ಅವನನ್ನು ಹುಡುಕಿಕೊಂಡು ಅವನ ನಾಲ್ಕು ಗಂಡು ಮಕ್ಕಳು ಹೊರಟರು. ತಂದೆಯ ಕೋವಿ ಹಾಗೂ ತಲೆಬುರುಡೆ ಬಿದ್ದಿದ್ದ ಸ್ಥಳವನ್ನು ಕಿರಿಯ ಮಗ ಪತ್ತೆ ಮಾಡಿದ. ಇನ್ನೊಬ್ಬ ಮಗ ಪಕ್ಕದಲ್ಲಿನ ನದಿಯೊಳಗೆ ಧುಮುಕಿ ತಂದೆಯ ಮೂಳೆಗಳನ್ನು ಹೆಕ್ಕಿ ತಂದು ಅವುಗಳನ್ನು ಜೋಡಿಸಿದ. ಮತ್ತೊಬ್ಬ ಮಗ ಅಸ್ಥಿಪಂಜರಕ್ಕೆ ಮಣ್ಣು ಮೆತ್ತಿ ದೇಹದ ರೂಪುಕೊಟ್ಟ. ಮಗದೊಬ್ಬ ಮಗ ಮಾಂತ್ರಿಕ ಕೊಂಬನ್ನು ತಂದೆಯ ಮೂಗಿನ ಬಳಿ ಇಟ್ಟು ಊದಿದ. ಅಪ್ಪ ಸೀನುತ್ತ ಎದ್ದುಕುಳಿತ. ಮನೆಗೆ ಬಂದ. ಈಗ ಹೇಳಿ, ನಾಲ್ಕು ಮಂದಿ ಮಕ್ಕಳಲ್ಲಿ ತಂದೆಯನ್ನು ಮತ್ತೆ ಹುಟ್ಟಿಸಿದವರು ಯಾರು? ಈ ವಿಷಯವಾಗಿ ಅವರು ಇಂದಿಗೂ ವಾದ ಮಾಡುತ್ತಿದ್ದಾರೆ.

(ಟೆಮ್ನೆ; ಸಿಯರ ಲಿಯೋನ್)

೨

ಒಂದು ಊರಿನ ಪ್ರಮುಖ ಇಬ್ಬರು ಪರಸ್ಥಳದವರಿಗೆ ಅತಿಥಿಗೃಹದಲ್ಲಿ ಮಲಗಲು ಅನುಮತಿ ಕೊಟ್ಟ. ಅವರು ಗೊರಕೆ ಏನಾದರೂ ಹೊಡೆದರೆ ನಿದ್ರೆಯಲ್ಲಿದ್ದಾಗಲೇ ಅವರನ್ನು ಕೊಲ್ಲುವುದಾಗಿ

ಈ ಕಥೆಯನ್ನು ಮಿತ್ರರಾದ ಎಸ್. ಬಸವರಾಜ್ ಅವರಿಂದ ಕೇಳಿದ್ದು. ಶಿವಮೊಗ್ಗ ಜಿಲ್ಲೆಯ ಅವರೂರ ವೃದ್ಧರೊಬ್ಬರು ಈ ಕಥೆಯನ್ನು ಹೇಳಿ ಬಿಡಿಸು ಎಂದು ಸವಾಲು ಹಾಕಿದರಂತೆ.

ಎಚ್ಚರಿಕೆ ಇತ್ತು. ಮಧ್ಯರಾತ್ರಿಯಲ್ಲಿ ಇವರಿಬ್ಬರಲ್ಲಿ ಒಬ್ಬ ಎದ್ದು ನೋಡಿದರೆ, ತನ್ನ ಗೆಳೆಯ ಗೊರಕೆ ಹೊಡೆಯುತ್ತಿದ್ದಾನೆ; ಹಳ್ಳಿಗರು ಚೂರಿಗಳನ್ನು ಹರಿತಮಾಡುತ್ತಿರುವ ಸದ್ದು ಕೇಳುತ್ತಿದೆ. ತಕ್ಷಣವೇ ಒಂದು ಹಾಡನ್ನು ರಚಿಸಿ ಜೋರಾಗಿ ಹಾಡತೊಡಗಿದ. ಹಾಗಾಗಿ ಹಳ್ಳಿಗರಿಗೆ ಗೊರಕೆಯ ಸದ್ದು ಕೇಳಿಸಲಿಲ್ಲ. ಈ ಹಾಡಿನ ತಾಳಕ್ಕೆ ಅವರೂ ಡೋಲು ಬಾರಿಸುತ್ತ ಕುಣಿಯತೊಡಗಿದರು. ಮಾರನೆಯ ದಿನ ಬೆಳಿಗ್ಗೆ ಪ್ರಮುಖ ಇವರನ್ನು ಕರೆಸಿ ಸೊಗಸಾದ ಹಾಡಿಗೆ ಪ್ರತಿಫಲವಾಗಿ ಬಹುಮಾನ ಕೊಟ್ಟು ಕಳುಹಿಸಿದ. ಆ ಊರು ಬಿಟ್ಟು ಹೊರಗಡೆ ಬಂದ ಮೇಲೆ ಬಹುಮಾನದಲ್ಲಿ ಯಾರಿಗೆ ಹೆಚ್ಚು ಪಾಲು ಬರಬೇಕೆಂದು ವ್ಯಾಜ್ಯ ಹುಟ್ಟಿತು. ಗೊರಕೆ ಹೊಡೆದವನು ತಾನು ಗೊರಕೆ ಹೊಡೆಯದಿದ್ದರೆ ಗೆಳೆಯ ಹಾಡನ್ನು ರಚಿಸುತ್ತಿರಲಿಲ್ಲವಾಗಿ ತನಗೇ ಹೆಚ್ಚಿನ ಪಾಲು ಬರಬೇಕೆಂದ. ಹಾಡಿದವನು ತಾನು ಹಾಡದಿದ್ದರೆ ಗೆಳೆಯನನ್ನು ಕೊಲ್ಲುತ್ತಿದ್ದರಾಗಿ ತನಗೇ ಹೆಚ್ಚಿನ ಪಾಲು ಬರಬೇಕೆಂದ. ಅವರು ಒಂದು ತೀರ್ಮಾನಕ್ಕೆ ಬರಲಾಗಲಿಲ್ಲ. ನೀವು ಬರಬಲ್ಲಿರಾ?

(ಮೆಂಡೆ; ಸಿಯರ ಲಿಯೋನ್, ಲೈಬೀರಿಯ)

೩

ಒಂದೇ ಹುಡುಗಿಯನ್ನು ಪ್ರೇಮಿಸುತ್ತಿದ್ದ ಮೂವರು ತರುಣರು ಅವಳಿಗಾಗಿ ವಸ್ತುಗಳನ್ನು ಕೊಂಡು ತರಲು ಕರಾವಳಿಗೆ ಹೋದರು. ಒಬ್ಬನ ಬಳಿ ಇದ್ದ ಕನ್ನಡಿಯಲ್ಲಿ ನೋಡಿದಾಗ ಅವನಿಗೆ ಹುಡುಗಿ ಸತ್ತಿರುವುದು ಕಂಡಿತು. ಇನ್ನೊಬ್ಬ ತನ್ನ ಬಳಿ ಇದ್ದ ಮದ್ದನ್ನು ಮೂವರ ಮಂಡಿಗೂ ಸವರಿದ. ತಕ್ಷಣವೇ ಅವರು ಹುಡುಗಿಯ ಪಕ್ಕದಲ್ಲಿ ಇದ್ದರು. ಮತ್ತೊಬ್ಬ ತನ್ನಲ್ಲಿದ್ದ ಮಂತ್ರೌಷಧಿಯನ್ನು ಅವಳ ಮೇಲೆ ಚಿಮುಕಿಸಿದ ಕೂಡಲೇ ಅವಳು ಎದ್ದು ಕೂತಳು. ಈ ಮೂವರಲ್ಲಿ ಯಾರ ಕೆಲಸ ಹೆಚ್ಚಿನದು?

(ಆಶಂಟೀ; ಘಾನಾ)

೪

ಎರಡು ಹಕ್ಕಿಗಳು ಕಾದಾಡುತ್ತಿದ್ದಾಗ. ಮೊದಲನೆಯ ಹಕ್ಕಿ ಎರಡನೆಯ ಹಕ್ಕಿಯನ್ನು ನುಂಗಿತು, ಎರಡನೆಯ ಹಕ್ಕಿ ಮೊದಲನೆಯದನ್ನು ನುಂಗಿತು ಎಂದು ಒಬ್ಬ ಹೇಳಿದ. ತನ್ನ ತಲೆಯನ್ನೇ ಕತ್ತರಿಸಿಕೊಂಡು ತನ್ನ ಬಾಯಲ್ಲಿಟ್ಟುಕೊಂಡು ತಿನ್ನುತ್ತಿದ್ದ ವ್ಯಕ್ತಿಯನ್ನು ತಾನು ನೋಡಿದೆನೆಂದು ಇನ್ನೊಬ್ಬ ಹೇಳಿದ. ಮನೆ. ಹೊಲ ಮತ್ತು ತನ್ನೆಲ್ಲ ಆಸ್ತಿಯನ್ನು ತಲೆಯ ಮೇಲೆ ಹೊತ್ತೊಯ್ಯುತ್ತಿದ್ದ ಹೆಂಗಸನ್ನು ತಾನು ನೋಡಿದೆನೆಂದೂ. ಅವಳನ್ನು ಎಲ್ಲಿಗೆ ಹೋಗುತ್ತಿದ್ದೀಯಾ ಎಂದು ಕೇಳಿದಾಗ. ತನ್ನ ತಲೆಯನ್ನು ತಾನೇ ಕತ್ತರಿಸಿ ತಿನ್ನುವ ಮನುಷ್ಯನ ಬಗ್ಗೆ ಕೇಳಿ ಹೆದರಿಕೆಯಿಂದ ಊರು ಬಿಡುತ್ತಿದ್ದೇನೆ ಎಂದು ಅವಳು ಹೇಳಿದಳು–ಎಂದು ಮೂರನೆಯವನು ಹೇಳಿದ. ಈ ಮೂವರ ಕಥೆಗಳಲ್ಲಿ ಯಾರ ಕಥೆ ಹೆಚ್ಚು ವಿಸ್ಮಯಕರ?

(ವೈ; ಲೈಬೀರಿಯ)

೫

ಒಬ್ಬ ರಾಜ ತನ್ನ ಊರಿನಲ್ಲಿ ಯಾರೂ ಕದಿಯಬಾರದೆಂದು ಕಾನೂನು ಮಾಡಿದ್ದ. ಒಂದು ಸಲ ಇಬ್ಬರು ಹುಡುಗರು ತಮ್ಮಿಬ್ಬರಲ್ಲಿ ಯಾರು ದೊಡ್ಡ ಕಳ್ಳರು ಎಂಬುದರ ಬಗ್ಗೆ ಪಂದ್ಯ ಕಟ್ಟಿಕೊಳ್ಳುತ್ತಿದ್ದರು. ಇದನ್ನು ಕೇಳಿಸಿಕೊಂಡವರು ರಾಜನಿಗೆ ಸುದ್ದಿ ಮುಟ್ಟಿಸಿದರು. ಈ ಇಬ್ಬರು ಹುಡುಗರನ್ನು ಅವರ ತಾಯ್ತಂದೆಯರನ್ನೂ ರಾಜ ಕರೆಸಿದ. ಹುಡುಗರು ಪಂದ್ಯಕಟ್ಟಿರುವುದನ್ನು ಒಪ್ಪಿಕೊಂಡರೂ ತಾವು ಏನನ್ನೂ ಕದ್ದಿಲ್ಲವೆಂದರು. ಆಗ ರಾಜ ಇನ್ನು ನಾಲ್ಕು ದಿನಗಳ ಕಾಲದಲ್ಲಿ ಅವರು ಕಟ್ಟಿದ ಪಂದ್ಯವನ್ನು ನೆರವೇರಿಸಲೆಂದು ಅನುಮತಿ ಕೊಟ್ಟರೂ. ಅವನ ಊರಿನಲ್ಲಿ ಏನನ್ನೂ ಕದಿಯಬಾರದೆಂದು ವಿಧಿಸಿದ. ಅಲ್ಲದೆ ತಮ್ಮ ಪಂದ್ಯಕ್ಕೆ ಜಾಮೀನಾಗಿ ಹೆಣ್ಣನ್ನು ಒತ್ತೆಯಿಡಬೇಕೆಂದ. ಹುಡುಗರು ತಮ್ಮ ತಮ್ಮ ಸೋದರಿಯರನ್ನೇ ಒತ್ತೆ ಇರಿಸಿದರು. ಊರನ್ನು ಬಿಟ್ಟು ಮೂರು ದಿನ ಅಲೆದಾಡಿದರೂ

ಕದಿಯಲು ಅವರಿಗೆ ಏನೂ ಸಿಗಲಿಲ್ಲ. ನಾಲ್ಕನೆಯ ದಿನದಂದು ಪೆಟ್ಟಿಗೆಗಳಿಗೆ ಕಾವಲು ಕೊಡುತ್ತಿದ್ದ ಪಾರಿವಾಳವೊಂದು ಅವರ ಕಣ್ಣಿಗೆ ಬಿದ್ದಿತು. ಒಬ್ಬ ಹುಡುಗ ಪಾರಿವಾಳಕ್ಕೆ ಗೊತ್ತಿಲ್ಲದಂತೆಯೇ, ಅದು ಕೂತಿದ್ದಂತೆಯೇ ಪೆಟ್ಟಿಗೆಗಳೆಲ್ಲವನ್ನು ಕದ್ದು ತಂದು ರಾಜನಿಗೆ ಒಪ್ಪಿಸಿದ. ಆಗ ಎರಡನೆಯ ಹುಡುಗ ಮೊದಲನೆಯವನನ್ನು ಕುರಿತು "ನಿನ್ನ ಲಂಗೋಟಿ ಏನಾಯಿತು ನೋಡಿಕೋ. ಇದೋ ನಾನು ಕದ್ದಿದ್ದೇನೆ" ಎಂದು ತೋರಿಸಿದ. ಅಲ್ಲಿದ್ದವರೆಲ್ಲ ನಕ್ಕರು. ಅವರ ಕಳ್ಳತನದಲ್ಲಿ ಯಾರು ಯಾರನ್ನು ಮೀರಿಸಿದ್ದಾರೆ ಎಂದು ತೀರ್ಮಾನಿಸುವ ಜವಾಬ್ದಾರಿ ರಾಜನಿಗೆ ಉಂಟಾಯಿತು.

(ಕಪೆಲ; ಲೈಬೀರಿಯ)

೬

ಚಿಂದಿ ಬಟ್ಟೆಯ ಉಂಡೆಯ ಮೇಲೆ ಉಪ್ಪಿನ ಲೇಪ ಹಾಕಿ ಅದನ್ನು ದೊಡ್ಡ ಉಪ್ಪಿನ ಉಂಡೆ ಎಂದು ಮಾರಲು ಒಬ್ಬ ಮೋಸಗಾರ ಹೊರಟ. ಇನ್ನೊಬ್ಬ ಮೋಸಗಾರ ಅಂತೆಯೇ ಸ್ವಲ್ಪ ಬಟ್ಟೆಯ ಚೂರುಗಳನ್ನು ಮೇಲೆ ಸುತ್ತಿಕೊಂಡು ದೊಡ್ಡ ಬಟ್ಟೆಯ ಹೊರೆ ಎಂದು ಮಾರಲು ಬಂದ. ಇವರಿಬ್ಬರೂ ಭೇಟಿಯಾದಾಗ, ಮೊದಲನೆಯವನು ತನ್ನ ನಾಡಿನಲ್ಲಿ ಬಟ್ಟೆಯೇ ಇಲ್ಲದಿರುವುದರಿಂದ ಜನರು ಬತ್ತಲೆ ಓಡಾಡಬೇಕಾಗಿದೆ ಎಂದ. ಎರಡನೆಯವನು ತನ್ನ ನಾಡಿನಲ್ಲಿ ಉಪ್ಪಿಗೇ ಬರಗಾಲ ಎಂದ. ಇಬ್ಬರೂ ತಮ್ಮ ತಮ್ಮ ಸರಕುಗಳನ್ನು ಅದಲು ಬದಲು ಮಾಡಿಕೊಂಡರು. ಪ್ರತಿಯೊಬ್ಬನೂ ತಾನು ಇನ್ನೊಬ್ಬನಿಗೆ ಮೋಸಮಾಡಿದ್ದೇನೆಂದು ಭಾವಿಸಿಕೊಂಡಿದ್ದ. ಮನೆ ಸೇರಿದಾಗ ಮಾತ್ರ "ಅಯ್ಯೊ ಅವನು ನನಗೆ ಮೋಸಮಾಡಿದ" ಎಂದು ಇಬ್ಬರೂ ತಲೆ ಚಚ್ಚಿಕೊಂಡರು. ಇವರಲ್ಲಿ ಯಾರು ಹೆಚ್ಚಿನ ಮೋಸಗಾರರು?

(ಗುರ್ಮ: ಅಪ್ಪರ್ ವೋಲ್ಟಾ, ಟೊಗೊ)

೭

ಒಬ್ಬ ಹಾವು ಕಚ್ಚಿ ಮಲಗಿದ್ದ. ಅವನ ಹೆಂಡತಿಯನ್ನು ಅವಳ ತೌರಿನಿಂದ ಕರೆತರಲು ಅವನ ಗೆಳೆಯ ಹೋದ. ಹಿಂತಿರುಗಿ ಬರುತ್ತಿರುವಾಗ ಒಂದು ಚಿರತೆ ಅವಳ ಮೇಲೆ ಹಾರಿತು. ಆಗ ಗೆಳೆಯ ಅದನ್ನು ತನ್ನ ಕೈಯಲ್ಲಿದ್ದ ಚೂರಿಯಿಂದಲೇ ಕೊಂದ. ಆಗ ಅವಳು ಅವನ ಮೇಲೆ ಮೋಹಗೊಂಡಳು. ತನಗೆ ಮಕ್ಕಳಿಲ್ಲವೆಂದೂ ತನ್ನ ಗಂಡ ತನ್ನನ್ನು ತಾತ್ಸಾರದಿಂದ ಕಾಣುತ್ತಾನೆಂದೂ ಹೇಳಿ ತನ್ನನ್ನು ಒಪ್ಪಿಸಿಕೊ ಎಂದಳು. ಅವಳ ಪ್ರೇಮ ಪ್ರಯತ್ನಗಳನ್ನು ತಿರಸ್ಕರಿಸಿದ ಗೆಳೆಯ ಅವಳನ್ನು ನೆಲದ ಮೇಲೆ ಮಲಗಿಸಿ ಅವಳ ಮೇಲೆ ಚಿರತೆಯ ಹೆಣವನ್ನು ಹೇರಿ, ಅವಳ ಗಂಡನಿಗೆ ಸುದ್ದಿ ಮುಟ್ಟಿಸಲು ಹೊರಟ. ರಾತ್ರಿಯೆಲ್ಲ ಈ ಚಿರತೆಯ ಸಂಗಾತಿ ಚಿರತೆ ಹತ್ತಿರ ಬಂದು ಭಯಾನಕವಾಗಿ ಊಳಿಡುತ್ತಿತ್ತು. ಆದರೂ ಅವಳು ಮಿಸುಕಾಡಲಿಲ್ಲ. ಅವಳ ಗಂಡನ ಹತ್ತಿರ ಬಂದ ಗೆಳೆಯ ಅವನ ಹೆಂಡತಿಯನ್ನು ಚಿರತೆ ತಿನ್ನುತ್ತಿದೆ ಎಂದ. ತಕ್ಷಣವೇ ಅಲ್ಲಿಗೆ ನುಗ್ಗಿದ ಗಂಡ ಬರಿಗೈಯಿಂದಲೇ ಚಿರತೆಯ ಕುತ್ತಿಗೆಗೆ ಕೈಹಾಕಿದ. ಆಗ ಅವನ ಹೆಂಡತಿ ಚಿರತೆ ಆಗಲೇ ಸತ್ತಿದೆಯೆಂದು ಹೇಳಿ, ಗಂಡ ತನ್ನನ್ನು ಎಷ್ಟು ಪ್ರೀತಿಸುತ್ತಿದ್ದಾನೆ ಎಂದು ತಿಳಿಯಲು ಹಾಗೆ ಮಾಡಿದೆನೆಂದು ಹೇಳಿದಳು. ಇವರಲ್ಲಿ ಯಾರು ಹೆಚ್ಚು ಧೈರ್ಯಶಾಲಿಗಳು? ಸಣ್ಣ ಚೂರಿಯೊಂದರಿಂದಲೇ ಚಿರತೆಯನ್ನು ಕೊಂದ ಗೆಳೆಯನೊ? ಕಾರ್ಗತ್ತಲ ರಾತ್ರಿಯೆಲ್ಲ ಚಿರತೆಯಡಿಯಲ್ಲಿ ಒಬ್ಬಳೇ ಇದ್ದ ಹೆಂಡತಿಯೊ? ಚಿರತೆಯ ಮೇಲೆ ಬರಿಗೈಯಲ್ಲಿ ಹಾರಿದ ಗಂಡನೊ?

(ಪಿಗ್ಮಿ; ಗಬನ್, ಕಾಂಗೊ, ಜೈರೆ)

೮

ಪ್ರಮುಖನೊಬ್ಬನ ರಾಜ್ಯವೆಲ್ಲ ಸಂಪೂರ್ಣವಾಗಿ ನಾಶವಾದ ಮೇಲೆ ಅವನ ಮಗನ ಬಳಿ ಏನೂ ಉಳಿಯಲಿಲ್ಲ. ಬತ್ತಲೆಯಾದ ಅವನು ಮರದ ಪೊಟರೆಯಲ್ಲಿ ತನ್ನ ಖಡ್ಗದ ಸಹಿತ ವಾಸಿಸತೊಡಗಿದ. ಉತ್ತರದ ಪ್ರಮುಖನೊಬ್ಬನ ಹಾಗೂ ದಕ್ಷಿಣದ ಪ್ರಮುಖನೊಬ್ಬನ ಇಬ್ಬರು ಸುಂದರ ರಾಜಕುಮಾರಿ

ಯರು ಇವನ ಸ್ವಾಭಿಮಾನ ಹಾಗೂ ಶೌರ್ಯವನ್ನು ಕೇಳಿ ಅವನನ್ನು ಮದುವೆಯಾಗ ಬಯಸಿದರು. ಪ್ರತಿಯೊಬ್ಬರೂ ಸಾವಿರ ಮಂದಿ ಯೋಧರೂ ಗುಲಾಮರೂ ಸಹಿತವಾಗಿ ಸಂಪತ್ತಿನ ಸಮೇತ ಹೊರಟರು. ದಕ್ಷಿಣದ ಕನ್ಯೆ ಮೊದಲು ಬಂದಳು. ಮರದ ಪೊಟರೆಯಲ್ಲಿ ರಾಜಕುಮಾರ ಕಾಣಲಿಲ್ಲ. ಕೂಡಲೇ ತನ್ನ ಐನೂರು ಮಂದಿ ಯೋಧರನ್ನು ಪಟ್ಟಣಕ್ಕೆ ಕಳುಹಿಸಿ ಬತ್ತಲೆ ಮಂದಿಯನ್ನೆಲ್ಲ ಹಿಡಿದು ತನ್ನಿ ಎಂದಳು. ಅವರು ನೂರು ಮಂದಿ ಬತ್ತಲೆ ಪುರುಷರನ್ನು ಸೆರೆಹಿಡಿದರು. ಸ್ನಾನ ಮಾಡುತ್ತಿದ್ದವರನ್ನು ಹಿಡಿದರು. ಬಟ್ಟೆ ಬಿಚ್ಚುತ್ತಿದ್ದವರನ್ನು ಹಿಡಿದರು. ತಮ್ಮ ಹೆಂಡಿರೊಂದಿಗೆ ಹಾಸಿಗೆಯಲ್ಲಿ ಮಲಗಿದ್ದವರನ್ನು ಹಿಡಿದರು, ಬತ್ತಲೆ ರಾಜಕುಮಾರನನ್ನೂ ಹಿಡಿದರು. ಅಷ್ಟರಲ್ಲಿ ಅಲ್ಲಿಗೆ ಉತ್ತರದ ಕನ್ಯೆಯೂ ಬಂದಳು. ರಾಜಕುಮಾರನನ್ನು ಹೆಸರಿಡಿದು ಕರೆದು ಗುರುತಿಸಿದಳು. ತನ್ನ ಎದುರಾಳಿಯ ಯೋಧರ ಮುಂದೆ ಆಹಾರವಿಡುವಂತೆ ತನ್ನ ಗುಲಾಮರಿಗೆ ಆಜ್ಞಾಪಿಸಿದಳು. ಅವರು ರಾಜಕುಮಾರನನ್ನು ಬಿಟ್ಟರು. ಅವನಿಗೆ ಸುವಾಸಿತ ಅತ್ತರಿನಿಂದ ಮೈಯುಜ್ಜಿ ಸ್ನಾನ ಮಾಡಿಸಿದಳು, ಬಂಗಾರದ ಬಟ್ಟಲಲ್ಲಿ ಉಣಲಿಕ್ಕಿದಳು, ದ್ರಾಕ್ಷಾರಸವಿತ್ತಳು. ಆ ವೇಳೆಗೆ ದಕ್ಷಿಣದ ಕನ್ಯೆ ಅಲ್ಲಿಗೇ ಬಂದು ಬಂಗಾರ ಬೆಳ್ಳಿಯ ಜರತಾರಿ ಉಡುಗೆಗಳನ್ನು ಉಡಿಸಿದಳು. ಬೆಲೆಬಾಳುವ ಆಭರಣವಿಟ್ಟಳು, ಗಂಧ ತೀಡಿದಳು. ಈರ್ವರು ಕನ್ಯೆಯರೂ ಅವನು ತನ್ನ ಗಂಡನಾಗಬೇಕೆಂದರು. ಜಗಳವಾಡಿದರು. ಆಗ ಅವನು ಇಬ್ಬರಿಗೂ ಜಗಳ ನಿಲ್ಲಿಸಿರೆಂದು ಹೇಳಿ. ಇಬ್ಬರನ್ನೂ ಮದುವೆಯಾದ. ಅದಿರಲಿ, ಇವರಿಬ್ಬರಲ್ಲಿ ಯಾರಿಗೆ ಮೊದಲ ಹೆಂಡತಿಯಾಗುವ ಹಕ್ಕು?

(ಬಂಡಿ; ಲೈಬೀರಿಯ)

೯

ನದಿಯನ್ನು ದಾಟುತ್ತಿದ್ದಾಗ ಒಬ್ಬನ ದೋಣಿ ತಲೆಕೆಳಗಾಯಿತು. ಅವನ ಜೊತೆಗೆ ಅವನ ತಂಗಿ, ಅವನ ಹೆಂಡತಿ ಮತ್ತು ಅವನ ಅತ್ತೆ ನೀರಿಗೆ ಬಿದ್ದರು. ಮೂರು ಜನ ಹೆಂಗಸರಿಗೂ ಈಜಲು ಬರುತ್ತಿರಲಿಲ್ಲ. ಅವರಲ್ಲಿ ಯಾರನ್ನಾದರೂ ಒಬ್ಬರನ್ನು ಉಳಿಸಲು ಅವನಿಗೆ ಸಾಧ್ಯವಿತ್ತು. ಈ ಮೂವರಲ್ಲಿ ಯಾರನ್ನು ಉಳಿಸಬೇಕು?

ಈ ಕಥೆಯನ್ನು ಹೇಳಿದ ಮೇಲೆ ನಿರೂಪಕ ಜೊತೆಗೆ ವ್ಯಾಖ್ಯಾನವನ್ನೂ ಮಾಡುತ್ತಾನೆ: "ನಿನ್ನ ತಂಗಿಯನ್ನು ಉಳಿಸಿ ಹೆಂಡತಿಯನ್ನು ಮುಳುಗಲು ಬಿಟ್ಟರೆ, ಹೊಸ ಹೆಂಡತಿಯನ್ನು ಪಡೆಯಲು ಕನ್ಯಾಶುಲ್ಕವನ್ನು ಕೊಡಬೇಕಾಗುತ್ತದೆ. ಹೆಂಡತಿಯನ್ನು ಉಳಿಸಿ ತಂಗಿಯನ್ನು ಕೈಬಿಟ್ಟರೆ ಅಪ್ಪ ಅಮ್ಮಂದಿರಿಂದ ಬೈಗಳ ಸುರಿಮಳೆಯಾದೀತು. ನಿನ್ನ ಅತ್ತೆಯನ್ನು ಉಳಿಸಲು ಮನಸ್ಸು ಮಾಡಿದಿಯೋ ನಿನ್ನಂಥ ದಡ್ಡ ಇನ್ನೊಬ್ಬನಿಲ್ಲ."

(ಬೀಟ; ಐವರಿಕೋಸ್ಟ್)

೧೦

ಒಂದು ದಿನ ದೇವರು ಮನುಷ್ಯನೊಬ್ಬನನ್ನು ಎಳೆದೆತ್ತಿ ಹಗ್ಗದಿಂದ ಅವನನ್ನು ನಕ್ಷತ್ರಕ್ಕೆ ಕಟ್ಟಿ ಹಾಕಿದ. ಇವನ ಮೊದಲ ಮಗನಿಗೆ ತೀಕ್ಷ್ಣ ಕಣ್ಣುಗಳಿದ್ದುದರಿಂದ ಅವನು ತನ್ನ ತಂದೆಯನ್ನು ಗೊತ್ತು ಹಚ್ಚಿದ. ಎರಡನೆ ಮಗ ತನ್ನ ದಂಡವನ್ನು ಬೀಸಿ ಎಸೆದು ಅಪ್ಪನ ಕಟ್ಟಿದ ಹಗ್ಗವನ್ನು ಕತ್ತರಿಸಿದ. ಮೂರನೆಯ ಮಗ ಮೇಲಿಂದ ಬಿದ್ದ ತಂದೆಯನ್ನು ಆತುಗೊಂಡ. ತನ್ನ ಮೂರು ಮಕ್ಕಳಲ್ಲಿ ಅವನು ಯಾರಿಗೆ ಕೃತಜ್ಞನಾಗಿರಬೇಕು?

(ಮೋಸಿ; ಅಪ್ಪರ್‌ವೋಲ್ಟಾ)

೧೧

ಒಬ್ಬ ತನ್ನ ಹೆಂಡತಿ ಮತ್ತು ತಾಯಿಯೊಂದಿಗೆ ನದಿಯನ್ನು ದಾಟುತ್ತಿರುತ್ತಾನೆ. ಆಗ ದಡದ ಮೇಲೆ ಒಂದು ಜಿರಾಫೆ ಕಾಣಿಸಿಕೊಳ್ಳುತ್ತದೆ. ಅದಕ್ಕೆ ಗುಂಡಿಡಲು ತನ್ನ ಬಂದೂಕನ್ನು ಎತ್ತಿದಾಗ

ಜಿರಾಫೆ ಹೇಳುತ್ತದೆ: "ಗುಂಡಿಟ್ಟರೆ ನಿನ್ನ ತಾಯಿ ಸಾಯುತ್ತಾಳೆ. ಗುಂಡಿಡದಿದ್ದರೆ ನಿನ್ನ ಹೆಂಡತಿ ಸಾಯುತ್ತಾಳೆ" ಅವನ ಜಾಗದಲ್ಲಿ ನೀವಿದ್ದಿದ್ದರೆ ಏನು ಮಾಡುತ್ತಿದ್ದಿರಿ?

(ಫ್ರೋಫ್ರೋ: ದಹೋಮಿ)

೧೨

ಬಂಡೆಯ ಮೂಲಕ ಬಾಣಬಿಟ್ಟು ಆನೆಯನ್ನು ಕೊಂದ ಒಬ್ಬ. ಇನ್ನೊಬ್ಬ ಬಾಣವನ್ನೇ ಹಿಂಬಾಲಿಸಿ ಬಂಡೆಯ ಮೂಲಕ ಹೋಗಿ ಆನೆಯನ್ನು ಕತ್ತರಿಸಿ ಅದನ್ನು ಆ ತೂತಿನ ಮೂಲಕವೇ ಹೊತ್ತುತಂದ. ಮೂರನೆಯವನೊಬ್ಬ ತನ್ನ ತಲೆಯಿಂದ ಹೇನೊಂದನ್ನು ಹೆಕ್ಕಿಕೊಂಡು ಅದರ ಚರ್ಮವನ್ನು ಸುಲಿದುಕೊಂಡ. ಆ ಹೇನಿನ ಚರ್ಮದಲ್ಲಿಯೇ ಆನೆಯನ್ನು ಹೊಲಿದಿಟ್ಟ. ಇವರಲ್ಲಿ ಯಾರದು ಹೆಚ್ಚು ಅದ್ಭುತ?

(ಲೋಮ; ಲೈಬೀರಿಯ. ಗಿನಿ)

೧೩

ಮೂವರು ಯುವಕರು ದೊಡ್ಡ ನದಿಯ ಬಳಿಗೆ ಬಂದರು. ಮೊದಲನೆಯವನು ನೀರನ್ನು ತನ್ನ ಖಡ್ಗದಿಂದ ಇಬ್ಭಾಗಿಸಿ ಆಚೆಯ ದಡವನ್ನು ಕಾಲು ನೆನೆಸಿಕೊಳ್ಳದೆ ಸೇರಿದ. ಎರಡನೆಯವನು ಬಟ್ಟೆಯ ಸುರುಳಿಯನ್ನು ಬಿಚ್ಚಿ ಅದರಿಂದ ಸೇತುವೆ ಮಾಡಿ ಅದರ ಮೇಲಿಂದ ನದಿ ದಾಟಿದ. ಮೂರನೆಯವನು ಬಾಣದ ಮೇಲೆ ಬಾಣ ಬಿಟ್ಟು ಒಂದಕ್ಕೊಂದು ಸೇರಿಸಿ ಬಾಣದ ಸೇತುವೆ ಮಾಡಿ ಅದರ ಮೇಲಿಂದ ದಾಟಿದ. ಇವರಲ್ಲಿ ಯಾರು ಅತ್ಯಂತ ಚತುರ?

(ವೋಲಾಫ್; ಸೆನಗಲ್)

೧೪

ಒಂದು ರಾತ್ರಿ ಮನುಷ್ಯನೊಬ್ಬ ಮಲಗಿ ನಿದ್ರಿಸುತ್ತಿದ್ದ. ತನ್ನ ತಾಯಿಯನ್ನು ಯಾರೋ ಒಬ್ಬ ಬೈಯುತ್ತಿದ್ದುದನ್ನು ಅವನು ತನ್ನ ಕಿವಿಯಿಂದ ಕೇಳಿದ. ತಡೆಕೊಳ್ಳಲಾರದೆ ತನ್ನ ಕಾಲುಗಳ ಮೇಲೆ ನಿಂತ. ತನ್ನ ಕೈಯಿಂದ ಈಟಿಯನ್ನು ಎತ್ತಿಕೊಂಡ. ಇವನ ಕಣ್ಣುಗಳು ಇವನಿಗೆ ಹೊರಗೆ ಹೋಗಿ ಬೈದವನೊಂದಿಗೆ ಹೋರಾಡಲು ಸಹಾಯ ಮಾಡಿದವು. ಬೈದವನು ಅವಿತುಕೊಂಡ. ಆದರೆ ಇವನ ಕಣ್ಣುಗಳು ಅವನನ್ನು ಅರಸಿದವು. ಕೈ ಈಟಿಯನ್ನು ಎಸೆಯಿತು. ಅವನು ಸತ್ತ. ಬೈದವನ ಮನೆಯವರು ಸೇಡು ತೀರಿಸಿಕೊಳ್ಳಲು ಬಂದಾಗ ಹಿರೀಕರು ಅವರನ್ನು ತಡೆದರು. ಈ ಮನುಷ್ಯ ದಂಡಕೊಡಬೇಕೆಂದರು. ಆದರೆ ಇವನು ದಂಡಕೊಡಲು ನಿರಾಕರಿಸಿ. ತನ್ನ ತಾಯಿಯನ್ನು ಬೈಯುತ್ತಿದ್ದಾರೆ ಎಂದು ಕಿವಿ ತನಗೆ ಹೇಳಿದ್ದರಿಂದ ಕಿವಿಯೇ ದಂಡಕೊಡಬೇಕೆಂದ. ಕಾಲುಗಳು ತಾನೆ ಹೊರಗೆ ಕರೆತಂದದ್ದು. ಆದ್ದರಿಂದ ನಾನು ಕೊಡಲಾರೆ ಎಂದು ಕಿವಿ ಹೇಳಿತು. ಬೈದವನನ್ನ ಈಟಿಯಿಂದ ಕೊಂದದ್ದು ಕೈ ತಾನೆ. ಆದ್ದರಿಂದ ನಾನು ಕೊಡಲಾರೆ ಎಂದು ಕಾಲು ಹೇಳಿತು. ಅವನು ಎಲ್ಲಿ ಅವಿತಿದ್ದಾನೆ ಎಂದು ತೋರಿಸಿದ್ದು ಕಣ್ಣು ತಾನೆ. ಆದ್ದರಿಂದ ನಾನು ಕೊಡಲಾರೆ ಎಂದು ಕೈ ಹೇಳಿತು. ಹಿರಿಯರು ಆಗ ಕಣ್ಣೇ ದಂಡ ಕೊಡಬೇಕೆಂದರು; ಏಕೆಂದರೆ ಬೈದವನು ಅವಿತುಕೊಂಡದ್ದನ್ನು ಕಾಲು ನೋಡಲಿಲ್ಲ. ಕೈ ನೋಡಲಿಲ್ಲ. ಕಿವಿ ನೋಡಲಿಲ್ಲ. ಆದರೆ ಕಣ್ಣು ನೋಡಿ ಅವನನ್ನು ಕೊಲ್ಲುವಂತೆ ಕೈಗೆ ಹೇಳಿತು. ಕಣ್ಣು ಈ ತೀರ್ಮಾನವನ್ನು ಒಪ್ಪಲಿಲ್ಲ. ಕಾಲು ತಾನೆ ತನ್ನನ್ನು ಹೊರಗೆ ಕರೆತಂದದ್ದು ಅದರದೇ ತಪ್ಪು ಎಂದಿತು. ಕಿವಿಯೇ ತನಗೆ ಹೇಳಿದ್ದು ಅದರದೇ ತಪ್ಪು ಎಂದು ಕಾಲು ಹೇಳಿತು. ಅದಕ್ಕೆ ಕಿವಿ ತನ್ನ ಬಳಿ ಆಯುಧಗಳೇ ಇಲ್ಲವೆಂದೂ. ಈಟಿಯನ್ನು ಇಟ್ಟುಕೊಂಡಿದ್ದ ಕೈಯದೇ ತಪ್ಪೆಂದೂ ಹೇಳಿತು. ಹೀಗೆ ಜಗಳ ಕಾಯುತ್ತಿದ್ದ ವಿಷಯ ಪಂಚಾಯಿತಿಗೆ ಹೋಯಿತು. ಈ ವಿವಾದದಲ್ಲಿ ಯಾರು ಗೆಲ್ಲಬಹುದು?

(ಎನ್ ಕುಂಡೊ; ಜೈರೆ)

೧೫

ತನ್ನ ಕಳೆದು ಹೋದ ಮಗಳನ್ನು ಮರಳಿ ತರಲು ತಾಯಿ ತನ್ನ ನಾಲ್ಕು ಗಂಡು ಮಕ್ಕಳನ್ನು ಕಳುಹಿಸಿದಳು. ಅವಳು ಐವತ್ತು ಮೈಲಿಗಳ ದೂರದಲ್ಲಿ, ಸಿಂಹದ ಹಿಡಿತದಲ್ಲಿರುವುದನ್ನು ಹಿರಿಯವನು ನೋಡಿದ. ಇನ್ನೊಬ್ಬ ಅದೃಶ್ಯರೂಪದಲ್ಲಿ ಹೋಗಿ ಸಿಂಹದ ಕೈಗಳಿಂದ ಅವಳನ್ನು ಬಿಡಿಸಿ ತಂದ. ಮೂರನೆಯವ ಸಿಂಹವನ್ನು ಕೊಂದ. ಆದರೆ ಅವರು ಮನೆಗೆ ಬರುವ ವೇಳೆಗೆ ಹುಡುಗಿ ಸತ್ತಿದ್ದಳು. ಶವಸಂಸ್ಕಾರವನ್ನು ನಿಲ್ಲಿಸಿದ ನಾಲ್ಕನೆಯವನು ತನ್ನ ಮಂತ್ರವಿದ್ಯೆಯಿಂದ ಅವಳನ್ನು ಬದುಕಿಸಿದ. ತಾಯಿ ಎಲ್ಲರಿಗೂ ಬಹುಮಾನವಾಗಿ ಮಾಂಸವನ್ನಿಕ್ಕ ಬಯಸಿದಳು. ಆದರೆ ಅವರು ಒಪ್ಪಲಿಲ್ಲ. ತಮ್ಮ ತಂಗಿಯನ್ನು ಮರಳಿ ಜೀವಂತವಾಗಿ ಪಡೆಯಲು ಯಾರು ಹೆಚ್ಚು ಮಾಡಿದ್ದಾರೊ ಅವರೊಬ್ಬರಿಗೇ ಬಹುಮಾನ ಕೊಡಬೇಕೆಂದರು. ಇವರಲ್ಲಿ ಅದು ಯಾರಿಗೆ ಸಲ್ಲಬೇಕು.?

(ಈಲ; ಜಾಂಬಿಯ)

೧೬

ಒಬ್ಬ ಹೆಂಗಸಿನ ಮಂಡಿಯಿಂದ ಪೂರ್ಣ ಬೆಳೆದ ಮಗನೊಬ್ಬ ಕೈಯಲ್ಲಿ ಚೂರಿ, ಬಿಲ್ಲು ಬಾಣಗಳನ್ನು ಹಿಡಿದುಕೊಂಡೇ ಹುಟ್ಟಿದ್ದ[1]. ಹುಟ್ಟಿದ ತಕ್ಷಣ ತಂದೆಯ ತೋಟದಲ್ಲಿ ಕೆಲಸ ಮಾಡಲು ಹೋದ. ತಾನು ಒಬ್ಬ ವ್ಯಾಪಾರಸ್ಥನಾಗುತ್ತೇನೆಂದು ಹೇಳಿದ. ತಂದೆ ಕೊಟ್ಟ ೨೦.೦೦೦ ಕವಡೆಗಳಿಂದ ಒಂದೊಂದು ಪಾರಿವಾಳ. ಇಲಿ. ಕಪ್ಪೆ. ನಾಯಿ ಮತ್ತು ಬೆಕ್ಕುಗಳನ್ನು ತಂದ. ಪ್ರತಿದಿನ ಬೆಳಗ್ಗೆ ಅವನನ್ನು ಎಬ್ಬಿಸುತ್ತೇನೆ ಎಂದು ಪಾರಿವಾಳ ಹೇಳಿತು; ಅವನಿಗಾಗಿ ಕೋಲ ಬೀಜಗಳನ್ನು[2] ಕದ್ದು ತರುವೆನೆಂದು ಇಲಿ ಹೇಳಿತು; ಅವನಿಗಾಗಿ ಪ್ರಾರ್ಥಿಸುತ್ತೇನೆಂದು ಕಪ್ಪೆ ಹೇಳಿತು; ಅವನು ಬೇಟೆಯಾಡುವಾಗ ಸಹಾಯ ಮಾಡುವೆನೆಂದು ನಾಯಿ ಹೇಳಿತು. ಏನೂ ಹೇಳದ ಬೆಕ್ಕನ್ನು ನೀನೇನು ಮಾಡುವೆ ಎಂದು ಕೇಳಿದಾಗ ಅದು ಹುಡುಗನನ್ನು ಮನೆಯೊಳಕ್ಕೆ ಬರುವಂತೆ ಕರೆಯಿತು. ಅಲ್ಲಿ ಅದು ಸುಂದರವಾದ ಹುಡುಗಿಯಾಗಿ ಬದಲಾಯಿಸಿತು. ತನ್ನನ್ನು ತನ್ನ ತಂದೆಯ ಬಳಿಗೆ ಕರೆದೊಯ್ಯಬೇಕೆಂದೂ, ಪ್ರತಿಫಲವಾಗಿ ಅವನು ಎಷ್ಟು ಹಣ ಕೊಡುತ್ತೇನೆಂದರೂ ನಿರಾಕರಿಸಿ ಅವನ ಟೋಪಿಯನ್ನು ಬೇಡಬೇಕೆಂದೂ ಹುಡುಗನಿಗೆ ಹೇಳಿಕೊಟ್ಟಳು. ಹುಡುಗ ಹಾಗೇ ಮಾಡಿ. ೪.೦೦. ೦೦೦ ಕವಡೆಗಳನ್ನು. ೨೦೦ ಉಡುಗೆಗಳನ್ನೂ ತಿರಸ್ಕರಿಸಿದ. ಅವಳ ತಂದೆ ಟೋಪಿಯನ್ನು ಮಾತ್ರ ಕೊಡಲೊಪ್ಪಲಿಲ್ಲ. ಆದರೂ ಅವಳ ತಾಯಿ ಒತ್ತಾಯಮಾಡಿ ಕೊಡಿಸಿದಳು. ಹುಡುಗಿ ಮತ್ತೆ ಬೆಕ್ಕಾಗಿ ಪರಿವರ್ತಿಸಿ ಹುಡುಗನೊಂದಿಗೆ ಅವನ ಮನೆಗೆ ಬಂದಳು. ಟೋಪಿಯ ದಯದಿಂದ ಹುಡುಗ ವ್ಯಾಪಾರದಲ್ಲಿ ಶ್ರೀಮಂತನಾದ. ಆಮೇಲೆ ಮದುವೆಯಾದ. ಅವನ ಹೆಂಡತಿ ಟೋಪಿಯ ಬಗ್ಗೆ ಹೇಳುವಂತೆ ಒತ್ತಾಯ ಮಾಡಿದಳು. ಹೇಳದೆ ಇದ್ದರೆ ತಾನು ಅವನೊಂದಿಗೆ ಮಲಗುವುದಿಲ್ಲವೆಂದು ಹಟಹಿಡಿದು ವಿಷಯ ತಿಳಿದುಕೊಂಡಳು. ಆಮೇಲೆ ಟೋಪಿ ಕದ್ದಳು. ಅವನ ಮನೆ. ಕುದುರೆ. ಬಟ್ಟೆ. ಆಯುಧ ಎಲ್ಲ ಸುಟ್ಟುಹೋದವು. ಅವನಿಗೇನೂ ಉಳಿಯಲಿಲ್ಲ. ಏನು ನಡೆಯಿತೆಂದು ಇತರ ಪ್ರಾಣಿಗಳಿಗೆ ವಿವರಿಸಿದ ಪಾರಿವಾಳ. ಟೋಪಿ ಎಲ್ಲಿದೆ ಎಂದು ತಾನು ತೋರಿಸುತ್ತೇನೆ ಎಂದಿತು. ಐದು ಪ್ರಾಣಿಗಳೂ ಹೊರಟವು. ನೀರಿನ ತಡಿಗೆ ಬಂದಾಗ ಕಪ್ಪೆ ಅಲ್ಲಿಯೇ ನಿಂತಿತು. ಟೋಪಿ ಇದ್ದ ಮನೆಯ ಮೇಲೆ ಪಾರಿವಾಳ ಕುಳಿತಿತು. ಬೆಕ್ಕು ಒಳಹೋಗಿ ಆ ಹೆಂಗಸಿನ ಮೈ ಮುದ್ದು ಮಾಡತೊಡಗಿ ಅವಳ ಗಮನವನ್ನು ಬೇರೆಡೆಗೆ ಸೆಳೆಯಿತು. ಗೋಡೆಯ ಮೂಲಕ ಕೊರೆದುಕೊಂಡು ಹೋದ ಇಲಿ ಟೋಪಿಯನ್ನು ಪತ್ತೆಮಾಡಿ ತಂದು ಹೊರಗೆ ಕಾಯುತ್ತಿದ್ದ ನಾಯಿಗೆ ಕೊಟ್ಟಿತು. ಇವುಗಳೆಲ್ಲ ನದಿಯ ಬಳಿಗೆ ಬಂದಾಗ ಯಾರೋ ನಾಯಿಗೆ ಬಂದು

---

1 ಈ ಅಂಶವನ್ನು ಮಹಾಭಾರತದಲ್ಲಿ ವ್ಯಾಸ ಹುಟ್ಟುವ ಪ್ರಸಂಗದಲ್ಲಿ ಗಮನಿಸಬಹುದು.

2 ಪಶ್ಚಿಮ ಆಫ್ರಿಕದ ಉಷ್ಣವಲಯದ ಕಾಡುಗಳಲ್ಲಿ ಬೆಳೆಯುವ ಸಸ್ಯದ ಬೀಜ. ಪಾನೀಯಗಳಲ್ಲಿ ಕಾಫಿ ಬೀಜದಂತೆ ಬಳಸುವ ಪ್ರಚೋದಕ ವಸ್ತು.

ಮೂಳೆ ಎಸೆದರು. ಅದು ಟೋಪಿಯನ್ನು ನೀರಿಗೆ ಹಾಕಿತು. ಕಪ್ಪೆ ಅದನ್ನು ಒಪ್ಪಿಸಿಕೊಂಡಿತು. ಎಲ್ಲರೂ ಸೇರಿ ಅದನ್ನು ಹುಡುಗನಿಗೆ ತಲುಪಿಸಿದವು. ಅವನ ಐಶ್ವರ್ಯ ಮತ್ತೆ ಬಂದಿತು.

(ನ್ಯೂಪೆ: ನೈಜೀರಿಯ)

೧೭

ಮೂವರು ಗೆಳೆಯರು ಒಳ್ಳೆಯ ಕುರಿಯೊಂದನ್ನು ಕದ್ದರು. ಬೇಯಿಸಿದರು. ತಿಂದರು. ಈ ವಿಷಯದ ಬಗ್ಗೆ ಯಾರೊಂದಿಗೂ ಚಕಾರವೆತ್ತಬಾರದೆಂದು ಒಪ್ಪಿಕೊಂಡರು. ಒಂದು ಮನೆಯ ಬಳಿಗೆ ಬಂದಾಗ ಒಬ್ಬ ಆ ಮನೆಯಲ್ಲಿ ನೀರು ಕೇಳುತ್ತ ಹೀಗೆಂದ: "ಏನನ್ನು ಚೆನ್ನಾಗಿ ತಿಂದುಬಿಟ್ಟಿದ್ದೇನೆ ಅದರ ದಾಹಪರಿಹರಿಸಲು ನನಗೆ ನೀರು ಬೇಕು". ಆಗ ಎರಡನೆಯವನು "ನೋಡಿದೆಯ. ನೋಡಿದೆಯ ಅದರ ಬಗ್ಗೆ ಏನನ್ನು ಹೇಳಬಾರದು ಅಂತ ಮಾತು ಕೊಟ್ಟಿದ್ದೆಯಲ್ಲ" ಎಂದ. ಅದಕ್ಕೆ ಮೂರನೆಯವನು "ಆದರೆ ಅವನೇನೂ ಹೇಳಲಿಲ್ಲವಲ್ಲ. ನಾವು ಕದ್ದ ಕುರಿಯನ್ನು ತಿಂದೆವು ಅಂತ ಅವನು ಹೇಳಲಿಲ್ಲವಲ್ಲ" ಎಂದ. ಗುಟ್ಟು ರಟ್ಟಾಗಲು ಯಾರು ಕಾರಣ?

(ಬೌಲೆ; ಐವರಿಕೋಸ್ಟ್)

೧೮

ಮಾಟಗಾರ, ಬೇಟೆಗಾರ, ಬಡಗಿ ಹಾಗೂ ಕಳ್ಳ ಇಷ್ಟು ಜನ ಹುಡುಗನ ಕಳೆದು ಹೋದ ಗಿಳಿಯನ್ನು ಪತ್ತೆ ಮಾಡಲು ಹೊರಡುತ್ತಾರೆ. ಮಾಟಗಾರ ಹಡಗೊಂದರ ಮೇಲೆ ಗಿಳಿ ಇದೆ ಎಂದು ಅರಿತು ಹೇಳುತ್ತಾನೆ. ನಾಲ್ವರೂ ಗಾಜಿನ ದೋಣಿಯ ಮೇಲೆ ಕುಳಿತು ಹೊರಡುತ್ತಾರೆ. ಹಡಗನ್ನು ಸಮೀಪಿಸಿದಾಗ ಕಳ್ಳ ಹೋಗಿ ಗಿಳಿಯನ್ನು ಕದ್ದುತರುತ್ತಾನೆ. ಹಡಗಿನ ಕಪ್ತಾನ ಮಳೆ ಸಿಡಿಲು ಮುಂತಾದವನ್ನು ಕಳುಹಿಸುತ್ತಾನೆ. ಗಾಜಿನ ದೋಣಿ ಎರಡು ಬಾರಿ ಸೀಳಿಕೊಂಡು ಬಿಡುತ್ತದೆ. ಬಡಗಿ ದೋಣಿಯನ್ನು ರಿಪೇರಿ ಮಾಡುತ್ತಾನೆ. ಬೇಟೆಗಾರ ಶತ್ರುಗಳನ್ನು ಧ್ವಂಸಮಾಡುತ್ತಾನೆ. ಈ ನಾಲ್ವರೂ ಮರಳಿ ಬಂದು ಗಿಳಿಯನ್ನು ಹುಡುಗನಿಗೆ ಒಪ್ಪಿಸಿದಾಗ ಅವನು ಪ್ರತಿಫಲವಾಗಿ ಕೋಳಿಯೊಂದನ್ನು ಕೊಡುತ್ತಾನೆ. ಈ ಅದ್ಭುತ ಕೋಳಿ ಮಣಿಗಳನ್ನು ಇಡುತ್ತಿತ್ತು. ಮತ್ತೆ ಕೇಳಿದ್ದನ್ನು ಇಕ್ಕುತ್ತಿತ್ತು. ನಾಲ್ಕು ಮಂದಿಯೂ ಕೋಳಿಗಾಗಿ ಕಾದಾಡಿದರು. ಏನೂ ಒಪ್ಪಂದಕ್ಕೆ ಬರಲಿಲ್ಲವಾಗಿ ಕೋಳಿಯನ್ನು ಕುಯ್ದು ನಾಲ್ಕು ಭಾಗ ಮಾಡಿ ಹಂಚಿಕೊಂಡರು. ಈಗ ನಾಲ್ಕು ಜನ ಪೆದ್ದರಲ್ಲಿ ಯಾರಿಗೆ ಸೇರಬೇಕಿತ್ತು ಕೋಳಿ?

—ಬೀಕ್ಸ್ ಎಂಬ ವಿದ್ವಾಂಸ ಹೀಗೆ ಹೇಳುತ್ತಾನೆ: "ಈ ಕಥೆ ಉದ್ವೇಗಪೂರ್ಣವಾಗಿ ಭಾರೀ ಚರ್ಚೆಯನ್ನೇ ಎಬ್ಬಿಸುತ್ತದೆ. ಕೆಲವರು ಕೋಳಿ ಇಂಥವನಿಗೇ ಸೇರಬೇಕು ಎಂದು ವಾದಿಸಿದರೆ,ಇತರರು ಕೋಪದಿಂದ ಅದು ಇನ್ನೊಬ್ಬನಿಗೆ ಸೇರಬೇಕೆಂದು ಹಠ ಹಿಡಿದರು. ನಾಲ್ವರಲ್ಲಿ ಪ್ರತಿಯೊಬ್ಬನಿಗೂ ಬೆಂಬಲಿಗರು ಇದ್ದೇ ಇದ್ದರು. ಆದರೆ ಎಲ್ಲರೂ ಒಪ್ಪಿಕೊಂಡ ವಿಚಾರ ಎಂದರೆ: ಕೋಳಿ ಬೇಕಾದಷ್ಟು ಮಣಿಗಳನ್ನಿಡಲು ಬಿಟ್ಟು ಅವುಗಳನ್ನು ಹಂಚಿಕೊಳ್ಳದೆ ಹೋದ ಪೆದ್ದರು ಈ ನಾಲ್ವರು ಎನ್ನಬಹುದು."

(ಕಾಂಗೊ; ಜೈರೆ, ಕಾಂಗೊ)

೧೯

ರಾಜ ಒಬ್ಬನಿಗೆ ಮರಣದಂಡನೆ ವಿಧಿಸಿದ. ಆದರೆ ಅವನ ಹೆಂಡತಿ ತನ್ನ ತಲೆಯನ್ನೇ ಕತ್ತರಿಸಬೇಕೆಂದು ರಾಜನನ್ನು ಬೇಡಿಕೊಂಡಳು. ಅವಳ ತಲೆಯನ್ನು ಕತ್ತರಿಸಿದ ಮೇಲೆ ಅವಳ ತಲೆ ಮತ್ತೆ ಅವಳ ದೇಹಕ್ಕೆ ಕೂಡಿಕೊಂಡಿತು. ಆಮೇಲೆ ಅವಳು ತನ್ನ ಗಂಡನಿಗೆ ಹೇಳಿಕೊಟ್ಟಳು: ಪ್ರತಿದಿನ ಅವನಿಗಾಗಿ ಊಟ ತರುವ ರಾಜಕುಮಾರಿಯ ಜೊತೆಗೆ ಮಲಗು ಎಂದು. ಅವನು ಆ ರೀತಿ ಮಾಡಿದ ಮೇಲೆ ರಾಜನ ಮಗಳು ಅವನನ್ನು ಪ್ರೇಮಿಸಿದಳು. ಅವಳು ಅವನಿಗೆ ಹೇಳಿಕೊಟ್ಟಳು: ರಾಜ ಅವನಿಗೆ

ಎಲ್ಲ ಬಗೆಯ ಸಂಪತ್ತನ್ನು ನೀಡುವೆನೆಂದರೂ ದನದ ಬಾಲ[1]ವನ್ನು ಮಾತ್ರ ತೆಗೆದುಕೊಳ್ಳಬೇಕು ಎಂದು. ಅವನು ಆ ರೀತಿ ಮಾಡಿದಾಗ ರಾಜ ಕಂಪಿಸುತ್ತ ತನ್ನ ಮನೆಯೊಳಗೆ ಹೋದ. ಇವನು ಮತ್ತು ಇವನ ಇಬ್ಬರು ಹುಡುಗಿಯರು ತಪ್ಪಿಸಿಕೊಂಡು ಓಡಿದರು. ದೋಣಿಯವನು ಇವರನ್ನು ನದಿಯಿಂದಾಚೆ ಸಾಗಿಸಲು ನಿರಾಕರಿಸಿದ. ಆದರೆ ಇವನನ್ನು ಕಂಡು ಮೋಹಗೊಂಡಿದ್ದ ದೋಣಿಯವನ ಮಗಳು ಅಪ್ಪನನ್ನೇ ಕೊಂದಳು. ನದಿ ದಾಟಿದ ಮೇಲೆ ಇವರು ಒಂದು ಹಳ್ಳಿಯನ್ನೇ ಕಟ್ಟಿದರು. ಮೂವರು ಹೆಂಡತಿಯರಿಗೂ ಒಬ್ಬೊಬ್ಬ ಮಗ ಹುಟ್ಟಿದ. ಒಂದು ದಿನ ಈ ವ್ಯಕ್ತಿ ಸತ್ತುಹೋದ. ಪ್ರತಿಯೊಬ್ಬ ಹೆಂಡತಿಯೂ ಬಾಲ ತನ್ನ ಮಗನಿಗೆ ಸೇರಿದ್ದು ಎಂದರು. ಈ ಮೂವರಲ್ಲಿ ಯಾರಿಗೆ ಹೆಚ್ಚಿನ ಹಕ್ಕು ಉಂಟು?–ಈ ಕಥೆ ಕೇಳಿದ ಪ್ರತಿಯೊಬ್ಬನೂ ತನ್ನ ತನ್ನ ಅಭಿಪ್ರಾಯ ಹೇಳಿದ ಮೇಲೆ, ಕಥೆಯ ನಿರೂಪಕ ಮುಂದುವರಿಸುತ್ತಾನೆ–ತಮ್ಮ ಹಕ್ಕುಗಳನ್ನು ಬಿಟ್ಟು ಕೊಡುತ್ತಾರೆಯೆ ಎಂದು ಮೂವರು ಹೆಂಡಿರನ್ನೂ ಕೇಳಲಾಯಿತು. ಅವರು ಒಪ್ಪಲಿಲ್ಲ. ಬಾಲವನ್ನು ತೂರಿ ಎಸೆಯಲಾಯಿತು ಅದು ನೆಲದ ಮೇಲೆ ಬಿದ್ದು ಆಲದ ಮರವಾಗಿ ಬೆಳೆಯಿತು.

(ಬಾಂಬಾರ; ಅಪ್ಪರ್ ವೋಲ್ಟಾ)

೨೦

ಪ್ರಮುಖನೊಬ್ಬ ದೊಡ್ಡ ಜಟ್ಟಿಯನ್ನು ಏನೂ ಕೆಲಸ ಮಾಡುತ್ತಿಲ್ಲವೆಂದು ದೂಷಿಸಿದ. ಜಟ್ಟಿ ಬೋನುಗಳನ್ನು ಇಟ್ಟು ಪ್ರಾಣಿಗಳನ್ನು ಹಿಡಿಯ ತೊಡಗಿದ. ಆದರೆ ಸಿಕ್ಕಿಬಿದ್ದ ಪ್ರಾಣಿಗಳನ್ನು ಮತ್ತೆ ಬಿಟ್ಟುಬಿಡುತ್ತಿದ್ದ. ಒಂದು ಸಲ ರಾಜನ ಹೆಂಡತಿಯೊಬ್ಬಳು ಇವನ ಬೋನಿನಿಂದ ಮೊಲವನ್ನು ಕದ್ದಳೆಂದು ಅವಳ ಕಪಾಲಕ್ಕೆ ಬಿಗಿದಿದ್ದ: ಇನ್ನೊಂದು ಸಲ ರಾಜನ ರಾಣಿಯರು ನದಿಯಲ್ಲಿ ಸ್ನಾನ ಮಾಡುತ್ತಿರುವಾಗ ಅವರನ್ನು ನೋಡಿದ. ಈ ಎರಡು ಅಪರಾಧಗಳಿಗಾಗಿ ಇವನಿಗೆ ಮರಣದಂಡನೆ ವಿಧಿಸಲಾಯಿತು. ಇಲಿಯೊಂದು ಇವನ ಬಳಿಗೆ ಬಂದು ಇವನು ಬಿಡುಗಡೆ ಮಾಡಿದ ಪ್ರಾಣಿಗಳು ಅವನನ್ನು ಉಳಿಸುವುವು ಎಂದು ಹೇಳಿತು. ಇವನನ್ನು ಮರಣಕ್ಕೆ ಗುರಿಪಡಿಸಬೇಕಾದ ದಿನ ಹಾವೊಂದು ಬಂದು ರಾಜನ ಮಗಳನ್ನು ಕಚ್ಚಿತು. ಇತರ ಪ್ರಾಣಿಗಳು ಹೇಳಿಕೊಟ್ಟ ರೀತಿಯಲ್ಲಿ ಮಾಡಿ ಜಟ್ಟಿ ರಾಜನ ಮಗಳ ಜೀವ ಉಳಿಸಿದ. ಆಮೇಲೆ ಇವನು ರಾಜನ ಮಗಳನ್ನು ಮದುವೆಯಾದ. ರಾಜನಿಂದ ಸೊಗಸಾದ ಮನೆ, ಜಮೀನು ಬಳುವಳಿಯಾಗಿ ಬಂದಿತು. ಈಗ ಅವನು ಯಾವ ಪ್ರಾಣಿಗೆ ಹೆಚ್ಚು ಕೃತಜ್ಞನಾಗಿರಬೇಕು.

(ಎಡೊ; ನೈಜೀರಿಯ)

೨೧

ಕುರುಡನೊಬ್ಬ ಕುಂಟನನ್ನು ಹೊತ್ತು ಬೇಟೆಗೆ ಹೋದ. ಕೋತಿಯೊಂದನ್ನು ಕುಂಟ ಕೊಂದ. ಅವರು ಮನೆಗೆ ಬಂದ ಮೇಲೆ ಕುಂಟ ಕೋತಿಮಾಂಸದಡಿಗೆ ಮಾಡಿ ತಾನೇ ಎಲ್ಲವನ್ನು ತಿಂದ. ಬರಿ ಮೂಳೆಗಳೇ ಉಳಿದಿರುವುದನ್ನು ಕಂಡು ಕುರುಡನಿಗೆ ರೇಗಿ, ಆ ಎಲುವುಗಳಿಂದಲೆ ಕುಂಟನಿಗೆ ಬಾರಿಸಿದ. ಏಟು ಮುಂಡಿಗೆ ತಗುಲಿ ಅವನ ಕುಂಟು ವಾಸಿಯಾಗಿ ಹೋಯಿತು. ಕುಂಟನೂ ಸಿಟ್ಟಿನಿಂದ ಮಾಂಸದ ಸಾರನ್ನು ಕುರುಡನ ಮುಖಕ್ಕೆ ರಾಚಿದ. ಅವನ ಕಣ್ಣಿಗೆ ತಗಲಿ ಕುರುಡುತನ ವಾಸಿಯಾಗಿ ಹೋಯಿತು. ಇವರಿಬ್ಬರಲ್ಲಿ ಯಾರ ಚಿಕಿತ್ಸೆ ಉತ್ತಮ.?

(ಜಿಯೊ; ಲೈಬೀರಿಯ)

೨೨

ಹೆಂಗಸೊಬ್ಬಳು ತನ್ನ ಜಮೀನಿನಲ್ಲಿ ಬತ್ತವನ್ನು ತಿನ್ನುತ್ತಿದ್ದ ಜಿಂಕೆಯನ್ನು ಬಲೆಹಾಕಿ ಹಿಡಿಯಲು ಒಬ್ಬನನ್ನು ಕೇಳಿಕೊಂಡಳು. ಜಿಂಕೆ ಬಲೆಯಲ್ಲಿ ಸಿಕ್ಕಿಬಿದ್ದಾಗ ಅವಳು ಓಡಿ ಹೋಗಿ ಅವನಿಗೆ ಹೇಳಿದಳು.

---

1 ಅಧಿಕಾರಸೂಚಕ ವಸ್ತು

ಆಮೇಲೆ ಅವಳು ಮರಳಿ ಬಲೆಯ ಬಳಿಗೆ ಓಡಿಬಂದು. ಅದರ ಪಕ್ಕದಲ್ಲಿ ಬಟ್ಟೆಗಳನ್ನೆಲ್ಲ ಕಳಚಿ ಮಲಗಿಕೊಂಡಳು. ಅಲ್ಲಿಗೆ ಬಂದ ಬೇಟೆಗಾರ ಅವಳೊಂದಿಗೆ ಸಂಭೋಗಿಸಿದ. ಜಿಂಕೆ ತಪ್ಪಿಸಿಕೊಂಡಿತು. ಜಿಂಕೆಯನ್ನು ತಪ್ಪಿಸಿಕೊಳ್ಳಲು ಬಿಟ್ಟವರು ಯಾರು? ಅವನೊ ಅವಳೊ?

(ಮಾನೊ; ಲೈಬೀರಿಯ)

೨೩

ಮಳೆ, ಕಮ್ಮಾರ ಮತ್ತು ರೈತ ಸ್ನೇಹಿತರಾಗಿದ್ದರು. ಮೂವರಿಗೂ ಒಬ್ಬೊಬ್ಬ ಮಗಳಿದ್ದಳು. ಮೂವರು ಹುಡುಗಿಯರೂ ಗೆಳತಿಯರಾಗಿ, ಒಟ್ಟಿಗೆ ಜಮೀನು ಮಾಡುತ್ತಿದ್ದರು. ಒಂದು ದಿನ ಮೆಕ್ಕೆಜೋಳದ ಹಂಚಿಕೆಯಲ್ಲಿ ಜಗಳ ಬಂದಿತು. ಒಬ್ಬಳು ಹೇಳಿದಳು ತನ್ನ ಅಪ್ಪ ಬೀಜಗಳನ್ನು ಒದಗಿಸಿದ್ದಾನೆ ಎಂದು. ಇನ್ನೊಬ್ಬಳು ತನ್ನ ಅಪ್ಪ ಉಳುವ ಗುದ್ದಲಿಗಳನ್ನು ಒದಗಿಸಿದ್ದಾನೆಂದು ಹೇಳಿದಳು. ಮೂರನೆಯವಳು ತನ್ನ ಅಪ್ಪ ಮಳೆ ತರುತ್ತಾನೆ ಎಂದಳು. ಮೂರು ಜನ ಅಪ್ಪಂದಿರೂ –ಈ ವಾದಗಳನ್ನು ಕೇಳಿಸಿಕೊಂಡರು. ಪ್ರತಿಯೊಬ್ಬನೂ ತನ್ನ ಮಗಳದೇ ಸರಿ ಎಂದ. ಒಬ್ಬ ಜೋಳದ ಬೀಜಗಳನ್ನು ಇನ್ನೊಬ್ಬ ಗುದ್ದಲಿಗಳನ್ನು, ಮತ್ತೊಬ್ಬ ಮಳೆಯನ್ನು ವಾಪಸು ತೆಗೆದುಕೊಂಡುಬಿಟ್ಟರು. ಹೊಲವನ್ನು ಸಾಗುವಳಿ ಮಾಡುವರೇ ಇಲ್ಲ. ಫಸಲು ಬರಲೇ ಇಲ್ಲ. ತನ್ನಲ್ಲಿದ್ದ ಜೋಳವನ್ನೆಲ್ಲ ಮುಗಿಸಿದ ಮೇಲೆ ರೈತ ಸತ್ತ. ಮಳೆ ಸತ್ತ. ಕಮ್ಮಾರ ಸತ್ತ. ಆದರೆ, ಮಳೆ, ವ್ಯವಸಾಯ ಸಾಧನಗಳು ಹಾಗೂ ಬೀಜ ಮೂರೂ ಒಟ್ಟಾದರೇ ಒಂದು ಇಡಿಯಾಗುವುದು.

(ಸಾಂಗೈ; ಸುಡಾನ್)

೨೪

ಒಬ್ಬ ತರುಣ ತನ್ನ ಗೆಳೆಯನಿಂದ ಈಟಿಯೊಂದನ್ನು ಇಸಿದುಕೊಂಡ. ಅದನ್ನು ತನ್ನ ಶತ್ರು ಪ್ರಮುಖನ ಮೇಲೆ ಪ್ರಯೋಗಿಸಿದ. ಆ ಪ್ರಮುಖ ಈಟಿ ತನ್ನ ದೇಹದಲ್ಲಿ ಚುಚ್ಚಿಕೊಂಡಿದ್ದಂತೆಯೇ ಓಡಿಹೋದ ತರುಣನಿಗೆ ಬಹಳ ಗೌರವ ದೊರಕಿತು. ಪ್ರತಿಫಲವೂ ಸಿಕ್ಕಿತು. ಈಟಿಯನ್ನು ಮೊದಲು ನೀನೆ ಇಟ್ಟುಕೊ ಎಂದು ಕೊಟ್ಟಿದ್ದ ಗೆಳೆಯನಿಗೆ ಈಗ ಅಸೂಯೆಯಾಯಿತು. ತನ್ನ ಈಟಿಯನ್ನು ಹಿಂತಿರುಗಿಸು ಎಂದು ಒತ್ತಾಯ ಮಾಡಿದ. ಅದನ್ನು ತರಲು ತರುಣ ಹೊರಟ. ಜೊತೆಗೆ ಅವನ ಪ್ರಿಯತಮೆಯೂ ಹೊರಟಳು. ಅವನಿಗೇನಾದರೂ ಆಗಿ ಸತ್ತರೆ ತಾನೂ ಅವನ ಜೊತೆ ಸಾಯುತ್ತೇನೆಂದಳು. ಅವರಿಗೆ ಪ್ರಮುಖನ ಮಗಳು ಭೇಟಿಯಾದಳು. ಅವಳು ಆ ಈಟಿಯನ್ನು ತಂದುಕೊಟ್ಟಳು. ತಾನೂ ಈ ತರುಣನನ್ನು ಪ್ರೇಮಿಸುತ್ತೇನೆ ಎಂದಳು. ಮೂರು ಜನವೂ ಅಟ್ಟಿಸಿಕೊಂಡು ಬರುವವರಿಂದ ತಪ್ಪಿಸಿಕೊಂಡು ಓಡಿದರು. ನದಿಯಾಚೆಗೆ ಇವರನ್ನು ಕರೆದೊಯ್ಯಲು ದೋಣಿಯವನು ನಿರಾಕರಿಸಿದ. ಇವನನ್ನು ಮೋಹಿಸಿದ ದೋಣಿಗಾರನ ಮಗಳು ಅಪ್ಪನನ್ನೇ ಕೊಂದು ಇವರನ್ನು ನದಿ ದಾಟಿಸಿದಳು. ಆ ದಡಕ್ಕೆ ಹೋದ ಮೇಲೆ ತರುಣ ಸತ್ತುಬಿದ್ದ. ಮೂರು ಜನ ಹೆಂಡಂದಿರೂ ಅಳತೊಡಗಿದರು. ನಾಲ್ಕನೆಯ ಹುಡುಗಿ ಒಬ್ಬಳು ಬಂದು ಇವನನ್ನು ಮಂತ್ರಶಕ್ತಿಯಿಂದ ಬದುಕಿಸಿ, ತಾನೂ ಅವನ ಹೆಂಡತಿಯಾಗುತ್ತೇನೆ ಎಂದಳು. ಈಗ ಈ ನಾಲ್ವರಲ್ಲಿ ಯಾರಿಗೆ ಅವನ ಮೊದಲ ಪತ್ನಿಯಾಗುವ ಅವಕಾಶ?

(ಹೌಸ: ನೈಜೀರಿಯ)

೨೫

ಪ್ರಾಜ್ಞನೊಬ್ಬ ಮಹಾರಾಣಿಯೊಬ್ಬಳಿಗೆ ಕಾಯಿಲೆಯಾಗಿದೆಯೆಂದೂ. ಅಲ್ಲಿನ ವೈದ್ಯರು ಅವಳನ್ನು ಗುಣಪಡಿಸಲು ಅಸಮರ್ಥರಾಗಿದ್ದಾರೆಂದೂ ಹೇಳಿದ. ಅಷ್ಟೇ ಇನ್ನೇನೂ ಹೇಳಲಿಲ್ಲ. ಇವನ್ನು ಕೇಳಿದ ವೈದ್ಯರು ಅವಳನ್ನು ಗುಣಪಡಿಸಲು ಅಸಮರ್ಥರಾಗಿದ್ದಾರೆಂದೂ ಹೇಳಿದ. ಅಷ್ಟೇ. ಇನ್ನೇನೂ ಹೇಳಲಿಲ್ಲ. ಇದನ್ನು ಕೇಳಿದ ವೈದ್ಯನೊಬ್ಬ ತಾನು ಅಲ್ಲಿದ್ದಿದ್ದರೆ ಅವಳನ್ನು ಗುಣಪಡಿಸುತ್ತಿದ್ದೆ ಎಂದ. ಅಷ್ಟೇ. ಇನ್ನೇನೂ ಹೇಳಲಿಲ್ಲ. ಬಲಿಷ್ಠ ವ್ಯಕ್ತಿಯೊಬ್ಬ ತಾನು ತಯಾರಿಸಿದ ದೊಡ್ಡ ದೋಣಿಯಲ್ಲಿ

ವೈದ್ಯನನ್ನು ಅಲ್ಲಿಗೆ ಕರೆದೊಯ್ಯುವುದಾಗಿ ತಿಳಿಸಿದ. ಆಮೇಲೆ ವೈದ್ಯ ಅವಳನ್ನು ಗುಣಪಡಿಸಿದ. ಒಳ್ಳೆಯ ಪ್ರತಿಫಲ ಪಡೆದ. ತಾನು ವೈದ್ಯನನ್ನು ಅಲ್ಲಿಗೆ ಕರೆತರದಿದ್ದರೆ ಅವಳನ್ನು ಗುಣಪಡಿಸಲಾಗುತ್ತಿತ್ತೇ ಎಂದು ಬಲಿಷ್ಠ ಗೊಣಗಿದ. ತಾನು ಅವಳ ಕಾಹಿಲೆಯ ಸುದ್ದಿ ಕೊಡದಿದ್ದರೆ ರಾಣಿ ಸಾಯುತ್ತಿದ್ದಳು ಎಂದು ಪ್ರಾಜ್ಞ ಗೊಣಗಿದ. ಉಳಿದಿಬ್ಬರು ಸುದ್ದಿಯೇನೂ ಅಷ್ಟು ಪ್ರಮುಖವಲ್ಲ ಎಂದರು. ಇದೇ ರೀತಿ ವಾದ ಆಗುತ್ತಲೇ ಹೋಯಿತು. ಯಾವುದು ಹೆಚ್ಚಿನದು ಎಂದು ತೀರ್ಮಾನಿಸಲು ಸಾಧ್ಯವೇ ಆಗಲಿಲ್ಲ–ಜ್ಞಾನವೊ, ಕುಶಲತೆಯೊ, ಶಕ್ತಿಯೊ?

(ಟಾಂಗಾ; ಕ್ಯಾಮ್‌ರೂನ್)

೨೬

ವಿವೇಕಿ, ವೀರ ಹಾಗೂ ವಿಟ ಎಂಬ ಹೆಸರಿನ ಮೂರು ಮಂದಿ ಪಟ್ಟಣವೊಂದಕ್ಕೆ ಬಂದರು. ವಿಟ ಎಂಬುವವನು ಸ್ವಲ್ಪ ಹೊತ್ತಿನಲ್ಲಿಯೇ ತನ್ನ ಹೆಸರಿನ ಔಚಿತ್ಯವನ್ನು ಸಮರ್ಥಿಸಿಕೊಂಡದ್ದರಿಂದ, ಸಿಕ್ಕಿಬಿದ್ದ. ಇನ್ನೇನು ಅವನನ್ನು ಸದೆಬಡಿಯಬೇಕು ಎಂದಿದ್ದಾಗ, ಇವನನ್ನು ಕಾಪಾಡಲು ವೀರನು ಊರನ್ನು ಕಾಡುತ್ತಿದ್ದ ದೆವ್ವವನ್ನು ಕೊಂದ ಎಂದು ಊರಿನವರಿಗೆ ಗೊತ್ತಾಯಿತು. ಅಲ್ಲಿಗೆ ಬಂದ ವಿವೇಕಿ ತಮ್ಮೆಲ್ಲರ ಪರವಾಗಿ ವಾದಿಸಿ, ತಮ್ಮ ಬರುವಿಕೆಯಿಂದ ಊರಿಗೆ ಒಳ್ಳೆಯದೇ ಆಗಿದೆ ಎಂದು ಅವರನ್ನು ನಂಬಿಸಿದ. ಕೃತಜ್ಞರಾದ ಊರಿನವರು ಅವರೆಲ್ಲರಿಗೂ ಹೆಣ್ಣುಕೊಟ್ಟು ಮದುವೆ ಮಾಡಿದರು. ಮೂವರಿಗೂ ಸೇರಿ ಒಂದು ಹಸು ಕೊಟ್ಟರು. ಸುಖವಾಗಿ ಬಾಳುತ್ತ ಇದ್ದು ಮಕ್ಕಳು ಮರಿಗಳಾದ ಮೇಲೆ ಸತ್ತು ಹೋದರು. ತಂದೆಯಂದಿರ ತಿಥಿ ಹಬ್ಬಕ್ಕೆ ಮಕ್ಕಳೆಲ್ಲ ಸೇರಿ ಹಸುವನ್ನು ಕೊಂದರು. ಆಮೇಲೆ, ಹಸುವಿನ ಬಾಲ ಆ ಊರಿನ ಅಧಿಕಾರಸ್ಥ ಸಂಕೇತವಾದ್ದರಿಂದ ಅದು ಯಾರಿಗೆ ಸೇರಬೇಕು ಎಂದು ವಾದ ಶುರುವಾಯಿತು.

(ಕಪೆಲ; ಲೈಬೀರಿಯ, ಗಿನಿ)

೨೭

ಒಬ್ಬ ವ್ಯಕ್ತಿ ಬದುಕುತ್ತಿದ್ದುದೇ ಸಾಲದ ಹಣದ ಮೇಲೆ. ಅವನಿಗೆ ಸಾಲ ಮಾಡುವುದು ಬಿಟ್ಟು ಬೇರೆ ಕೆಲಸವೇ ಇರಲಿಲ್ಲ. ಒಂದು ಸಾಲವನ್ನು ಇವನು ಹಿಂತಿರುಗಿಸದಿದ್ದಾಗ, ಸಾಲಕೊಟ್ಟವನು ವಸೂಲಿಗಾರನನ್ನು ಇವನ ಬಳಿಗೆ ಕಳುಹಿಸಿದ. ತನ್ನ ಜೀವಮಾನದಲ್ಲಿಯೇ ಯಾರಿಗೂ ಸಾಲ ವಾಪಸು ಕೊಟ್ಟಿಲ್ಲವೆಂದು ಸಾಲಗಾರ ಹೇಳಿದ. ಅದಕ್ಕೆ ವಸೂಲಿಗಾರ ತನ್ನ ಜೀವಮಾನದಲ್ಲಿಯೇ ಸಾಲ ವಸೂಲಿ ಮಾಡದೆ ಬಿಟ್ಟಿಲ್ಲ ಎಂದ. ಇಬ್ಬರಿಗೂ ಕಾದಾಟವೇ ನಡೆಯತೊಡಗಿತು. ದಾರಿಹೋಕನೊಬ್ಬ ಈ ಜಗಳವನ್ನು ನೋಡುತ್ತ ನಿಂತ. ಬಹಳ ಹೊತ್ತು ಜಗಳವಾದ ಮೇಲೆ ಸಾಲಗಾರ ತನ್ನನ್ನು ತಾನೇ ತಿವಿದುಕೊಂಡು ಸತ್ತುಬಿದ್ದ. ಆಗ ವಸೂಲಿಗಾರನೂ ತನ್ನನ್ನು ತಾನೇ ತಿವಿದುಕೊಂಡು, ಈ ಲೋಕದಲ್ಲಿ ಹಣ ವಸೂಲಿ ಮಾಡಲಾಗದಿದ್ದರೂ, ಸ್ವರ್ಗದಲ್ಲಿಯಾದರೂ ಅವನನ್ನು ಹಿಡಿದು ವಸೂಲಿ ಮಾಡುತ್ತೇನೆ ಎಂದು ಹೇಳುತ್ತ ಸತ್ತ. ಇದನ್ನು ನೋಡುತ್ತಿದ್ದ ದಾರಿಹೋಕನೂ ತಾನೇ ತಿವಿದುಕೊಂಡು ಸತ್ತ. ಈ ಜಗಳದ ಕೊನೆ ಅಲ್ಲಿ ಹೇಗಾದೀತೋ ಎಂದು ನೋಡುವ ಕುತೂಹಲ ಅವನದು. ಈ ಮೂವರಲ್ಲಿ ಯಾರು ಹೆಚ್ಚು ಮೂರ್ಖರು?

(—; ಕ್ಯಾಮೆರೂನ್)

೨೮

ರಾಜನ ಮಗಳನ್ನು ವರಿಸಲು ಮೂವರು ತರುಣರು ಬಂದರು. ಒಬ್ಬನಿಗೆ ಅವಳು ಸ್ನಾನಕ್ಕೆ ಏರ್ಪಡಿಸಿದಳು, ಹೊಸಬಟ್ಟೆಗಳನ್ನು ಕೊಟ್ಟಳು. ಹಾಸಿಗೆ ಹಾಸಿದಳು. ಎರಡನೆಯವನಿಗೆ ಮತ್ತು ಅವನ ಸಂಗಡಿಗರಿಗೆ ದೊಡ್ಡ ಹಬ್ಬವನ್ನೇ ಏರ್ಪಡಿಸಿದಳು. ಮೂರನೆಯವನಿಗೆ ಏನೂ ಕೊಡಲಿಲ್ಲ. ಆದರೆ ಸಂಜೆಯಾದಾಗ ಅವನ ಜೊತೆಯಲ್ಲಿ ಮರಗಿಡಗಳ ನಡುವೆ ಸಂಚಾರ ಹೋದಳು. ಈ ಮೂವರಲ್ಲಿ

ಯಾರನ್ನು ಹೆಚ್ಚು ಮೆಚ್ಚಿಕೊಂಡಿದ್ದಾಳೆ ಎಂಬ ವಿಷಯವಾಗಿ ಜಗಳ ಹುಟ್ಟಿತು. ತೀರ್ಪುಗಾರನ ಬಳಿಗೆ ಹೋದರೆ ಅವನಿಗೂ ತೀರ್ಮಾನ ಕೊಡಲಾಗಲಿಲ್ಲ. ಆ ಹುಡುಗಿ ಇನ್ನೂ ಮದುವೆಯಾಗದೆ ಇದ್ದಾಳೆ.

(ವೈ; ಲೈಬೀರಿಯ)

೨೯

ಹಾವೊಂದಕ್ಕೆ ತನ್ನ ಬಾಯ ಮೂಲಕ ಹೊಕ್ಕು ಹೊಟ್ಟೆಯಲ್ಲಿ ಅಡಗಿಕೊಳ್ಳಲು ಒಬ್ಬ ಅವಕಾಶ ಕೊಟ್ಟ. ಆಮೇಲೆ ಹೊರಬರಲು ಅದು ನಿರಾಕರಿಸಿತು. ಕ್ರೌಂಚ ಪಕ್ಷಿಯೊಂದು ಅವನ ಗಂಟಲಿಗೆ ಕೊಕ್ಕು ಹಾಕಿ ಈ ಹಾವನ್ನು ಎಳೆದು ಹಾಕಿತು. ಮನುಷ್ಯ ಆ ಹಕ್ಕಿಯನ್ನು ಸೆರೆ ಹಿಡಿದಿಟ್ಟ. ಅವನ ಹೆಂಡತಿ ಆ ಹಕ್ಕಿಯನ್ನು ಬಿಡುಗಡೆ ಮಾಡಿದಳು. ಅದು ಅವಳನ್ನು ಕೊಂದು ಹಾಕಿತು. ಈ ಮೂವರಲ್ಲಿ ಯಾರು ಹೆಚ್ಚು ಕೃತಘ್ನರು?

(ಹೌಸ; ನೈಜೀರಿಯ)

೩೦

ಒಬ್ಬನಿಗೆ ನಾಲ್ಕು ಮಂದಿ ಹೆಂಡತಿಯರು. ಒಬ್ಬಳು ಬಾಣದ ತುದಿ ತಂದಳು. ಇನ್ನೊಬ್ಬಳು ಬಾಣದ ಕಡ್ಡಿ ತಂದಳು. ಮತ್ತೊಬ್ಬಳು ಬಿಲ್ಲು ತಂದಳು. ಮಗದೊಬ್ಬಳು ಬಿಲ್ಲಿನ ನಾರಿ ತಂದಳು. ಇವನು ಪ್ರಾಣಿಯೊಂದನ್ನು ಕೊಂದ. ಪ್ರತಿಯೊಬ್ಬ ಹೆಂಡತಿಯೂ ಅದು ತನಗೇ ಸೇರಬೇಕೆಂದಳು. ಯಾರಿಗೆ ಸೇರಬೇಕು?

(ಎನ್‌ಕುಂಡೊ; ಜೈರೆ)

೩೧

ಮೂರು ಮಂದಿಗೆ ಹಸುವೊಂದನ್ನು ಕೊಡಲಾಯಿತು. ಅದನ್ನು ಕೊಂದು ತಿನ್ನಲು ಅವರು ನಿರ್ಧರಿಸಿದರು: ಹಸುವನ್ನು ಕತ್ತರಿಸಿದಾಗ ಸೋರುವ ರಕ್ತವನ್ನು ಬಿಡದೆ ಕುಡಿಯಬೇಕೆಂದು ಒಬ್ಬ ಅದರ ಕುತ್ತಿಗೆಯ ಕೆಳಗೆ ಬಾಯಿ ತೆರೆದುಕೊಂಡು ಕುಳಿತ. ಆದರೆ ಕುಡಿಯುವಾಗ ಹೆಚ್ಚು ಕಡಿಮೆಯಾಗಿ ಅವನ ತಲೆಯೇ ಕತ್ತರಿಸಿ ಹೋಯಿತು. ಇನ್ನೊಬ್ಬ ನೀರು ತರಲೆಂದು ಹೊರಟ. ತಾನಿಲ್ಲದಾಗ ಉಳಿದವನು ಮಾಂಸವನ್ನೇನಾದರೂ ತಿಂದಾನೆಂಬ ಭಯದಿಂದ ಇತ್ತ ಕಡೆಯೇ ನೋಡುತ್ತ, ಹಿಂದು ಹಿಂದಾಗಿ ನಡೆಯುತ್ತ ಬಾವಿಯೊಳಕ್ಕೆ ಬಿದ್ದ. ಮುಳುಗಿ ಸತ್ತ. ಮೂರನೆಯವನು ತಾನೇ ಬಂದು ನೀರು ಮೊಗೆದುಕೊಂಡು ಹಿಂತಿರುಗಿದಾಗ ತಮ್ಮ ಮಾಂಸದ ಬುಟ್ಟಿಯಲ್ಲಿ ಕಾಲಿಟ್ಟುಕೊಂಡು ನಿಂತಿದ್ದ ಜಿಂಕೆಯನ್ನು ಕಂಡ. ಇವನನ್ನು ನೋಡಿ ಓಡಿದ ಜಿಂಕೆಯನ್ನು ಅಟ್ಟಿಸಿಕೊಂಡು ಹೋಗಿ ಅದನ್ನು ಹಿಡಿದು ಅದರ ಕಾಲಿಗೆ ಅಂಟಿದ್ದ ಮಾಂಸದ ಸಾರನ್ನು ನೆಕ್ಕ ತೊಡಗಿದ. ಆಗ ಜಿಂಕೆ ಇವನನ್ನು ಒದ್ದ ರಭಸಕ್ಕೆ ಗಂಟಲು ಸೀಳಿ ಸತ್ತ. ಈ ಮೂವರಲ್ಲಿ ಯಾರು ಅತ್ಯಂತ ದುರಾಸಾಪೂರಿತರು?

(ಟೆಮ್ನೆ; ಸಿಯರ ಲಿಯೋನ್)

೩೨

ಗರುಡ, ನಾಯಿ, ನೀರುಹಕ್ಕಿ—ಈ ಮೂರೂ ಬೇಟೆಗಾರನ ಮಗಳನ್ನು ಪ್ರೇಮಿಸತೊಡಗಿದವು. ಒಮ್ಮೆ ಬೇಟೆಗಾರ ಕಾಡಿಗೆ ಹೋದವನು ಮರಳಿ ಬರಲಿಲ್ಲ. ಹುಡುಗಿಯ ತಾಯಿ ತನ್ನ ಗಂಡನನ್ನು ತಂದವರಿಗೆ ಮಗಳನ್ನು ಕೊಡುವುದಾಗಿ ಹೇಳಿದಳು. ಬೇಟೆಗಾರನ ಜಾಡನ್ನು ಹಿಡಿದು ಹೊರಟ ನಾಯಿ ಒಂದು ಕೊಳದ ಬಳಿಗೆ ಬಂದಿತು. ನೀರುಹಕ್ಕಿ ನೀರಿನೊಳಗೆ ಮುಳುಗಿ ಅಲ್ಲಿ ಸೆರೆಯಾಳಾಗಿದ್ದ ಬೇಟೆಗಾರನನ್ನು ಕಂಡಿತು. ಆಮೇಲೆ ಅವನನ್ನು ಬಿಟ್ಟರೆ ನೂರು ಕೋತಿಗಳನ್ನು ಕೊಡುವುದಾಗಿ ಜಲಮಾನವರೊಂದಿಗೆ ಒಪ್ಪಂದ ಮಾಡಿಕೊಂಡಿತು. ಗರುಡ ಹೋಗಿ ಕೋತಿಗಳನ್ನು ಸೆರೆಹಿಡಿದು ತಂದು ಕೊಳದೊಳಕ್ಕೆ ಹಾಕಿತು. ಬೇಟೆಗಾರ ಬಿಡುಗಡೆಯಾಗಿ ಬಂದ. ಅವನ ಮಗಳು ಈಗ ಯಾವ ಪ್ರಾಣಿಯ ಜೊತೆಯಾಗಬೇಕು?

(ವೈ. ಲೈಬೀರಿಯ)

೩೩

ಕತ್ತಲಾದ ಮೇಲೆ ಒಳನುಗ್ಗಿದ ತರುಣ ತನ್ನ ಪ್ರಿಯತಮೆಯ ಪಕ್ಕದಲ್ಲಿ ಮಲಗಿದ. ಅವಳು ಸತ್ತಿದ್ದಳು. ಅವಳ ಗಂಡ ಬಂದ ಪಕ್ಕದಲ್ಲಿ ನಿಂತ. ಹೆಂಡತಿಯ ಗುಣಗಾನ ಮಾಡಿ ಅವಳ ಆತ್ಮಕ್ಕೆ ಶಾಂತಿ ಕೋರುತ್ತಿದ್ದ. ತರುಣನಿಗೆ ಆಗ ತಾನು ಹೆಣದೊಂದಿಗೆ ಮಲಗಿದ್ದೇನೆ ಎನ್ನುವುದು ಗೊತ್ತಾಯಿತು. ತಕ್ಷಣವೇ ಎದ್ದು ಓಡತೊಡಗಿದ. ಆದರೆ ಅವನು ಬಾಗಿಲು ಸೇರುವ ಮುನ್ನವೇ, ಕತ್ತಲಲ್ಲಿ ಗಂಡನಿಗೆ ಢಿಕ್ಕಿ ಹೊಡೆದ. ಅವನಿಗೆ ತನ್ನ ವ್ಯವಹಾರ ಗಂಡನಿಗೆ ಗೊತ್ತಾಗಿ ಹಿಡಿದುಕೊಂಡೇ ಬಿಟ್ಟಿದ್ದಾನೆ ಎಂದು ಭಾರಿ ದಿಗಿಲಾಯಿತು. ಗಂಡನಿಗಾದರೋ ಹೆಂಡತಿಯ ಹೆಣವೇ ಎದ್ದು ಬಂದಿದೆ ಎಂದು ಗಾಬರಿಯಾಯಿತು. ಆಮೇಲೆ ನೋಡಿದರೆ, ಇವರಿಬ್ಬರು ಢಿಕ್ಕಿ ಹೊಡೆದ ಜಾಗದಲ್ಲಿ ವಿಸರ್ಜಿತ ಮಲ ಬಿದ್ದಿತ್ತು. ಇದಕ್ಕೆ ಕಾರಣ ಅವರಿಬ್ಬರಲ್ಲಿ ಯಾರಿರಬಹುದು?

(ಬಾಂಬಾರ; ಮಾಲಿ)

೩೪

ನಗಾರಿಯೊಂದು ದೋಣಿಯನ್ನು "ನಿನ್ನಿಂದ ಏನು ಪ್ರಯೋಜನ" ಎಂದು ಕೇಳಿತು. ಅದಕ್ಕೆ ದೋಣಿ ಹೇಳಿತು. "ನನ್ನ ಯಜಮಾನ ಎಲ್ಲಿ ಹೋಗಬೇಕೆಂದರೂ ಅಲ್ಲಿಗೆ ಹೊತ್ತೊಯ್ಯುತ್ತೇನೆ, ಅವನಿಗೆ ಹಣ ಕೊಡುವವರನ್ನು ಕೂರಿಸಿಕೊಂಡು ಹೋಗುತ್ತೇನೆ. ನಾನಿರುವುದರಿಂದಲೇ ನಮ್ಮ ಯಜಮಾನ ಮೀನು ಹಿಡಿಯಬಲ್ಲ. ನಿನ್ನಿಂದ ಏನು ಪ್ರಯೋಜನ?". ಆಗ ನಗಾರಿ "ನಮ್ಮ ಯಜಮಾನ ಹಾಗೂ ಇಡೀ ಕುಲದ ಮುಖವಾಣಿ ನಾನು. ಯುದ್ಧ ಬಂದಾಗ ನಾನು ಸುದ್ದಿ ಮುಟ್ಟಿಸುತ್ತೇನೆ. ನರ್ತನ ಕಾಲದಲ್ಲಿ ನನ್ನ ಧ್ವನಿ ಸಂತಸದ ಬುಗ್ಗೆಯಾಗಿ ನರ್ತಿಸುವವರಿಗೆ ಉತ್ಸಾಹ ತುಂಬುತ್ತದೆ. ನಮ್ಮ ಯಜಮಾನನ ಸೇವಕರಲ್ಲೆಲ್ಲ ನಾನೇ ಅತ್ಯಂತ ಮುಖ್ಯ ಅಲ್ಲವೇ?" ಎಂದಿತು. ಎರಡೂ ವಾದ ಮಾಡುತ್ತ ಯಜಮಾನನ ಬಳಿಗೆ ತೀರ್ಪಿಗೆ ಬಂದವು. ಅವನು ಯೋಚನೆ ಮಾಡುತ್ತ ಕುಳಿತ. ಯಾವುದರದು ಉತ್ತಮ ಕೆಲಸ?

ಶಿಷ್ಟ ಉತ್ತರ: ದೋಣಿಯದು. ಏಕೆಂದರೆ ನಗಾರಿ ಆಹಾರವನ್ನು ತರಲೂ ಆರದು, ಕೊಡಲೂ ಆರದು.

(ಎನ್‌ಕುಂಡೊ; ಜೈರೆ)

೩೫

ತರುಣನೊಬ್ಬನಿಗೆ ಮದುವೆಯಾಗಬೇಕೆಂದು ಆಸೆಯಾಯಿತು. ತಂದೆ ಸೂಚಿಸಿದ ಮೂವರು ಹೆಣ್ಣುಗಳನ್ನು ಹೋಗಿ ನೋಡಿದ. ಮೊದಲನೆಯವಳು ಮೀನು ಹಿಡಿಯುವುದರಲ್ಲಿ ಗಟ್ಟಿಗಳು. ಎರಡನೆಯವಳು ಅಡಿಗೆ ಮಾಡುವುದರಲ್ಲಿ ನಿಷ್ಣಾತಳು. ಮೂರನೆಯವಳು ಪ್ರೇಮಿಸುವುದರಲ್ಲಿ ನಿಸ್ಸೀಮಳು. ಈ ಮೂವರಲ್ಲಿ ಯಾರನ್ನು ಆರಿಸಿದ?

(ಪಿಗ್ಮಿ; ಗಬನ್, ಕಾಂಗೊ, ಜೈರೆ)

೩೬

ಗಂಡನ ಕೈಬಿದ್ದು ಹೋದ ತಾಯಿಗೆ ಹೆಂಡತಿಯೇ ಉಣಿಸುತ್ತಿದ್ದಳು. ಒಂದು ದಿನ ಅತ್ತೆ ತನ್ನ ಸೊಸೆಯ ಕೈಯನ್ನು ಬಲವಾಗಿ ಕಚ್ಚಿ ಹಿಡಿದಳು. ಬಿಡಲೇ ಇಲ್ಲ. ಏನು ಮಾಡಬೇಕು ಎಂದು ತಿಳಿಯದಾದ ಗಂಡ ಪಂಚಾಯಿತಿ ಯಜಮಾನನ್ನು ಕೇಳಿದ. ಅವನು ಜನರನ್ನು ಕೇಳಿದ. ತರುಣರು ಹೇಳಿದರು. "ಮುದುಕಿಯ ಬಾಯಿ ಕತ್ತರಿಸಿ." ಮುದುಕರು ಹೇಳಿದರು. "ಸೊಸೆಯ ಕೈ ತುಂಡು ಮಾಡಿ". ಯಜಮಾನನಿಗೆ ಏನು ಮಾಡಬೇಕೋ ಗೊತ್ತಾಗಲಿಲ್ಲ. ಅಂಥ ಸನ್ನಿವೇಶದಲ್ಲಿ ನೀವೇನು ಮಾಡುತ್ತಿದ್ದೀರಿ?

(ವೈ; ಲೈಬೀರಿಯ)

೩೭

ಒಬ್ಬ ಆಕಸ್ಮಾತ್ತಾಗಿ ಕಕ್ಕಸಿನ ಗುಂಡಿಯಲ್ಲಿ ಬಿದ್ದು ಕುತ್ತಿಗೆಯವರೆಗೆ ಮುಳುಗಿದ. ಅವನಿಗೆ ಆಗದವನೊಬ್ಬ ಅವನನ್ನು ಆ ಸ್ಥಿತಿಯಲ್ಲಿ ಕಂಡು ಅವನ ತಲೆಯತ್ತ ಕಲ್ಲು ತೂರತೊಡಗಿದ. ಈಗ ಇವನು ಏನು ಮಾಡಬೇಕು? ಮಲದೊಳಕ್ಕೆ ತಲೆ ಹೊಗಿಸಿಕೊಂಡು ಏಟು ತಪ್ಪಿಸಿಕೊಳ್ಳಬೇಕೊ? ಇಲ್ಲವೇ ತಲೆಯನ್ನು ನೆಟ್ಟಗೇ ಇರಿಸಿಕೊಂಡು ಪೆಟ್ಟು ತಿನ್ನಬೇಕೊ? ಯಾವುದು ಸರಿ?

(ಹೌಸ; ನೈಜೀರಿಯ)

೩೮

ಒಬ್ಬನಿಗೆ ಇಬ್ಬರು ಹೆಂಡಿರಿದ್ದರು. ಕಿರಿಯ ಹೆಂಡತಿಗೆ ಒಂದು ಗಂಡುಮಗುವಾಯಿತು. ಅನಂತರ ಮೊದಲ ಹೆಂಡತಿಗೂ ಗಂಡುಮಗು ಹುಟ್ಟಿತು. ಮಕ್ಕಳು ಬೆಳೆದರು. ತಂದೆ ಸತ್ತು ಹೋದ. ಎರಡನೆಯ ಹೆಂಡತಿಯ ಮಗನನ್ನು ತಂದೆಯ ಉತ್ತರಾಧಿಕಾರಿ ಎಂದು ಜನ ನಿರ್ಣಯಿಸಿದರು. ಆದರೆ ಇನ್ನೊಬ್ಬ ತಾನು ಅಪ್ಪನ ಮೊದಲ ಹೆಂಡತಿಯ ಮಗನಾದ್ದರಿಂದ ತನಗೇ ಅಧಿಕಾರ ಬರಬೇಕೆಂದು ವ್ಯಾಜ್ಯ ಹೂಡಿದ. ಹಿರೀಕರು ಬಂದು ಅವರ ಜಗಳವನ್ನು ನಿಲ್ಲಿಸಲು ಹೇಳಿ. ತಾವು ತೀರ್ಪು ಕೊಡುವುದಾಗಿ ಹೇಳಿದರು. ಯಾರಿಗೆ ಬರುತ್ತದೆ ಅಧಿಕಾರ?

—ಸಿದ್ಧ ಉತ್ತರ: ಎರಡನೆಯ ಹೆಂಡತಿಯ ಮಗನಿಗೆ. ಏಕೆಂದರೆ ತಂದೆಗೆ ಮೊದಲು ಹುಟ್ಟಿದ ಮಗನೇ, ವಂಶದಲ್ಲಿ ಮೊದಲು ಹುಟ್ಟಿದ ಮಗ.

(ಎನ್‌ಕುಂಡೊ; ಜೈರೆ)

೩೯

ಕುರುಡನೊಬ್ಬ ಬೇಡುತ್ತ ಮನೆಯೊಂದರ ಒಳಗೆ ಬಂದ. ಒಳಗಿದ್ದ ಯಜಮಾನ ಅವನನ್ನು ನಿರ್ಲಕ್ಷಿಸಿದ. ಮಾತೇ ಆಡಲಿಲ್ಲ. ಅವನ ಹೆಂಡತಿ ಹೊರಬಂದು ಮಾತಾಡಿಸಿದಾಗ ಅವಳ ಗಂಡ ಹೊರಗಡೆ ಹೋಗಿದ್ದಾನೆಯೋ ಎಂದು ಕುರುಡ ವಿಚಾರಿಸಿಕೊಂಡ. ಅವಳು ಹೌದು ಎಂದಳು. ಆಗ ಭಿಕ್ಷುಕ ಅವಳು ತನ್ನ ಜೊತೆ ಮಲಗಿದರೆ ೪೦೦ ಕವಡೆಗಳನ್ನು ಅವಳಿಗೆ ಕೊಡುವುದಾಗಿ ಹೇಳಿದ. ಅವಳು ತನ್ನ ಗಂಡನಿಗೆ ಸಿಕ್ಕಿ ಬಿದ್ದೇನೆಂದು ಹೇಳಿ ನಿರಾಕರಿಸಿದಳು. ಕುರುಡ ೫೦೦ ಕೊಡುತ್ತೇನೆಂದ. ಕೊನೆಗೆ ೭೦೦ ಕೊಡುತ್ತೇನೆಂದ. ಆ ಕ್ಷಣದಲ್ಲಿ ಗಂಡ ಮಧ್ಯೆ ಬಾಯಿಹಾಕಿದ. ಕುರುಡನ ಮೇಲಂಗಿ. ಚಡ್ಡಿ. ರುಮಾಲು ಮತ್ತು ೭೦೦ ಕವಡೆಗಳಿಗೆ ಹೆಂಡತಿಯನ್ನು ಒಪ್ಪಿಸಿದ. ಆಮೇಲೆ ಕುರುಡ ಬರೀ ಲಂಗೋಟಿಯಲ್ಲಿಯೇ ಹೋಗಬೇಕಾಯಿತು. ಕುರುಡನನ್ನು ಈ ದುಸ್ಥಿತಿಗೀಡು ಮಾಡಿದ ತಪ್ಪು ಯಾರದು–ಗಂಡನದೊ ಹೆಂಡತಿಯದೊ?

(ಹೌಸ; ನೈಜೀರಿಯ)

೪೦

ಸುಂದರವಾದ ಹೆಣ್ಣೊಬ್ಬಳು ತನಗೆ ಬಂದ ವರಗಳನ್ನೆಲ್ಲ ತಿರಸ್ಕರಿಸಿದಳು. ಏಕೆಂದರೆ ಅತ್ಯಂತ ಚತುರನಾದವನನ್ನು ಮದುವೆಯಾಗುವ ಬಯಕೆ ಆಕೆಯದು. ಒಂದು ಸಲ ವರನೊಬ್ಬ ಆ ಹಳ್ಳಿಗೆ ಬಂದ. ಅವಳು ಅವನಿಗೆ ಒಂದು ಆಹಾರದ ತಟ್ಟೆ ಕಳುಹಿಸಿದಳು. ಅದರಲ್ಲಿ ಜೇಡನ ನೂಲು. ಮೂಳೆ. ಪಪ್ಪಾಯಿ ಹೋಳು ಮತ್ತು ಎರಡು ನಗಾರಿ ಬಾರಿಸುವ ಕಡ್ಡಿಗಳಿದ್ದುವು. ಈ ವಸ್ತುಗಳಷ್ಟರಿಂದಲೇ ಅವಳ ನಿವಾಸ ಯಾವುದು ಎಂದು ಪತ್ತೆ ಮಾಡಿದ. ಅವಳ ಮನೆಯ ಮುಂದೆ ಪಪಾಯ್ ಗಿಡವಿರುವುದನ್ನು ಗುರ್ತಿಸಿದ. ಅಲ್ಲಿದ್ದ ನಾಯಿಗೆ ಮೂಳೆ ಎಸೆದ. ಮನೆಯ ಬಾಗಿಲ ಬಳಿ ಎರಡು ನಗಾರಿಗಳನ್ನು ನೋಡಿದ. ಕಿಟಕಿಯ ಬಳಿ ಜೇಡನ ನೂಲಿನಿಂದ ನೇತು ಹಾಕಿದ ಬಟ್ಟೆಯನ್ನು ನೋಡಿದ. ಇದೇ ಅವಳ ಮನೆಯೆಂದು ಅರಿತುಕೊಂಡು ಪ್ರವೇಶ ಮಾಡಿದ. ಆಮೇಲೆ ಅವರಿಬ್ಬರೂ ಮದುವೆಯಾಯಿತು. ಆ ಊರಿನ ಯುವಕರಿಗೆ ಈ ಹೊಸಬನ ಬಗ್ಗೆ ಅಸೂಯೆಯಾಗಿ ಅವನನ್ನು ಕೊಲ್ಲಲು ನಿರ್ಧರಿಸಿದರು.

ಕಾಡಿನಲ್ಲಿ ಅವನ ಮೇಲೆ ದಾಳಿ ಮಾಡಿ, ಅವನನ್ನು ಸೆರೆ ಹಾಕಬೇಕೆನ್ನುವಾಗ ತಾನು ಸಾಯುವ ಮುನ್ನ ತನ್ನ ಹೆಂಡತಿಗೆ ಒಂದು ವಿಷಯ ಹೇಳಬೇಕು ಎಂದ. "ರಣಹದ್ದಿಗೆ ನಾನು ಹಣ ಕೊಡಬೇಕಾಗಿದೆ. ನನ್ನ ಹಾಸಿಗೆಯಡಿಯಲ್ಲಿ ಕೆಂಪು ಪುಕ್ಕದ ಪಕ್ಕದಲ್ಲಿ ಅದು ಇದೆ" ಎಂದು ಹೇಳಿ ಕಳುಹಿಸಿದ. ಇದನ್ನು ಕೇಳಿದೊಡನೆಯೇ ಅವಳು ಅವನ ನೆರವಿಗೆ ಜನರನ್ನು ಕಳುಹಿಸಿದಳು. ಕೆಂಪುಪುಕ್ಕ ಎನ್ನುವುದರಿಂದ ಅವನು ಭಯದಿಂದ ಕೆಂಪಾಗಿದ್ದಾನೆ ಎಂದು ಅವಳಿಗೆ ಗೊತ್ತಾಯಿತು. ರಣಹದ್ದು ಎನ್ನುವುದರಿಂದ ಅವನಿಗೆ ಕಾಡಿನಲ್ಲಿ ಸಾವಿನ ಭಯ ಉಂಟಾಗಿದೆ ಎಂದು ಅವಳಿಗೆ ಅರ್ಥವಾಯಿತು. ಇವರಿಬ್ಬರಲ್ಲಿ ಯಾರು ಹೆಚ್ಚು ಚತುರರು?

(ಬೌಲೆ; ಐವರಿಕೋಸ್ಟ್)

೪೧

ಇಬ್ಬರು ನಿದ್ರಾಸ್ಪರ್ಧೆಗೆ ನಿಂತರು. ಒಬ್ಬ ಬೆಂಕಿಯ ಪಕ್ಕದಲ್ಲಿ ಮಲಗಿದ್ದ. ಅವನ ಕಾಲಿಗೆ ಬೆಂಕಿ ಹತ್ತಿತು. ಅವನನ್ನು ಎಬ್ಬಿಸಿ ಅವನಿಗೆ ಬೆಂಕಿ ಹತ್ತಿದೆ ಎಂದು ತಿಳಿಸಿದಾಗ ಸುಮ್ಮನೆ ನನ್ನನ್ನು ನಿದ್ದೆ ಮಾಡಲು ಬಿಡಬೇಕಿತ್ತು ಅಂದ. ಇನ್ನೊಬ್ಬ ಬೀದಿಯಲ್ಲಿ ಮಲಗಿದ್ದ. ಜೋರಾಗಿ ಮಳೆ ಬಂದು ಸಮುದ್ರಕ್ಕೆ ಕೊಚ್ಚಿಕೊಂಡು ಹೋದ. ಮೀನು ನುಂಗಿತು. ಮೀನುಗಾರರು ಅದನ್ನು ಹಿಡಿದು ಸುಲಿದು ನೋಡಿದಾಗ ಒಳಗಿದ್ದ ಇವನು ತಾನು ನಿದ್ದೆ ಮಾಡುತ್ತಿದ್ದೆನೆಂದೂ, ತನ್ನನ್ನು ಯಾಕೆ ಎಬ್ಬಿಸಿದಿರಿ ಎಂದೂ ಕೇಳಿದ. ಇವರಿಬ್ಬರಲ್ಲಿ ಪಂದ್ಯ ಗೆದ್ದವರು ಯಾರು?

(ವೈ; ಲೈಬೀರಿಯ)

೪೨

ಒಂದಾನೊಂದು ಊರು. ಅಲ್ಲಿನ ಜನರ ಒಂದೇ ಉದ್ಯೋಗ ಎಂದರೆ ಅಳಿಲುಗಳನ್ನು ಹಿಡಿಯುವುದು. ಅಲ್ಲಿ ಒಬ್ಬ ಇದ್ದ. ಅಳಿಲುಗಳನ್ನು ಹಿಡಿಯುವುದರಲ್ಲಿ ಅವನನ್ನು ಮೀರಿಸಿದವರಿರಲಿಲ್ಲ. ಆ ಊರಿನ ಒಂದು ಅಳಿಲು ಎಷ್ಟು ಚತುರವಾಗಿತ್ತೆಂದರೆ ಊರಿನ ಎಲ್ಲರಿಂದಲೂ ತಪ್ಪಿಸಿಕೊಂಡು ಓಡಾಡುತ್ತಿತ್ತು. ಅದನ್ನು ಹಿಡಿಯಲು ಇವನೊಬ್ಬನಿಗೇ ಸಾಧ್ಯ ಎಂದು ಹೇಳಲಾಗುತ್ತಿತ್ತು. ಹಾಗಾಗಿ ಇವನು ತನ್ನ ಮಗನಿಗೆ "ನಡಿಯೊ. ಹೋಗಿ ಆ ಅಳಿಲನ್ನು ಹಿಡಿಯೋಣ" ಎಂದ. ಅವರು ಒಂದು ಕೊಡಲಿ ತೆಗೆದುಕೊಂಡು ಹೊರಟರು. ಅಳಿಲು ಅದರ ಬಿಲದ ಬಳಿ ಇರುವುದನ್ನು ಕಂಡರು. ಆಗ ಅಳಿಲು ಓಡಿ ಬಿಲ ಹೊಕ್ಕಿತು. ಅವರು ಎಲ್ಲ ಬಿಲಗಳನ್ನೂ ತಡಕಿದರು. ಎಲ್ಲ ಬಿಲಗಳನ್ನೂ ಮುಚ್ಚುತ್ತಾ ಬಂದರು. ತನ್ನ ಮಗನಿಗೆ "ಈ ಅಳಿಲು ತನ್ನ ಬಿಲ ಬಿಟ್ಟು ಹೋಗದಂತೆ ತಡಿ" ಎಂದ. "ಆಗಲಿ" ಎಂದ ಮಗ. ಆದರೆ ಒಂದು ಬಿಲವನ್ನು ಮುಚ್ಚಿರಲಿಲ್ಲ. ಅಳಿಲು ತಪ್ಪಿಸಿಕೊಂಡಿತು. ಆಗ ಅಲ್ಲಿಗೆ ಬಂದ ಅಪ್ಪ "ಅದನ್ನು ಏಕೆ ತಪ್ಪಿಸಿಕೊಳ್ಳಲು ಬಿಟ್ಟೆ. ಈಗ ನಾನು ಬರಿಗೈಯಲ್ಲಿ ಮನೆಗೆ ಹೋದರೆ ಅವಮಾನ" ಎಂದ. ಕೊಡಲಿಯನ್ನು ಸೆಳೆದುಕೊಂಡು ಮಗನಿಗೆ ಹೊಡೆದ. ಅರಿವು ತಪ್ಪಿ ಬಿದ್ದ ಮಗನನ್ನು ಬಿಟ್ಟು ತನ್ನ ದಾರಿಗೆ ತಾನು ಹೋದ. ಮಗನ ಕಣ್ಣು ಕಿವಿಗಳಲ್ಲೆಲ್ಲ ಇರುವೆಗಳು ತುಂಬಿಕೊಳ್ಳತೊಡಗಿದವು. ಹದ್ದುಗಳು ಮೇಲೆ ಹಾರಾಡತೊಡಗಿದವು.

ಅಂದು ಮಧ್ಯಾಹ್ನ ದೊಡ್ಡ ಕಾರವಾನಿನ ಮುಖ್ಯಸ್ಥನೊಬ್ಬ ಆ ಸ್ಥಳಕ್ಕೆ ಬಂದ. ಬಂದು ಅಲ್ಲಿ ಶಿಬಿರ ಹಾಕಿದ. ಆಮೇಲೆ ಎದ್ದು ಸುತ್ತಾಡಿ ಬರುತ್ತಿರುವಾಗ ಈ ಹುಡುಗನನ್ನು ನೋಡಿದ. ತನ್ನ ಗುಲಾಮರನ್ನು ಕರೆದು ಹೊರಿಸಿಕೊಂಡು ಹೋಗಿ, ಸ್ನಾನಮಾಡಿಸಿ, ಶುಶ್ರೂಷೆ ಮಾಡಿದ. ಹುಡುಗ ಚೇತರಿಸಿಕೊಂಡ. ಮುಖ್ಯಸ್ಥನಿಗೆ ಮಕ್ಕಳಿರಲಿಲ್ಲ. ಈ ಹುಡುಗನನ್ನು ಕರೆದೊಯ್ಯುವಾಗಲೇ ಇವನನ್ನು ತನ್ನ ಮಗನನ್ನಾಗಿಸಿಕೊಳ್ಳಬೇಕು ಎಂದು ತೀರ್ಮಾನಿಸಿದ್ದ. ಪಟ್ಟಣದ ಪ್ರಮುಖರಿಗೆ ಸುದ್ದಿಯನ್ನು ಕಳುಹಿಸಿದ: ತನಗೆ ಒಬ್ಬ ಮಗನಾದನೆಂದೂ. ತಾನು ಈಗ ಪೂರ್ಣ ಮನುಷ್ಯನಾದುದಕ್ಕೆ ಸಂತಸವಾಗಿದೆಯೆಂದೂ. ಈಗ ತನಗೆ ಬರಬೇಕಾದ ಉಡುಗೊರೆಗಳನ್ನು ಈಗ ಸ್ವೀಕರಿಸುವೆನೆಂದೂ ಸುದ್ದಿ ಕಳುಹಿಸಿದ.

ಪ್ರಮುಖ ಹೇಳಿದ. "ಇದು ಸುಳ್ಳು. ಅವನು ಅವನ ಮಗನಲ್ಲ. ಅವನು ಅವನ ಮಗನಾದರೆ, ಬರಲಿ ನಾನು ನೋಡುತ್ತೇನೆ." ಆಗ ಮುಖ್ಯಸ್ಥ ಪಟ್ಟಣಕ್ಕೆ ಬಂದ. ಪ್ರಮುಖ ತನ್ನ ಮಕ್ಕಳನ್ನು ಕರೆದು ಹತ್ತು ಪೌಂಡು ಬಾಳುವ ಕುದುರೆಗಳನ್ನು ಕೊಟ್ಟು "ಹೋಗಿ ಮುಖ್ಯಸ್ಥನ ಮಗನೊಂದಿಗೆ ಜೂಜು ಕಟ್ಟಿ. ಜೂಜು ಆದ ಮೇಲೆ ಈ ಕುದುರೆಗಳನ್ನು ದಾನ ಮಾಡಿ (ಅವನಿಗೂ ಹಾಗೆ ಮಾಡುವಂತೆ ಮಾಡಿ)" ಎಂದ. ಹಾಗೆ ಮಾಡಿ ಮರಳಿ ಬಂದರು. ಮಾರನೆಯ ದಿನವೂ ಪ್ರಮುಖ ಹತ್ತು ಪೌಂಡು ಬೆಲೆಬಾಳುವ ಕುದುರೆಗಳನ್ನು ಕೊಟ್ಟು ಕಳುಹಿಸಿದ. ಹಿಂದಿನ ದಿನದಂತೆಯೇ ಇಂದೂ ಆಯಿತು. ಈ ರೀತಿ ಐದು ಸಾರಿ ಮಾಡಿದರು. ಅವರ ಕುದುರೆಗಳೇ ಮುಗಿಯುತ್ತ ಬಂದವು. ಆಗ ಪ್ರಮುಖ ಹೇಳಿದ "ಖಂಡಿತವಾಗಿಯೂ ಅವನು ಮುಖ್ಯಸ್ಥನ ಮಗನೇ. ನನ್ನ ಕುದುರೆಗಳೇ ಮುಗಿಯುತ್ತ ಬಂದವು. ಒಂದುವೇಳೆ ಅವನು ಅವನ ಮಗನಲ್ಲದಿದ್ದರೆ ತನ್ನ ಕುದುರೆಗಳನ್ನು ಆ ರೀತಿ ಉಡುಗೊರೆಯಾಗಿ ದಾನ ಮಾಡುತ್ತಿರಲಿಲ್ಲ." ಆಮೇಲೆ ತನ್ನ ಮಗಳನ್ನು ಬರಹೇಳಿದ. ಇವಳು ಸೇರಿದಂತೆ ನಾಲ್ಕು ಜನರನ್ನು ಮುಖ್ಯಸ್ಥನ ಮಗ ಮದುವೆಯಾದ. ಪ್ರಮುಖ ದೊಡ್ಡ ಮನೆಯೊಂದನ್ನು ಕೊಟ್ಟ. ಮುಖ್ಯಸ್ಥ ಬಂದವನೇ ಇಪ್ಪತ್ತು ಮಂದಿ ಉಪಪತ್ನಿಯರನ್ನು ತನ್ನ ಮಗನಿಗೆ ಮಾಡಿಕೊಟ್ಟ. ಅಲ್ಲಿ ನಿತ್ಯ ಹಬ್ಬ ನಡೆಯತೊಡಗಿತು.

ಆಮೇಲೆ ಒಂದು ದಿನ ಮಗ ತನ್ನ ಅಪ್ಪನನ್ನು ನೋಡಿದ. ಆಳುಗೋಸ್ಕರ ತನ್ನನ್ನು ಕೊಡಲಿಯಿಂದ ಬಡಿದು ಹಾಕಿದ್ದ ಅಪ್ಪ. ಮಗನ ಮನೆಗೆ ಬಂದ ಅವನು "ನಿನ್ನ ರಾಜ ಉಡುಗೆಗಳನ್ನು ಕಿತ್ತು ಹಾಕಿ ಬಾ. ಆಳಲು ಓಡಿಹೋಣ" ಎಂದ. ಮುಖ್ಯಸ್ಥನ ಗುಲಾಮರು "ಇದ್ಯಾವನೊ ಹುಚ್ಚ. ತದುಕಿರೊ" ಎಂದರು. ಆಗ ಹುಡುಗ ಅವರಿಗೆ "ಇವನು ತನ್ನ ಅಪ್ಪ. ನನ್ನನ್ನು ಹುಟ್ಟಿಸಿದವನು" ಎಂದ. ಆಗ ಅಲ್ಲಿ ಬಂದ ಮುಖ್ಯಸ್ಥ. "ನಾನು ಈಗಾಗಲೇ ಪ್ರಮುಖನಿಗೆ ಸುಳ್ಳು ಹೇಳಿಬಿಟ್ಟಿದ್ದೇನೆ. ಈ ಗುಟ್ಟನ್ನು ರಕ್ಷಿಸೋಣ. ನಿಮ್ಮ ಅಪ್ಪನಿಗೆ ನಾನು ಬೇಕಾದ ಸಂಪತ್ತು ಕೊಡುತ್ತೇನೆ. ಅವನು ಮನೆಗೆ ಹೋಗಲಿ. ನಿನ್ನನ್ನು ಅವನಿಗೆ ನೋಡಬೇಕೆನಿಸಿದರೆ ಬಂದು ನಿನ್ನನ್ನು ಕಾಣಲಿ: ನಿನಗೆ ಅವನನ್ನು ನೋಡಬೇಕೆನಿಸಿದರೆ ನೀನೂ ಹೋಗಿ ಅವನನ್ನು ನೋಡಬಹುದು" ಎಂದ. ನಿಜವಾದ ತಂದೆ ಇದಕ್ಕೆ ಒಪ್ಪಿಕೊಳ್ಳುವುದಿಲ್ಲ ಅಂದ. ಆಗ ಮುಖ್ಯಸ್ಥ "ಸರಿ. ಬನ್ನಿ ಸ್ವಲ್ಪ ಊರ ಹೊರಗೆ ಹೋಗೋಣ" ಎಂದ. ಎಲ್ಲರೂ ಹೋದರು. ಅಲ್ಲಿ ಮುಖ್ಯಸ್ಥ ತನ್ನ ಒರೆಯಿಂದ ಖಡ್ಗವನ್ನು ಹೊರಸೆಳೆದ. ಅದನ್ನು ಮಗನ ಕೈಯಲ್ಲಿ ಕೊಟ್ಟು ಹೇಳಿದ: "ನಮ್ಮಿಬ್ಬರಲ್ಲಿ ಒಬ್ಬರನ್ನು ಕೊಲ್ಲು."

(ಹೌಸಾ: ನೈಜೀರಿಯ)

೪೩

ಬೇಟೆಗಾರ ಬೇಟೆಗೆಂದು ಹೊರಗೆ ಹೋದಾಗಲೆಲ್ಲ ಅವನ ಹೆಂಡತಿಯೊಂದಿಗೆ ಊರ ಪ್ರಮುಖನ ಮಗ ಹಾದರ ಮಾಡುತ್ತಿದ್ದ. ಒಂದು ದಿನ ಇವರಿಬ್ಬರು ಒಟ್ಟಿಗಿದ್ದಾಗ ಬೇಟೆಗಾರ ಮರಳಿಬಂದ. ಹೆಂಡತಿ ಪ್ರಮುಖನ ಮಗನನ್ನು ಚಾಪೆ ಸುತ್ತಿ ಅವಿತಿಟ್ಟಳು. ಆಮೇಲೆ ಅದರ ಮೂಲಕ ಬಾಣ ಬಿಡುವಂತೆ ಗಂಡನಿಗೆ ಹೇಳಿದಳು. ಗಂಡ ಹಿಂಜರಿದ. ಅವನ ಹೆಂಡತಿ ಒತ್ತಾಯಿಸಿದಳು. ಇದನ್ನು ಕೇಳುತ್ತಿದ್ದ ಪ್ರಮುಖನ ಮಗ ಚಾಪೆಯನ್ನೆಲ್ಲ ಒದ್ದೆಮಾಡಿಕೊಂಡ. ಯಾರು ಯಾರ ಮೇಲೆ ಹೆಚ್ಚಿನ ಕುಚೋದ್ಯ ಮಾಡಿದಂತಾಯಿತು? ಪ್ರಮುಖನ ಮಗ ಬೇಟೆಗಾರನಿಗೊ? ಹೆಂಡತಿ ಗಂಡನಿಗೊ? ಹೆಂಡತಿ ಪ್ರಮುಖನ ಮಗನಿಗೊ?

(ಹೌಸಾ: ನೈಜೀರಿಯ)

೪೪

ಒಬ್ಬ ಪ್ರಯಾಣ ಹೋಗಬೇಕಾಯಿತು. ತನ್ನ ಗೆಳೆಯನ ಬಳಿ ಬಂದು ಪೀಪಾಯಿ ಕೊಟ್ಟ. ಇದರ ತುಂಬ ತಿನಿಸು ಇದೆಯೆಂದೂ ಇದನ್ನು ಹಾಗೇ ಇಟ್ಟಿರು ಎಂದು ಕೊಟ್ಟು ಹೋದ. ಅವನು ಇನ್ನೂ ಪ್ರಯಾಣದಲ್ಲಿಯೇ ಇರುವಾಗ ಅವನ ಹೆಂಡತಿ ಬಸುರಾದಳು. ಪೀಪಾಯಿಯಲ್ಲಿ ಇದೆ

ಎನ್ನ ಲಾದ ತಿನಿಸೇ ಬೇಕು ಎಂದು ಹಂಬಲಿಸತೊಡಗಿದಳು. ಆಗ ಗೆಳೆಯ ಪೀಪಾಯಿ ಬಿಚ್ಚಿ ನೋಡುತ್ತಾನೆ. ಅದರ ತುಂಬ ಹಣ. ಹತ್ತು ವರ್ಷಗಳಾದ ಮೇಲೆ ಮೊದಲನೆಯವನು ಮರಳಿ ಬಂದ. ಅವನ ಗೆಳೆಯ ಪೀಪಾಯಿ ಹಿಂದಿರುಗಿಸಿದ. ಅದರ ತುಂಬ ತಿನಿಸು ತುಂಬಿದ್ದ. ಮೊದಲನೆಯವನು ತನ್ನ ಗೆಳೆಯ ಹಣವನ್ನು ಕದ್ದಿದ್ದಾನೆಂದು ಆರೋಪ ಹೊರಿಸಿ ಹಿರೀಕರ ಮುಂದೆ ಎಳೆದೊಯ್ದ. ಗೆಳೆಯ ತಿನಿಸನ್ನು ಹಿಂದಿರುಗಿಸಿರುವುದರಿಂದ ಅವನದೇನೂ ತಪ್ಪಿಲ್ಲ ಎಂದು ಅವರು ತೀರ್ಪಿತ್ತರು. ಆಮೇಲೆ ಇವರಿಬ್ಬರ ಮಕ್ಕಳು ಈ ವಿಚಾರವಾಗಿ ಜಗಳವಾಡತೊಡಗಿದರು. ಮೊದಲನೆಯವನ ಮಗು ಕೇಳಿತು: "ಹತ್ತು ವರ್ಷಗಳ ಕಾಲ ತಿನಿಸು ಕೊಳೆಯದೆ ಇರುವ ವಿಚಾರ ನೀನು ಎಂದಾದರೂ ಕೇಳಿದ್ದೀಯಾ." ಇದನ್ನು ಕೇಳಿಸಿಕೊಂಡ ಹಿರೀಕರು ಮತ್ತೆ ಪಂಚಾಯಿತಿ ಮಾಡಿ ಮೊದಲನೆಯವನ ಪರ ತೀರ್ಪಿತ್ತರು.

(ಬೆಂಗಾ; ರೀಯಾವುನೀ)

೪೫

ಬಡವನಾದವನೊಬ್ಬ ಕಾಣದ ದೈವವೊಂದಕ್ಕೆ ತನ್ನ ಕಷ್ಟಗಳನ್ನು ತೋಡಿಕೊಂಡ. ಆಗ ಆ ದೈವ ಅವನಿಗೆ ನಾಲ್ಕು ಮಾಂತ್ರಿಕ ವಸ್ತುಗಳನ್ನು ಕೊಟ್ಟಿತು: ಕೋಳಿ, ನಾಯಿ, ಹಸು ಮತ್ತು ಬೀಜ. ದೈವ ಹೇಳಿದ್ದರ ಪ್ರಕಾರ ಬಡವ ಬೀಜವನ್ನು ನೆಟ್ಟ. ಏಳು ವರ್ಷಗಳಲ್ಲಿ ಬೆಳೆದ ಆ ಮರ ೧೦೦೦ ಹುಡುಗರಿಗೆ ಮತ್ತು ೧೦೦೦ ಹುಡುಗಿಯರಿಗೆ ಜನ್ಮವಿತ್ತಿತು. ಕೋಳಿ ನೆಲವನ್ನು ಒಂದೊಂದು ಬಾರಿ ಕುಟುಕಿದರೆ ಸಾಕು ಚಿನ್ನ ಬೆಳ್ಳಿ ಉದುರುತ್ತಿದ್ದವು. ನಾಯಿ ಎಲ್ಲೆಲ್ಲಿ ಮಲಗಿದರೂ ಅಲ್ಲಲ್ಲಿ ಅಕ್ಕಿಯ ಮೂಟೆಗಳು ಕಾಣಿಸಿಕೊಳ್ಳುತ್ತಿದ್ದವು. ಪ್ರತಿ ಸಂಜೆ ಬಯಲಿನಿಂದ ಮೇದು ಹಿಂತಿರುಗುತ್ತಿದ್ದ ಹಸು ತನ್ನ ಜೊತೆ ಕರುವೊಂದನ್ನೂ, ಧಾನ್ಯದ ಮೂಟೆಯೊಂದನ್ನೂ, ದೊಡ್ಡ ಪಾತ್ರೆಯ ತುಂಬ ಹಾಲು ಮತ್ತು ತಿನಿಸನ್ನು ತರುತ್ತಿತ್ತು. ಒಂದು ದಿನ ಊರಿನ ಪ್ರಮುಖ ಈ ಮರವನ್ನು ಕಡಿಯಲು ಜನ ಕಳುಹಿಸಿದ: ನಾಯಿಯನ್ನು ಚಿರತೆ ಹಿಡಿಯಿತು; ಕೋಳಿಯನ್ನು ಗರುಡ ಎತ್ತಿಕೊಂಡು ಹೋಯಿತು; ಹಸುವಿನ ಮೇಲೆ ಸಿಂಹ ಹಾರಿತು. ಈ ನಾಲ್ಕು ವಸ್ತುಗಳಲ್ಲಿ ಯಾವ ಒಂದನ್ನು ಉಳಿಸಲು ಯತ್ನಿಸುತಿದ್ದಿರಿ?

(ಕ್ಯಾಮ್‌ರೂನ್)

೪೬

ಬೇರೆ ಬೇರೆ ಊರುಗಳಲ್ಲಿದ್ದ ಮೂರು ಜನರಲ್ಲಿ ಪ್ರತಿಯೊಬ್ಬನೂ ತನ್ನ ಮಗನನ್ನು ಮನೆಯಿಂದ ಹೊರಗಟ್ಟಿದ. ಏಕೆಂದರೆ ಒಬ್ಬ ಏನೇನೂ ಗೊತ್ತಿರದ ಪೆದ್ದ, ಇನ್ನೊಬ್ಬ ದಡ್ಡ, ಮತ್ತೊಬ್ಬ ಮೂರ್ಖ. ಈ ಮೂವರೂ ಒಂದು ಹಳ್ಳಿಯಲ್ಲಿ ಭೇಟಿಯಾದರು. ಅಲ್ಲಿ ಜಮೀನ್ದಾರನ ಬಳಿ ಕೆಲಸಕ್ಕೆ ಸೇರಿಕೊಂಡರು. ಯಜಮಾನ ಒಬ್ಬನನ್ನು ನಾರು ಹಗ್ಗಗಳನ್ನು ತರಲು ಕಳುಹಿಸಿದ, ಇನ್ನೊಬ್ಬನನ್ನು ಮೀನು ಹಿಡಿಯಲು ಕಳುಹಿಸಿದ, ಮತ್ತೊಬ್ಬನನ್ನು ಬೇವೊಬ್ಯಾಬ್ ಹಣ್ಣು[1]ಗಳನ್ನು ತರಲು ಕಳುಹಿಸಿದ. ಆದರೆ ಈ ಮೂವರೂ ಬರಿಗೈಲಿಯೇ ಬಂದರು. ಮೊದಲನೆಯವನು ಹೇಳಿದ: ತಾನು ಸಂಗ್ರಹಿಸಿದ ಹಗ್ಗಗಳ ಹೊರೆಯನ್ನು ಕಟ್ಟಲು ಹಗ್ಗವೇ ಸಿಗಲಿಲ್ಲ. ಎರಡನೆಯವನು ಹೇಳಿದ: ಮೀನು ಹಿಡಿಯುತ್ತಿರುವಾಗ ದಾಹ ಹೆಚ್ಚಾಗಿ ತಡೆದುಕೊಳ್ಳಲಾರದೆ ನೀರು ಕುಡಿಯಲು ಬಂದೆ. ಮೂರನೆಯವನು ತಾನು ಮರಹತ್ತಿ ಹಣ್ಣಿಗೆ ಕೋಲನ್ನು ತಾಗಿಸಿ ಮತ್ತೆ ಇಳಿದು ಬಂದು ಕೋಲನ್ನು ಬಲವಾಗಿ ಎಸೆದರೂ ಹಣ್ಣು ಕಳಚಿಕೊಳ್ಳಲಿಲ್ಲ. ಕೋಲು ಕೈಕೊಟ್ಟಿತು ಎಂದ. ಈ ಮೂವರಲ್ಲಿ ಯಾರು ಹೆಚ್ಚು ಮೂರ್ಖರು.?

(ಬಾಂಬಾರ; ಮಾಲಿ)

---

1 ಆಫ್ರಿಕದ ಕಾಡುಗಳಲ್ಲಿ ಬೆಳೆಯುವ ದಪ್ಪ ಕಾಂಡದ ಮರದ ಹಣ್ಣುಗಳು. ಇವುಗಳ ತಿರುಳನ್ನು ತಿಂದು ಬುರುಡೆಯನ್ನು ಪಾತ್ರೆಯಂತೆ ಬಳಸುತ್ತಾರೆ.

೪೭

ಒಬ್ಬ ಮನೆಗೆ ಬೀಗ ಹಾಕಿ ಹೋದ. ಮೂರು ವರ್ಷಗಳ ಕಾಲ ಸಂಚಾರ ಮಾಡಿದ. ಮರಳಿ ಬಂದು ನೋಡಿದಾಗ ಅವನ ಪದಾರ್ಥಗಳೆಲ್ಲವೂ ಕ್ಷೇಮವಾಗಿದ್ದವು. ಕಳ್ಳರು ಒಳನುಗ್ಗಲು ಪ್ರಯತ್ನ ಮಾಡಿದ್ದರು. ಆದರೆ ಬಾಗಿಲ ಬೀಗ ಭದ್ರವಾಗಿದ್ದು ತಡೆದಿತ್ತು. ಕಳ್ಳರನ್ನು ಒಳನುಗ್ಗದಂತೆ ತಡೆದದ್ದಕ್ಕೆ ತನಗೆ ಬಹುಮಾನ ಕೊಡಬೇಕು ಎಂದು ಬೀಗ ಹೇಳಿತು. ಆಗ ತಾನೇ ಇಲ್ಲದಿದ್ದರೇ ಬೀಗ ಒಂದೇ ಏನು ಮಾಡುತ್ತಿತ್ತು. ಆದ್ದರಿಂದ ತನಗೇ ಬಹುಮಾನ ಬರಬೇಕು ಎಂದು ಬಾಗಿಲು ಹೇಳಿತು. ಆಗ ಗೋಡೆ ತಾನಿಲ್ಲದಿದ್ದರೆ ಬೀಗ ಮತ್ತು ಬಾಗಿಲು ಎರಡೂ ನಿಷ್ಪ್ರಯೋಜಕ, ಆದ್ದರಿಂದ ತನಗೇ ಬಹುಮಾನ ಬರಬೇಕು ಎಂದಿತು. ಆಗ ಮನೆಯ ನಡುಗಂಬ ತಾನು ಇಡೀ ಮನೆಗೆ ಆಧಾರವಾದ್ದರಿಂದ ತನಗೇ ಬಹುಮಾನ ಬರಬೇಕು ಎಂದಿತು. ತಾರಸಿಗೆ ಅವಲಂಬನೆ ಕೊಟ್ಟಿರುವ ತನಗೆ ಬರಬೇಕು ಎಂದು ತೊಲೆ ಹೇಳಿತು. ಮನೆಯನ್ನು ಅದರ ಎಲ್ಲ ವಸ್ತುಗಳನ್ನು ಆವರಿಸಿಕೊಂಡಿರುವ ತನಗೆ ಬರಬೇಕು ಎಂದು ಛಾವಣಿ ಹೇಳಿತು. ಮನೆಯ ವಿವಿಧಭಾಗಗಳನ್ನು ಬಂಧಿಸಿಟ್ಟಿರುವ ಹುರಿ ತನಗೆ ಬರಬೇಕು ಎಂದಿತು. ಹೀಗೆ ಎಲ್ಲವೂ ಜಗಳವಾಡಿಕೊಂಡು ತಮ್ಮ ವ್ಯಾಜ್ಯ ಪರಿಹಾರಕ್ಕೆ ತೀರ್ಪುಗಾರರ ಬಳಿ ಹೋದವು. ಬಹುಮಾನಕ್ಕೆ ಯಾರು ಯೋಗ್ಯ?

—ಸಿದ್ಧ ಉತ್ತರ: ಎಲ್ಲರಿಗೂ ಸಲ್ಲಬೇಕು. ಆದರೆ ಹೆಚ್ಚಿನ ಪಾಲು ನಡುಗಂಬಕ್ಕೆ ಹೋಗಬೇಕು. ಏಕೆಂದರೆ ಅದೇ 'ಮುಖ್ಯಸ್ಥ' (ಮೊದಲು ಅದನ್ನು ನಿಲ್ಲಿಸಿಯೇ ಮನೆಯ ಇತರ ಭಾಗಗಳನ್ನು ಸೇರಿಸುತ್ತಾ ಹೋಗುತ್ತಾರೆ.)

(ಎನ್‌ಕುಂಡೊ: ಲೈಬೀರಿಯ)

೪೮

ಮೂರು ಮಂದಿ ಪ್ರಯಾಣ ಹೊರಟರು. ಒಬ್ಬ ನಾಯಿಯನ್ನು ಮಾರಲು. ಮತ್ತೊಬ್ಬ ತರಕಾರಿ ಮಾರಲು ಹೊರಟಿದ್ದರು. ತರಕಾರಿ ಮಾರುವವನ ಸಲಹೆಯಂತೆ ಅವರು ಒಂದೆಡೆ ಊಟಮಾಡಲು ಕುಳಿತರು. ಬುತ್ತಿಯನ್ನು ಹಂಚಿಕೊಂಡರು. ನಾಯಿಗೂ ಒಂದು ಮೂಳೆ ಹಾಕಿದರು. ಮತ್ತೆ ಅಲ್ಲಿಂದ ಹೊರಟು ಸ್ವಲ್ಪ ದೂರ ಹೋದ ಮೇಲೆ, ನಾಯಿ ಮೂಳೆ ಸಹಿತವಾಗಿ ಹಿಂದೆಯೇ ಉಳಿದಿರುವುದು ಗಮನಕ್ಕೆ ಬಂದಿತು. ಮರಳಿ ಬಂದರು. ನಾಯಿಯನ್ನು ಕರೆಯುತ್ತಾ, ಪೊದೆ ಸಂದಿಗಳಲ್ಲಿ ಹುಡುಕಿದರು. ಇದ್ದಕ್ಕಿದ್ದಂತೆಯೇ ಮೂವರ ಕಣ್ಣಿಗೂ ಆನೆಯ ಎರಡು ದಂತಗಳು ಕಾಣಿಸಿದವು. ಮೂರು ಜನರಿದ್ದಾರೆ. ಎರಡೇ ದಂತಗಳಿವೆ. ಮೊದಲನೆಯವನು ಹೇಳಿದ: ತನ್ನ ನಾಯಿಯಿಂದಾಗಿ ತಾನೇ ಇವು ಸಿಕ್ಕಿದವು. ಎರಡನೆಯವನು ತಾನು ಮೂಳೆ ಎಸೆದುದರಿಂದ ತಾನೇ, ನಾಯಿ ಹಿಂದೆ ಉಳಿದು ನಾವು ಹುಡುಕಿಕೊಂಡು ಬಂದದ್ದು, ಎಂದ. ಮೂರನೆಯವನು ಇಲ್ಲಿ ಕುಳಿತು ಊಟ ಮಾಡೋಣ ಎಂದು ತಾನು ಸಲಹೆ ಕೊಟ್ಟಿದ್ದು ಎಂದ. ಈ ವಾದ ಮುಂದುವರಿಯುತ್ತ ಹೋಯಿತು.

(—, ಕ್ಯಾಮ್‌ರೂನ್)

೪೯

ಒಬ್ಬನಿಗೆ ನಾಲ್ವರು ಹೆಂಡಿರಿದ್ದರು. ಒಬ್ಬಳು ಬಾಣದ ತುದಿ ತಂದಳು ಇನ್ನೊಬ್ಬಳು ಬಾಣದ ಕಣೆ ತಂದಳು. ಮತ್ತೊಬ್ಬಳು ಬಿಲ್ಲು ತಂದಳು. ಮಗದೊಬ್ಬಳು ಬಿಲ್ಲಿನ ನಾರಿ ತಂದಳು. ಗಂಡ ಪ್ರಾಣಿಯೊಂದನ್ನು ಕೊಂದ. ಪ್ರತಿಯೊಬ್ಬ ಹೆಂಡತಿಯೂ ಅದು ತನಗೆ ಸೇರಬೇಕೆಂದಳು. ಯಾವ ಹೆಂಡತಿಗೆ ಅದು ಸಲ್ಲಬೇಕು?

—ಸಿದ್ಧ ಉತ್ತರ: ಪ್ರಾಣಿಯನ್ನು ಪಾಲು ಮಾಡಿಕೊಳ್ಳಬೇಕು. ಆದರೆ ದೊಡ್ಡ ಪಾಲು ಮೊದಲನೆಯ ಹೆಂಡತಿಗೆ ಹೋಗಬೇಕು. ಏಕೆಂದರೆ ಬಾಣದ ತುದಿ ಅಮೂಲ್ಯವಾದದ್ದು. ಅದನ್ನು ಕುಶಲ

ತಪ್ಪದೆ ರಚಿಸಿರುತ್ತಾರೆ. ಅದೇ ಇಲ್ಲದಿದ್ದರೆ ಯಾರೂ ಕಣೆ, ಬಿಲ್ಲು ನಾರಿಗಳನ್ನು ಮಾಡಿಕೊಂಡು ಹೋಗುವುದಿಲ್ಲ.

(ಎನ್‌ಕುಂಡೊ; ಲೈಬೀರಿಯ)

೫೦

ಮೂವರು ಗಂಡಸರು. ಒಬ್ಬನ ಬಳಿ ಸೇದುನಳಿಗೆ ಇತ್ತು. ತಂಬಾಕು ಇರಲಿಲ್ಲ. ಇನ್ನೊಬ್ಬ ಹೇಳಿದ: "ನನ್ನ ಬಳಿ ತಂಬಾಕು ಇದೆ. ಆದರೆ ಬೆಂಕಿ ಕಡ್ಡಿ ಇಲ್ಲ." ಮತ್ತೊಬ್ಬ ಹೇಳಿದ "ನನ್ನ ಬಳಿ ಕಡ್ಡಿ ಇದೆ." ನಳಿಗೆ ಇದ್ದವನಿಗೆ ತಂಬಾಕು ಇದ್ದವನು ತಂಬಾಕು ಕೊಟ್ಟ. ಇನ್ನೊಬ್ಬ ಕಡ್ಡಿ ಕೊಟ್ಟ. ಮೊದಲನೆಯವನು ನಳಿಗೆಗೆ ತಂಬಾಕು ತುಂಬಿ ಬೆಂಕಿ ಹಚ್ಚಿದ. ಮೂವರೂ ಅದನ್ನು ಸೇದಿದರು. ಸೇದುವಿಕೆ ಮುಗಿಯಿತು. ನಳಿಗೆಯವನು ಅದನ್ನು ಕೈಗೆತ್ತಿಕೊಂಡು ಅದರಲ್ಲಿನ ಬೂದಿಯನ್ನು ಕೊಡಹಿದ. ಈ ಬೂದಿಯಿಂದ ಸುಂದರವಾದ ಹೆಣ್ಣೊಬ್ಬಳು ಎದ್ದು ಬಂದಳು. ಈ ಮೂವರಲ್ಲಿ ಇವಳು ಯಾರಿಗೆ ಸೇರಬೇಕು?

(ಲಿಂಬಾ; ಸಿಯರ ಲಿಯೋನ್)

ಗ್ರಂಥಋಣ

Boscom, William R. *African Dilemma Tāles,* Monton Publishers, The Hague, Paris.

Dorson Ricnard M. (Ed)., *African Folklore*, Indiana University Press, London.

Finnegan, Ruth *Oral Literature in Africa*, Oxford University Press, London.

Ruth Finnegan *Limba Stories and Story Telling*, Oxford University Press, London.

Thompson, Hith, *The Folktale*. Holt, Rinehast and winston, Ine., New York.

ಜವರೇಗೌಡ, ದೇ. ಜಾನಪದ ಅಧ್ಯಯನ, ಡಿ. ವಿ. ಕೆ. ಮೂರ್ತಿ, ಮೈಸೂರು.

ಪರಮಶಿವಯ್ಯ, ಜೀ. ಶಂ. ಕನ್ನಡ ಜನಪದ ಕಥೆಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ರಾಚಪ್ಪ, ಬಿ. ಎಸ್. ಧಾರವಾಡ ಜಿಲ್ಲೆಯ ಜನಪದ ಕಥೆಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಜಾನಪದ ಒಂದು ಪ್ರತ್ಯೇಕ ವಿಷಯವಾಗಿ ಅಸ್ತಿತ್ವಕ್ಕೆ ಬಂದ ಮೊದಲ ಶತಮಾನದಿಂದೀಚೆ ನಡೆದ ಕಾರ್ಯವೆಂದರೆ ಜಾನಪದ ಸಂಗ್ರಹಣೆ. ಲೋಕದ ಎಲ್ಲ ಭಾಗಗಳಲ್ಲೂ ವಿವಿಧ ಪ್ರಮಾಣದಲ್ಲಿ ಈ ಕೆಲಸ ನಡೆದಿದೆ. ಈ ಸಂಗ್ರಹವನ್ನು ವ್ಯವಸ್ಥೆಗೊಳಿಸಿ, ವಿಶ್ಲೇಷಿಸಿ, ವರ್ಣಿಸುವ ಕಾರ್ಯ ಮಾತ್ರ ತೀರ ಈಚಿನದಾಗಿದೆ. ಈ ಕೆಲಸ ಮಾಡುವುದರಲ್ಲಿಯೇ ನಮಗೆ ಶಾಸ್ತ್ರೀಯ ವಿವೇಚನೆ ಬೇಕಾಗಿರುವುದು: ವೈಜ್ಞಾನಿಕ ದೃಷ್ಟಿಯು ಅಗತ್ಯವಿರುವುದು. ಜಾನಪದ ಅಧ್ಯಯನ ಕೇವಲ ಊಹಾತ್ಮಕ ಶಾಸ್ತ್ರವಲ್ಲ. ವಾಸ್ತವಿಕ ಆಧಾರಗಳ ಮೇಲೆ ನಿಲ್ಲಬಲ್ಲ ವಿಜ್ಞಾನ. ಜಾನಪದ ಸಾಮಗ್ರಿಯನ್ನು ಬಳಸಿಕೊಳ್ಳುವುದರಲ್ಲಿ, ಅಧ್ಯಯನದ ಫಲವಾಗಿ ನಿರ್ಣಯಗಳಿಗೆ ಬರುವಲ್ಲಿ ಇದು ವೈಜ್ಞಾನಿಕ ಸೂತ್ರಗಳಿಗೆ ಬದ್ಧವಾಗಿದೆ. ಸಮಗ್ರತೆ, ಸಮಂಜಸತೆ ಮತ್ತು ಮಿತವ್ಯಯಗಳು ಸಾಮಾನ್ಯವಾಗಿ ಆಧುನಿಕ ವಿಜ್ಞಾನದ ಮೂಲ ಸೂತ್ರಗಳಾಗಿವೆ. ಜಾನಪದ ಅಧ್ಯಯನ ಈ ಕಟ್ಟುಗಳಿಗೆ ಒಳಗಾಗಿ ಬೆಳೆಯುತ್ತಿದೆ. ಅಂತೆಯೇ ಅದಕ್ಕೆ ವೈಜ್ಞಾನಿಕ ಮಹತ್ವ ಪ್ರಾಪ್ತವಾಗಿದೆ.

ಹಾ. ಮಾ. ನಾಯಕ

[ಜಾನಪದ ಸ್ವರೂಪ, ಪು. 37–38]

ದಾಮೋದರ ಕೃಷ್ಣ ಪೊದುವಲ್

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಡಿಕೆ ಉದ್ಯಮ

೧೯೭೮ರಲ್ಲಿ ತಲೆದೋರಿದ್ದ ಅಡಿಕೆ ಗಂಭೀರ ಬೆಲೆ ಇಳಿತ ಸಮಸ್ಯೆಯು ದೀರ್ಘ ಹಾಗೂ ಸುವ್ಯವಸ್ಥಿತ ಅಧ್ಯಯನಕ್ಕೆ ಕರೆಯಿತ್ತಿತ್ತು. ಈಗ ಬೆಲೆಯ ಸಮಸ್ಯೆಗೆ ಪರಿಹಾರ ಕ್ರಮಗಳು ಕೈಗೊಳ್ಳಲ್ಪಟ್ಟಿರುವುದರಿಂದ ಸಮಸ್ಯೆಯ ಗಹನತೆ ತೀವ್ರವಾಗಿ ಕಡಿಮೆಯಾಗಿದೆ. ಅಡಿಕೆ ಧಾರಣೆಯು ಸಮಸ್ಯಾಪೂರ್ವ ಮಜಲಿನ ಸಮೀಪವರ್ತಿಯಾಗಿದೆ. ಪ್ರಚಲಿತ ಪರಿಹಾರ ಕ್ರಮಗಳನ್ನು ವಿವೇಚಿಸಿ ಅವು ಇನ್ನಷ್ಟು ಪ್ರಭಾವಿಯಾಗುವಂತೆ ಮಾಡಲು ಬೇಕಾಗುವ ಅಂಶಗಳನ್ನು ತಾಂತ್ರಿಕ ಹಿನ್ನೆಲೆಯ ಚೌಕಟ್ಟಿನಲ್ಲಿ ವಿವರಿಸುವುದು ಪ್ರಸ್ತುತ ಲೇಖನದ ಉದ್ದೇಶ. ಈ ದಿಶೆಯಲ್ಲಿ ಪೌಲೋಸ್ ಸಮಿತಿಯು ಸಲ್ಲಿಸಿದ ವರದಿಯಲ್ಲಿ ನಿವೇದಿತವಾದ ವಿಷಯಗಳು ಹಾಗೂ ಇನ್ನಿತರ ಕ್ಷೇತ್ರಗಳಿಂದ ಹೊರ ಬಂದ ವಿವರಗಳು ಅಧ್ಯಯನಕ್ಕೆ ಯೋಗ್ಯವಾದವುಗಳು. ಸಹಸ್ರ ಸಹಸ್ರ ಸಂಖ್ಯೆಯಲ್ಲಿ ನಿರುದ್ಯೋಗಿಗಳನ್ನು ಸೃಷ್ಟಿಸಿದ ಈ ಸಮಸ್ಯೆಗೆ ಕಾರಣಗಳು ಹಲವಾರು. ಕೆಲವು ಈ ಕೆಳಕಂಡವುಗಳು.

೧. ಭಾರತ–ಪಾಕ್ ಯುದ್ಧ
೨. ಬ್ಯಾಂಕಿನ ತಡೆ ನೀತಿಗಳು
೩. ಅಡಿಕೆಯ ಪ್ರಧಾನ ಉಪಭೋಗಿಗಳಾದ ಮಧ್ಯಮ ತರಗತಿಯ ‘ಕೊಳ್ಳುವ’ ಶಕ್ತಿಯ ಅಧಃಪತನ.
೪. ಹೆಚ್ಚುವರಿ ಉತ್ಪಾದನೆಯಿಂದ ತಲೆದೋರಿದ ಅಧಿಕ ನೀಡಿಕೆ
೫. ಸುವ್ಯವಸ್ಥಿತ ಮಾರುಕಟ್ಟೆ ಜಾಲ ಇಲ್ಲದಿರುವಿಕೆ.

ಹಿಂದೆಂದೂ ಸಂಭವಿಸದ ಈ ಇಳಿತ ಸಮಸ್ಯೆ (recession) ನಿಜಕ್ಕೂ ಗಾಬರಿ–ವಿಸ್ಮಯಕ್ಕೆಡೆ ಮಾಡಿಕೊಟ್ಟಿತು. ಮೇಲೆ ನಮೂದಿಸಿದ ೨, ೩ ಮತ್ತು ೫ ಅಂಶಗಳು ಬ್ಯಾಂಕು ನೆರವು ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ಹಾಗು ಮುಂದೆ ಮತ್ತೆ ಅದು ತಲೆದೋರದಂತೆ (ನಿವಾರಕ ಹಾಗೂ ಪ್ರತಿಬಂಧಕ) ಮಾಡುವುದರಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎಂಬುವನ್ನು ತಿಳಿಸುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯು ಕರ್ನಾಟಕದಲ್ಲಿ ಅಡಿಕೆ ಉತ್ಪಾದನೆಯಲ್ಲಿ ಅತ್ಯುನ್ನತ ಸ್ಥಾನವುಳ್ಳದ್ದು, ಅಲ್ಲದೆ, ಅದು ಬ್ಯಾಂಕಿಂಗ್ ಉದ್ಯಮದ ತವರು ಮನೆಯಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಈ ನಿಟ್ಟಿನಿಂದ, ಅಡಿಕೆ ಉದ್ಯಮ ರಂಗದಲ್ಲಿ ಜಿಲ್ಲೆಯ ಪಾತ್ರ ವಿವೇಚನೆ ನಡೆಸಬೇಕಾಗಿದೆ.

ಆರ್ಥಿಕ ಮಹತ್ವ

ಪ್ರಪಂಚದಲ್ಲಿ ಶೇ. ೧೦ರಷ್ಟು ಜನ ಅಡಿಕೆಯನ್ನು ಒಂದಲ್ಲ ಒಂದು ರೀತಿಯಲ್ಲಿ ಉಪಯೋಗಿಸುತ್ತಾರೆ. ಅಡಿಕೆ ವ್ಯವಸಾಯದಲ್ಲಿ ಸುಮಾರು ೫.೨೦ ಲಕ್ಷ ಸಂಸಾರ ವ್ಯವಸಾಯ ರಂಗದ ಕೆಲಸಗಾರರು ಸೇರಿದಂತೆ– (ಒಟ್ಟು ಸುಮಾರು ೨೫ ಲಕ್ಷ ಜನಗಳು) ನಿಯುಕ್ತವಾಗಿವೆ. ಅವರ ಜೀವನೋಪಾಯಕ್ಕೆ ಅಡಿಕೆ

ತ್ಯಂತ ಮೂಲಾಧಾರ. ಅಡಿಕೆಯ ಬಳಕೆ ಬಹು ಪ್ರಾಚೀನ ಕಾಲದಿಂದಲೂ ಭಾರತೀಯರಿಗೆ ಪರಿಚಿತ. ಭಾರತದಲ್ಲಿ ಅಡಿಕೆಯ ಒಟ್ಟು ಉತ್ಪಾದನೆ ಸುಮಾರು ೧.೬೫ ಲಕ್ಷ ಟನ್ನುಗಳಷ್ಟು; ಮತ್ತು ವ್ಯವಸಾಯಕ್ಕೊಳಪಟ್ಟ ಭೂಮಿ ಸುಮಾರು ೧.೮ ಲಕ್ಷ ಹೆಕ್ಟೇರುಗಳಷ್ಟು. ದೇಶದ ಒಟ್ಟು ಉತ್ಪಾದನೆಯಲ್ಲಿ ಬಹು ಪಾಲು ಕರ್ನಾಟಕ ಕೇರಳ ಪ್ರಾಂತ್ಯಗಳದ್ದು. ಪ್ರತಿ ಪ್ರಾಂತ್ಯವೂ ಒಟ್ಟು ಉತ್ಪಾದನೆಯ ಶೇ. ೩೮ರಷ್ಟು ಬೆಳೆಯುತ್ತದೆ.

ಪರದೇಶಗಳ ಬೇಡಿಕೆ

ಮುಖ್ಯವಾಗಿ ವೀಳ್ಯದೆಲೆ ಜತೆ ಜಗಿಯಲು ಉಪಯೋಗವಾಗುವ ಅಡಿಕೆಯು ಭಾರತವೊಂದಕ್ಕೆ ಸೀಮಿತವಾಗಿಲ್ಲ. ಮಲಯಾ, ಶ್ರೀಲಂಕಾ, ಪಾಕಿಸ್ತಾನ, ಫಿಲಿಪ್ಪೈನ್ಸ್, ಜಪಾನು, ಇಂಡೋಚೈನಾ, ಈಸ್ಟ್ ಇಂಡಿಯಾ ದ್ವೀಪಗಳು, ಅರೇಬಿಯಾ ಹಾಗೂ ಈಜಿಪ್ಟ್‌ಗಳಲ್ಲೂ ಇದರ ಉಪಯೋಗ ಕಂಡುಬರುತ್ತದೆ. ಇದರಿಂದ ವ್ಯಕ್ತವಾಗುವ ಅಂಶ: ಅನ್ಯದೇಶಗಳ ಉತ್ತಮ ಬೇಡಿಕೆ ಲಕ್ಷಣಗಳು ಅಡಿಕೆಗಿದೆ. ವರ್ಷಕ್ಕೆ ಸುಮಾರು ರೂ. ೪ ಲಕ್ಷ ವಿದೇಶೀ ವಿನಿಮಯ ಗಳಿಕೆ ಅಡಿಕೆಯದು. ಪ್ರಸ್ತುತ ಹಿನ್ನೆಲೆಯಲ್ಲಿ, ವಿಚಕ್ಷಣ ಮಾರುಕಟ್ಟೆಯ ವಿಧಾನಗಳನ್ನು ಅನುಸರಿಸಿದಲ್ಲಿ ಇನ್ನೂ ಉತ್ತಮ ಭವಿಷ್ಯವನ್ನು ನಿರೀಕ್ಷಿಸಬಹುದಾಗಿದೆ.

ರಫ್ತು ಮತ್ತು ಆಮದು

೧೯೭೦-೭೧ರ ಹೆಚ್ಚಿನ ಪ್ರಮಾಣದಷ್ಟು ಉತ್ಪಾದನೆ ದೇಶದಲ್ಲಿ ತೊಡಗಿದುದರಿಂದ ಸ್ಟೇಟ್ ಟ್ರೇಡಿಂಗ್ ಕಾರ್ಪೋರೇಷನ್ ಮುಖಾಂತರ ನಡೆಯುತ್ತಿದ್ದ ಅಡಿಕೆಯ ಆಮದು ನಿಂತಿತು. ಆದರೆ ಪ್ರಚಲಿತ ರಫ್ತು ಅಲ್ಪ. ೧೯೭೦-೭೧ರಲ್ಲಿ ಏರಿದ ಮಟ್ಟಕ್ಕೆ ರಫ್ತು ಏರಲು ಪ್ರಯತ್ನಿಸಬಹುದಾಗಿದೆ. ಈ ದಿಶೆಯಲ್ಲಿ ಬೆಳೆಗಾರರ ಸಂಘಗಳಿಗೆ ಹಾಗೂ ಸಹಕಾರ ಸಂಘಗಳಿಗೆ ಕಾಂಪ್ಕೋ ಇತ್ಯಾದಿ ಬ್ಯಾಂಕಿಂಗ್ ನೆರವು ಆವಶ್ಯಕ ಮಟ್ಟಗಳಲ್ಲಿ ದೊರೆಯುವುದು ಹಾಗೂ ಅದರ ಉಪಯೋಗ ವಿಚಕ್ಷತೆಯಿಂದ ನಡೆಯುವುದು ಗಣನೀಯವಾದುದು.

ಕೀನ್ಯಾ, ನೇಪಾಳ, ಏಡನ್, ಅರೇಬಿಯಾ ಹಾಗೂ ಬ್ರಿಟನ್ ಇವು ಮುಖ್ಯವಾಗಿ ಅಡಿಕೆಯನ್ನು ಆಮದು ಮಾಡಿಕೊಳ್ಳುವ ದೇಶಗಳು. ಇವುಗಳಲ್ಲಿ ವಾಸಿಸುವ ಭಾರತೀಯರು ಅಡಿಕೆಯ ಉಪಪದಾರ್ಥಗಳು. ಉಪಪದಾರ್ಥಗಳ ಬಗ್ಗೆ ಸರಿಯಾದ ಕ್ರಮಬದ್ಧ ಮಾಹಿತಿಯನ್ನು-ಯಾವ ದೇಶೀಯರು ಉಪಯೋಗ ಮಾಡುವರು, ವಯಸ್ಸು, ಪುರುಷ-ಸ್ತ್ರೀ ಇತ್ಯಾದಿ ಸಾಮಾಜಿಕ-ಆರ್ಥಿಕ ವಿಷಯಗಳು-ಸಂಗ್ರಹಿಸಬೇಕು.

ಮಹತ್ವ ಹಾಗೂ ವಿಶಿಷ್ಟತೆ

ಕೇರಳ ಪ್ರಾಂತ್ಯದ ಅಡಿಕೆ ವ್ಯವಸಾಯಕ್ಕೊಳಪಟ್ಟ ಭೂಮಿ ಕರ್ನಾಟಕ ಅಡಿಕೆ ವ್ಯವಸಾಯಕ್ಕೊಳಪಟ್ಟ ಭೂಮಿಗಿಂತ ಎರಡು ಪಾಲಿದ್ದರೂ ಅಲ್ಲಿಯ ಉತ್ಪಾದನೆ ಕರ್ನಾಟಕದ ಉತ್ಪಾದನೆಗಿಂತ ಕಡಿಮೆ. ಕೇರಳದ ಅತ್ಯಧಿಕ ಉತ್ಪಾದನೆಯ ಜಿಲ್ಲೆಯಾದ ಕಣ್ಣಾನೂರ್ ಹಾಗೂ ಕರ್ನಾಟಕದ ಅತ್ಯಧಿಕ ಉತ್ಪಾದನೆಯ ಜಿಲ್ಲೆಯಾದ ದಕ್ಷಿಣ ಕನ್ನಡ ನೈಸರ್ಗಿಕ ಗುಣಗಳಲ್ಲಿ ಭಿನ್ನವಾಗಿಲ್ಲವಾದರೂ ದಕ್ಷಿಣ ಕನ್ನಡದ ಉತ್ಪಾದನೆ ಗಣನೀಯವಾಗಿ ಹೆಚ್ಚಿನದು. ದಕ್ಷಿಣ ಕನ್ನಡದ ನೂರಾರು ಗ್ರಾಮೀಣ ಸಮುದಾಯಕ್ಕೆ ಅಡಿಕೆ ಕೃಷಿಯು ಆರ್ಥಿಕ ಬೆನ್ನೆಲುಬು. ಅಡಿಕೆ ವ್ಯವಸಾಯ ಭತ್ತ ಮತ್ತು ಬಾಳೆಯ ಕೃಷಿಯೊಂದಿಗೆ ಒಟ್ಟೊಟ್ಟಾಗಿ, ಒತ್ತೊತ್ತಾಗಿ ಸಾಗುತ್ತದೆ. ಮಲೆನಾಡು ಉತ್ತರ ಕನ್ನಡ ಹಾಗೂ ಕೇರಳದಂತೆ ದಕ್ಷಿಣ ಕನ್ನಡದ ಅನೇಕರಿಗೆ ಅಡಿಕೆಯ ಆದಾಯ ಬಹುಮುಖ್ಯ.

ಮೇಲ್ಮೈಲಕ್ಷಣ ವಾಯುಗುಣ ಹಾಗೂ ಪರಿಸರ

ಉತ್ತರದ ತುತ್ತತುದಿಯು ಕುಂದಾಪುರ, ದಕ್ಷಿಣದ ತುಟ್ಟತುದಿಯು ಮಂಗಳೂರು, ಪೂರ್ವದ ಪಶ್ಚಿಮ ಘಟ್ಟಗಳು, ಪಶ್ಚಿಮದ ಅರೇಬಿಯನ್ ಸಮುದ್ರ-ಇವು ದಕ್ಷಿಣ ಕನ್ನಡ ಜಿಲ್ಲೆಯ ಕ್ಷೇತ್ರ ಚೌಕಟ್ಟು. ಘಟ್ಟಗಳ

ಗರ್ಭದಲ್ಲಿ ಹಾಗೂ ಗುಡ್ಡಗಳ ತಗ್ಗಿನಲ್ಲಿ ಕಂಡು ಬರುವ ಪ್ರತಿಯೊಂದು ಹಳ್ಳಿಯಲ್ಲೂ ಅಡಿಕೆ ವ್ಯವಸಾಯ ಕಂಡುಬರುತ್ತದೆ. ಜಿಲ್ಲೆಯಲ್ಲಿ ಮಳೆ ಧಾರಾಕಾರವಾಗಿ ಬೀಳುತ್ತದೆ. ವರ್ಷಕ್ಕೆ ೨೦೦೦ಮಿ.ಮಿ.ನಷ್ಟು! ಭೂಮಿಯಲ್ಲಿ ಸಾರಜನಕ, ಫಾಸ್ಫೊರಿಕ್ ಆಸಿಡ್, ಪೊಟ್ಯಾಶ್, ಸುಣ್ಣ ಮತ್ತು ಮ್ಯಾಗ್ನೇಶಿಯಂಗಳ ಕೊರತೆಯುಳ್ಳ ಲ್ಯಾಟರೈಟ್, ಲ್ಯಾಟೆರೆಟಿಕ್ ಮಣ್ಣಿನ ನೆಲ ಪ್ರಕೃತಿದತ್ತ. ಒಟ್ಟಿನಲ್ಲಿ ಅವು ಅಲ್ಪ ಫಲವತ್ತಾಗಿದ್ದರೂ ಉತ್ತಮ ವ್ಯವಸಾಯ ಹಾಗೂ ಗೊಬ್ಬರ ವಿಧಾನಗಳಿಗೆ ಕ್ಷಿಪ್ರ ಚೈತನ್ಯ ತಾಳಬಲ್ಲವುಗಳು. ಅಡಿಕೆಗೆ ಈ ಭೂಮಿ ಸಹಜವಾಗಿ ಉತ್ತಮ. ಭಾರತದಲ್ಲಿ ಅಡಿಕೆ ನಿಯಮಿತ ವ್ಯವಸಾಯ ಕೈಕೊಳ್ಳಲ್ಪಟ್ಟರೆ, ಬೇರೆ ದೇಶಗಳಲ್ಲದು ಕಾಡಿನ ಸಸ್ಯವರ್ಗ ಜೀವಿ. ಬಹುತೇಕ ಕಣಿವೆಯೋಪಾದಿಯಲ್ಲಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಪುಲವಾಗಿ ದೊರಕುವ ಮೇಲ್ಕಂಡ ಮಣ್ಣಿಗೆ ತಕ್ಕ ಪ್ರಮಾಣದ ನೀರನ್ನು ಣಿಸಿದಲ್ಲಿ ಉತ್ತಮ ಬೆಳೆ ಶತಸ್ಸಿದ್ಧ. ಇಂತಹ ನೆಲದ ಗುಣವೇ ಜಿಲ್ಲೆಯ ಜನರನ್ನು ಉತ್ಸಾಹಿ ಹಾಗೂ ಶ್ರಮ ಜೀವಿಗಳನ್ನಾಗಿ ಮಾರ್ಪಡಿಸಿದೆ–ಮಾನವ ಪ್ರಕೃತಿಯ ಶಿಶು.

ಉದ್ಯೋಗಾವಕಾಶಗಳು

ಕಾಯಂ ಸಿಗದಿ ಅಥವಾ ಕರಾರು ರೀತ್ಯ ಆಯಾ ಕಾಲದಲ್ಲಿ ಕೆಲಸಗಾರರ ನೇಮಕವಾಗುವುದು. ಅಂತಹ ಕೆಲಸಗಾರರು ಹೆಚ್ಚಾಗಿ ವ್ಯವಸಾಯ ಅಥವಾ ವ್ಯವಸಾಯೇತರ ಕಾರ್ಯಗಳಲ್ಲಿ ಉದ್ಯುಕ್ತರಾದವರು. ಶಾಶ್ವತ ವೃತ್ತಿ ನಿರತರಲ್ಲದ, ಅಸಂಘಟಿತರಾದ ಈ ಕೆಲಸಗಾರರ ಅಂಕಿ ಅಂಶ ಜೋಡಣೆ ಕಷ್ಟಕರವೆಂಬುದು ಸ್ವಯಂ ವೇದ್ಯ. ಹಾಗಿದ್ದರೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ೭೫,೦೦೦ ಜನರು ಅಡಿಕೆ ವ್ಯವಸಾಯ ರಂಗದಲ್ಲಿರುವರು ಎಂದು ಅಂದಾಜಿಸಲಾಗಿದೆ.

ವೆಚ್ಚ ಬೆಲೆರಚನಾವ್ಯವಸ್ಥೆ

ಅಡಿಕೆ ಕೃಷಿಯು ಬಂಡವಾಳ ಸಾಂದ್ರತೆಯುಳ್ಳದಾಗಿದೆ. ಎಕರೆಗೆ ರೂ. ೨೦,೦೦೦ ದಿಂದ ರೂ. ೩೦.೦೦೦ (ನೆಲದ ವೆಚ್ಚ, ಸಮ ಮಟ್ಟಗೊಳಿಸುವುದು, ಸಸಿ ನೆಡುವುದು): ನಂತರ ಸಸಿಗಳು ಕಾಯಿ ಬಿಡುವವರೆಗೆ ನೋಡಿಕೊಳ್ಳುವುದು ಸುಮಾರು ೬–೮ ವರ್ಷಾವಧಿ (gestation period) ಆ ನಂತರ ವರ್ಷ ಒಂದಕ್ಕೆ ಒಂದು ಎಕರೆಗೆ ತಗಲುವ ಖರ್ಚು ರೂ. ೩.೦೦೦ದಿಂದ ರೂ. ೪.೦೦೦ವಾಗುತ್ತದೆ. ಗೊಬ್ಬರ, ರಾಸಾಯನಿಕ ದ್ರವ್ಯ, ಕಾಲುವೆ ತೋಡುವಿಕೆ, ಕಾಯಿ ಕೀಳುವುದು, ಬೇಲಿ ಹಾಕಿಸುವುದು, ಕಾಯುವುದು ಇತ್ಯಾದಿ. ಒಂದು ಎಕರೆಗೆ ಸರಾಸರಿ ೬ ಕ್ವಿಂ. ಅಡಿಕೆ ಉತ್ಪಾದನೆಯಾಗುತ್ತದೆ. ರೂ. ೭೦೦ರಿಂದ ರೂ. ೧,೦೦೦ ಒಂದು ಕ್ವಿಂಟಾಲಿನ ಉತ್ಪಾದನಾ ವೆಚ್ಚ.

ಗಣನೀಯ ಆದಾಯ

ಬೇರೆ ಪ್ರಾಂತಗಳ ಅಡಿಕೆಯ ಅನುಭೋಗದಿಂದ ವರ್ಷವೊಂದಕ್ಕೆ ಕೇರಳ–ಕರ್ನಾಟಕಗಳು ಸುಮಾರು ರೂ. ೫೫ ಕೋಟಿ ಗಳಿಸುತ್ತವೆ. ಅಡಿಕೆ ಬೆಲೆ ಬಿಂಜರಿತ ಸಂಭವಿಸಿದಾಗ್ಗ ಇದು ರೂ. ೨೫ ಕೋಟಿಗಿಳಿದಿತು.

ಮಾರುಕಟ್ಟೆಯ ರಚನೆ–ವಿಧಾನ

ರಾಜ್ಯದ ಅಡಿಕೆ ಉತ್ಪಾದನೆಯಲ್ಲಿ ಜಿಲ್ಲಾವಾರು ದಕ್ಷಿಣ ಕನ್ನಡ ಜಿಲ್ಲೆಯದೆ ಸಿಂಹ ಪಾಲು. ಉತ್ತಮ ಸಾರಿಗೆ ಸಂಪರ್ಕ ಹಾಗೂ ಇನ್ನಿತರ ಅನುಕೂಲತೆ ಹೊಂದಿದ ಮಂಗಳೂರು ಒಂದು ಮಹತ್ವದ ಅಡಿಕೆಯ ಮಾರುಕಟ್ಟೆ. ಕರ್ನಾಟಕದಲ್ಲಿ ಅತ್ಯಧಿಕ ಅಡಿಕೆ ಖರೀದಿಯ ಮಾರುಕಟ್ಟೆ ಮಂಗಳೂರು. ಹಾಗಿದ್ದರೂ, ಮಾರುಕಟ್ಟೆಯ ವಿಧಾನದಲ್ಲಿ ಕೆಲವು ಮಾರ್ಪಾಡುಗಳನ್ನು, ಸುಧಾರಣೆಯ ದೃಷ್ಟಿಯಿಂದ ತರುವುದು ಅತ್ಯಗತ್ಯ. ಪೂರ್ವಯೋಜನೆಯಿಲ್ಲದೆ ಮಂಗಳೂರು ನಗರ ರಚಿತವಾಗಿದ್ದರೂ ಈಗ ಕ್ಷಿಪ್ರಪ್ರಗತಿ ಹೊಂದುತ್ತಲಿದೆ. ಬೃಹತ್ ರಾಸಾಯನಿಕ ಗೊಬ್ಬರ ಕಾರ್ಖಾನೆ ನವಮಂಗಳೂರು ಬಂದರು ಯೋಜನೆ, ಕುದುರೆಮುಖ ಯೋಜನೆ ಹಾಸನ–ಮಂಗಳೂರು ರೈಲು ಯೋಜನೆ. ಇನ್ನಿತರ ಆರ್ಥಿಕ ಸುಧಾರಣೆಗಳು ಮಂಗಳೂರಿಗೆ ಹೊಸ ಜೀವ ತುಂಬುವುದರ ಮೂಲಕ ಜಿಲ್ಲೆಯ ಉನ್ನತಿಗೆ ನೆರವಾಗಲಿದೆ.

ಕೇರಳ ಕರ್ನಾಟಕಗಳು ಅಡಿಕೆಯ ತವರಾಗಿದ್ದರೂ ಕಟ್ಟು ಕಡೆಯ ಬೆಲೆಗಳು ಅಲ್ಲಿ ನಿಷ್ಕರ್ಷೆಯಾಗುವುದಿಲ್ಲ. ಗಣನೀಯ ಪ್ರಮಾಣದ ಮಾಲು ಈ ಪ್ರಾಂತ್ಯಗಳಿಂದ ಹೋಯಾಯಿತು. ನಾಗಪುರ ಕಲ್ಕತ್ತಾಗಳಿಗೆ ಸಾಗುತ್ತದೆ. ಅಲ್ಲಿ ಬೆಲೆ ನಿಗದಿಯಾಗುತ್ತದೆ. ಆದ್ದರಿಂದ ಕೇರಳ, ಕರ್ನಾಟಕಗಳು ಉಪ ಪ್ರಧಾನ ಮಾರುಕಟ್ಟೆಗಳು. ಬಿಡ್ ಪದ್ಧತಿ ಮೂಲಕ ಈ ಉಪ ಪ್ರಧಾನ ಮಾರುಕಟ್ಟೆಗಳಲ್ಲಿ ಅಡಿಕೆ ಖರೀದಿ ನಡೆಯುತ್ತದೆ.

ಮಾರುಕಟ್ಟೆ ಸಮಸ್ಯೆ-ಬ್ಯಾಂಕು ನೆರವು ಅಗತ್ಯ

ಮಂಡಿ ದಳ್ಳಾಳಿ ವರ್ತಕರು ಬೆಳೆಗಾರರು ಬೆಳೆಯನ್ನು ಮಂಡಿಗೆ ತರುವರು ಎಂಬ ಆಧಾರದ ಮೇಲೆ ಬೆಳೆಗಾರರಿಗೆ ಸಾಲ ನೀಡುವರು.* ಈ ವ್ಯವಹಾರ ಪದ್ಧತಿ ಹೆಚ್ಚಾಗಿ ಎಲ್ಲೆಲ್ಲೂ ಪ್ರಚಲಿತ. ಹಿಂದಿನ ಬೆಲೆಯ ಹಿಂಜರಿತಕ್ಕೆ ಕಾರಣ ವ್ಯಾಪಾರ ಸಂಬಂಧ ಸಾಲ ನೀತಿ. ಇದು ಸ್ವಲ್ಪ ಮಟ್ಟಿಗೆ ನಿಜ. ಅಧಿಕ ಬೇಡಿಕೆಗೆ ನೀಡಿಕೆಯನ್ನು ವ್ಯವಸ್ಥಾಪಿಸಲು ಕೈಗೊಂಡ. ಭತ್ತದ ಗದ್ದೆಗಳನ್ನು ಅಡಿಕೆ ತೋಟಗಳಾಗಿ ಪರಿವರ್ತಿಸುವುದರಲ್ಲಿ ಅದು ಸಹಾಯವಾಯಿತು. ಅಧಿಕ ಉತ್ಪಾದನೆ ಪರಿಣಾಮವಾಗಿ ಮಾರುಕಟ್ಟೆ ನಿರ್ದೇಶಿತ ಉತ್ಪಾದನೆ ಮೇಲೆ ಭಾರವಾಯಿತು. ಈ ಅನುಭವದ ಪಾಠಗಳು ಮುಖ್ಯವಾಗಿ ಎರಡು: ಉತ್ಪಾದನಾ ಪೂರ್ವದಲ್ಲಿ ಮಾರುಕಟ್ಟೆಯ ಬೇಡಿಕೆಯನ್ನು ಗಮನಿಸುವುದು. ಹಾಗೂ ಉತ್ಪಾದನಾನಂತರ ಕ್ಲಿಷ್ಟ ಕಾಲದಲ್ಲಿ ವಿತರಣೆ ಕೈಗೊಳ್ಳುವುದು. ಎರಡನೆ ಕಾರ್ಯ ಕೈಗೊಳ್ಳುವುದಕ್ಕೆ ಕೇರಳ, ಕರ್ನಾಟಕ ಸರ್ಕಾರಗಳು ಶಿಖರವಾದ ಕ್ಯಾಂಪ್ಕೋ ಪ್ರಯತ್ನಿಸುತ್ತಿದೆ. ಗಣನೀಯ ಪ್ರಮಾಣದಲ್ಲಿ ಅಡಿಕೆಯನ್ನು ಖರೀದಿ ಮಾಡಿ ಸಂಗ್ರಹಿಸಿ, ತಕ್ಕ ಕಾಲದಲ್ಲಿ ವಿಕ್ರಯಿಸುವುದು ಅದರ ಕಾರ್ಯಕ್ರಮವಾಗಿದೆ. ಈಗ ಅದಕ್ಕೆ ಸಂಬಂಧಿಸಿದ ಇತರ ಕಾರ್ಯಕ್ರಮಗಳೂ ಇದರಲ್ಲಿ ಸಮಾವೇಶಗೊಂಡಿವೆ. ಸಮಸ್ಯೆಯನ್ನರಿಯಲು ಸಂಶೋಧನೆಗಳೂ ಸಾಗುತ್ತಿವೆ.

ಸುಲಭವಾಗಿ ದೊರಕಿದ ಸಾಲ ಸಮಸ್ಯೆಗೆ ಕಾರಣವಾಯಿತು ಎಂಬುದು ನಿಜ. ಆದರೆ ಸಾಲ ವ್ಯವಹಾರದಲ್ಲಿ ಅನಿವಾರ್ಯ ಹಾಗೂ ಅತ್ಯಾವಶ್ಯಕ ಅದು ಹೇಗೆ ಹಾಗೂ ಯಾಕೆ ಉಪಯೋಗವಾಗುತ್ತದೆ ಎಂಬುದನ್ನು ಅವಲಂಬಿಸಿ ಯಾವುದನ್ನು ವಿಧಿ ಪ್ರಕಾರ ನಿರ್ಧರಿಸಬಹುದು. ಉದ್ದೇಶಕ್ಕೆ ಸಾಲ ಅವಶ್ಯಕವೇ ಎಂಬುದನ್ನು ಪ್ರಪ್ರಥಮ ನಿರ್ಧರಿಸಿ ಸಾಲ ಬೇಕೆಂದಲ್ಲಿ ಅದಕ್ಕಾಗಿ ಪ್ರಯತ್ನ ನಡೆಸಬೇಕು. ಸಾಲ ತೆಗೆದುಕೊಂಡ ತರುವಾಯವೂ ಅದನ್ನು ನಿರ್ದಿಷ್ಟ ಉದ್ದೇಶಕ್ಕೆ ಬಳಸಬೇಕು. ಉತ್ಪಾದನಾ ಮತ್ತು ವಿತರಣಾ ವ್ಯವಹಾರಗಳ ಸಮಸ್ಯೆಗಳನ್ನು ಸಾಲ ಹಣ ನಿವಾರಿಸುತ್ತದೆ. ಉತ್ಪಾದಕರಿಗೆ ಉತ್ಪನ್ನ ಕೈಗೆ ಬರುವ ಮುನ್ನ, ಸಾಲ ದೊರೆತಲ್ಲಿ ಅವರ ಶೋಷಣೆ ನಿಲ್ಲುತ್ತದೆ. ಇಲ್ಲವಾದರೆ ಮಧ್ಯವರ್ತಿಗಳು ಹಾಗೂ ಲೇವಾದೇವಿ ವರ್ತಕರು ಬಡ ನಿರುಪಾಯರಾದ ಉತ್ಪಾದಕರನ್ನು ಸುಲಿಗೆ ಮಾಡುವರು.

ಅಡಿಕೆ ಉತ್ಪನ್ನವು ಇತರ ವ್ಯವಸಾಯ ಉತ್ಪನ್ನದಂತೆ ನಿರ್ದಿಷ್ಟ ಕಾಲದ ಉತ್ಪನ್ನ. ಆದರೆ ಎಲ್ಲಾ ಕಾಲದಲ್ಲೂ ಬೇಡಿಕೆಯುಳ್ಳದು. ಇಂಥ ಪರಿಸರ, ಶೋಷಣೆಗೆ ಹಾದಿ ಮಾಡಿ ಕೊಡುವುದರಲ್ಲಿ ಅಗ್ರಗಣ್ಯ. ಜಿಲ್ಲೆಯಲ್ಲಿರುವ ವಾಣಿಜ್ಯ ಬ್ಯಾಂಕುಗಳು, ಸಹಕಾರಿ ಸಾಲ ಸಂಸ್ಥೆಗಳು ಇತ್ತ ಗಮನ ಹರಿಸಬೇಕು. ಅದಕ್ಕೂ ಮೊದಲು ಉತ್ಪಾದಕರು ಮೇಲೆ ನಮೂದಿತ ಅಂಶಗಳನ್ನು ಮನಗಾಣಬೇಕು. ಇಲ್ಲವಾದರೆ, ತಮ್ಮ ಗೋರಿ ತಾವೇ ತೋಡಿಕೊಂಡಂತಾಗುವುದು. ಏಕೆಂದರೆ ಅಡಿಕೆ ಉದ್ಯಮವೀಗ ಏಕಸ್ವಾಮ್ಯ ಉಳ್ಳದ್ದಲ್ಲ. ಪೈಪೋಟಿ ರಂಗದಲ್ಲೊಂದಾದ ಉದ್ಯಮವೀಗ.

ಬ್ಯಾಂಕುಗಳಲ್ಲಿ ಮಾರುಕಟ್ಟೆಯ ಪ್ರಜ್ಞೆ

ಉತ್ಪಾದನಾ ಸಾಲ ಅನೇಕ ಕಾರಣಗಳಿಗಾಗಿ ಬೇಕಾಗಿ ಬರುತ್ತದೆ. ಉತ್ತಮ ಬೆಳೆ ತೆಗೆಯಲು ಫಲವತ್ತಾದ ಭೂಮಿ ಧಾರಾಳ ನೀರು ನೆರಳು ಹೇಗೆ ಮುಖ್ಯವೋ ಹಾಗೆ ಬೆಳೆಗೆ ತಗಲುವ ರೋಗಗಳ ನಿವಾರಣೆಗೆ ರಾಸಾಯನಿಕ ದ್ರವ್ಯಗಳ ಸಂಪಾದಿಸುವಿಕೆ, ಗೊಬ್ಬರ ಬಳಸುವುದೂ ಮುಖ್ಯ. ಬ್ಯಾಂಕುಗಳ ನೆರವು ಇಲ್ಲಿ ವರವಾಗುತ್ತದೆ.

ಮಧ್ಯವರ್ತಿಗಳಿಂದ ಸಂಭವಿಸುವ ಬೆಳೆಗಾರರ ಶೋಷಣೆ ಸಾಲ-ಚಕ್ರವಲ್ಲಿ ಸಿಲುಕಿ ತೊಳಲುವ-ತಡೆಗಟ್ಟಲು ಸಹಕಾರಿ ಮಾರಾಟ ಸಂಸ್ಥೆಗಳು ಅಡಿಕೆಯನ್ನು ತಮ್ಮ ಮಾರಾಟ ಉತ್ಪನ್ನಗಳ ಸಾಲಿಗೆ ಸೇರಿಸಿಕೊಂಡವು. (೧೯೯೯ರಿಂದ) ಅವುಗಳ ಮಾರುಕಟ್ಟೆ ಕಾರ್ಯಗಳು ಈ ಕೆಳಕಂಡಂತವು:

೧. ದಲ್ಲಾಳಿ ವಿಕ್ರಯ
೨. ನೇರ ಕೊಳ್ಳುವಿಕೆ
೩. ಪರಿಷ್ಕರಣ
೪. ಸಂಗ್ರಹಣೆ
೫. ದರ್ಜೆಗಳ ವಿಂಗಡಣೆ
೬. ಅತ್ಯಗತ್ಯ ಸಾಮಗ್ರಿ/ಗೊಬ್ಬರಗಳ ಪೂರೈಕೆ
೭. ರೈತರಿಗೆ ಅಭಿಪ್ರಾಯ ಸೂಚನೆ-ಇತ್ಯಾದಿ

ಬ್ಯಾಂಕುಗಳು ನಿರ್ವಿಘ್ನತೆಯಿಂದ ಈ ಮೇಲಿನ ಕಾರ್ಯಮಗ್ನ ಸಹಕಾರಿ ಸಂಸ್ಥೆಗಳಿಗೆ ಸಹಾಯಿಸಬಹುದಾಗಿದೆ. ಪ್ರಪಂಚದ ಬ್ಯಾಂಕಿಂಗ್ ವಲಯದಲ್ಲಿ ಮಾರುಕಟ್ಟೆ ವ್ಯವಸ್ಥಾಪನ ಈಗ ಭರದಿಂದ ಬರುತ್ತಲಿದೆ. ನೀಡುವ ಸಾಲಕ್ಕೂ ಉತ್ಪನ್ನದ ವಿಕ್ರಯಕ್ಕೂ ಸಂಬಂಧ ಕಲ್ಪನೆ ಆಗ ಸಾಧ್ಯ. ಬ್ಯಾಂಕು ಸಾಲ ಸುರಕ್ಷಿತ ಹಾಗು ಭದ್ರ ಮತ್ತು ಉದ್ದೇಶ ಸಾಧನೆ.

ಅಡಿಕೆಯ ವಿವಿಧ ಉಪಯೋಗ ಸಾಧ್ಯತೆಗಳು

ಸಾಧಾರಣವಾಗಿ ಬೆಲೆಯ ಏರಿಳಿತ ಉತ್ಪನ್ನದ ಬೇರೆ ಉಪಯೋಗಗಳನ್ನು ಅನ್ವೇಷಿಸಲು ಕಾರಣವಾಗುತ್ತದೆ. ಭಾರತದಲ್ಲಿ ಈಗ ಕಂಡು ಬರುವ-ಟಿವಿ, ಅಟೊಮೊಬೈಲ್ ಮತ್ತು ಟೈರು ಉದ್ಯಮಗಳಲ್ಲಿ ಬೆಲೆಯ ಏರಿಳಿತ ವಿವಿಧ ಉಪಯೋಗ ಸಾಧ್ಯತೆಗಳನ್ನು ತೀವ್ರವಾಗಿ ಶೋಧಿಸಲು ಆಗುಮಾಡಿಕೊಟ್ಟಿದೆ. ದೇಶದ ಅನೇಕ ಸಂಶೋಧನಾಗಾರಗಳು ಈ ನಿಟ್ಟಿನಲ್ಲಿ ಕಾರ್ಯಮಗ್ನವಾಗಿವೆ.

ಭವಿಷ್ಯದತ್ತ

ದಕ್ಷಿಣ ಕನ್ನಡ ಜಿಲ್ಲೆಯು ಬ್ಯಾಂಕು ಉದ್ಯಮದ ತವರು. ಉತ್ಪಾದನಾ ಹಂತದಿಂದ ಮೊದಲುಗೊಂಡು ವಿಕ್ರಯ ಹಂತದವರೆಗೂ ಅಡಿಕೆ ಬೆಳೆಗೆ ಬ್ಯಾಂಕು ನೆರವು ಅಗತ್ಯವಿದೆ. ಅವು ಪರಸ್ಪರ ಸಹಕಾರಿ. ಮಂಗಳೂರಿನ ನವ ಬಂದರು ದೇಶದ ಪ್ರಮುಖ ಮಾರುಕಟ್ಟೆಗಳಲ್ಲಾದ ಕಲ್ಕತ್ತಾ, ಬೊಂಬಾಯಿಗಳನ್ನು ಹತ್ತಿರ ತಂದಿದೆ. ಸಂಪರ್ಕವನ್ನು ಇನ್ನೂ ಕ್ಲಿಪ್ತಗೊಳಿಸಲು ಗಗನಗಾಮಿಗಳಿವೆ. ಮಾರುಕಟ್ಟೆಯ ಏರಿಳಿತ ಗಮನಿಸಲು, ತಕ್ಕ ಕಾರ್ಯಕ್ರಮ ರೂಪಿಸಲು, ಪ್ರಯತ್ನಿಸಲು ಎಲ್ಲಾ ಸೌಕರ್ಯಗಳು ಇವೆ: ಸೌಕರ್ಯಗಳನ್ನು ಬಳಸುತ್ತಾ, ಜಿಲ್ಲೆಯು ಉಳಿದ ಭಾಗಗಳಿಗೆ ಮಾರ್ಗದರ್ಶಿಯಾಗಬಹುದಾಗಿದೆ.

ಅಡಕೆಯ ತವರೂರು ಮಲಯ. ಪ್ರಪಂಚದಲ್ಲಿ ಉಷ್ಣವಲಯ ಮತ್ತು ಸಮಶೀತೋಷ್ಣವಲಯದ ಕೆಲವು ನಿರ್ದಿಷ್ಟ ಪ್ರದೇಶಗಳಲ್ಲಿ ಇದು ಬೆಳೆಯುತ್ತದೆ. ಏಷ್ಯ ಆಫ್ರಿಕಗಳ ಆಗ್ನೇಯದಲ್ಲಿ ಅಡಕೆ ಮರಗಳು ಕಂಡು ಬರುತ್ತವೆ. ಚೀಣದ ಕ್ವಾನ್‌ಟಂಗ್ ಮತ್ತು ಯುನಾನ್ ಪ್ರಾಂತಗಳಲ್ಲೂ ಜಪಾನಿನ ಅಮೋಶಿಮಾ ದ್ವೀಪದಲ್ಲೂ ಈ ಮರಗಳನ್ನು ಸೌಂದರ್ಯಕ್ಕೋಸ್ಕರ ಬೆಳೆಯುತ್ತಾರೆ. ಮಲಯ, ಸಿಂಗಪೂರ್, ಸಿಲೋನ್‌ಗಳಲ್ಲೂ ಚೆನ್ನಾಗಿ ಬೆಳೆಯುತ್ತದೆ. ಸಿಂಹಳದ ಸಬರ್ಗಮುವ ಪ್ರಾಂತದ ಕಾಡಿನಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. ಕಗಲ್ಲ ಜಿಲ್ಲೆಯಲ್ಲಿ ಅಡಕೆ ತೋಟಗಳು ಹೇರಳವಾಗಿವೆ. ಫಿಲಿಪ್ಪೈನ್ಸ್‌ನಲ್ಲಿ ಕೆಲವು ಜಾತಿಯ ಅಡಕೆ ಮರಗಳು ಮಾತ್ರ ಸ್ವಾಭಾವಿಕವಾಗಿ ಬೆಳೆಯುತ್ತವೆ. ಆದರೆ ಇಂಡಿಯಾ ದೇಶದಲ್ಲಿ ಮಾತ್ರ ಅಡಕೆ ಕೃಷಿ ಉನ್ನತ ಸ್ಥಾನ ಪಡೆದಿದೆ.

—ಕನ್ನಡ ವಿಶ್ವಕೋಶ
ಸಂಪುಟ ಒಂದು, ಪುಟ ೨೧೨

ಅನು : ಪ್ರಧಾನ್ ಗುರುದತ್ತ

ನಡುವಣ ಅನಾಮಿಕರು

ಟೆಹೆರಾನಿನಲ್ಲಿರುವ ಸೋವಿಯೆಟ್ ರಾಯಭಾರ ಕಛೇರಿಯಲ್ಲಿನ ಅಥವಾ ಕ್ರಿಮಿಯಾ ಪ್ರಾಂತ್ಯದ ಲಿವೇಡಿಯಾದಲ್ಲಿರುವ ರಷ್ಯಾದ ಝಾರ್ ದೊರೆಗಳ ಹಿಂದಿನ ಅರಮನೆಯಲ್ಲಿನ ಅಥವಾ ಪೋಟ್ಸ್‌ಡ್ಯಾಮಿನ ಬಳಿಯಿರುವ ಸೆಸಿಲಿಯೆನ್ ಹಾಫ್‌ನಲ್ಲಿನ ಭವ್ಯ ಸಭಾಂಗಣ. ಕೋಣೆಯ ಮಧ್ಯದಭಾಗದಲ್ಲಿ ಹಾಕಿರುವ, ಸುಮಾರು ಮುವ್ವತ್ತು ಮಂದಿ ಅಥವಾ ಅದಕ್ಕಿಂತಲೂ ಹೆಚ್ಚು ಮಂದಿಗೆ ಸ್ಥಳಾವಕಾಶವನ್ನು ಕಲ್ಪಿಸಿಕೊಡುವಷ್ಟು ದೊಡ್ಡದಾಗಿರುವ ದುಂಡು ಮೇಜಿನ ಸುತ್ತಲೂ ಚರ್ಚಿಲ್, ರೂಸ್‌ವೆಲ್ಟ್ ಮತ್ತು ಸ್ಟ್ಯಾಲಿನ್ ಹಾಗೂ ಅವರ ಬದಿಯಲ್ಲಿ ಅವರ ಕೆಲವರು ಸಚಿವರು, ಮಿಲಿಟರಿ ದಂಡನಾಯಕರು ಮತ್ತು ಅಧಿಕಾರಿಗಳು ಕುಳಿತಿದ್ದಾರೆ. ತಮ್ಮತಮ್ಮ ರಾಷ್ಟ್ರಗಳಲ್ಲಿ ಅವರವೆಲ್ಲ ದೊಡ್ಡದೊಡ್ಡ ಹೆಸರುಗಳು. ಅವರುಗಳ ನಡುವೆ ಹಾಗೂ ಆಯಾ ರಾಷ್ಟ್ರಗಳ ಮುಖ್ಯರ ಬದಿಯಲ್ಲಿ ದುಭಾಷಿಗಳನ್ನು ತುರುಕಲಾಗಿದೆ: ಅನಾಮಿಕರೂ, ಎದ್ದು ಕಾಣದಿರುವಂಥವರೂ ಆದ ಈ ವ್ಯಕ್ತಿಗಳತ್ತ ಆಗಿಂದಾಗ್ಗೆ ಸಭೆಯ ಸಂಪೂರ್ಣ ಗಮನ ಕೇಂದ್ರೀಕೃತವಾಗುತ್ತಿದೆ.

ಇವರ ಹಾಜರಿ ಹಾಗೂ ಕೌಶಲಗಳ ನೆರವಿಲ್ಲದೆ ಹೋಗಿದ್ದಲ್ಲಿ, ಪೇಚಿನ ಮೌನದ ಸನ್ನಿವೇಶದಲ್ಲಿ ರಾಷ್ಟ್ರೀಯ ನಾಯಕರು ಬಹುಶಃ ಒಬ್ಬರ ಮುಖವನ್ನೊಬ್ಬರು ನೋಡುತ್ತ ಕುಳಿತುಕೊಂಡಿರಬೇಕಾಗುತ್ತಿತ್ತೋ! ಅಂಥ ಈ ಮಧ್ಯವರ್ತಿಗಳು ಯಾರು? ರಾಷ್ಟ್ರದ ರಹಸ್ಯಗಳನ್ನು, ಎಂದಾದರೂ ಅವುಗಳನ್ನು ಬಿಟ್ಟುಕೊಟ್ಟಲ್ಲಿ, ಜಗತ್ತಿನ ಉಳಿದ ಭಾಗಕ್ಕೆ ತಿಳಿಸುವುದಕ್ಕಿಂತಲೂ ಬಹಳ ಮೊದಲೇ ಕೇಳಿಕೊಳ್ಳುವ ವಿಶೇಷ ಅಧಿಕಾರವನ್ನು ಹೊಂದಿದ್ದಾರೆ, ಉಚ್ಚಮಟ್ಟದ ಈ ದುಭಾಷಿಗಳು. ಅಂತರ-ರಾಷ್ಟ್ರೀಯ ಮಟ್ಟದ ಮಾತುಕತೆಗಳ ವ್ಯವಸ್ಥೆಯ ಪ್ರಮುಖ ಅಂಗವಾಗಿರಬೇಕಾದರೆ ಅವರಿಗೆ ವಿಶಿಷ್ಟ ಪ್ರತಿಭೆ ಮತ್ತು ಕೌಶಲಗಳು ಅಗತ್ಯವಾಗುತ್ತವೆ; ಅವರಿಲ್ಲದೆ ಯಾವುದೇ ಅರಿವೂ ಏರ್ಪಡುವುದಿಲ್ಲ; ಮಾತುಕತೆಗಳು ಮುರಿದು ಬೀಳುತ್ತವೆ. ಅಸಾಮಾನ್ಯ ವಿವೇಚನೆ ಮತ್ತು ಸುಜತ್ವ ಅಥವಾ ಪ್ರಾಮಾಣಿಕತೆ ಅವರಿಗೆ ಅಗತ್ಯವಾಗುತ್ತದೆ. ದುಭಾಷಿಗಳು ತಾವು ಕೇಳಿದ್ದನ್ನಾಗಲೀ ಕಂಡದ್ದನ್ನಾಗಲೀ, ಯಾವುದೇ ಪರಿಸ್ಥಿತಿಯಲ್ಲೂ ಬಿಟ್ಟು ಕೊಡುವುದಿಲ್ಲವೆಂದು ನಂಬುವುದು ಅಗತ್ಯವಾಗುತ್ತದೆ. ಅವರು ವಿಚಿತ್ರ, ಎಚ್ಚರದಿಂದಿರಬೇಕಾಗುತ್ತದೆ. ಅಷ್ಟೇ ಅಲ್ಲ, ಸಾಂದರ್ಭಿಕ ಸಂಭಾಷಣೆಯಲ್ಲಿಯೂ ಅಪಾಯರಹಿತವಾದಂಥ ಮಾತುಗಳನ್ನೂ ಹೇಳದಿರುವಂಥ ವಿಚಿತ್ರ ಎಚ್ಚರದಿಂದ ಇರಬೇಕಾಗುತ್ತದೆ. ಏಕೆಂದರೆ ರಾಷ್ಟ್ರನಾಯಕರ ರಹಸ್ಯ ಸಂಭಾಷಣೆಗಳಲ್ಲಿ ಇಂಥ ಸಂಗತಿಗಳು ನಡೆದುವೆಂದು ವ್ಯಾಖ್ಯಾನಿಸಬಹುದಂಥ ಅಪಾಯ ಇರುತ್ತದೆ.

ಎರಡು ಭಾಷೆಗಳ ಬಗೆಗಿನ ಪರಿಚಯವಿರುವಷ್ಟರಿಂದಲೇ ಅವರು ಉತ್ತಮ ದುಭಾಷಿಗಳಾಗಿ ಬಿಡುತ್ತಾರೆಂದು ಭಾವಿಸುವುದು ತಪ್ಪಾಗುತ್ತದೆ. ಅವರು ದ್ವಿ-ಸಂಸ್ಕೃತಿಶೀಲರೂ ಆಗಿರಬೇಕಾಗುತ್ತದೆ. ತಮ್ಮ ಕೆಲಸವನ್ನು ಚೆನ್ನಾಗಿ ಮಾಡುವ ದೃಷ್ಟಿಯಿಂದ ಅವರು ಸಹಜವಾಗಿ ಹಾಗೂ ಯಾವುದೇ ಪ್ರಯತ್ನವಿಲ್ಲದೆ ಎರಡೂ ಭಾಷೆಗಳಲ್ಲಿ ಯೋಚಿಸುತ್ತಾರೆ: [illegible]ವಾಗದಿದ್ದರೂ, ಸಹಜಸ

ವೆನ್ನಬಹುದಾದಂಥ ಉಚ್ಚಾರಣೆಯೊಂದಿಗೆ ಎರಡೂ ಭಾಷೆಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ. ಒಂದು ಭಾಷೆಯಲ್ಲಿ ಏನನ್ನಾದರೂ ಹೇಳತೊಡಗಿದಾಗ, ಬಹುಮಟ್ಟಿಗೆ ಅನೈಚ್ಛಿಕ ಪ್ರತಿಕ್ರಿಯೆಯೆಂಬಂತೆ, ದುಭಾಷಿ ತನ್ನ ಮನಸ್ಸಿನಲ್ಲಿಯೇ ಅದನ್ನು ಇನ್ನೊಂದು ಭಾಷೆಗೆ ಹಾಕತೊಡಗುತ್ತಾನೆ: ಅರ್ಥವನ್ನು ವರ್ಗಾಯಿಸುವಷ್ಟೇ ಪ್ರಮಾಣದಲ್ಲಿ ಶಬ್ದಗಳನ್ನು ವರ್ಗಾಯಿಸುವುದಿಲ್ಲ; ಏಕೆಂದರೆ, ಇಲ್ಲಿ ಮುಖ್ಯವಾಗಿರುವುದು ಅರ್ಥವೇ ಹೊರತು ಶಬ್ದವಲ್ಲ.

ಈ ಮಟ್ಟದ ಪ್ರಾವೀಣ್ಯವನ್ನು ಗಳಿಸುವುದಕ್ಕೆ ವಿಶಿಷ್ಟ ಭಾಷೆಯೊಂದರಲ್ಲಿನ ಅಥವಾ ದುಭಾಷಿ ಶಾಲೆಯೊಂದರಲ್ಲಿನ ತೀವ್ರ ತರಬೇತಿ ಅಥವಾ ಶಿಕ್ಷಣ ಮಾತ್ರವೇ ಸಾಕಾಗುವುದಿಲ್ಲ. ಎರಡೂ ಭಾಷೆಗಳ ಬಗೆಗಿನ ದೀರ್ಘಕಾಲದ ಹಾಗೂ ಪಕ್ವರೀತಿಯಿಂದ ಕೂಡಿದ ಅಧ್ಯಯನ–ಅದರಲ್ಲಿಯೂ ವಿಶೇಷವಾಗಿ ಸಂಬಂಧಪಟ್ಟ ರಾಷ್ಟ್ರದ ಸಾಹಿತ್ಯ, ಇತಿಹಾಸ ಮತ್ತು ಸಂಸ್ಕೃತಿಗಳ ಬಗೆಗಿನ ಅಧ್ಯಯನ–ಅಗತ್ಯವಾಗುತ್ತದೆ. ರೂಪುಗೊಳ್ಳುತ್ತಿರುವ ಆಡುಮಾತಿನ ಶೈಲಿಯನ್ನೂ ದುಭಾಷಿಗಳು ರೂಢಿಸಿಕೊಳ್ಳಬೇಕಾಗುತ್ತದೆ. ಇದಕ್ಕಿಂತಲೂ ಮುಖ್ಯವಾದದ್ದು ಭಾಷೆಯ ವೈಯಕ್ತಿಕ ವೈಲಕ್ಷಣ್ಯಗಳನ್ನು ಹಾಗೂ ಶೀಲಸ್ವಭಾವಗಳನ್ನು ರೂಢಿಸಿಕೊಳ್ಳುವುದು. ಏಕೆಂದರೆ ಅವು-ಅಂದರೆ, ಆಡುಮಾತಿನ ಶೈಲಿಯ ವೈಶಿಷ್ಟ್ಯಗಳು–ಇವುಗಳ–ಅಂದರೆ ವೈಲಕ್ಷಣ್ಯಗಳ ಹಾಗೂ ಶೀಲಸ್ವಭಾವಗಳ–ಪ್ರತೀಕವಾಗಿರುತ್ತವೆ. ವಿದೇಶಿ ಭಾಷೆಯ ಶಬ್ದಗಳ ಹಾಗೂ ನುಡಿಗಟ್ಟುಗಳ ಸೂಕ್ಷ್ಮಾತಿಸೂಕ್ಷ್ಮ ಅರ್ಥಛಾಯೆಗಳ ಸಂಪೂರ್ಣ ಪರಿಜ್ಞಾನ ಅವರಿಗೆ ಅಗತ್ಯವಾಗುತ್ತದೆ: ಅವುಗಳನ್ನು ಗುರುತಿಸಲಾರದೆ ಹೋದಲ್ಲಿ ಎಂಥ ಅನಾಹುತಗಳಾಗಬಹುದೆಂಬುದನ್ನು ಅವರು ನೆನಪಿನಲ್ಲಿಟ್ಟುಕೊಳ್ಳಬೇಕು. "ನೋ ದಿಮ್ಯಾಂದೋ" ಎಂಬ ಶಿಷ್ಟ ಫ್ರೆಂಚ್ ವಾಕ್ಯವನ್ನು "ಐ ಡಿಮ್ಯಾಂಡ್" ಎಂಬ ಅನುಚಿತ ಇಂಗ್ಲಿಷ್ ವಾಕ್ಯವನ್ನಾಗಿ ಭಾಷಾಂತರಿಸಿ, ಅಂತರರಾಷ್ಟ್ರೀಯ ಘಟನೆಯೊಂದಕ್ಕೆ ಕಾರಣನಾದ ದುಭಾಷಿಯೊಬ್ಬನ ಪ್ರಸಿದ್ಧ ಕಥೆಯೂ ಇದೆಯಷ್ಟೆ.

ಎರಡನೆಯ ವಿಶ್ವಯುದ್ಧದ ಬಳಿಕ ಶಬ್ದಗಳ ತಪ್ಪು ಬಳಕೆ- ಅದರಲ್ಲಿಯೂ ದೂತಾವಾಸದ ಭಾಷೆಯಲ್ಲಿ–ಸರ್ವಸಾಮಾನ್ಯವಾಗಿಬಿಟ್ಟಿದೆ. ಹೀಗಾಗಿ, ದುಭಾಷಿಯ ಕಷ್ಟಗಳು ಹಲವು ಪಡಿಯಾಗಿವೆ. ನಿರ್ದಿಷ್ಟವಾಗಿ ಹೇಳಬೇಕೆಂದರೆ ಇದರ ಇತಿಹಾಸ ಇತ್ತ ಅಂತರರಾಷ್ಟ್ರೀಯ ರಾಯಭಾರ–ವ್ಯವಹಾರದ ಭಾಷೆಯಾಗಿ ಫ್ರೆಂಚನ್ನು ಕೈಬಿಟ್ಟ ಹಾಗೂ ಅತ್ತ ಜಾಗತಿಕ ವ್ಯವಹಾರಗಳಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನದ ಪಾತ್ರ ಅತಿಯಾಗಿ ಹೆಚ್ಚತೊಡಗಿದ ಅವಧಿಯನ್ನು ಹಿಂದಕ್ಕೆ ಹೋಗುತ್ತದೆ. ಪಶ್ಚಿಮದಲ್ಲಿ ಇಂದೂ ನಿಶ್ಚಿತ ಅರ್ಥವನ್ನು ಹೊಂದಿರುವಂಥ ಕೆಲವು ಶಬ್ದಗಳಿಗೆ ಕಬ್ಬಿಣದ ಪರದೆಯ ಹಿಂದಿನ ರಾಷ್ಟ್ರಗಳಲ್ಲಿ ಆರೋಪಿಸಲಾಗಿರುವ ಅತ್ಯಂತ ಭಿನ್ನ ಅರ್ಥಗಳಲ್ಲಿ ಇದು ಅತ್ಯಂತ ಸ್ಪಷ್ಟವಾಗಿ ಎದ್ದು ಕಾಣುತ್ತದೆ: ಉದಾಹರಣೆಗೆ ಪ್ರಜಾಪ್ರಭುತ್ವ (Democracy), ಸ್ವಾತಂತ್ರ್ಯ (Freedom), ವಸಾಹತುವಾದ Colonialism ಮಧ್ಯಪ್ರವೇಶ (interference), ರಕ್ಷಣೆ (protection) ಇತ್ಯಾದಿ ಶಬ್ದಗಳು. ಅತ್ಯಂತ ಭಿನ್ನವಾದ ವಿಚಾರಧಾರೆ ಹಾಗೂ ಸಂಸ್ಕೃತಿಗಳು ಇರುವಲ್ಲಿ ನಿರ್ದಿಷ್ಟ ಉದ್ದೇಶಕ್ಕೆ ಹೊಂದಿಕೆಯಾಗುವಂತೆ ಶಬ್ದಗಳಿಗೆ ಅರ್ಥವನ್ನು ಆರೋಪಿಸುವುದು ಸಾಮಾನ್ಯವಾಗಿ ಕಂಡುಬರುವ ಒಂದು ವಾಡಿಕೆ. ಪಾಶ್ಚಾತ್ಯನಿಗೆ ಬಿಳಿಯದಾಗಿ ತೋರಿದ್ದು ಕಬ್ಬಿಣದ ಪರದೆಯ ಹಿಂದಿರುವ ಬೇರೊಬ್ಬ ವ್ಯಕ್ತಿಗೆ ಕರಿಯದಾಗಿ ತೋರಬಹುದು. ಅರ್ಥದ ಇಂಥ ಅನಿರೀಕ್ಷಿತ ಬದಲಾವಣೆಗಳ ವಿಷಯದಲ್ಲಿಯೂ ದುಭಾಷಿ ಸಿದ್ಧನಾಗಿರಬೇಕಾಗುತ್ತದೆ. ವಾಸ್ತವಿಕ ಭಾಷೆಯ ಪರಿಜ್ಞಾನದ ವಿಚಾರ ಅಂತಿರಲಿ, ವಿಚಾರಧಾರೆಯಲ್ಲಿ ಯಾವುದೊಂದು ವ್ಯತ್ಯಾಸವೂ ಇಲ್ಲದ ಹಾಗೂ ಸಾಂಸ್ಕೃತಿಕ ಹಿನ್ನೆಲೆಯೂ ಬಹುಮಟ್ಟಿಗೆ ಒಂದೇ ಆಗಿರುವಂಥ ಪಶ್ಚಿಮ ಯೂರೋಪಿನ ಭಾಷೆಯೊಂದಕ್ಕೆ ಭಾಷಾಂತರಿಸುವುದಕ್ಕಿಂತಲೂ ಇತರ ಭಾಷೆಗಳಿಗೆ–ಉದಾಹರಣೆಗೆ ರಷ್ಯನ್ ಭಾಷೆಯಿಂದ ಇಂಗ್ಲಿಷಿಗೆ ಅಥವಾ ಇಂಗ್ಲಿಷಿನಿಂದ ರಷ್ಯನ್ ಭಾಷೆಗೆ–ಭಾಷಾಂತರಿಸುವುದು ದುಭಾಷಿಗೆ ಹೆಚ್ಚು ಕಷ್ಟತರವಾಗಿ ತೋರುತ್ತದೆ.

ಹೇಳಲಾಗುತ್ತಿರುವ ಸಂಗತಿಯ ಬಗೆಗೆ ಏಕಾಗ್ರಚಿತ್ತತೆಯನ್ನು ಕಾಯ್ದುಕೊಂಡು ಬರುವುದು ದುಭಾಷಿಯ ಮಹತ್ತರ ಜವಾಬ್ದಾರಿಗಳಲ್ಲಿ ಒಂದು. ಯಾವುದೇ ಗದ್ದಲ, ಮಧ್ಯಪ್ರವೇಶ, ಅಥವಾ

ಯಾವುದೇ ಬಗೆಯ ಆಕಸ್ಮಿಕ ಘಟನೆಯಿಂದ ಅವನು ಕ್ಷುಬ್ಧನಾಗುವಂತಿಲ್ಲ. ನಮ್ಮ ಟೆಹರಾನ್ ರಾಯಭಾರ ಕಛೇರಿಯ ಔತಣಕೂಟವೊಂದರಲ್ಲಿ ರಷ್ಯನ್ ದುಭಾಷಿಯೊಬ್ಬ ಭಾಷಣವೊಂದನ್ನು ಭಾಷಾಂತರಿಸುತ್ತಿದ್ದಾಗ ಪರಿಚಾರಕನೊಬ್ಬ ಆಕಸ್ಮಿಕವಾಗಿ ಐಸ್‌ಕ್ರೀಮಿನ ದೊಡ್ಡ ತಟ್ಟೆಯನ್ನೇ ಬೀಳಿಸಿದನು. ಅವನ ಭವ್ಯ ಉಡುಗೆ ಹಾಳಾಯಿತು. ಇಷ್ಟಾದರೂ ಇದರತ್ತ ಗಮನಕೊಡದೆಯೆ ಆತ ತನ್ನ ಭಾಷಾಂತರ ಕಾರ್ಯವನ್ನು ಅವಿಚ್ಛಿನ್ನವಾಗಿ ನಡೆಸಿಕೊಂಡೇ ಬಂದ. ಕೊನೆಯವರೆಗೂ ಆತ ಅಕ್ಷುಬ್ಧನಾಗಿಯೇ ಇದ್ದ. ಈ ಏಕಾಗ್ರತೆ ನಿಜಕ್ಕೂ ಪ್ರಶಂಸಾರ್ಹವಾಗಿದೆ. ಇತ್ತ, ಯುದ್ಧಕಾಲದಲ್ಲಿ ನಡೆದ ಪ್ರಮುಖ ಖಾಸಗಿ ಸಭೆಯೊಂದರಲ್ಲಿ ತಾನು ಕೇಳಿದ ಮಾತುಗಳಿಂದ ವಿಚಲಿತನಾಗಿ ಮೂಕನಂತಾಗಿಬಿಟ್ಟ ದುಭಾಷಿಯ (ದೃಢಪಟ್ಟಿರದಂಥ) ಕಥೆಯೂ ಇದೆ.

ಒಮ್ಮೆ ಚರ್ಚಿಲ್, ಸ್ಟಾಲಿನ್ ಮತ್ತು ಲುಬ್ಲಿನ್ (ಸಾಮ್ಯವಾದಿ) ಪೋಲೆಂಡಿನ ಪ್ರತಿನಿಧಿಗಳ ನಡುವೆ ನಾನೇ ಸ್ವತಃ ದುಭಾಷಿಯಾಗಿ ಕಾರ್ಯ ನಿರ್ವಹಿಸುತ್ತಿದ್ದೆ; ಪೋಲೆಂಡಿನ ಭಾವೀ ವಿದೇಶಾಂಗ ಸಚಿವನೆಂದು ಭಾವಿಸಲಾಗಿದ್ದ ವ್ಯಕ್ತಿ ಭಾಷಣಕ್ಕೆ ತೊಡಗಿದ. ಅದರಲ್ಲಿ ಆತ ಪೋಲೆಂಡಿನ ಕಾರ್ಮಿಕರ ಮತ್ತು ರೈತರ ಹಕ್ಕುಗಳನ್ನು ಮನ್ನಿಸಬೇಕೆಂಬ ಮನವಿಯನ್ನು ಮುಂದೊಡ್ಡುತ್ತಿದ್ದ. ಸುಮಾರು ಒಂದು ಘಂಟೆಯ ಕಾಲ ನಡೆದ ಆ ಭಾಷಣ ಅಬ್ಬರದ್ದೂ, ಅಸಂಬದ್ಧವಾದುದೂ ಆಗಿತ್ತು. ಚರ್ಚಿಲ್ ಗಿಂತಲೂ ಸ್ಟಾಲಿನ್ ಮೇಲೆ ಪ್ರಭಾವ ಬೀರುವುದೇ ಆ ಭಾಷಣದ ಉದ್ದೇಶವಾಗಿತ್ತು. ಭಾಷಣವನ್ನು ಕೇಳಿ ಬೇಸತ್ತಿದ್ದ ಚರ್ಚಿಲ್ ಮೇಲೆದ್ದು ಚಹಾ ಸಿದ್ಧಮಾಡಿ ಇಡಲಾಗಿದ್ದ ಪಕ್ಕದ ಮೇಜಿನ ಬಳಿಗೆ ಹೋಗಿ ಆ ಭಾಷಣವೂ ನನ್ನ ಭಾಷಾಂತರವೂ ಸದ್ದಿನಲ್ಲಿ ಅಡಗಿಹೋಗುವಷ್ಟರ ಮಟ್ಟಿಗೆ ಲೋಟ ಮತ್ತು ಚಮಚಗಳನ್ನು ದಡಬಡಿಸತೊಡಗಿದರು. ಅಲ್ಲಿಯವರೆಗೆ ನಾನು ಭಾಷಾಂತರ ಮಾಡಿ ಮಾಡಿ ಬಸವಳಿದಿದ್ದೆ.

ಇವು ಅತಿರೇಕದ ಪ್ರಸಂಗಗಳು. ಆದರೆ ಇದಕ್ಕಿಂತಲೂ ಕಡಿಮೆ ನಾಟಕೀಯವಾಗಿರುವಂಥ ಸನ್ನಿವೇಶಗಳಲ್ಲಿಯೂ ತನ್ನ ಚೇತನವನ್ನು ನಿಯಂತ್ರಿಸಬೇಕಾದ ಸಾಮಾನ್ಯ ಮಾನವೀಯ ಸಮಸ್ಯೆ ದುಭಾಷಿಗಿದಿರಾಗಿರುತ್ತದೆ. ಸಮ್ಮೇಳನಗಳು ಭಾಷಾಂತರದ ಗುಣಮಟ್ಟವನ್ನು ಎಷ್ಟರಮಟ್ಟಿಗೆ ಆಶ್ರಯಿಸಿರುತ್ತವೆಂಬುದನ್ನು ಗಮನಿಸಿದರೆ. ಒಂದು ಗಂಭೀರ ಉದಾಹರಣೆಯನ್ನೇ ತೆಗೆದುಕೊಳ್ಳುವುದಾದರೆ, ವಿಶ್ವದ ಅಗ್ರನಾಯಕರ ಸಮ್ಮೇಳನವೊಂದರಲ್ಲಿ, ಅದರಲ್ಲಿಯೂ ಅದೇ ಮೊದಲ ಬಾರಿಗೆ, ದುಭಾಷಿಯಾಗಿ ಕೆಲಸಮಾಡಲು ಎಂಟೆದೆ ಬೇಕಾಗುತ್ತದೆಂದು ಹೇಳಬೇಕಾಗುತ್ತದೆ. ದುಭಾಷಿಯ ಮನಸ್ಸು ಸಂದೇಹಾವಿಷ್ಟವಾಗಿರುತ್ತದೆ. ಹೇಳಲಾದ ಮಾತಿನ ಅರ್ಥವನ್ನು ತಾನು ತತ್‌ಕ್ಷಣವೇ ಗ್ರಹಿಸಬಲ್ಲೆನೆ? ಬೇರೊಂದು ಭಾಷೆಯಲ್ಲಿನ ಸೂಕ್ತ ಪರ್ಯಾಯವನ್ನು ತಾನು ತತ್‌ಕ್ಷಣವೇ ಕಂಡುಕೊಳ್ಳಬಲ್ಲೆನೆ? ಆ ವಿಶಾಲವಾದ ಕೋಣೆಯಲ್ಲಿ ತನ್ನ ಧ್ವನಿ ಉಪಯುಕ್ತವಾಗಿ ಪರಿಣಮಿಸುತ್ತದೆಯೆ? ತನ್ನ ಕಾರ್ಯವನ್ನು ಸಲೀಸಾಗಿ ಸಾಗಿಸುವಂಥ ಹಾಗೂ ತನ್ನ ಭಾಷಾಂತರವನ್ನು ಸ್ವಾರಸ್ಯಪೂರ್ಣವೂ ಚೈತನ್ಯಪೂರ್ಣವೂ ಆಗಿಸುವಂಥ ಭಾಷಿಕೇತರ ಸೌಲಭ್ಯ ತನಗೆ ಲಭ್ಯವಾಗುತ್ತದೆಯೆ?–ತನ್ನ ಟಿಪ್ಪಣಿ ಪುಸ್ತಕ ಮತ್ತು ಪೆನ್ಸಿಲುಗಳೊಡನೆ ತನ್ನ ಆಸನದಲ್ಲಿ ಕುಳಿತಾಗ ಆತನ ಮನೋಧರ್ಮ ಹೇಗಿರುತ್ತದೆಂಬುದನ್ನೇ ಇವೆಲ್ಲ ಅವಲಂಬಿಸಿರುತ್ತವೆ. ತಮ್ಮ ದೈಹಿಕದಾರ್ಢ್ಯ ಹಾಗೂ ಇತರ ಸನ್ನಿವೇಶಗಳಿಗನುಗುಣವಾಗಿ ದುಭಾಷಿಗಳಿಗೂ ತಮ್ಮವೇ ಆದ ಒಳ್ಳೆಯ ದಿನಗಳೂ ಕೆಟ್ಟ ದಿನಗಳೂ ಇರುತ್ತವೆ.

ಚರ್ಚಿಲ್ ಮತ್ತು ಸ್ಟಾಲಿನ್ನರ ನಡುವೆ–ಇವರಿಬ್ಬರಲ್ಲಿ ಯಾರನ್ನೂ ನಾನು ಹಿಂದೆಂದೂ ಭೇಟಿಯಾಗಿರಲಿಲ್ಲ–ಮೊಟ್ಟಮೊದಲ ಬಾರಿಗೆ ನಾನು ದುಭಾಷಿಯಾಗಿ ಕಾರ್ಯ ನಿರ್ವಹಿಸಿದ್ದು ನನ್ನ ವೃತ್ತಿಯ ಅಂಥ ಒಂದು ಒಳ್ಳೆಯ ದಿನದಲ್ಲಿ. ನನಗೆ ಕೇವಲ ಒಂದು ಘಂಟೆಯ ಮುನ್ಸೂಚನೆಯನ್ನು ಕೊಡಲಾಗಿತ್ತು. ಅದು ಬೆಚ್ಚಿಸುವಂಥ ಕಾರ್ಯವೇ ಆಗಿತ್ತು. ಅಷ್ಟಕ್ಕೂ ಚರ್ಚಿಲ್ ನನಗೆ ಪ್ರೋತ್ಸಾಹದಾಯಕವಾಗಿರುವ ಸ್ನೇಹ, ವಾತ್ಸಲ್ಯ ಹಾಗೂ ಅನುಕಂಪೆಯನ್ನು ತೋರಿದರು; ತಮ್ಮ ಅಭಿವ್ಯಕ್ತಿಯಲ್ಲಿ ಅತ್ಯಂತ ಸ್ಪಷ್ಟವಾಗಿದ್ದರು. ಮೊದಲಿಗೆ ಸ್ಟಾಲಿನ್ನರ ರೀತಿ ಕ್ಲಿಷ್ಟವಾಗಿತ್ತು; ನಿರಾಶಕವಾಗಿತ್ತು. ಜಾರ್ಜಿಯನ್ ಉಚ್ಚಾರಣಾಶೈಲಿಯಿಂದಾಗಿ ಅರ್ಥಮಾಡಿಕೊಳ್ಳುವುದೂ ಸ್ವಲ್ಪಮಟ್ಟಿಗೆ ಕಷ್ಟಕರ

ಹಾಗೆಯೇ ಇತ್ತು. ಕ್ರಮೇಣ ಅವರೂ ಸ್ನೇಹಪರರಾದರು. ಮೊದಲಿಗೆ ನನ್ನಲ್ಲಿ ತಲೆದೋರಿದ್ದ ವ್ಯಾಕುಲತನ ಮಾಯವಾಯಿತು. ನನ್ನ ರಷ್ಯನ್ ಭಾಷೆ ಟಾಲ್‌ಸ್ಟಾಯ್ ಅಥವಾ ಟುರ್ಗೆನೆಫ್ ಅವರ ಸಾಹಿತ್ಯಿಕ ಭಾಷೆಯಾಗಿರದೆ 'ಪ್ರಾವ್ದಾ'ದಲ್ಲಿ ನಾವು ಕಾಣುವಂಥ ಶೈಲಿಯ ರಷ್ಯನ್ ಭಾಷೆಯಾಗಿದ್ದುದು ಅವರಿಗೆ ಸಂತೋಷವನ್ನುಂಟುಮಾಡಿದಂತೆ ತೋರಿತು. ಆ ಭೇಟಿಯ ನಡುವಣ ವಿರಾಮದ ಅವಧಿಯೊಂದರಲ್ಲಿ ಅವರು ನನ್ನೊಡನೆ ಅನಧಿಕೃತ ಸಂಭಾಷಣೆ ಮಾಡತೊಡಗಿದರು. ನಾನು ಎಲ್ಲಿ ರಷ್ಯನ್ ಭಾಷೆಯನ್ನು ಕಲಿತೆ, ರಷ್ಯಾದಲ್ಲಿ ನನ್ನ ಕುಟುಂಬ ಎಲ್ಲಿ ವಾಸವಾಗಿತ್ತು, ಯಾವ ರಷ್ಯನ್ ಶಾಲೆಯಲ್ಲಿ ನಾನು ರಷ್ಯನ್ ಭಾಷೆಯನ್ನು ಕಲಿತೆ—ಈ ವಿವರಗಳನ್ನೆಲ್ಲ ಕೇಳಿ ತಿಳಿದುಕೊಂಡರು. ಇದು ನಾನು ಹೇಳಬಾರದ ಸಂಗತಿಗಳನ್ನೆಲ್ಲ ಹೇಳುತ್ತಿದ್ದೇನೆಯೆಂಬ ಅನುಮಾನವನ್ನು ಚರ್ಚಿಲ್‌ರಲ್ಲಿ ಮೂಡಿಸಿತು. ಆದರೆ, ಹಾಗೇನೂ ಇಲ್ಲವೆಂದು ನಾನು ಮತ್ತೆ ಅವರಿಗೆ ಭರವಸೆಕೊಡುವವರೆಗೆ ಅವರಲ್ಲಿ ಈ ಅನುಮಾನ ಮನೆಮಾಡಿಕೊಂಡಿತ್ತು.

ಆರಂಭದಲ್ಲಿ ಅನೇಕ ದುಭಾಷಿಗಳು ಅನುಭವಿಸುವಂಥ ವ್ಯಾಕುಲತನ ಅನುಭವದೊಂದಿಗೆ ಕಡಿಮೆಯಾಗುತ್ತ ಹೋಗುತ್ತದೆ. ಅನಂತರದ ಸಂದರ್ಭಗಳು ಅಷ್ಟೇನೂ ದಿಗಿಲು ಹುಟ್ಟಿಸುವಂಥವಾಗಿರುವುದಿಲ್ಲ. ಆರಂಭದ ವಾಕ್ಯಗಳ ಭಾಷಾಂತರದ ಕೆಲಸವು ಎಲ್ಲವೂ ಸರಿಯಾಗಿ ನಡೆಯುತ್ತಿದೆ ಎಂಬ ಭಾವನೆ ದುಭಾಷಿಗೆ ಉಂಟಾದಾಗ, ಆತನ ಧೈರ್ಯಸ್ಥೈರ್ಯಗಳು ಹೆಚ್ಚುತ್ತವೆ. ಕಾಲಕಳೆದಂತೆ ಆತ್ಮವಿಶ್ವಾಸವೂ ಹೆಚ್ಚುತ್ತ ಹೋಗುತ್ತದೆ. ಅಷ್ಟೇ ಅಲ್ಲ, ನಡೆವಳಿಕೆಗಳಲ್ಲಿ ತಾನೇ ಪ್ರಧಾನ ಪಾತ್ರ ವಹಿಸುತ್ತಿದ್ದೇನೆಂಬ ಭಾವನೆಯೂ ಅವನಲ್ಲಿ ಮೂಡಲು ಆರಂಭಿಸಬಹುದು. ತನ್ನ ಮತ್ತು ತನ್ನ 'ಪ್ರಮುಖ ವ್ಯಕ್ತಿ'ಯ ನಡುವೆ ಪೂರ್ಣ ಸಾಮರಸ್ಯ ಅಥವಾ ಹೊಂದಾಣಿಕೆ ಏರ್ಪಟ್ಟಾಗ ಇಂಥ ಭಾವನೆ ಎಂದಿಗಿಂತಲೂ ಹೆಚ್ಚಾಗಿಯೇ ಇರುತ್ತದೆ.

ಈ ಸಾಮರಸ್ಯ ಎಂಬುದು ಒಂದು ವಿಚಿತ್ರ ಸಂಗತಿ. ಅದು ಎರಡು ಮನಸ್ಸುಗಳ ನಡುವೆ ಏರ್ಪಡುವ ಒಂದು ಬಗೆಯ ಸಹಜವಾದ ಅರಿವು. ಅದೇ ಇಲ್ಲವಾದಲ್ಲಿ ದುಭಾಷಿಯ ಕೆಲಸ ಅತ್ಯಂತ ಕ್ಲಿಷ್ಟವಾಗುತ್ತದೆ. ಒಂದೆಡೆ ತನಗೆ ಅರಿವಿಲ್ಲದಂತೆಯೇ ಸ್ವಭಾವ, ಬುದ್ಧಿವಂತಿಕೆ ಅಭಿವ್ಯಕ್ತಿಯ ವಿಧಾನ ಮತ್ತು ನಡವಳಿಕೆಗಳ ಮೂಲಕ ದುಭಾಷಿ ತನ್ನ 'ಪ್ರಮುಖ ವ್ಯಕ್ತಿ'ಯ ನೆಲೆಬೆಲೆಗಳನ್ನು ತೀರ್ಮಾನಿಸುತ್ತಾನೆ. ತನ್ನ ವೈಯಕ್ತಿಕ ಗುಣಗಳು ದುಭಾಷಿಗೆ ಎಷ್ಟರಮಟ್ಟಿಗೆ ಸ್ಫೂರ್ತಿದಾಯಕವಾಗಿರಬಲ್ಲವು ಎಂಬುದರ ಕಲ್ಪನೆ ಬಹುಶಃ ಆ 'ಪ್ರಮುಖ ವ್ಯಕ್ತಿ'ಗೆ ಇರುವುದಿಲ್ಲ. ಇತ್ತ, ತನ್ನ ಸ್ವಂತ ಪ್ರತಿಭೆ, ತಂತ್ರ ಹಾಗೂ ವರ್ತನೆಯಿಂದ ದುಭಾಷಿ ತನ್ನ 'ಪ್ರಮುಖ ವ್ಯಕ್ತಿ'ಯಲ್ಲೂ ನಂಬಿಕೆಯನ್ನು ಮೂಡಿಸುತ್ತಾನೆ. ಬಳಿಕ ತನ್ನ ಆಲೋಚನೆಯನ್ನು ಮತ್ತೊಬ್ಬನ ಆಲೋಚನೆಯೊಡನೆ ಸಮಾವೇಶಿಸುತ್ತಾನೆ; ಆಗ ಬೌದ್ಧಿಕ ಸಾಮರಸ್ಯ ಏರ್ಪಡುತ್ತದೆ. ಇದರ ಫಲ ಒಳ್ಳೆಯದಾಗುತ್ತದೆ. ವೇಗ, ಸುಗಮತೆ ಹಾಗೂ ನಿರ್ದಿಷ್ಟತೆ ಇವು ಬಹುಮಟ್ಟಿಗೆ ಈ ಇಬ್ಬರು 'ಪ್ರಮುಖ ವ್ಯಕ್ತಿ'ಗಳೂ ಒಂದೇ ಭಾಷೆಯಲ್ಲಿ ಮಾತನಾಡುತ್ತಿದ್ದಾರೇನೋ ಎಂಬ ಭ್ರಮೆಯನ್ನು ಹುಟ್ಟಿಸುತ್ತವೆ.

'ಪ್ರಮುಖ'ರಲ್ಲೂ ಎಲ್ಲ ಬಗೆಯ 'ಪ್ರಮುಖ'ರೂ ಇರುತ್ತಾರೆಂಬುದು ಬಹುಪಾಲು ದುಭಾಷಿಗಳ ಅನುಭವದ ಸಂಗತಿ. ಕೆಲವರಿಗಾಗಿ ಕೆಲಸ ಮಾಡುವುದು ಸುಲಭ; ಇತರರು ಇದಕ್ಕೆ ತದ್ವಿರುದ್ಧ. ದುಭಾಷಿಯನ್ನು ಅತ್ಯಂತ ಹೆಚ್ಚು ಸದುಪಯೋಗಪಡಿಸಿಕೊಳ್ಳುವುದು ಹೇಗೆ ಎಂಬುದನ್ನು ಕೆಲವರು ಅರ್ಥಮಾಡಿಕೊಳ್ಳುತ್ತಾರೆ; ಇನ್ನು ಕೆಲವರು ಆತನನ್ನು ಯಂತ್ರದಂತೆ ನಡೆಸಿಕೊಳ್ಳುತ್ತಾರೆ. ಉತ್ತಮ ಪ್ರಮುಖರ ವಿಶಿಷ್ಟತೆಯೆಂದರೆ ಅವರ ಅಭಿವ್ಯಕ್ತಿಯ ಸ್ಪಷ್ಟತೆ: ಏನು ಹೇಳಬೇಕೆಂಬುದು ಅವರಿಗೆ ಸರಿಯಾಗಿ ಗೊತ್ತಿರುತ್ತದೆ ಹಾಗೂ ಅವರು ಹಾಗೆಯೇ ಹೇಳುತ್ತಾರೆ. ಇತರರಿಗೆ ಈ ಪ್ರತಿಭೆ ಇರುವುದಿಲ್ಲ. ಅಸಂಗತ ವಿಚಾರಗಳಲ್ಲಿ ಅವರು ಅಲೆದಾಡುತ್ತಾರೆ ಹಾಗೂ ಹೇಳಿದ್ದನ್ನೇ ಹೇಳುತ್ತಾರೆ. ಆಗ ದುಭಾಷಿಗೂ ಶೀಘ್ರವಾಗಿ ಮಾತುಕತೆಯ ಧಾಟಿ ತಪ್ಪಿಹೋಗುತ್ತದೆ. ಆತ ಒದ್ದಾಡ ತೊಡಗುತ್ತಾನೆ. ತೊಡಕಿನಿಂದ ತನ್ನನು ಪಾರುಮಾಡಿಕೊಳ್ಳಲು ಅರ್ಥವನ್ನು ಅನುವಾದಿಸುವುದಕ್ಕೆ ಬದಲಾಗಿ ಶಬ್ದಶಃ

ಅನುವಾದವನ್ನು ತೊಡಗುತ್ತಾನೆ. ಅರ್ಥ ಅವನಿಗೇ ಚೆನ್ನಾಗಿ ತಿಳಿಯದೆ ಹೋಗಿರಬಹುದು. ಇದರ ಪರಿಣಾಮವಾಗಿ ಗೊಂದಲ ಏರ್ಪಡುತ್ತದೆ.

ವಾಸ್ತವವಾಗಿ, ಇನ್ನೊಂದು ಭಾಷೆಯ ಬಗೆಗಿನ ತನ್ನ ಪರಿಜ್ಞಾನ ಮೇಲುಮೇಲಿನದೇ ಆಗಿದ್ದರೂ ತನಗೆ ಆ ಭಾಷೆ ಗೊತ್ತಿದೆಯೆಂದೂ, ಹೀಗಾಗಿ, ತಾನು ತನ್ನ ದುಭಾಷಿಯನ್ನು ನಿಯಂತ್ರಿಸಬಹುದೆಂದೂ ಭಾವಿಸುವ ವ್ಯಕ್ತಿ ಇನ್ನೊಂದು ಬಗೆಯ ಕ್ಲೇಶದಾಯಕ ಪ್ರಮುಖನಾಗಿರುತ್ತಾನೆ. ಇದು ರೇಗಿಸುವಂಥ ಕ್ರಮ ಮಾತ್ರವಲ್ಲ. ಹೀಗೆ ಮಾಡುವುದರ ಅರ್ಥ ಸಾಮಾನ್ಯವಾಗಿ ಇಷ್ಟು: ಇಂಥ ಪ್ರಮುಖ ವ್ಯಕ್ತಿ ವಿದೇಶಿ ಭಾಷೆಯಲ್ಲಿ ಸಂಭಾಷಣೆಯನ್ನು ಪ್ರಾರಂಭಿಸುತ್ತಾನೆ. ಒಂದೆರಡು ಭಯಂಕರ ವಾಕ್ಯಗಳನ್ನು ರಚಿಸುತ್ತಾನೆ. ವಿದೇಶಿ ಭಾಷೆಯಲ್ಲಿಯೇ ಸಂಭಾಷಣೆ ನಡೆಸುವ ತನ್ನ ಪ್ರಯತ್ನವನ್ನು ಕೈಬಿಟ್ಟು ಸಂಭಾಷಣೆಯನ್ನು ಮುಂದುವರಿಸುವಂತೆ ದುಭಾಷಿಗೆ ಸೂಚನೆ ಕೊಡುತ್ತಾನೆ. ದುಭಾಷಿ ಈ ಮಧ್ಯೆ ತನ್ನ ಗೊತ್ತುಗುರಿಗಳನ್ನು ಮರೆತಿರುತ್ತಾನೆ. ಯಂತ್ರಸದೃಶವಾಗಿ ತನ್ನ ಸಾಂಪ್ರದಾಯಿಕ ಪಾತ್ರವನ್ನು ನಿರ್ವಹಿಸುವುದು ಆತನಿಗೆ ಕಷ್ಟವಾಗುತ್ತದೆ.

ಎದುರು ಪಕ್ಷದವರನ್ನು ಹೇಗೆ ನಡೆಸಿಕೊಳ್ಳಬೇಕೆಂಬುದು ತನಗೆ ಚೆನ್ನಾಗಿ ಗೊತ್ತಿದೆಯೆಂದು ಭಾವಿಸುವ ವ್ಯಕ್ತಿಯೇ ಬಹುಶಃ ಅತ್ಯಂತ ಕ್ಲೇಶದಾಯಕ ಬಗೆಯ ಪ್ರಮುಖನಾಗಿರುತ್ತಾನೆ. ದುಭಾಷಿ ಸಂಬಂಧಪಟ್ಟ ಜನಗಳೊಡನೆ ವ್ಯವಹರಿಸಿರುವ ಅನುಭವವುಳ್ಳ ಹಾಗೂ ಅವರ ಮನೋಧರ್ಮದ ಅರಿವುಳ್ಳ ವ್ಯಕ್ತಿ ಎಂಬುದು ತಿಳಿದಿದ್ದರೂ, ಅವರು ಎಂದೂ ದುಭಾಷಿಯ ಸಲಹೆಯನ್ನು ಕೇಳಲು ಸಿದ್ಧರಾಗಿರುವುದಿಲ್ಲ. ತನ್ನ ಪ್ರಮುಖನ ಕೆಲವೊಂದು ಟೀಕೆಗಳು ತುಂಬ ಆಕ್ರಮಣಕಾರಿ ಶೈಲಿಯವೆಂದೂ, ಹಾಗೂ ಅಂಥ ಟೀಕೆಗಳಿಂದ ಯಾವುದೇ ಪ್ರಯೋಜನವಿಲ್ಲವೆಂದೂ ಅಥವಾ ಅದಕ್ಕೆ ಬದಲಾಗಿ ತನ್ನ ಪ್ರಮುಖ ಅಗತ್ಯವಾಗಿರುವುದಕ್ಕಿಂತಲೂ ಹೆಚ್ಚು ವಿನಯಪೂರ್ಣವಾಗಿರುವ ಧೋರಣೆಯನ್ನು ಅನುಸರಿಸುತ್ತಿದ್ದಾನೆಂದೂ ಭಾವಿಸುವ ದುಭಾಷಿ ತನ್ನ ಉತ್ತಮ ಪರಿಜ್ಞಾನದಿಂದ ಎಷ್ಟರ ಮಟ್ಟಿಗೆ ಅವುಗಳ ತೀಕ್ಷ್ಣತೆಯನ್ನು ಕಡಿಮೆ ಮಾಡಬಹುದು ಎಂಬ ಪ್ರಶ್ನೆ ಏಳುತ್ತದೆ. ಎದುರು ಪಕ್ಷದವರು ಹಾಜರಿರುವಾಗ ದುಭಾಷಿಯ ಸಲಹೆಯನ್ನು ಕೇಳಲು ಪ್ರಮುಖನು ಸಿದ್ಧನಾಗಿದ್ದರೂ ಸಮಾಲೋಚನೆಗೆ ಅವಕಾಶವಿರುವುದಿಲ್ಲ. ಅತ್ಯಂತ ಸಂಕುಚಿತ ಪರಿಮಿತಿಗಳಲ್ಲಿ ದುಭಾಷಿ ತನ್ನ ಧ್ವನಿಯನ್ನು ಸ್ವಲ್ಪ ಮಾರ್ಪಡಿಸಬಹುದಾದರೂ ಹಾಗೆ ಮಾಡುವುದರ ಮೂಲಕ ಅನುಚಿತವಾದ ಹೊಣೆಯನ್ನು ಹೊತ್ತುಕೊಂಡಂತಾಗುತ್ತದೆ. ತನ್ನ ಪ್ರಮುಖನ ಮಾತುಗಳಿಗೆ ಶಬ್ದಶಃವಲ್ಲದ. ಆದರೆ ಅರ್ಥದ ದೃಷ್ಟಿಯಿಂದ ನಿಜವಾದ ವಿಧೇಯ ಭಾಷಾಂತರವನ್ನು ಒದಗಿಸುವುದಷ್ಟೇ ಆತನ ಪ್ರಮುಖ ಕರ್ತವ್ಯ. ಯಾವುದೇ ಅಂಶವನ್ನೂ ಸೇರಿಸುವಂತಿಲ್ಲ. ಕೈಬಿಡುವಂತೆಯೂ ಇಲ್ಲ. ಧಾಟಿ–ಧೋರಣೆಗಳೂ ಅವೇ ಆಗಿರಬೇಕು. ಆತ ಅಷ್ಟು ಮಾಡಿದರೆ ಭಾಷಾಂತರದ ನಿರ್ದುಷ್ಟತೆಯ ಬಗೆಗಿನ ಹೊಣೆಗಿಂತ ಮಿಗಿಲಾದ ಯಾವ ಹೊಣೆಯೂ ಆತನಿಗೆ ಇರುವುದಿಲ್ಲ. ತನ್ನ ಪ್ರಮುಖ ಅನುಸರಿಸಿದ ಧೋರಣೆಯ ಬುದ್ಧಿವಂತಿಕೆಯ ಬಗೆಗೆ ದುಭಾಷಿಯ ಅಭಿಪ್ರಾಯ ಏನೇ ಇರಲಿ. ಪೂರ್ವಭಾವಿ ಸಮಾಲೋಚನೆಗಳನ್ನು ನಡೆಸಿರದೆ ಇದ್ದ ಪಕ್ಷದಲ್ಲಿ, ಆತನ ಮನಸ್ಸಿನಲ್ಲಿ ಏನಿದೆ ಎಂಬುದನ್ನೆಲ್ಲ ತಿಳಿಯಲು ಆತನಿಗೆ ಸಾಧ್ಯವಾಗುವುದಿಲ್ಲ. ಸ್ಪಷ್ಟವಾಗಿಯೇ ಅವರ ನಡುವೆ ಸಾಮರಸ್ಯ ಏರ್ಪಟ್ಟಿರುವುದಿಲ್ಲ. ಮನೋವೃತ್ತಿಗಳ ಅಸಾಮಂಜಸ್ಯಕ್ಕೆ ಮಾತ್ರ ಎಡೆದೊರೆತಿರುತ್ತದೆ.

ಎರಡನೆಯ ವಿಶ್ವಯುದ್ಧದ ತರುವಾಯ. ದೊಡ್ಡ ದೊಡ್ಡ ಸಮ್ಮೇಳನಗಳಲ್ಲಿ ಅನುಕ್ರಮಿಕ ಭಾಷಾಂತರದ ಪದ್ಧತಿ. ಸಂಪೂರ್ಣವಾಗಿ ಅಲ್ಲದಿದ್ದರೂ, ಬಹುಮಟ್ಟಿಗೆ ಕೊನೆಯುಸಿರನ್ನೆಳೆದಿದೆ. ಮಾತನಾಡುವ ವ್ಯಕ್ತಿ ಕೆಲವು ವಾಕ್ಯಗಳನ್ನು ಹೇಳುವುದು ಹಾಗೂ ತಕ್ಷಣವೇ ದುಭಾಷಿ ಅವನ್ನು ಇನ್ನೊಂದು ಭಾಷೆಗೆ ಭಾಷಾಂತರಿಸುವುದು. ಅಥವಾ ಮಾತನಾಡುವ ವ್ಯಕ್ತಿ (ಭಾಷಣಕಾರ) ಇಡಿ ಭಾಷಣವನ್ನು ಅಥವಾ ಅದರ ಗಮನಾರ್ಹ ಭಾಗವನ್ನು ಪೂರೈಸುವುದು ಹಾಗೂ ಈ ಅವಧಿಯಲ್ಲಿ ಟಿಪ್ಪಣಿ ಮಾಡಿಕೊಳ್ಳುತ್ತಿದ್ದ ದುಭಾಷಿ, ಹೀಗೆ ಭಾಷಣ ಮುಗಿದ ಕೂಡಲೆ ತಾನು ಭಾಷಾಂತರವನ್ನು ಕೊಡ ತೊಡಗುವುದು. ಅಥವಾ ಭಾಷಣಕಾರ ಮಾತನಾಡಿಕೊಂಡು ಹೋಗುತ್ತಿರುವಂತೆಯೇ, ಆ ವಾಕ್ಯ

ಪೂರ್ಣವಾಗುವುದರೊಳಗಾಗಿಯೇ ದುಭಾಷಿಯು ಭಾಷಾಂತರವನ್ನು ಕೊಡುತ್ತಾ ಹೋಗುವುದು–ಇದನ್ನೇ ನಾನು ಅನುಕ್ರಮಿಕ ಭಾಷಾಂತರವೆಂದು ಕರೆದಿದ್ದೇನೆ. ಇಂದು ಸಮ್ಮೇಳನ–ಕೊಠಡಿಗಳು ದೂರವಾಣಿ ವ್ಯವಸ್ಥೆ ಸಜ್ಜಾಗಿರುತ್ತವೆ. ದುಭಾಷಿಗಳು ಅಲ್ಲಿ ಶ್ರವಣ ಹಾಗೂ ವಚನ ಉಪಕರಣಗಳನ್ನು ತೊಟ್ಟುಕೊಂಡು ಕುಳಿತಿರುತ್ತಾರೆ. ಸದಸ್ಯರ ಎದುರಿಗೆ ಇರಿಸಲಾಗಿರುವ ಧ್ವನಿವರ್ಧಕಗಳಿಗೆ ಈ ದುಭಾಷಿಗಳ ಭಾಷಾಂತರವನ್ನು ಪುನಃ ಪ್ರಸಾರ ಮಾಡಲಾಗುತ್ತದೆ. ಆ ಸದಸ್ಯರು ತಾವು ಕೇಳಬೇಕೆಂದಿರುವ ಭಾಷೆಯ ಗುಂಡಿಯನ್ನೊತ್ತಿದರೆ ಆ ಭಾಷೆಯ ಅನುವಾದ ಅವರಿಗೆ ಕೇಳಿಸುತ್ತದೆ. ಇತರ ಬಗೆಯ ಯಂತ್ರೋಪಕರಣಗಳೂ ಇವೆ. ಇಷ್ಟಾಗಿಯೂ ಸಣ್ಣ ಸಭೆಗಳ–ಉದಾಹರಣೆಗೆ, ವಾಣಿಜ್ಯ ಅಥವಾ ಔದ್ಯೋಗಿಕ ಸಂಭಾಷಣೆಗಳು, ಬೇರೆ ಬೇರೆ ಭಾಷೆಗಳನ್ನಾಡುವ ವ್ಯಾಪಾರಿಗಳ ನಡುವಣ ಸಭೆಗಳು, ವಿತ್ತಮಂತ್ರಿಯು ಅಧಿಕಾರಿಗಳು ಭಾಗವಹಿಸುವಂಥ ಸರ್ಕಾರಿ ನಿಯೋಗಗಳ ಭೇಟಿಗಳು, ನ್ಯಾಯಾಲಯದಲ್ಲಿ–ಪೌರ ಹಾಗೂ ಪೋಲೀಸ್ ನ್ಯಾಯಾಲಯಗಳಲ್ಲಿ–ವಿದೇಶೀಯರ ಬಗ್ಗೆ ಹೂಡಲಾದ ಮೊಕದ್ದಮೆಗಳ–ಸಂದರ್ಭದಲ್ಲಿ ಇಂದೂ ಸಾಂಪ್ರದಾಯಿಕ ದುಭಾಷಿತ್ವ ಅಗತ್ಯವಾಗಿದೆ.

ದುಭಾಷಿಯ ಕೆಲಸ ತನ್ನದೇ ಆದ ವಿಚಿತ್ರ ಕ್ಲೇಶಗಳನ್ನು ಹಾಗೂ ಹೊಣೆಗಳನ್ನು ಹೊಂದಿದ್ದರೂ, ಸಹಜವಾಗಿಯೇ ಕೆಲವು ಲಾಭಗಳೂ ಅದಕ್ಕೆ ಲಭ್ಯವಾಗಿವೆ; ಅದಕ್ಕೆ ಅನೇಕ ಪ್ರತಿಫಲಗಳೂ ಇವೆ. ಪ್ರಮುಖ ಮಾತುಕತೆಯೊಂದರಲ್ಲಿ ತನ್ನ ಕೌಶಲ ಮತ್ತು ಅನುಭವಗಳು ಮಹತ್ವಪೂರ್ಣ ಪಾತ್ರ ವಹಿಸಿದೆಯೆಂಬ ಅರಿವು ತುಂಬ ತೃಪ್ತಿಯ ಅನುಭವವನ್ನು ತಂದುಕೊಡುತ್ತದೆ. ಅನೇಕ ವೇಳೆ ಬಳಲಿಕೆಯನ್ನು ನೀಗುವಂಥ ಮೆಚ್ಚಿಕೆಯ ಮತ್ತು ಪ್ರೋತ್ಸಾಹದ ಮಾತುಗಳೂ ಕೇಳಿಬರುತ್ತವೆ. ದುಭಾಷಿಯೊಬ್ಬನ ಯಶಸ್ಸನ್ನು ಸಾರ್ವಜನಿಕವಾಗಿ ಘೋಷಿಸಲು ಸಾಧ್ಯವಾಗದೆ ಹೋಗಬಹುದಾದರೂ, ಹೆಚ್ಚು ಸೀಮಿತವಾಗಿರುವಂಥ ವಲಯದಲ್ಲಿ ಅದಕ್ಕೆ ಮಾನ್ಯತೆ ದೊರೆಯುತ್ತದೆ; ಅದಕ್ಕೆ ತಕ್ಕ ಬೆಲೆಯನ್ನೂ ಕೊಡಲಾಗುತ್ತದೆ. ತನ್ನ 'ಪ್ರಮುಖ ವ್ಯಕ್ತಿ'ಯೊಡನೆ ವ್ಯಾಪಕವಾಗಿ ಹಾಗೂ ಸುಖಸೌಲಭ್ಯಗಳೊಡನೆ ಪ್ರವಾಸ ಮಾಡುವಂಥ, ಮತ್ತು ಅತನಿಗೆ ಕೊಡುವ ಸಾಮಾಜಿಕ ಆಹ್ವಾನಗಳು ಈತನಿಗೂ ಲಭ್ಯವಾಗುವಂಥ ಪ್ರತಿಫಲವೂ ಇದ್ದಿದೆ. ಇಷ್ಟಾಗಿಯೂ ಔತಣಕೂಟದಲ್ಲಿ ಮೊದಲಿನಿಂದ ಕೊನೆಯವರೆಗೂ, ಭಾಷಾಂತರಿಸುವ ಕಾರ್ಯಕ್ಕೆ ಸಂಬಂಧಿಸಿದಂತೆ ಈತನಿಗೆ ಸತತವಾದ ಬೇಡಿಕೆ ಇರುವುದರಿಂದ, ಊಟದ ಮೇಜಿನ ಬಳಿ ಕುಳಿತರೂ ತಿನ್ನಲು ಅಥವಾ ಕುಡಿಯಲು ಸಾಧ್ಯವಾಗದಂಥ ಪ್ರತಿಕೂಲ ಸನ್ನಿವೇಶಗಳೂ ಇದ್ದೇ ಇರುತ್ತವೆ.

ಮೂಲ: ೧೮ ಸೆಪ್ಟೆಂಬರ್ ೧೯೭೦ರ 'Times Literary Supplement' ಪತ್ರಿಕೆಯಲ್ಲಿನ 'The Anonymous Men in between' ಎಂಬ ಲೇಖನ.

ಎಸ್. ಎಸ್. ಶಿವರುದ್ರಸ್ವಾಮಿ

ಮುದ್ರಾಂಕಿತ ನಾಣ್ಯಗಳು

ಪ್ರಾಚೀನ ಕಾಲದಲ್ಲಿ ನಾಣ್ಯಗಳು ಚಲಾವಣೆಗೆ ಬರುವುದಕ್ಕೆ ಮುನ್ನ ವ್ಯಾಪಾರವು 'ವಸ್ತು ವಿನಿಮಯ' (barter system) ಪದ್ಧತಿಯ ಮೂಲಕ ನಡೆಯುತ್ತಿತ್ತು. ಪಸು, ಉರುಳುವ ಕಲ್ಲು (rollers)ಗಳು ವ್ಯಾಪಾರ ವಿನಿಮಯದ ವಸ್ತುಗಳಾಗಿದ್ದವೆಂದು ಪ್ರಾಚೀನ ಸಾಹಿತ್ಯವು ನಮಗೆ ತಿಳಿಸುತ್ತದೆ. ಜಗತ್ತಿನಲ್ಲೇ ಮೊಟ್ಟಮೊದಲಿಗೆ ಲಿಡಿಯಾ ದೇಶವು ಕಿ.ಪೂ. ಏಳನೆಯ ಶತಮಾನದಲ್ಲಿ ನಾಣ್ಯಗಳನ್ನು ಚಲಾವಣೆಗೆ ತಂದಿತು. ಭಾರತದಲ್ಲೂ ಇದೇ ಸುಮಾರಿಗೆ–ಅಂದರೆ ಕ್ರಿ.ಪೂ. ಆರನೆಯ ಶತಮಾನದಲ್ಲಿ ನಾಣ್ಯಗಳು ಚಲಾವಣೆಗೆ ಬಂದವು. ಇವೇ ಮುದ್ರಾಂಕಿತ ನಾಣ್ಯಗಳು. ಈ ನಾಣ್ಯಗಳ ಸಹಾಯದಿಂದ ಆ ಕಾಲದ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಆರ್ಥಿಕ ಸ್ಥಿತಿಗತಿಗಳನ್ನು ಅರಿಯಬಹುದು.

ಮುದ್ರಾಂಕಿತ ನಾಣ್ಯಗಳು ಆಕೃತಿ–ವಿನ್ಯಾಸಗಳಲ್ಲಿ ತೀರ ಸಾಮಾನ್ಯ ಮತ್ತು ಸರಳ. ಈ ನಾಣ್ಯಗಳು ಚೌಕ, ಆಯತ. ಮತ್ತು ವರ್ತುಲಾಕಾರದ–ಇನ್ನೂ ವಿವಿಧಾಕಾರದ, ಉನ್ನತ ಲೋಹಗಳ ಗೊತ್ತಾದ ತೂಕವುಳ್ಳ ತುಣುಕುಗಳು. ಈ ತುಣುಕುಗಳ ಒಂದು ಮುಖದಲ್ಲಿ ಹೆಚ್ಚಾಗಿ ವಿವಿಧ ಮುದ್ರೆಗಳನ್ನೊತ್ತಿರುವುದನ್ನು ಕಾಣಬಹುದು. ಆದುದರಿಂದಲೇ ಈ ನಾಣ್ಯಗಳನ್ನು 'ಮುದ್ರಾಂಕಿತ' ಅಥವಾ punch-marked ನಾಣ್ಯಗಳೆಂದು ಕರೆಯುತ್ತಾರೆ. ಬೆಳ್ಳಿಯ ಮತ್ತು ತಾಮ್ರ–ಲೋಹಗಳ ನಾಣ್ಯಗಳು ಹೇರಳವಾಗಿ ದೊರೆತಿವೆ. ಇತ್ತೀಚೆಗೆ ಎರಡು ಚಿನ್ನದ ಮುದ್ರಾಂಕಿತ ನಾಣ್ಯಗಳು ದೊರೆತಿರುವುದು ವರದಿಯಾಗಿದೆ.

ನಾಣ್ಯಗಳ ವ್ಯಾಪಕತೆ

ಮುದ್ರಾಂಕಿತ ನಾಣ್ಯಗಳು ಭಾರತದಾದ್ಯಂತ ದೊರಕಿವೆ. ಉತ್ತರದಲ್ಲಿ ಕಾಬೂಲಿನಿಂದ ಹಿಡಿದು, ಬಂಗಾಳದ ಸುಂದರ ಬನದವರೆಗೂ, ದಕ್ಷಿಣದಲ್ಲಿ ಕೊಯಮುತ್ತೂರಿನವರೆಗೂ ವಿಪುಲವಾಗಿ ದೊರೆತಿವೆ. ನೆಲದಲ್ಲಿ ಹುದುಗಿದ್ದ ಕೆಲವೊಂದು ನಾಣ್ಯಗಳ ಶೇಖರಣೆಗಳನ್ನು ಇಲ್ಲಿ ಹೇಳುವುದು ಸೂಕ್ತವಾದುದು. ಮೂರು ಸಾವಿರಕ್ಕೂ ಹೆಚ್ಚು ನಾಣ್ಯಗಳಿರುವ ಸಂಗ್ರಹವೊಂದು ಈಗಿನ ರಾಜಸ್ಥಾನದಲ್ಲಿ ಸೇರ್ಪಡೆಯಾಗಿರುವ ಜಯಪುರ ಸಂಸ್ಥಾನದಲ್ಲಿ ದೊರೆಯಿತು. ಮಹಾರಾಷ್ಟ್ರದ ಖಾನ್‌ದೇಶ ಮತ್ತು ಉತ್ತರ ಪ್ರದೇಶದಲ್ಲಿ ಸಹ ದೊರಕಿದವು, ಮುಖ್ಯವಾದ ದೊಡ್ಡ ಸಂಗ್ರಹಗಳು.

ಬಹುಶಃ ಮೂರು ಚುಕ್ಕಿಗಳ ಬೆಳ್ಳಿಯ ಪಟ್ಟಿಯೊಂದು, ಸದ್ಯಕ್ಕೆ ತಿಳಿದಿರುವ, ತೀರ ಪ್ರಾಚೀನವಾದ ಮುದ್ರಾಂಕಿತ ನಾಣ್ಯ. ಕೆಲವು ಮುದ್ರಾಂಕಿತ ನಾಣ್ಯಗಳ ಮುಮ್ಮುಖದಲ್ಲಿ ಮುದ್ರೆಗಳಿದ್ದು, ಹಿಮ್ಮುಖದಲ್ಲಿ

ಕಾಣಬರುತ್ತವೆ. ಇನ್ನು ಕೆಲವುಗಳಲ್ಲಿ ಮುಮ್ಮುಖ-ಹಿಮ್ಮುಖಗಳಲ್ಲಿ ಮುದ್ರೆಗಳನ್ನು ಕಾಣಬಹುದು. ಮುದ್ರಾಂಕಿತ ನಾಣ್ಯಗಳ ಮೇಲಿನ ಚಿತ್ರ ಅಥವಾ ಮುದ್ರೆಗಳ ಸಂಖ್ಯೆ ಅಪಾರ. ಮಾನವಾಕೃತಿ. ವೃಕ್ಷ, ಪಕ್ಷಿ, ಸೌರವ್ಯೂಹ. ಗೋಲ. ಪರ್ವತ. ನಾಯಿ. ಚೇಳು. ಹಾವು ಮುಂತಾದ ಮುನ್ನೂರಕ್ಕೂ ಹೆಚ್ಚಿನ ಮುದ್ರೆಗಳು ಕಾಣಸಿಗುತ್ತವೆ. ಪ್ರಾಯಶಃ ಮೊದಲಿಗೆ ಚೌಕ-ಆಯತಾಕಾರದ ನಾಣ್ಯಗಳು. ಅನಂತರ ವರ್ತುಲಾಕಾರದ ನಾಣ್ಯಗಳು ಬಳಕೆಗೆ ಬಂದಿರಬೇಕು.

ಕಾಲ

ಈ ನಾಣ್ಯಗಳು ಕ್ರಿ.ಪೂ. ಕಾಲದ್ದೆಂಬುದು ತೀರ ಖಚಿತವಾದ ವಿಷಯವಾಗಿದ್ದರೂ, ಅವುಗಳ ಚಲಾವಣೆಯ ನಿಖರವಾದ ಕಾಲದ ಬಗ್ಗೆ ದೊಡ್ಡದೊಂದು ವಿವಾದವೇ ಎದ್ದಿದೆ. ಇವುಗಳ ಬಳಕೆ ಕ್ರಿ.ಪೂ. ಆರನೆಯ ಶತಮಾನವೆಂಬುದು ಬಹುಜನ ವಿದ್ವಾಂಸರ ಅಭಿಪ್ರಾಯ. ಇನ್ನು ಕೆಲವು ವಿದ್ವಾಂಸರ ಪ್ರಕಾರ. ಮುದ್ರಾಂಕಿತ ನಾಣ್ಯಗಳ ಚಲಾವಣೆ ಕ್ರಿ.ಪೂ. ಏಳು-ಎಂಟನೆಯ ಶತಮಾನಗಳ ಹಿಂದಕ್ಕೆ ಸರಿಯುತ್ತವೆ. "ಕ್ರಿ.ಪೂ. ನಾಲ್ಕನೆಯ ಶತಮಾನದಲ್ಲಿ ಅಂಬಿಯು ಎಂಬತ್ತು ಟ್ಯಾಲೆಂಟು (talents) ಗಳ ಮುದ್ರಾಂಕಿತ ಬೆಳ್ಳಿಯನ್ನು ಅಲೆಕ್ಸಾಂಡರನಿಗೆ ಕೊಟ್ಟನೆಂಬ"-ಸಂದರ್ಭವಾದ ಕ್ವಿಂಟಸ್ ಕರ್ಟಿಯಸ್ ಎಂಬ ಲ್ಯಾಟಿನ್ ಲೇಖಕನ ಹೇಳಿಕೆ ಅತ್ಯಂತ ಗಮನಾರ್ಹ. ಭಿರ್ ದಿಬ್ಬದಲ್ಲಿ ಪರ್ಶಿಯನ್ನರ ಸಿಗ್‌ಲೊಯಿ, ಅಲೆಕ್ಸಾಂಡರನ ಕಾಲ್ಪುದ ನಾಣ್ಯಗಳ ಜೊತೆ ಮುದ್ರಾಂಕಿತ ನಾಣ್ಯಗಳು ದೊರೆತಿರುವುದು ಇನ್ನೊಂದು ಪ್ರಮುಖವಾದ ಅಂಶ. ಇದರಿಂದ ಮುದ್ರಾಂಕಿತ ನಾಣ್ಯಗಳು ಕ್ರಿ.ಪೂ. ನಾಲ್ಕನೆಯ ಶತಮಾನದಲ್ಲಿ ಚಲಾವಣೆಯಲ್ಲಿ ಇತ್ತೆಂಬುದು ಖಚಿತವಾಗುತ್ತದೆ. ಈ ಕಾಲಕ್ಕಿಂತ ಮೊದಲು-ಎಂದು ಚಲಾವಣೆಗೆ ಬಂದವು-ಎಂಬುದು ಸಂಶೋಧನೆಗೆ ಒಳಪಡುವ ಅಂಶ. ಕ್ರಿ.ಪೂ. ಆರನೆಯ ಶತಮಾನದಿಂದೀಚೆಗೆ ಚಲಾವಣೆಗೆ ಬಂದಿತ್ತೆಂದು ಎ.ಎಲ್. ಭಾಷಮ್‌ರು ತಿಳಿಸುತ್ತಾರೆ. ಡಾ. ಮೋಥಿಯ ಪ್ರಕಾರ. ಅವುಗಳ ಬಳಕೆ ಆರನೆಯ ಶತಮಾನದಿಂದ ಹಿಂದಕ್ಕೆ ಸರಿಯುತ್ತದೆ. ವೇದ. ವೇದೋತ್ತರ ಕಾಲದಲ್ಲಿನ ಸಾಹಿತ್ಯಗಳಲ್ಲಿ ಉಕ್ತವಾಗಿರುವ ಪೂಜಾವಸ್ತುಗಳೇ ಮುದ್ರಾಂಕಿತ ನಾಣ್ಯಗಳಲ್ಲಿ ಪ್ರತಿಬಿಂಬಿತವಾಗಿವೆ-ಎಂಬ ಮೋಥಿಯವರ ಮಾತು ಒಪ್ಪಬೇಕಾದದ್ದೇ.

ಪ್ರೊ. ಅಲೆನ್. ರ್‍ಯಾಪ್ಸನ್ ಮುಂತಾದವರು ಮುದ್ರಾಂಕಿತ ನಾಣ್ಯಗಳ ಬಳಕೆಯನ್ನು ಐದು-ನಾಲ್ಕನೆಯ ಶತಮಾನವೆಂದು ಹೇಳಿದರೆ. ದುರ್ಗಾಪ್ರಸಾದ್ ಮತ್ತು ಡಿ. ಡಿ. ಕೊಸಾಂಬಿಯವರು, ಕ್ರಿ. ಪೂ. ಆರನೆಯ ಶತಮಾನವೆಂದು ವಾದಿಸುತ್ತಾರೆ.

ಸಿ. ಜೆ. ಬ್ರೌನರು ತಮ್ಮ ಸಿದ್ಧಾಂತದಲ್ಲಿ ಮುದ್ರಾಂಕಿತ ನಾಣ್ಯಗಳು ಕೊನೆಯ ಪಕ್ಷ ಕ್ರಿ.ಪೂ. ಆರನೆಯ ಶತಮಾನದಿಂದ ಬಳಕೆಗೆ ಬಂದಿತ್ತೆಂದು ತಿಳಿಸುತ್ತಾರೆ.

ಮುದ್ರಾಂಕಿತ ನಾಣ್ಯಗಳು ಭಾರತೀಯರಿಂದಲೇ ಚಲಾವಣೆಗೆ ಬಂದವ್ರೋ. ಅಥವಾ ವಿದೇಶೀಯರಿಂದ ಬಂದಿತೊ-ಎಂಬುದರ ಬಗ್ಗೆ ವಾದವಿವಾದಗಳು ಸಾಕಷ್ಟಿವೆ. ಇದರ ಬಗ್ಗೆಯೂ ದೇಶೀಯ ಹಾಗೂ ವಿದೇಶೀಯ ವಿದ್ವಾಂಸರ ವರ್ಗಗಳೆರಡು ಬೆಳೆದು ಬಂದಿವೆ. ಭಾರತದ ಇತಿಹಾಸದ ಯಾವುದೇ ಸಮಸ್ಯೆಗೂ ಈ ವರ್ಗಭೇದಗಳು ಅಂಟಿಕೊಳ್ಳುತ್ತವೆ. ವಿದೇಶೀ ವಿದ್ವಾಂಸರು ಮುದ್ರಾಂಕಿತ ನಾಣ್ಯಗಳ ಮೇಲೆ ವಿದೇಶೀ ಸಿಗ್‌ಲೂಯಿಯ ಪ್ರಭಾವವನ್ನು ಕಾಣುವ ವ್ಯರ್ಥಪ್ರಯತ್ನದಲ್ಲಿ ತೊಡಗುತ್ತಾರೆ. ಅನಂತರದ ಸಂಶೋಧನೆಗಳಿಂದ ಸಿಗ್‌ಲೂಯಿಯ ಯಾವುದೇ ಪ್ರಭಾವವು ಮುದ್ರಾಂಕಿತ ನಾಣ್ಯಗಳ ಮೇಲಿಲ್ಲವೆಂಬುದು ವ್ಯಕ್ತವಾಗುತ್ತದೆ.

ದುರ್ಗಾಪ್ರಸಾದ್ ಮತ್ತು ಡಿ. ಡಿ. ಕೊಸಾಂಬಿಯವರು ಈ ದಿಸೆಯಲ್ಲಿ ಸಾಕಷ್ಟು ಕೆಲಸ ಮಾಡಿರುವ ವ್ಯಕ್ತಿಗಳು. ಅವರು ಸಾವಿರಾರು ಮುದ್ರಾಂಕಿತ ನಾಣ್ಯಗಳನ್ನು ಸಂಶೋಧಿಸಿ. ಇವು ದೇಶೀಯ ನಾಣ್ಯಗಳೆಂದು ಪರಿಗಣಿಸಿರುದು ಮಾತ್ರವೇ ಅಲ್ಲ. ಪ್ರಾಚೀನ ಸಂಸ್ಕೃತ ಸಾಹಿತ್ಯದಲ್ಲಿ ಉಲ್ಲೇಖವಾಗಿರುವ ಶತಮಾನ-ದಂತಹ ನಾಣ್ಯಗಳಂತೆ, ದೇಶೀಯ ನಾಣ್ಯಗಳೆಂದು ಪರಿಗಣಿಸಿದರು.

ಮುದ್ರಾಂಕಿತ ನಾಣ್ಯಗಳ ಕರ್ತೃ

ಭಾರತದ ಪ್ರಾಚೀನ ನಾಣ್ಯಗಳಾದ ಮುದ್ರಾಂಕಿತ ನಾಣ್ಯಗಳನ್ನು ಚಲಾವಣೆಗೆ ತಂದವರ ಬಗ್ಗೆ ಇನ್ನೂ ಸಾಕಷ್ಟು ತಿಳಿಯದು. ಆದಿನ ದಿವಸಗಳಲ್ಲಿ ಯೂರೋಪಿನಲ್ಲಿದ್ದಂತೆ, ಭಾರತದಲ್ಲೂ ನಾಣ್ಯಗಳನ್ನು ಸೋನಗಾರರೋ ಅಥವಾ ವ್ಯಾಪಾರಿಗಳೋ ಬಳಕೆಗೆ ತಂದಿರಬೇಕು ಸಿ. ಜೆ. ಬ್ರೌನರು ಅಭಿಪ್ರಾಯ ಪಡುವಂತೆ. "ಈ ನಾಣ್ಯಗಳನ್ನು ಮೊದಲಿಗೆ ಖಾಸಗಿ ವ್ಯಾಪಾರಿಗಳು ಚಲಾವಣೆಗೆ ತಂದು, ಅನಂತರ ಇವು ಕಾಲಕ್ರಮೇಣ ರಾಜಾಧಿಕಾರಕ್ಕೆ ಒಳಪಟ್ಟಿರಬೇಕು."

ಅನೇಕ ವಿದ್ವಾಂಸರು ಈ ತೊಡಕನ್ನು ಬಿಡಿಸುವಲ್ಲಿ ತಮ್ಮ ಕೈಲಾದಷ್ಟು ಸೇವೆ ಸಲ್ಲಿಸಿದ್ದಾರೆ. ಪರಮೇಶ್ವರೀಲಾಲ್ ಗುಪ್ತ, ಆರ್. ಜಿ. ಭಂಡಾರಕರ್, ಸಿ. ಜ್ವ, ಬ್ರೌನ್ ಇನ್ನು ಮುಂತಾದವರು ಅಂದು ಆರ್ಯಾವರ್ತವನ್ನು ಆಳುತ್ತಿದ್ದ ಜನಪದ–ಮಹಾಜನಪದಗಳೇ ಈ ಮುದ್ರಾಂಕಿತ ನಾಣ್ಯಗಳನ್ನು ಬಳಕೆಗೆ ತಂದವೆಂದು ಅಭಿಪ್ರಾಯಪಡುತ್ತಾರೆ. ಅಲೆನ್, ರ್‍ಯಾಪ್‌ಸನ್, ಕೊಸಾಂಬಿ, ದುರ್ಗಾಪ್ರಸಾದ್, ಮೇಥಿ–ಮುಂತಾದವರು ಅಂದು ಭಾರತವನ್ನಾಳಿದ ಮಗಧ ಸಾಮ್ರಾಜ್ಯದ ಅರಸರು ಈ ನಾಣ್ಯಗಳನ್ನು ಚಲಾವಣೆಗೆ ತಂದರೆಂದು ಅಭಿಪ್ರಾಯ ಪಡುತ್ತಾರೆ. ವಿದ್ವಾಂಸರು ಅನೇಕ ಸತ್ಯಸಂಗತಿಗಳ ಆಧಾರದ ಮೇಲೆ ತಮ್ಮ ತಮ್ಮ ಊಹೆಯನ್ನು ವಿಸ್ತರಿಸಿ, ತಮ್ಮದೇ ಆದ ಸಿದ್ಧಾಂತಗಳನ್ನು ರೂಪಿಸಿದ್ದಾರೆ. ಮಗಧಾಧಿಪತಿಗಳಾದ ನಂದರು ಈ ನಾಣ್ಯಗಳನ್ನು ಟಂಕಿಸಿರಬೇಕೆಂದು ಅಲೆನ್ನರು ನುಡಿಯುತ್ತಾರೆ. ಅವರು 'ಸೂರ್ಯ ಮತ್ತು ಆರು ಶಸ್ತ್ರಧಾರಿ ಮನುಷ್ಯರ' (six-armed men) ಚಿಹ್ನೆಯನ್ನು ಹೊಂದಿರುವ ನಾಣ್ಯಗಳು ನಂದರದು ಅಥವಾ ಮೌರ್ಯರದ್ದಿರಬೇಕೆಂದು ತಿಳಿಸುತ್ತಾರೆ. ಈ ಚಿಹ್ನೆಯು ಈ ರಾಜವಂಶಗಳ ಮತ್ತು ನಿಕ್ಷೇಪಾಧಿಕಾರಿ ಲಕ್ಷಣಾಧ್ಯಕ್ಷ (ಅಥವಾ ಕೌಟಿಲ್ಯನ ರೂಪದರ್ಶಕ)ನದ್ದಿರಬೇಕು. ಮುದ್ರಾಂಕಿತ ನಾಣ್ಯಗಳ ಚಿಹ್ನೆ–ಚಿತ್ರಗಳು ಮೊಹೆಂಜೊದಾರೋ ಮುದ್ರಾಕೃತಿಗಳ ಮುಂದುವರಿಯುವಿಕೆ ಎಂಬ ವಾಲ್ಷ (Walsh)ನ ಅಭಿಪ್ರಾಯ ಒಪ್ಪತಕ್ಕದ್ದೆ. ಕೊಸಾಂಬಿಯವರು ಮುದ್ರಾಂಕಿತ ನಾಣ್ಯಗಳ ಸೂರ್ಯಸಂಕೇತವನ್ನು ಏಕಚಕ್ರಾಧಿಪತ್ಯದ ಸಂಕೇತವೆನ್ನುತ್ತಾರೆ. ಮೇಥಿಯವರು ಕಮಾನಿನ ಮೇಲಿನ ಅರ್ಧಚಂದ್ರ (erescent on arches)ವು ಮೌರ್ಯರ ಸಂಕೇತವನ್ನುತ್ತಾರೆ. ಮೂರು ಅಂಡಾಕಾರಗಳು ಮತ್ತು ಅವುಗಳ ಸ್ಪರ್ಶರೇಖೆಯುಳ್ಳ ನಾಣ್ಯಗಳು ಅಶೋಕನದ್ದಿರಬೇಕು. ಕಮಾನಿನ ಮೇಲಿರುವ ನವಿಲಿನ ಚಿತ್ರಗಳ ನಾಣ್ಯಗಳು ಮೌರ್ಯರದ್ದು ಎಂಬುದರಲ್ಲಿ ಅನುಮಾನವಿಲ್ಲ; ಇದು ಮೌರ್ಯ ವಂಶದ ಉಗಮವನ್ನು ಸೂಚಿಸುತ್ತದೆ.

ಮುದ್ರಾಂಕಿತ ನಾಣ್ಯಗಳ ಕುರಿತ ಸಿ. ಜೆ ಬ್ರೌನರ ಸಿದ್ಧಾಂತವು ಸ್ವಾರಸ್ಯಕರವಾಗಿದೆ. ಅಲೆಕ್ಸಾಂಡರನ ಆಗಮನದ ವೇಳೆಗೆ ಆರ್ಯಾವರ್ತ ಮತ್ತು ಪಂಜಾಬು ಹಲವಾರು ಸಣ್ಣ-ಪುಟ್ಟ ರಾಜ್ಯಗಳಾಗಿ ಚದುರಿ ಹೋಗಿದ್ದವು. ಅವುಗಳಲ್ಲಿ ಕೆಲವು ಪ್ರಭುಗಳಿಂದಲೂ, ಮತ್ತೆ ಕೆಲವು ವೈಭವಯುತ ಗಣ ಸರ್ಕಾರಗಳಿಂದಲೂ ಪರಿಪಾಲಿತವಾಗಿದ್ದವು. ಈ ರಾಜ್ಯಗಳು ಬೆಳ್ಳಿ, ತಾಮ್ರದ ನಾಣ್ಯಗಳನ್ನು ಚಲಾವಣೆಗೆ ತಂದಿದ್ದವು. ಮುಂದೆ ಮೌರ್ಯ ಸಾಮ್ರಾಜ್ಯ ಪ್ರಬುದ್ಧಮಾನಕ್ಕೆ ಬಂದ ಮೇಲೆ, ಅದರಲ್ಲಿ ಈ ಸಣ್ಣ-ಪುಟ್ಟ ರಾಜ್ಯಗಳೆಲ್ಲ ಕರಗಿ ಹೋದವು. ಈ ರಾಜ್ಯಗಳು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡರೂ, ತಾವು ನಾಣ್ಯಗಳನ್ನು ಚಲಾವಣೆಗೆ ತರುವ ಹಕ್ಕುಗಳನ್ನು ಕಳೆದುಕೊಳ್ಳಲಿಲ್ಲ. ಮುಮ್ಮುಖ (obverse)ದಲ್ಲಿ ಸಿಂಹ, ಹಿಮ್ಮುಖ (reverse)ದಲ್ಲಿ ಆನೆ ಹೊಂದಿರುವ ನಾಣ್ಯಗಳು ಗಾಂಧಾರ ಗಣರಾಜ್ಯಕ್ಕೆ ಸೇರಿವೆ. ಬೋಧಿವೃಕ್ಷ, ಸ್ವಸ್ತಿಕ್, ಬೆಟ್ಟಮಾಲೆಗಳ ಚಿತ್ರ ಹೊಂದಿರುವ ನಾಣ್ಯಗಳು ನಿಜಕ್ಕೂ ಅಶೋಕನ ಕಾಲದವು. ಪಾಂಚಾಲ, ಅಯೋಧ್ಯೆ, ಕೌಶಾಂಬಿ, ಮಥುರ ಮುಂತಾದ ಗಣರಾಜ್ಯಗಳು ಬ್ರಾಹ್ಮೀ ಲಿಪಿಯಲ್ಲಿ ತಮ್ಮ ಹೆಸರುಗಳನ್ನು ಮುದ್ರಿಸಿ, ನಾಣ್ಯಗಳನ್ನು ಚಲಾವಣೆಗೆ ತರುತ್ತಿದ್ದವು. ಇವುಗಳ ಕಾಲ ಕ್ರಿ.ಪೂ. ಒಂದನೆಯ ಮತ್ತು ಎರಡನೆಯ ಶತಮಾನಗಳಿರಬೇಕು. ಈ ನಾಣ್ಯಗಳನ್ನು ಶುಂಗರು

ಚಲಾವಣೆಗೆ ಬಂದಿದ್ದವೂ ಇರಬಹುದು(?) ಪ್ರಾಚೀನ ನಗರವಾದ ಅಹಿಚ್ಛತ್ರದ ನಿವೇಶನ (ರಾಮ ನಗರದ ಹತ್ತಿರ. ರೋಹಿಲಖಂಡ್) ವನ್ನು ಶೋಧನೆ ಮಾಡಿದಾಗ ಪಾಂಚಾಲರ ಹಿತ್ತಾಳೆ ಮತ್ತು ತಾಮ್ರದ ನಾಣ್ಯಗಳು ದೊರೆತಿವೆ. ಅಯೋಧ್ಯೆಯ ನಾಣ್ಯಗಳು ಮುಮ್ಮುಖದಲ್ಲಿ ವೃಷಭನನ್ನು ಕೌಶಾಂಬಿಯ ನಾಣ್ಯಗಳು ಕಮಾನಿನ ನಡುವೆ ವೃಕ್ಷವನ್ನು ಹೊಂದಿವೆ. ಉಜ್ಜಯಿನಿ. ಅಯೋಧ್ಯೆಗಳ ನಾಣ್ಯಗಳು ಸ್ವಸ್ತಿಕ ಮತ್ತು ವೃಷಭ-ಚಿತ್ರಗಳನ್ನು ಹೊಂದಿವೆ.

ಈ ಕ್ಷೇತ್ರದಲ್ಲಿ ಗಣನೀಯವಾಗಿ ದುಡಿದಿರುವ ವ್ಯಕ್ತಿಯೆಂದರೆ. ಡಾ. ಪರಮೇಶ್ವರಿಲಾಲ್ ಗುಪ್ತರು. ಸಾವಿರಾರು ಮುದ್ರಾಂಕಿತ ನಾಣ್ಯಗಳನ್ನು ಪರಿಶೀಲಿಸಿ. ಸಂಶೋಧಿಸಿ. ಆಯಾ ಕಾಲದ ಇತಿಹಾಸದ ಮೇಲೆ ಹೊಸಬೆಳಕನ್ನು ಚೆಲ್ಲಿದ್ದಾರೆ. ಈ ನಾಣ್ಯಗಳ ಸಂಶೋಧನೆಯಲ್ಲಿ ಎರಡು ಅಂಶ ಗಳನ್ನು ಗಮನಿಸುತ್ತಾರೆ. (೧) ನಾಣ್ಯಗಳು ದೊರಕಿದ ತಾಣ ಮತ್ತು (೨) ಅವುಗಳ ಮೇಲಿರುವ ಚಿತ್ರ. ಚಿಹ್ನೆಗಳು. ಭಾರತ ಕುರುಕ್ಷೇತ್ರ ಯುದ್ಧ ನಡೆದ ಮೇಲೆ. ಅಸ್ತಿತ್ವಕ್ಕೆ ಬಂದ. ಆ ಕಾಲದ ಜನಪದ. ಮಹಾಜನಪದಗಳೇ ಈ ನಾಣ್ಯಗಳನ್ನು ಬಳಕೆಗೆ ತಂದಿರಬೇಕೆಂದು ಈ ವಿದ್ವಾಂಸರ ಅಭಿಪ್ರಾಯ. ಕ್ರಿ.ಪೂ. ಆರನೆಯ ಶತಮಾನದಲ್ಲಿ ಬೆಳಗೆ ಬಂದ ಮಗಧ ಸಾಮ್ರಾಜ್ಯದಲ್ಲಿ ಈ ಜನಪದಗಳೆಲ್ಲ ಕರಗಿ ಹೋದವು. ಈ ರಾಜ್ಯಗಳೇ-ಶೂರಸೇನ. ಉತ್ತರ ಪಂಚಾಲ. ದಕ್ಷಿಣ ಪಂಚಾಲ. ವತ್ಸ, ಕುವಲ. ಕಾಶಿ, ಮಲ್ಲ, ಮಗಧ, ವಂಗ, ಕಳಿಂಗ, ಅಂಗ, ಅಶ್ಮಕ, ಮೂಲಕ, ಸುರಾಷ್ಟ್ರ, ಗಾಂಧಾರ ಮುಂತಾದವು. ಉಪನಿಷತ್ತು. ಬ್ರಾಹ್ಮಣ-ಮುಂತಾದ ಸಾಹಿತ್ಯಗಳಕಾಲದಲ್ಲಿ-ಅಂದರೆ ಕ್ರಿ.ಪೂ. ಎಂಟನೆಯ ಶತಮಾನ ದಲ್ಲಿ-ಅನೇಕ ಜನಪದಗಳು ಲೋಹದ ತುಂಡುಗಳನ್ನು ನಾಣ್ಯಗಳ ರೂಪದಲ್ಲಿ ಉಪಯೋಗಿಸು ತ್ತಿದ್ದವು. ಕಾಲಾಂತರ ಮೇಲೆ ನಾಣ್ಯಗಳ ಭಾವನೆ ಅವರ ಮನಸ್ಸಿಗೆ ತಾಕಿರಬೇಕು. ಅನಂತರ ಕ್ರಿ.ಪೂ. ಆರನೆಯ ಶತಮಾನದಲ್ಲಿ ನಾಣ್ಯಗಳು ಬಳಕೆಗೆ ಬರಲಾರಂಭಿಸಿದವು. ಪ್ರತಿಯೊಂದು ಜನಪದವು ತನ್ನದೇ ಆದ ನಾಣ್ಯಗಳನ್ನು ಟಂಕಿಸಿ, ಚಲಾವಣೆಗೆ ಬಿಟ್ಟಿತು.

ನಾಣ್ಯಗಳ ಸಂಯೋಜನೆ. ತೂಕ. ಉಪಯೋಗಿಸಿದ ಲೋಹ. ಮತ್ತು ಚಿಹ್ನೆ-ಚಿತ್ರಗಳಲ್ಲಿ ಒಂದು ರಾಜ್ಯದ ನಾಣ್ಯಪದ್ಧತಿ ಮತ್ತೊಂದು ರಾಜ್ಯದ ಪದ್ಧತಿಗೆ ತೀರ ಭಿನ್ನವಾಗಿರುತ್ತದೆ. ಶೂರಸೇನ. ಉತ್ತರ ಪಂಚಾಲ, ಕುವಲ. ಸುರಾಷ್ಟ್ರ ಮತ್ತು ಅಶ್ಮಕ ರಾಜ್ಯಗಳ ನಾಣ್ಯಗಳು ಒಂದೇ ಮುಖದಲ್ಲಿ ಒಂದೇ ಚಿಹ್ನೆಯನ್ನು ಹೊಂದಿ. ಒಂದಕ್ಕಿಂತ ಮತ್ತೊಂದು ಭಿನ್ನವಾಗಿದೆ. ಕೆಲ ರಾಜ್ಯಗಳು ಕರಗಿದ ಲೋಹವನ್ನು ಗೊತ್ತಾದ ಅಚ್ಚುಗಳಿಗೆ, ಸುರಿದು ನಾಣ್ಯಗಳನ್ನು ತಯಾರಿಸುತ್ತಿದ್ದವು. ಇನ್ನು ಕೆಲವು ರಾಜ್ಯಗಳು, ಕಾಯಿಸಿದ ಲೋಹದ ತಗಡುಗಳನ್ನು ಮೆದು ಸ್ಥಿತಿಯಲ್ಲಿರುವಾಗಲೇ ಚಿಹ್ನೆಯನ್ನು ಬಡಿದು ನಾಣ್ಯಗಳನ್ನು ತಯಾರಿಸುತ್ತಿದ್ದವು. ಅಶ್ಮಕವು ರಾಟೆಯಾಕೃತಿಯನ್ನೂ. ಕುವಲ ಪದ್ಮಾಕಾರ ವನ್ನೂ, ಸುರಾಷ್ಟ್ರ ನಂದಿಯ ಚಿತ್ರವನ್ನೂ. ಶೂರಸೇನ ಸಿಂಹವನ್ನೂ, ವಂಗದೇಶ ಚಕ್ರಾಕೃತಿಯನ್ನೂ ಹೊಂದಿದ್ದವು.

ವತ್ಸ. ಕೋಸಲ. ಕಾಶಿ. ಮಗಧ. ಕಳಿಂಗ. ಅಂಧ್ರ-ಮೊದಲಾದ ಜನಪದಗಳು ಮೂರು-ನಾಲ್ಕು ಚಿಹ್ನೆಗಳನ್ನು ಒಮ್ಮೆಲೆ ಹೊಂದಿವೆ. ವತ್ಸ ಚೇಳು ಮುಂತಾದ ಪ್ರಾಣಿಗಳ ಚಿತ್ರವನ್ನು, ಕೋಸಲ ಮೂರು 'S' ಆಕಾರವನ್ನು ಹೊಂದಿದ್ದವು. ವಿವಿಧ ಚಿತ್ರ-ಚಿಹ್ನೆಗಳನ್ನು ಹೊಂದಿದ್ದ ನಾಣ್ಯಗಳ ಮೇಲೆ. ಅನಂತರದ ಕಾಲದಲ್ಲಿ-ಎಂದರೆ ಕ್ರಿ.ಪೂ. ಎರಡನೆಯ ಶತಮಾನದ ವೇಳೆಗೆ ಲೇಖನ (legend)ಗಳು ಮುದ್ರಿಸಲ್ಪಟ್ಟವು. ಹೀಗೆ ಹಲವಾರು ಆಕೃತಿಗಳನ್ನು. ನೂರಾರು ಚಿತ್ರಗಳನ್ನು ಕೆಲವು ಲೇಖನಗಳನ್ನು ಮುದ್ರಾಂಕಿತ ನಾಣ್ಯಗಳ ಮೇಲೆ ಕಾಣಬಹುದು.

ನಾಣ್ಯಗಳನ್ನು ಟಂಕಿಸುವ ವಿಧಾನ

ಕ್ರಿ.ಪೂ. ಕಾಲದಲ್ಲಿ ನಾಣ್ಯಗಳನ್ನು ಟಂಕಿಸುವ ವಿಧಾನವು ಮುಂದುವರೆದ ಬೃಹತ್ ಕೈಗಾರಿಕೆಯಾಗಿತ್ತು. ಮುದ್ರಾಂಕಿತ ನಾಣ್ಯಗಳನ್ನು ಟಂಕಿಸುವ ವಿಧಾನವು ಕುಶಾನರ, ಗುಪ್ತರ ನಾಣ್ಯಗಳ ತಯಾರಿಕೆಗಿಂತ

ಭಿನ್ನವಾಗಿದೆ. ಇದು ಒಂದೇ ಮುಖದಲ್ಲಿ ಮುದ್ರೆಗಳನ್ನು ಒತ್ತಲಾದ ವಿಧಾನ. ಪ್ರಾಚೀನ ಸಾಹಿತ್ಯದಲ್ಲಿ ಈ ನಾಣ್ಯಗಳನ್ನು 'ಆಹತ ಮುದ್ರೆ'ಗಳೆಂದು ಕರೆಯಲಾಗಿದೆ. ಈ ಪದವೇ ಸೂಚಿಸುವಂತೆ. ಮುದ್ರೆಗಳನ್ನು ಒತ್ತುವುದರ ಮೂಲಕವೊ ಅಥವಾ ಬಡಿಯುವುದರಿಂದಲೋ ಟಂಕಿಸಲಾಗಿದೆ. ಇವುಗಳನ್ನು ಟಂಕಿಸುವ ವಿಧಾನವನ್ನು, ಚಂದ್ರಗುಪ್ತ ಮೌರ್ಯನ ಅಮಾತ್ಯನಾದ ಕೌಟಿಲ್ಯನು ತನ್ನ 'ಅರ್ಥಶಾಸ್ತ್ರ'ದಲ್ಲಿ ವಿವರಿಸಿದ್ದಾನೆ. ಟಂಕಿಸುವ ಲೋಹವನ್ನು 'ಮೂಸೆ'ಯಲ್ಲಿ ಕರಗಿಸಿ, 'ಕ್ಷಾರ'ದಿಂದ ಶುದ್ಧಿಗೊಳಿಸಿ, ಅನಂತರ 'ಅಧಿಕರ್ಣಿ' ಮೇಲಿಟ್ಟು, ಸುತ್ತಿಗೆಯಿಂದ ಬಡಿದು, ತಗಡುಗಳಾಗಿ ತಯಾರಿಸುತ್ತಾರೆ. 'ಸಾಧನ'ದಿಂದ, ಬೇಕಾದ ಆಕೃತಿಗೆ ಕತ್ತರಿಸಿ, ಮುದ್ರೆಗಳನ್ನು ಬಡಿದು, ನಾಣ್ಯಗಳನ್ನು ತಯಾರಿಸುತ್ತಿದ್ದರು. ಸಾಮಾನ್ಯವಾಗಿ ಮುದ್ರಾಂಕಿತ ನಾಣ್ಯಗಳ ಒಂದೇ ಮುಖದಲ್ಲಿ ಚಿಹ್ನೆಗಳಿರುವುದನ್ನು ಕಾಣಬಹುದು.

ಮುದ್ರಾಂಕಿತ ನಾಣ್ಯಗಳನ್ನು ವಿವಿಧಾಂಶಗಳಲ್ಲಿ ಟಂಕಿಸಲಾಗುತ್ತಿತ್ತು. 'ಪಣ' (೧), ಅರ್ಧಪಣ($\frac{1}{2}$) 'ಪಾದ'($\frac{1}{4}$), 'ಅಷ್ಟಭಾಗ' ಅಥವಾ 'ಅರ್ಧಪಾದಿಕ' (೧/೮) ಇವು ಬೆಳ್ಳಿ ಮುದ್ರಾಂಕಿತ ನಾಣ್ಯಗಳ ವಿವಿಧಾಂಶಗಳು. ತಾಮ್ರದ ನಾಣ್ಯಗಳನ್ನು 'ಮಾಸಕ'ಗಳೆಂದು ಕರೆಯುತ್ತಿದ್ದರು ಮತ್ತು ಮಾಸಕವು ಬೆಳ್ಳಿಯ ನಾಣ್ಯಗಳಂತೆ ಸಮಾನ ವಿವಿಧಾಂಶಗಳನ್ನು ಹೊಂದಿತ್ತು. ಕೌಟಿಲ್ಯನು 'ಅರ್ಥಶಾಸ್ತ್ರ'ದಲ್ಲಿ ಚಿನ್ನದ ನಾಣ್ಯಗಳ ಬಗ್ಗೆ ತಿಳಿಸಿರುವುದಾದರೂ, ಚಿನ್ನದ ಮುದ್ರಾಂಕಿತ ನಾಣ್ಯಗಳು ಈವರೆವಿಗೆ ಸಿಕ್ಕಿಲ್ಲ. ಆದರೆ ಇತ್ತೀಚೆಗೆ ಎರಡು ಚಿನ್ನದ ನಾಣ್ಯಗಳು ಸಿಕ್ಕಿರುವುದು ವರದಿಯಾಗಿದ್ದರೂ, ಅವುಗಳ ಬಗ್ಗೆ ಹೆಚ್ಚಿನ ಸಂಶೋಧನೆ ನಡೆದಿಲ್ಲ. ಅಂದಿನ ಕಾಲದಲ್ಲಿ ಅಮಾತ್ಯರಿಗೆ, ಸೇನಾಧಿಪತಿಗಳಿಗೆ ಸಲ್ಲುತ್ತಿದ್ದ ವಾರ್ಷಿಕ ಸಂಬಳ ಹಲವು ಸಾವಿರ 'ಪಣ'ಗಳೆಂದು, ಕೌಟಿಲ್ಯನು ತಿಳಿಸುತ್ತಾನೆ. ಪ್ರಾಚೀನ ಸಂಸ್ಕೃತ ಸಾಹಿತ್ಯದಲ್ಲಿ ಉಲ್ಲೇಖಿಸಲ್ಪಟ್ಟಿರುವ 'ಪುರಾಣ' ಅಥವಾ 'ಧರಣ' ಎಂಬ ನಾಣ್ಯಗಳು ಮುದ್ರಾಂಕಿತ ನಾಣ್ಯಗಳಿರಬೇಕು. ಈ ನಾಣ್ಯಗಳು ಕ್ರಿ.ಪೂ. ಆರನೆಯ ಶತಮಾನದಿಂದೀಚೆಗೆ ಭಾರತದಲ್ಲಿ ಬಳಕೆಯಲ್ಲಿರುವುದು ತೀರ ವೇದ್ಯವಾದ ವಿಷಯ.

ಮುದ್ರಾಂಕಿತ ನಾಣ್ಯಗಳು ಪ್ರಾಚೀನ ಭಾರತದ ಇತಿಹಾಸವನ್ನು ಪುನರ್‌ರೂಪಿಸುವಲ್ಲಿ ಮಹತ್ತರವಾದ ಪಾತ್ರವನ್ನು ವಹಿಸುತ್ತವೆ. ಈ ದಿಶೆಯಲ್ಲಿ ನಡೆಯಬೇಕಾದ ಸಂಶೋಧನೆ ಇನ್ನೂ ಅಗಾಧವಾಗಿದೆ. ಅಂದಿನ ಕಾಲದ ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ ಸ್ಥಿತಿಗತಿಗಳ ಮೇಲೆ ಕ್ಷ-ಕಿರಣಗಳನ್ನು ಚೆಲ್ಲುತ್ತವೆ. ಪ್ರಾಚೀನ ಕಾಲದಲ್ಲಿ ನಮ್ಮ ರಾಷ್ಟ್ರದಲ್ಲಿ ಲೋಹವಿಜ್ಞಾನ ಎಷ್ಟು ಮುಂದಿತ್ತೆಂಬುದು ಮುದ್ರಾಂಕಿತ ನಾಣ್ಯಗಳಿಂದ ತಿಳಿಯುವ ಮತ್ತೊಂದು ಅಂಶ. ಲಿಡಿಯ, ಗ್ರೀಸ್ ಮುಂತಾದ ರಾಷ್ಟ್ರಗಳಿಗೆ ಹೊಯ್‌ಗೈಯಾಗಿ, ಆ ರಾಷ್ಟ್ರಗಳು ನಾಣ್ಯಗಳನ್ನು ಚಲಾವಣೆಗೆ ತಂದ ಕಾಲದ ಸರಿಸುಮಾರಿಗೆ ಭಾರತವೂ ಮುದ್ರಾಂಕಿತ ನಾಣ್ಯಗಳನ್ನು ಚಲಾವಣೆಗೆ ತಂದಿತು.

ಕರ್ನಾಟಕದಲ್ಲಿ ಪುರಾತತ್ವ ಇಲಾಖೆಯಲ್ಲಿನ 19 ಮುದ್ರಾಂಕಿತ ನಾಣ್ಯಗಳನ್ನೂ, ಧಾರವಾಡದಲ್ಲಿ ದೊರೆತವೆನ್ನಲಾದ 11 ನಾಣ್ಯಗಳನ್ನೂ ಡಾ. ಕೃಷ್ಣರವರು ಪರಿಶೀಲಿಸಿದ್ದಾರೆ. ಕಾರ್ಷಪಣಗಳೆನ್ನಲಾದ ಇವು ಮೌರ್ಯ ಅಥವಾ ಆ ನಂತರದ ಕಾಲಕ್ಕೆ ಸೇರಿದವುಗಳೆನ್ನಲಾಗಿದೆ. ಇತ್ತೀಚೆಗೆ ಬನವಾಸಿಯಲ್ಲಿಯೂ, ವಡಗಾಂವ ಮಾಧವಪುರದಲ್ಲಿಯೂ ನಡೆದ ಉತ್ಖನನಗಳಲ್ಲಿ ಕೆಲವು ನಾಣ್ಯಗಳು ದೊರೆತಿವೆ. ಇವು ಸುಮಾರು ಕ್ರಿ. ಶ. ಒಂದನೆಯ ಶತಮಾನಕ್ಕೆ ಸೇರಿದವುಗಳೆಂದು ಊಹಿಸಲಾಗಿದೆ.

(ಸಂಗ್ರಹ : ಬಾ. ರಾ. ಗೋ.)

ಕೆ. ಪದ್ಮ ಉಮಾಪತಿ

ಭಾರತದ ಅಭ್ಯುದಯಕ್ಕೆ ಆಹಾರ ಪೋಷಣೆ

ಭಾರತವನ್ನು ಮುಂದುವರಿಯುತ್ತಿರುವ ರಾಷ್ಟ್ರ ಎಂದು ಪರಿಗಣಿಸಲಾಗಿದೆ. ಇತ್ತೀಚಿನ ವರ್ಷಗಳಲ್ಲಿ ನಮ್ಮ ದೇಶದ ಸರಾಸರಿ ಉತ್ಪತ್ತಿ ಮತ್ತು ಆದಾಯದಲ್ಲಿ ಹೆಚ್ಚಳಿಕೆಯಾಗುತ್ತಿರುವುದರಿಂದ ದೇಶವು ಪ್ರಗತಿಪಥದಲ್ಲಿ ಮುನ್ನಡೆಯುತ್ತಿರುವುದೆಂದು ಹಲವರ ಅಭಿಪ್ರಾಯ. ಆದರೆ ಜನಸಾಮಾನ್ಯರ ಜೀವನ ಸ್ಥಿತಿಗಳಲ್ಲಿ ಗಮನಾರ್ಹ ಬದಲಾವಣೆಗಳಾಗದಿದ್ದಲ್ಲಿ 'ಅಭಿವೃದ್ಧಿ ಎಂಬ ಮಾತಿಗೆ ಹೆಚ್ಚಿನ ಪ್ರಾಶಸ್ತ್ಯಬರಲಾರದು. ಆದ್ದರಿಂದ ನಿಜವಾದ ಪ್ರಗತಿಯ ಸಾಧನೆಗೆ ಭಾರತೀಯರೆಲ್ಲರ ಜೀವನ ಮಟ್ಟ ಹೆಚ್ಚಬೇಕು. ಅವರ ಆರೋಗ್ಯ, ವಸತಿಸೌಕರ್ಯ, ಪರಿಸರ ಎಲ್ಲವೂ ಉತ್ತಮವಾಗಬೇಕು. ಎಲ್ಲರೂ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಯಶಸ್ವಿಯಾಗಿ ಭಾಗವಹಿಸುವಂತಾಗಬೇಕು. ಆಗ ಮಾತ್ರ ಭಾರತದ ಅಭ್ಯುದಯ ಕಷ್ಟಸಾಧ್ಯ. ಈ ದೃಷ್ಟಿಯಲ್ಲಿ ಆಹಾರ ಪೋಷಣೆಯ ಪಾತ್ರ ಬಹಳ ಹಿರಿದು. ದೇಹ ಮತ್ತು ಮಾನಸಿಕ ಬೆಳವಣಿಗೆಗೂ, ಆರೋಗ್ಯಕ್ಕೂ ಪೌಷ್ಟಿಕ ಆಹಾರ ಅತ್ಯಾವಶ್ಯಕ. "ಆಹಾರವೇ ಜೀವನದ ಊರುಗೋಲು" ಎಂಬುದಾಗಿ ಜೊನಾಥನ್ ಸ್ವಿಫ್ಟ್ ಯುಕ್ತವಾಗಿ ನುಡಿದಿದ್ದಾರೆ.

ಭಾರತದ ಆಹಾರ ಸ್ಥಿತಿಗತಿ

ಜನಸಂಖ್ಯೆಯಲ್ಲಿ ಭಾರತವು ಪ್ರಪಂಚದಲ್ಲಿ ಎರಡನೆಯ ರಾಷ್ಟ್ರ. ಆದರೆ, ಇದರ ಭೂ ವಿಸ್ತೀರ್ಣವು ಪ್ರಪಂಚದ ಒಟ್ಟು ವಿಸ್ತಾರದಲ್ಲಿ ಕೇವಲ ಶೇಕಡ ೨.೪ ಮಾತ್ರ. ಇದು ಸುಮಾರು ೩೨೮.೮ ಮಿಲಿಯನ್ ಹೆಕ್ಟೇರುಗಳಾಗುತ್ತವೆ. ಆಹಾರ ಉತ್ಪಾದನೆಗೆ ಉಪಯೋಗವಾಗುತ್ತಿರುವ ಭೂಮಿ ೧೮೯.೭ ಮಿಲಿಯನ್ ಹೆಕ್ಟೇರುಗಳು ಮಾತ್ರ ಎಂದು ತಿಳಿದು ಬಂದಿದೆ. ಮಿಕ್ಕ ಭಾಗ ಅರಣ್ಯಗಳಿಂದಲೂ, ಪರ್ವತಗಳಿಂದಲೂ, ಬಂಜರು ಪ್ರದೇಶಗಳಿಂದಲೂ, ವ್ಯವಸಾಯಕ್ಕೆ ಉಪಯೋಗಿಸಲ್ಪಡದ ಭಾಗಗಳಿಂದಲೂ ಕೂಡಿದೆ. ಮೊದಲನೆಯ ಪಂಚವಾರ್ಷಿಕ ಯೋಜನೆಯ ಕಾಲದಿಂದಲೂ, ಭಾರತದಲ್ಲಿ ಪ್ರತಿವರ್ಷ ಆಹಾರದ ಉತ್ಪಾದನೆ ಶೇಕಡ ೩–೪ರಂತೆ ಹೆಚ್ಚುತ್ತಿದರೂ, ಬೆಳೆಯುತ್ತಿರುವ ಜನಸಂಖ್ಯೆಯ ಆಹಾರದ ಅವಶ್ಯತೆಗಳ ಪೂರೈಕೆಯಾಗುತ್ತಿಲ್ಲ. ಜೊತೆಗೆ ಉತ್ಪಾದಿಸಿದ ಆಹಾರಗಳ ಸಂಗ್ರಹಣೆ, ಸಾಗಣೆ, ಹಂಚಿಕೆಯೂ ಸಮರ್ಪಕ ರೀತಿಯಲ್ಲಿ ನಡೆಯುತ್ತಿಲ್ಲ. ನಮ್ಮ ಇಂದಿನ ಆಹಾರ ಸ್ಥಿತಿಗತಿಗಳಿಗೆ ಈ ಅಂಶಗಳು ಬಹು ಮುಖ್ಯ ಕಾರಣಗಳಾಗಿವೆ. ನಮ್ಮ ದೇಶದಲ್ಲಿ ನ್ಯೂನಪೋಷಣೆಗೆ ಇರುವ ಇನ್ನೂ ಅನೇಕ ಕಾರಣಗಳನ್ನು ಚಿತ್ರ ೧ರಲ್ಲಿ ನಿರೂಪಿಸಲಾಗಿದೆ. ಚಿತ್ರ ೨ರಲ್ಲಿ ಒಬ್ಬ ಭಾರತೀಯನಿಗೆ ಪ್ರತಿದಿನ ದೊರಕಬಹುದಾದ ಸರಾಸರಿ ಆಹಾರ ಪದಾರ್ಥಗಳ ಪ್ರಮಾಣವನ್ನು ಸಲಹೆ ಮಾಡಿರುವ, ಸರಿದೂಗಿಸಿದ ಆಹಾರ ಪ್ರಮಾಣಗಳೊಡನೆ ಹೋಲಿಸಿರುವುದನ್ನು ಕಾಣಬಹುದು. ದ್ವಿದಳ ಧಾನ್ಯಗಳು, ಸೊಪ್ಪು, ತರಕಾರಿಗಳು, ಹಾಲು ಮತ್ತು ಹಾಲಿನ ಪದಾರ್ಥಗಳು, ಇತರ ಪ್ರಾಣಿಜನ್ಯವಸ್ತುಗಳು, ಕೊಬ್ಬು, ಎಣ್ಣೆ ಮುಂತಾದ ಆಹಾರಗಳು, ದೇಹಪುಷ್ಟಿಗೆ ಬೇಕಾಗುವಷ್ಟು ದೊರಕುತ್ತಿಲ್ಲ ಎಂಬ ಅಂಶ ಸ್ಪಷ್ಟವಾಗುತ್ತದೆ ಇದರಿಂದ ಸ್ವಾಭಾವಿಕವಾಗಿಯೇ ನ್ಯೂನಪೋಷಣೆ ಉಂಟಾಗುತ್ತದೆ.

ನ್ಯೂನ ಪೋಷಣೆ ವ್ಯಾಪ್ತಿ ಮತ್ತು ಅದರ ಪರಿಣಾಮಗಳು

ಭಾರತದಲ್ಲಿ ನ್ಯೂನಪೋಷಣೆ ತಾಂಡವವಾಡುತ್ತಿದೆ ಎಂಬುದು ಕಠೋರ ಸತ್ಯ. ಇದು ಹೆಚ್ಚಾಗಿ ಮಹಿಳೆಯರಲ್ಲಿ ಮತ್ತು ಚಿಕ್ಕ ಮಕ್ಕಳಲ್ಲಿ ವ್ಯಾಪಕವಾಗಿದೆ. ಬಡ ಕುಟುಂಬಗಳಲ್ಲಿ ಗರ್ಭಿಣಿ ಸ್ತ್ರೀ ಮತ್ತು ಬಾಣಂತಿಯರ ಪೋಷಣೆಯು ಅತ್ಯಂತ ಶೋಚನೀಯವಾಗಿದೆ ಎಂದು ಸಮೀಕ್ಷೆಗಳಲ್ಲಿ ಸ್ಪಷ್ಟವಾಗಿದೆ. ಇದರಿಂದ ಹುಟ್ಟುವ ಮುನ್ನವೇ, ತಾಯಿಯು ಗರ್ಭದಲ್ಲಿರುವಾಗಲೇ ಮಾತೆಯರ ನ್ಯೂನಪೋಷಣೆಯಿಂದ ಮಕ್ಕಳ ಆರೋಗ್ಯಕ್ಕೆ ಧಕ್ಕೆ ಉಂಟಾಗುತ್ತದೆ. ಅಪ್ರಾಪ್ತ ಕಾಲ ಜನನ (prematurity) ಕಡಿಮೆ ಜನನ ಕಾಲದ ತೂಕ (low birth weight) ಮತ್ತು ಹೆಚ್ಚಿನ ಶಿಶುಮರಣ ಸಂಖ್ಯೆ ಇವೇ ಮಾತೆಯರ ನ್ಯೂನಪೋಷಣೆಯಿಂದ ಉಂಟಾಗುತ್ತಿರುವ ಘೋರ ದುಷ್ಪರಿಣಾಮಗಳು.

ನಮ್ಮ ದೇಶದ ಜನಸಂಖ್ಯೆಯಲ್ಲಿ ೧ ರಿಂದ ೫ ವರ್ಷದ ಮಕ್ಕಳು ಶೇಕಡ ೧೫ ಮಂದಿ ಇರುತ್ತಾರೆ. ಈ ವಯಸ್ಸಿನ ಮಕ್ಕಳಲ್ಲಿ ಮರಣ ಸಂಖ್ಯೆಯು ಶೇಕಡ ೪೦ ಎಂಬುದಾಗಿ ಅಂಕಿ ಅಂಶಗಳು ತಿಳಿಯಪಡಿಸುತ್ತವೆ. ಪ್ರತಿವರ್ಷ ಭಾರತದಲ್ಲಿ ತೀವ್ರ ನ್ಯೂನಪೋಷಣೆಯಿಂದ ದುರ್ಮರಣಕ್ಕೆ ಈಡಾಗುತ್ತಿರುವವರ ಮಕ್ಕಳ ಸಂಖ್ಯೆ ಹತ್ತು ಲಕ್ಷಕ್ಕೂ ಹೆಚ್ಚಾಗಿದೆ. ಈ ಸಂಖ್ಯೆಗೆ ಸಾಂಕ್ರಾಮಿಕ ಹಾಗೂ ಇತರ ಜಾಡ್ಯಗಳಿಂದ ಸಾವಿಗೆ ಬಲಿಯಾಗುತ್ತಿರುವವರ ಸಂಖ್ಯೆಯನ್ನು ಸೇರಿಸಬೇಕಾಗುತ್ತದೆ. ಏಕೆಂದರೆ, ಅನೇಕ ಮಂದಿ ಮಕ್ಕಳು ನ್ಯೂನಪೋಷಣೆಯಿಂದ ರೋಗನಿರೋಧಕ ಶಕ್ತಿಯನ್ನು ಕಳೆದುಕೊಂಡು ಅನೇಕ ಖಾಯಿಲೆಗಳಿಗೆ ಬಲಿಯಾಗುತ್ತಾರೆ. ಈ ರೀತಿಯ ಅಕಾಲ ಮರಣದಿಂದ ಪೋಷಕರಿಗೆ ಉಂಟಾಗುವ ಕಷ್ಟನಷ್ಟಗಳನ್ನು ಊಹಿಸಲು ಅಸಾಧ್ಯವಾಗುತ್ತದೆ. ಮಕ್ಕಳ ಲಾಲನೆ ಪಾಲನೆಗೆ ತಗಲುವ ವೆಚ್ಚ ಮತ್ತು ಶ್ರಮವೆಲ್ಲಾ ನಿಷ್ಪ್ರಯೋಜಕವಾಗುತ್ತದೆ. ಒಟ್ಟಿನಲ್ಲಿ ರಾಷ್ಟ್ರಕ್ಕೇ ಇದರಿಂದ ಅಪಾರ ನಷ್ಟವುಂಟಾಗುತ್ತದೆ. ಒಂದು ವೇಳೆ ಮರಣ ಸಂಭವಿಸದಿದ್ದರೂ, ನ್ಯೂನಪೋಷಣೆಯಿಂದ ಮಕ್ಕಳು ದುರ್ಬಲರಾಗಿ ಬೆಳೆದು ದೊಡ್ಡವರಾಗುತ್ತಾರೆ. ಇವರ ದೇಹಶಕ್ತಿ ಮಾತ್ರವಲ್ಲದೆ ಬುದ್ಧಿಶಕ್ತಿಯೂ ಕುಂಠಿತವಾಗುವುದರಿಂದ, ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಇಂತಹ ಪ್ರಜೆಗಳು ಯಶಸ್ವಿಯಾಗಿ ಭಾಗವಹಿಸಲು ಅಸಮರ್ಥರಾಗುತ್ತಾರೆ.

ನಮ್ಮ ದೇಶದಲ್ಲಿ ಶೇಕಡ ೬೦ ಮಂದಿ ಮಕ್ಕಳ ದೇಹದ ಬೆಳವಣಿಗೆ ಅತೃಪ್ತಿಕರವೆಂದು ಭಾರತಾದ್ಯಂತ ನಡೆಸಿದ ಸಮೀಕ್ಷೆಗಳಿಂದ ತಿಳಿದು ಬಂದಿದೆ. ಆಹಾರದ ಕೊರತೆಯೇ ಇದಕ್ಕೆ ಮುಖ್ಯ ಕಾರಣ. ಮಕ್ಕಳು ಸೇವಿಸುತ್ತಿರುವ ಆಹಾರದಲ್ಲಿ ಸುಮಾರು ೩೦೦ ಕ್ಯಾಲೊರಿಗಳಷ್ಟು ಕೊರತೆ ಇರುವುದು ಕಂಡು ಬಂದಿದೆ. ಅಲ್ಲದೆ, ಅನೇಕ ಖನಿಜಲವಣಗಳು ಮತ್ತು ಜೀವಸತ್ವಗಳು ಸಾಕಷ್ಟು ಪ್ರಮಾಣದಲ್ಲಿ ಅವರಿಗೆ ದೊರಕುತಿಲ್ಲ. ಇವುಗಳಲ್ಲಿ ಅತ್ಯಂತ ಮುಖ್ಯವಾದುದೆಂದರೆ, ಕಬ್ಬಿಣದ ಕೊರತೆಯಿಂದುಂಟಾಗುವ 'ಅನಿಮಿಯಾ' (ರಕ್ತಹೀನತೆ) ಮತ್ತು 'ಎ' ಜೀವಸತ್ವದ ನ್ಯೂನತೆಯಿಂದಾಗುವ 'ಕುರುಡುತನ. 'ಅನಿಮಿಯಾ' ರೋಗವು ಮಕ್ಕಳಲ್ಲಿ ಮಾತ್ರವಲ್ಲದೆ ಮಹಿಳೆಯರಲ್ಲೂ ಹೆಚ್ಚು ವ್ಯಾಪಕವಾಗಿದೆ. ನಮ್ಮ ದೇಶದಲ್ಲಿ ಮರಣಕ್ಕೆ ಇರುವ ೧೦ ಪ್ರಮುಖ ಕಾರಣಗಳಲ್ಲಿ 'ಅನಿಮಿಯಾ' ರೋಗ ಒಂದಾಗಿದೆ ಎಂದರೆ ಆಶ್ಚರ್ಯವಾಗಬಹುದು. ಕರುಳಿನಲ್ಲಿ ಕೊಕ್ಕೆ ಹುಳುವಿನ ಬಾಧೆಯಿಂದಲೂ ಸಹ ರಕ್ತಹೀನತೆ ಉಂಟಾಗುತ್ತದೆ. ಗ್ರಾಮೀಣ ಜನರಲ್ಲಿ ಕೊಕ್ಕೆ ಹುಳುವಿನ ವ್ಯಾಧಿ ಅತ್ಯಂತ ವ್ಯಾಪಕವಾಗಿದೆ. ಪರಿಸರ ಮಾಲಿನ್ಯ ಇದಕ್ಕೆ ಮುಖ್ಯ ಕಾರಣ. ನಮ್ಮ ದೇಶದಲ್ಲಿ ೧೦ ಲಕ್ಷಕ್ಕೂ ಹೆಚ್ಚು ಮಂದಿ ಮುಗ್ಧ ಮಕ್ಕಳು 'ಎ' ಜೀವಸತ್ವದ ನ್ಯೂನ್ಯತೆಯಿಂದ ಅಂಧರಾಗುತ್ತಿರುವರೆಂದು ಅಂಕಿ ಅಂಶಗಳು ತಿಳಿಸಿವೆ. ಈ ರೀತಿ, ನ್ಯೂನ ಪೋಷಣೆಯಿಂದ ದೇಶದ ಅಭ್ಯುದಯಕ್ಕೆ ಹಾನಿಯುಂಟಾಗುತ್ತಿರುವುದು ನಮ್ಮ ದುರ್ದೈವ.

ನ್ಯೂನ ಪೋಷಣೆಯ ನಿವಾರಣಾ ಕಾರ್ಯಕ್ರಮಗಳು

ರಾಷ್ಟ್ರೀಯ ಆಹಾರ ಪೋಷಣಾ ಆಯೋಗವು (task force on nutrition) ಸೂಚಿಸಿರುವ ನ್ಯೂನ ಪೋಷಣೆಯ ಮುಖ್ಯ ನಿವಾರಣಾ ಕಾರ್ಯಕ್ರಮಗಳ ವಿವರಣೆ ಈ ರೀತಿ ಇದೆ.

೧. ಆಹಾರ ಉತ್ಪಾದನೆ: ನಮ್ಮ ದೇಶದಲ್ಲಿ ಎಲ್ಲ ಆಹಾರ ಪದಾರ್ಥಗಳ ಉತ್ಪಾದನೆಯೂ


ಹೆಚ್ಚಬೇಕು. ಭಾರತೀಯರ ದೈನಂದಿನ ಆಹಾರ ಸೇವನೆಯಲ್ಲಿ ಶೇಕಡ ೮೦–೯೦ರಷ್ಟು ಧಾನ್ಯವೇ ಆಗಿದೆ. ಇತ್ತೀಚೆಗೆ ಹೊಸ ತಳಿಗಳ ಉಪಯೋಗದಿಂದ ಧಾನ್ಯಗಳ ಉತ್ಪಾದನೆಯನ್ನು ಸಮರ್ಪಕವಾಗಿ ಹೆಚ್ಚು ಮಾಡಲಾಗಿದೆ. ಈಗ ಈ ಹಸಿರು ಕ್ರಾಂತಿಯು (green revolution) ಮಿಕ್ಕ ಆಹಾರಗಳನ್ನೂ ಆವರಿಸಬೇಕಾಗಿದೆ. ಸಸ್ಯಜನ್ಯ ಪದಾರ್ಥಗಳಲ್ಲೆಲ್ಲಾ ಹೆಚ್ಚು ಪ್ರಮಾಣದಲ್ಲಿ ಪ್ರೋಟೀನ್‌ಗಳನ್ನು ಒದಗಿಸುವ ದ್ವಿದಳ ಧಾನ್ಯಗಳ ಮತ್ತು ಎಣ್ಣೆ ಬೀಜಗಳ ಉತ್ಪಾದನೆಯ ಬಗ್ಗೆಯೂ ಹೆಚ್ಚು ಗಮನವನ್ನು ಹರಿಸಬೇಕಾಗಿದೆ. ಅಧಿಕ ಇಳುವರಿ ನೀಡುವ ತಳಿಗಳನ್ನೂ ಕಂಡುಹಿಡಿಯುವುದರ ಜೊತೆಗೆ ಒಳ್ಳೆಯ ಗುಣಮಟ್ಟವುಳ್ಳ ಪ್ರೋಟೀನುಗಳನ್ನೂ ಮತ್ತು 'ಬಿ' ಜೀವಸತ್ವಗಳನ್ನೂ ಹೊಂದಿರುವ ತಳಿಗಳ ಬಗ್ಗೆ ವೈಜ್ಞಾನಿಕ ಶೋಧನೆ ಅತ್ಯಾವಶ್ಯಕ.

ನಮ್ಮ ದೇಶದ ಆರ್ಥಿಕ ಹಿನ್ನೆಲೆಯಲ್ಲಿ ಯೋಚಿಸುವುದಾದರೆ, ಅನೇಕ ಅಮೂಲ್ಯ ಪೋಷಕಾಂಶಗಳನ್ನೂ ಸೊಪ್ಪುಗಳ ಮೂಲಕ ಸುಲಭವಾಗಿ ಪಡೆಯಬಹುದು. ಮುಖ್ಯವಾಗಿ ಕ್ಯಾಲ್ಸಿಯಂ ಮತ್ತು ಕಬ್ಬಿಣ, ಖನಿಜಲವಣಗಳು, 'ಎ' ಜೀವಸತ್ವದ ಪೂರ್ವಗಾಮಿ ವಸ್ತು 'ಕ್ಯಾರೋಟಿನ್', 'ಸಿ' ಜೀವಸತ್ವ, 'ಬಿ' ಗುಂಪಿಗೆ ಸೇರಿದ ಫೋಲಿಕ್ ಆಮ್ಲ ಹಸಿರು ಸೊಪ್ಪುಗಳಲ್ಲಿ ಹೇರಳವಾಗಿ ದೊರೆಯುತ್ತವೆ. ಆದ್ದರಿಂದ ಸೊಪ್ಪುಗಳ ಉತ್ಪಾದನೆಯಲ್ಲಿ ಗಮನಾರ್ಹವಾಗಿ ಬದಲಾವಣೆಗಳಾಗಬೇಕು. ಎಲ್ಲೆಡೆಯಲ್ಲಿಯೂ ಎಲ್ಲಾ ಕಾಲಗಳಲ್ಲಿಯೂ ಈ ಉತ್ಕೃಷ್ಟ ಆಹಾರವು ಕಡಿಮೆ ಬೆಲೆಗೆ ದೊರಕುವಂತಾಗಬೇಕು. ಇದರಿಂದ 'ಎ' ಜೀವಸತ್ವ ಮತ್ತು ಕಬ್ಬಿಣದ ನ್ಯೂನತೆಗಳನ್ನು ಬಹುಮಟ್ಟಿಗೆ ಯಶಸ್ವಿಯಾಗಿ ನಿವಾರಿಸಬಹುದು.


೨. ಆಹಾರಗಳ ಸಂರಕ್ಷಣೆ: ಉತ್ಪಾದಿಸಿದ ಆಹಾರ ಪದಾರ್ಥಗಳು ಹಾಳಾಗದಂತೆ ಸುಧಾರಿತ ವಿಧಾನಗಳಲ್ಲಿ ಸಂಗ್ರಹಣೆ, ಸಾಗಣೆ ಮತ್ತು ಹಂಚಿಕೆ ಮಾಡುವುದು ಅತ್ಯಾವಶ್ಯಕ. ಮೈಸೂರಿನ ಕೇಂದ್ರ ಆಹಾರ ಸಂಶೋಧನಾಲಯವು ಈ ದಿಶೆಯಲ್ಲಿ ಅನೇಕ ಪ್ರಯೋಗಗಳ ಮೂಲಕ ಸುಧಾರಿತ ವಿಧಾನಗಳನ್ನು ರೂಪಿಸಿದೆ. ಈಗ ವಿಸ್ತರಣಾ ಕಾರ್ಯಕ್ರಮಗಳ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ಈ ತಾಂತ್ರಿಕ ಜ್ಞಾನವನ್ನು ಹರಡಬೇಕಾಗಿರುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ.

೩. ಆಹಾರ ಸಂಸ್ಕರಣೆ: ನಮ್ಮ ದೇಶದಲ್ಲಿ ನ್ಯೂನಪೋಷಣೆಯ ಸ್ಥಿತಿಗಳನ್ನು ತಡೆಗಟ್ಟಲು ಆಹಾರ ಸಂಸ್ಕರಣ ಕಾರ್ಯಕ್ರಮಗಳು ಅಗತ್ಯ. ಉದಾಹರಣೆಗೆ, ಅನಿಮಿಯಾ ರೋಗವನ್ನು ತಡೆಗಟ್ಟಲು, ಹೈದರಾಬಾದಿನಲ್ಲಿರುವ ರಾಷ್ಟ್ರೀಯ ಆಹಾರ ಪೋಷಣಾ ಸಂಸ್ಥೆಯು ಅಡಿಗೆ ಉಪ್ಪಿಗೆ ಕಬ್ಬಿಣವನ್ನು ಸೇರಿಸಿ ಮಾರಾಟ ಮಾಡುವ ಸಾಧ್ಯತೆಯನ್ನೂ ಸಂಶೋಧನೆಗಳ ಮೂಲಕ ಪರಿಶೀಲಿಸಿದೆ. ಈ ಸಂಸ್ಕರಣ ಕಾರ್ಯವು ಅತಿಶೀಘ್ರದಲ್ಲೇ ಕಾರ್ಯಗತವಾಗುತ್ತದೆ. ಇದು ಯಶಸ್ವಿಯಾದಲ್ಲಿ ಮಹಿಳೆಯರ ಮತ್ತು ಮಕ್ಕಳ ಆರೋಗ್ಯ ಬಹುಮಟ್ಟಿಗೆ ಸುಧಾರಿಸುವುದರಲ್ಲಿ ಸಂಶಯವಿಲ್ಲ.

೪. ಪುಷ್ಟಿಕರ ಆಹಾರಗಳ ತಯಾರಿಕೆ ಮತ್ತು ಹಂಚಿಕೆ: ಮಕ್ಕಳಲ್ಲಿ ಕಂಡುಬರುವ ನ್ಯೂನಪೋಷಣೆಯ ನಿವಾರಣೆಗಾಗಿ ಭಾರತ ಸರ್ಕಾರವು ಪಂಚವಾರ್ಷಿಕ ಯೋಜನೆಗಳ ಮೂಲಕ ಅನೇಕ ಕಾರ್ಯಗಳನ್ನು ಕೈಗೊಂಡಿದೆ. 'ಬಾಲಾಹಾರ'ದಂತಹ ಪುಷ್ಟಿಕರ ಆಹಾರವನ್ನು ೬ ವರ್ಷದ ಒಳಗಿನ ಮಕ್ಕಳಿಗೆ ಹಂಚುವ ಏರ್ಪಾಡುಮಾಡಿದೆ. ಈ ರೀತಿಯ ಕಾರ್ಯಕ್ರಮಗಳಿಗೆ ಬೇಕಾಗುವ ಹಣದ ಮತ್ತು ಇತರ ಸೌಲಭ್ಯಗಳು ದುಬಾರಿ. ಏಕೆಂದರೆ ತಯಾರಿಸುವ ಆಹಾರವನ್ನು ಪ್ಯಾಕ್ ಮಾಡುವುದಕ್ಕೂ, ಸಾಗಿಸುವುದಕ್ಕೂ, ಹಂಚುವುದಕ್ಕೂ ಇರುವ ವ್ಯವಸ್ಥೆ ಬಹಳ ಕಡಿಮೆ. ಆದ್ದರಿಂದ, ಆಯಾ ಪ್ರಾಂತ್ಯಗಳಲ್ಲಿ ಸುಲಭವಾಗಿ ದೊರಕುವ ಆಹಾರ ಪದಾರ್ಥಗಳಿಂದ ಹೆಚ್ಚು ಖರ್ಚಿಲ್ಲದೆ, ಅತ್ಯಂತ ಕನಿಷ್ಠ ತಾಂತ್ರಿಕ ವ್ಯವಸ್ಥೆಯ ಮೂಲಕ ತಯಾರಿಸಿ, ಅದೇ ಪ್ರದೇಶಗಳಲ್ಲಿ ಮಕ್ಕಳಿಗೆ ಹಂಚುವುದು ಹೆಚ್ಚು ಪರಿಣಾಮಕಾರಿಯಾಗಬಹುದೆಂದು ರಾಷ್ಟ್ರೀಯ ಆಹಾರ ಪೋಷಣಾ ಸಮಿತಿಯ ಅಭಿಪ್ರಾಯ. ಉದಾಹರಣೆಗೆ, ರಾಗಿಯನ್ನು ಹೆಚ್ಚಾಗಿ ಬೆಳೆಯುವ ಪ್ರಾಂತ್ಯದಲ್ಲಿ 'ರಾಗೀನಾ' ಎಂಬ ಪುಷ್ಟಿಕರ ಆಹಾರವನ್ನು ತಯಾರಿಸುವ ಬಗೆಯನ್ನು ಕೆಳಗೆ ಕೊಡಲಾಗಿದೆ.



Diet Atlas of India ದಿಂದ ತೆಗೆದುಕೊಂಡಿದೆ


ಆಹಾರದ ಕೊರತೆ
ಸಮತೆಯಿಲ್ಲದ ಆಹಾರ ಹಂಚಿಕೆ
ಬೆಳೆಯುತ್ತಿರುವ ಜನಸಂಖ್ಯೆ
ನ್ಯೂನ ಪೋಷಣೆಯ ಕಾರಣಗಳು
ಪರಿಸರ ಮಾಲಿನ್ಯ
ಅಜ್ಞಾನ ಮೂಢನಂಬಿಕೆ
ಕಡಿಮೆ ದುಡಿಮೆ
ಬಡತನ
ನಿಕೃಷ್ಟ ವಸತಿ ಸೌಲಭ್ಯ

ರಾಗಿ ಹುರಿಹಿಟ್ಟು	೬೦ ಗ್ರಾಂ
ಹುರಿಗಡಲೆ ಹಿಟ್ಟು	೧೫ ಗ್ರಾಂ
ಬೆಲ್ಲ (ಪುಡಿ)	೪೦ ಗ್ರಾಂ

ಎಲ್ಲ ಸಾಮಾನುಗಳನ್ನು ಮಿಶ್ರಮಾಡಿ. ದಿಢೀರ್ ಪುಷ್ಟಿಕರ ಆಹಾರವನ್ನು ಸುಲಭವಾಗಿ ತಯಾರು ಮಾಡಬಹುದು. ೭೦ ಗ್ರಾಂ 'ರಾಗಿಸಾ' ೩೦೦ ಕ್ಯಾಲೊರಿಗಳನ್ನು ಮತ್ತು ೭–೧೦ ಗ್ರಾಂ ಪ್ರೋಟೀನನ್ನೂ ಕೊಡುತ್ತದೆ. ಇತರ ಧಾನ್ಯ ಮತ್ತು ಬೇಳೆಗಳ ಮಿಶ್ರಣದಿಂದ ಈ ರೀತಿಯ ಆಹಾರ ಪದಾರ್ಥಗಳನ್ನು ತಯಾರಿಸಬಹುದು.

೫. ಜನತೆಗೆ ಪೌಷ್ಟಿಕ ಆಹಾರದ ಬಗ್ಗೆ ತಿಳುವಳಿಕೆ ನೀಡುವುದು–ಜನಸಾಮಾನ್ಯರಿಗೆ ತಮಗಿರುವ ಆರ್ಥಿಕ ಪರಿಸ್ಥಿತಿಯಲ್ಲೇ ಉತ್ತಮ ಆಹಾರವನ್ನು ಪಡೆಯುವುದರ ಬಗ್ಗೆ ತಿಳುವಳಿಕೆ ನೀಡುವುದು ಪೋಷಣಾ ತಜ್ಞರ ಆದ್ಯ ಕರ್ತವ್ಯವಾಗಿದೆ. ಮಿಶ್ರಧಾನ್ಯಗಳ ಉಪಯೋಗ, ಮೊಳೆತ ಕಾಳುಗಳ ಉಪಯೋಗ, ಸೊಪ್ಪುಗಳ ಸೇವನೆ, ಸುಧಾರಿತ ವಿಧಾನಗಳಲ್ಲಿ ಆಹಾರಗಳನ್ನು ತಯಾರಿಸುವುದು, ಇವೇ ಪೌಷ್ಟಿಕ ಆಹಾರಕ್ಕೆ ಇರುವ ಸುಲಭೋಪಾಯಗಳು. ಬೆಳವಣಿಗೆಯ ಹಂತದಲ್ಲೇ, ಆಹಾರ ಪದ್ಧತಿಗಳು ಬೇರೂರುವುದರಿಂದ, ಮಕ್ಕಳಿಗೆ ಆಹಾರ ಪೋಷಣೆಯ ಬಗ್ಗೆ ಶಿಕ್ಷಣ ಕೊಡುವುದು ಬಹುಮುಖ್ಯ. ರೇಡಿಯೋ, ಸಿನಿಮಾ, ವೃತ್ತ ಪತ್ರಿಕೆಗಳಲ್ಲಿ ಜಾಹಿರಾತುಗಳ ಮಾಧ್ಯಮದ ಮೂಲಕ ಸಾರ್ವಜನಿಕರಿಗೆ ಪೌಷ್ಟಿಕ ಆಹಾರದ ಬಗ್ಗೆ ತಿಳುವಳಿಕೆ ನೀಡುವ ಪ್ರಯತ್ನಗಳು ಸತತವಾಗಿ ನಡೆಯಬೇಕು. ಹಳ್ಳಿ ಪ್ರದೇಶಗಳಲ್ಲಿ ನಾಟಕ, ಜಾನಪದ ನೃತ್ಯ, ಹರಿಕತೆ, ಬೊಂಬೆಯಾಟ ಮುಂತಾದವುಗಳು ಶಿಕ್ಷಣ ಮಾಧ್ಯಮವಾಗುವ ಸಾಧ್ಯತೆಯನ್ನು ಪರಿಶೀಲಿಸಬೇಕು ಎಂಬುದು ಲೇಖಕರ ಅಭಿಪ್ರಾಯ. ಪ್ರಜಾ ಕ್ಷೇಮಪಾಲನೆಯ ನೇರ ಅಥವಾ ಪರೋಕ್ಷ ಜವಾಬ್ದಾರಿ ಹೊತ್ತಿರುವ ಪ್ರತಿಯೊಬ್ಬ ವ್ಯಕ್ತಿಗೂ ಆಹಾರ ಪೋಷಣೆಯ ಬಗ್ಗೆ ಕಡ್ಡಾಯ ಶಿಕ್ಷಣ ಕೊಡುವ ಏರ್ಪಾಡು ಅಗತ್ಯ.

ಮೇಲೆ ವಿವರಿಸಿರುವ ಕಾರ್ಯಕ್ರಮಗಳ ಜೊತೆಗೆ ಚುಚ್ಚುಮದ್ದು ನೀಡುವ ಮತ್ತು ಅನಾರೋಗ್ಯ ವಾತಾವರಣವನ್ನು ತೊಡೆದು ಹಾಕುವ ಕಾರ್ಯಕ್ರಮಗಳ ಕಡೆ ವಿಶೇಷ ಗಮನ ನೀಡಬೇಕಾಗುತ್ತದೆ. ಹಾಗಾದರೆ ಮಾತ್ರ ಆಹಾರ ಪೋಷಣೆ ಕಾರ್ಯಕ್ರಮಗಳು ಯಶಸ್ವಿಯಾಗುವ ಸಾಧ್ಯತೆ ಇದೆ.

ಗೊರೂರು ರಾಮಸ್ವಾಮಯ್ಯಂಗಾರ್

ನಾಲಂದಾ ವಿಶ್ವವಿದ್ಯಾಲಯ

ಬಿಹಾರಿನ ರಾಜಧಾನಿಯಾದ ಪಾಟ್ನಾದಿಂದ ಐವತ್ತು ಮೈಲಿ ದೂರದಲ್ಲಿದೆ ನಾಲಂದ, ಸುಮಾರು ಐದನೆಯ ಶತಮಾನದಲ್ಲಿ ಇಲ್ಲಿ ಜಗದ್ವಿಖ್ಯಾತವಾದ ವಿಶ್ವವಿದ್ಯಾಲಯ ಅಭಿವೃದ್ಧಿಗೊಂಡಿತು. ಮೂರು ನಾಲ್ಕನೆಯ ಶತಮಾನದಲ್ಲಿಯೇ ಈ ನಗರ ವಿಶಾಲವಾಗಿ ಬೆಳೆದ ಸೂಚನೆಗಳಿದ್ದರೂ, ವಿದ್ಯಾದೃಷ್ಟಿಯಿಂದ ಇದಕ್ಕೆ ಪ್ರಾಮುಖ್ಯತೆ ದೊರೆತುದು, ವರ್ಧನಸಂತತಿಯ ಅರಸರ ಕಾಲದಲ್ಲಿ. ಸ್ವತಃ ಶ್ರೀ ಹರ್ಷನೇ ಈ ವಿಶ್ವವಿದ್ಯಾನಿಲಯಕ್ಕೆ ಪೋಷಕನಾಗಿದ್ದನು. ಈಚೆಗೆ ಯೂರೋಪಿನಲ್ಲಿ ಪ್ಯಾರಿಸ್ ಆಕ್ಸ್‌ಫರ್ಡ್ ಮುಂತಾದ ವಿಶ್ವವಿದ್ಯಾನಿಲಯಗಳು ಹೇಗೆ ಜ್ಞಾನಭಂಡಾರಗಳು ಸಾಂಸ್ಕೃತಿಕ ಕೇಂದ್ರಗಳೂ ಆದವೋ ಹಾಗೆ, ನಾಲಂದ ಅಂದು ಏಷಿಯಾ ಖಂಡಕ್ಕೇ ಜ್ಞಾನಸೂರ್ಯನಾಗಿದ್ದಿತು.

ನಗರ

ಐದನೆಯ ಶತಮಾನಕ್ಕೆ ನಮ್ಮ ಕಣ್ಣನ್ನು ಹಾಯಿಸೋಣ. ನಾಲಂದ, ಅಚ್ಚುಕಟ್ಟಾಗಿ, ಪುರನಿರ್ಮಾಣ ನಿಯಮಗಳಿಗನುಸಾರವಾಗಿ ಕಟ್ಟಿದ ನಗರ. ವಿಸ್ತಾರವಾದ ರಸ್ತೆಗಳು, ಉದ್ಯಾನವನಗಳು, ಸರೋವರಗಳು, ನೀರು ಹರಿದು ಹೋಗಲು ಒಳಚರಂಡಿ ವ್ಯವಸ್ಥೆ. ಧೂಳಿಲ್ಲದ ಬೀದಿ. ಈ ನಗರದಲ್ಲಿ ವಿಶ್ವವಿದ್ಯಾಲಯಕ್ಕಾಗಿ ಅನೇಕ ವಿಹಾರಗಳಿದ್ದವು. ಆ ವಿಹಾರದ ಕಟ್ಟಡಗಳಲ್ಲಿ ಆಗ, ಏಷಿಯಾದಲ್ಲಿ ಎಲ್ಲಿಯೂ ಪ್ರಚಾರದಲ್ಲಿರದಿದ್ದ ಕಮಾನು ರೀತಿಯ (arch) ಶಿಲ್ಪಕಲೆಯನ್ನು ಅನುಸರಿಸಲಾಗಿದೆ. ನಾಲಂದ, ಮಹಾಯಾನ ಪಂಥದ ಬೌದ್ಧಧರ್ಮಕ್ಕೆ ಕೇಂದ್ರವಾಗಿದ್ದಿತು. ಇಲ್ಲಿ ಎಲ್ಲೆಲ್ಲಿಯೂ ನಾನಾ ಬಗೆಯ ಬೌದ್ಧ ವಿಗ್ರಹಗಳೂ ಬುದ್ಧನ ಜೀವಿತಕ್ಕೆ ಸಂಬಂಧಿಸಿದ ಕಥೆಗಳ ಮೂರ್ತಿಶಿಲ್ಪಗಳೂ ಕಾಣುತ್ತವೆ. ಮಹಾಯಾನ ಬೌದ್ಧರಲ್ಲಿ ಬುದ್ಧನ ಮೂರ್ತಿಪೂಜೆ ಮತ್ತು ತಾಂತ್ರಿಕ ಪೂಜೆಗಳೆಲ್ಲ ಪ್ರಧಾನವಾಗಿವೆ. ಅವುಗಳನ್ನೆಲ್ಲ ವಿವರಿಸುವ ಮೂರ್ತಿಗಳು ಇಂದಿಗೂ ನಾಲಂದದಲ್ಲಿ ಕಾಣುತ್ತಿವೆ.

ಭವ್ಯ ಪರಂಪರೆ

ನಾಲಂದ ನಮ್ಮ ಇತಿಹಾಸದ ಸುವರ್ಣಯುಗದ ಒಂದು ಸಂಕೇತ. ಅದು ಅಂದು ಏಷಿಯದಲ್ಲಿ ಎಲ್ಲ ಜನರನ್ನೂ ಒಂದುಗೂಡಿಸಿದ ಕೇಂದ್ರವಾಗಿ ಜ್ಞಾನಪೂರ್ಣವಾಗಿ ಅರಳಿದ ಸ್ಥಾನವಾಯಿತು. ಜ್ಞಾನಕ್ಕೆ ಜಾತಿ, ಕುಲ, ರಾಷ್ಟ್ರ, ಬಣ್ಣ ಇವುಗಳ ಪ್ರತಿಬಂಧಕವಿಲ್ಲ. ಅದು ನಾಲಂದದ ವಿಷಯಕ್ಕೆ ನಿಜವಾಗಿದ್ದಿತು. ನಾಲಂದದ ಪ್ರೇಮ, ಜ್ಞಾನಸಾಧನೆ, ಸೇವಾಪರತೆ ಇವು ವಿಶ್ವ ಬಾಂಧವ್ಯದ ಒಂದು ಸಾಧನಾ ಕ್ಷೇತ್ರವೇ ಆಯಿತು. ಆರು ಶತಮಾನಗಳ ಕಾಲ ಅವಿಚ್ಛಿನ್ನವಾಗಿ ಪರ್ವತ–ಸಮುದ್ರಗಳ ಮೇರೆಗಳನ್ನು ದಾಟಿ, ಪೂರ್ವಸ್ಥ ರಾಷ್ಟ್ರಗಳಲ್ಲೆಲ್ಲ ತನ್ನ ಬೆಳಕನ್ನು ಹರಡಿ, ನಾಲಂದ ಏಷಿಯಾ ಖಂಡದ ಆತ್ಮವಾಯಿತು. ನಾಲಂದ ಹಾಗೆ ಏಷಿಯಾ ಖಂಡಕ್ಕೆ ಮಾರ್ಗದರ್ಶನ ಮಾಡಲು, ಅದಕ್ಕೆ ಹಿರಿತನವೂ ಪರಂಪರಾಗತವಾದ ಯೋಗ್ಯತೆಯೂ ಇದ್ದಿತು. ನಾಲಂದ, ಮಹಾತ್ಮ ಬುದ್ಧ ಮತ್ತು ಮಹಾವೀರರೊಂದಿಗೆ ಸಂಪರ್ಕ ಹೊಂದಿದ ನಗರವಾಗಿದ್ದಿತು. ಮಹಾವೀರರಿಗೂ ಆಚಾರ್ಯ ಮಾಂಖಲಿರಿಗೂ ನಾಲಂದದಲ್ಲಿ ಭೇಟಿ

ಯಾಯಿತೆಂದು ಜೈನಗ್ರಂಥದಲ್ಲಿ ಉಲ್ಲೇಖಿಸಿದೆ. ಮಹಾತ್ಮ ಮಹಾವೀರರು ನಾಲಂದದಲ್ಲಿ ಹದಿನಾಲ್ಕು ವರುಷ ವಾಸಿಸಿದರು. ನಾಲಂದದ ಧನಿಕವ್ಯಾಪಾರಿ ಲೇಪ ಎಂಬ ವರ್ತಕನು ಗೌತಮ ಬುದ್ಧರನ್ನು ನಾಲಂದದ ದ್ವಾರದಲ್ಲಿ ಸ್ವಾಗತಿಸಿ, ತನ್ನ ಸರ್ವಸ್ವವನ್ನೂ ಅವರಿಗೆ ಒಪ್ಪಿಸಿ ಅವರ ಶಿಷ್ಯನಾದನು. ಎಂಬುದಾಗಿ ಸೂತ್ರ ಕೃತಾಂಗ ಎಂಬ ಗ್ರಂಥದಲ್ಲಿ ಹೇಳಿದೆ. ಟಿಬೆಟ್ಟಿನ ವಿದ್ವಾಂಸ, ಲಾಮಾ ತಾರಾನಾಥ ಎಂಬುವರು "ನಾಲಂದವು ಸಾರಿಪುತ್ರನ ಜನ್ಮಸ್ಥಳವೆಂದೂ, ಅತನ ಸಮಾಧಿ, ಅಶೋಕನ ಕಾಲದ ವರೆಗೆ ಉಳಿದಿದ್ದಿತೆಂದೂ ಅನಂತರ ಅಶೋಕನು ಅದನ್ನು ಪುನರುಜ್ಜೀವನಗೊಳಿಸಿ ಅದರ ಸುತ್ತ ದೊಡ್ಡದಾದ ದೇವಸ್ಥಾನವನ್ನು ಕಟ್ಟಿಸಿದನೆಂದೂ ಹೇಳುತ್ತಾರೆ. ಇಂತಹ ಭವ್ಯ ಪರಂಪರೆಯಿದ್ದ ನಾಲಂದ ಐದನೆಯ ಶತಮಾನದಲ್ಲಿ ಏಷಿಯಾಕ್ಕೆ ಬೆಳಕನ್ನು ನೀಡಿದ ವಿದ್ಯಾಜ್ಯೋತಿಯಾಯಿತು. ಭಿಕ್ಷು ನಾಗಾರ್ಜುನ ಮತ್ತು ಆಚಾರ್ಯ ದೇವ್‌ರು, ನಾಲಂದ ವಿಶ್ವವಿದ್ಯಾಲಯದಲ್ಲಿದ್ದರೆಂದೂ, ಆಚಾರ್ಯ ದಿಙ್ನಾಗರು ಅಲ್ಲಿ ಒಂದು ಶಾಸ್ತ್ರಾರ್ಥವನ್ನು ಚರ್ಚಿಸಿದರೆಂದೂ ಲಾಮಾ ತಾರಾನಾಥರು ತಮ್ಮ ಗ್ರಂಥದಲ್ಲಿ ಹೇಳಿದ್ದಾರೆ. ನಾಗಾರ್ಜುನರೂ ಟಿಬೆಟ್ಟಿಗೆ ಹೋಗಿದ್ದರೆಂಬುದಕ್ಕೆ ಆಧಾರಗಳಿವೆ. ಚೀನಾದ ಯಾತ್ರಿಕ ಫಾಹಿಯಾನ್, ಸಾರಿಪುತ್ರನ ಜನ್ಮಸ್ಥಳದಲ್ಲಿ (ಮತ್ತು ಮೃತಸ್ಥಳದಲ್ಲಿ) ಕಟ್ಟಿದ್ದ ಸ್ತೂಪವನ್ನು ಸುಮಾರು ನಾಲ್ಕನೆಯ ಶತಮಾನದಲ್ಲಿ ನೋಡಿದನು. ಆದರೆ ನಾಲಂದ ತನ್ನ ವೈಭವದ ಶಿಖರವನ್ನು ಏರಿದುದು ಸುಮಾರು ಏಳನೆಯ ಶತಮಾನದಲ್ಲಿಯೇ. ಆಗ ಹ್ಯೂಯೆನ್‌ತ್ಸಾಂಗ್, ಭಾರತಕ್ಕೆ ಬಂದನು. ಹ್ಯೂಯೆನತ್ಸಾಂಗನು, ನಾಲಂದ ಎಂಬ ಹೆಸರಿಗೆ ಬುದ್ಧನ ಸಂಪರ್ಕವಿದೆಯೆಂದು ಹೇಳುತ್ತಾನೆ. ನಾ-ಅಲಂ-ದಾ ಎಂದರೆ, ದೊರೆಯುವ ಶಾಂತಿ ಎಂದು ಅರ್ಥ. ಬುದ್ಧನಿಗೆ ತನ್ನ ಹಿಂದಲ ಜನ್ಮದಲ್ಲಿ ಇಲ್ಲಿ ಶಾಂತಿ ದೊರೆತಿರಲಿಲ್ಲವಂತೆ.

ವಿಶ್ವವಿದ್ಯಾಲಯದ ಕಟ್ಟಡಗಳು

ನಾಲಂದ ವಿಶ್ವವಿದ್ಯಾಲಯ ಸಾರ್ವಜನಿಕರ ಧನ ಸಹಾಯದಿಂದಲೇ ಸ್ಥಾಪಿತವಾಗಿ ನಡೆಯುತ್ತಿದ್ದಿತು. ಐದು ನೂರು ಧನಿಕ ವರ್ತಕರು, ದೊಡ್ಡ ಮೊತ್ತದ ಹಣವನ್ನು ಕೂಡಿಸಿ ಆ ನಿಧಿಯನ್ನು ಗೌತಮ ಬುದ್ಧನಿಗೆ–ವಿದ್ಯಾಲಯದ ವ್ಯವಸ್ಥೆಗಾಗಿ ಅರ್ಪಿಸಿದರೆಂದು ಒಂದು ಕಥೆಯಿದೆ. ಹ್ಯೂಯೆನ್‌ತ್ಸಾಂಗ್ ಭಾರತಕ್ಕೆ ಬರುವ ವೇಳೆಗೆ, ನಾಲಂದ, ಸರ್ವವಿಧದಲ್ಲಿಯೂ ಪೂರ್ಣವಾಗಿ ಬೆಳೆದ ಸರಸ್ವತೀಪೀಠವಾಗಿದ್ದಿತು. ಅಲ್ಲಿ ಆರು ವಿಸ್ತಾರವಾದ ವಿಹಾರಗಳಿದ್ದವು. ಅವುಗಳಲ್ಲಿ ಒಂದು ಶ್ರೀಹರ್ಷನೇ ಕಟ್ಟಿಸಿದ್ದ ವಿಹಾರ. ಆರು ನೂರು ಅಡಿ ಎತ್ತರವಾಗಿ ಲೋಹದಿಂದ ನಿರ್ಮಿತವಾದ ಮೇಲುಛಾವಣಿಯಿಂದ, ದೇವಸ್ಥಾನದಂತೆ ತೋರುತ್ತಿದ್ದಿತು. ಪ್ರತಿಯೊಂದು ವಿಹಾರವೂ ಗಗನಚುಂಬಿಯಾಗಿದ್ದಿತು. ಅವುಗಳ ಸುತ್ತ ಸ್ವಚ್ಛವಾಗಿ ತಿಳಿನೀರಿನ ಕೊಳಗಳು, ಸರೋವರಗಳಲ್ಲಿ ತೇಲಾಡುತ್ತಿರುವ, ಕೆಂಪು, ಹಳದಿ, ಬಿಳಿಯ ತಾವರೆಗಳು ತೀರದಲ್ಲಿ ಹಸುರಾದ ಮಾವಿನತೋಪು ಮತ್ತೂ ಅದರ ತಂಪಾದ ನೆರಳು, ಭಾರತದಲ್ಲಿ ಅನೇಕ ವಿಹಾರಗಳಿದ್ದವು. ಆದರೆ ನಾಲಂದದಲ್ಲಿಯ ವಿಹಾರಗಳು, ಉಳಿದವುಗಳಿಗಿಂತ, ಸರ್ವಶ್ರೇಷ್ಠವಾಗಿದ್ದವು. ಅಲ್ಲಿ ನಾಲ್ಕು ನೂರು ಕೊಠಡಿಗಳೂ, ಎಂಟು ವಿಶಾಲವಾದ ಸಭಾಂಗಣಗಳೂ (ಮಹಲ್) ಅನೇಕ, ಸಾವಿರಾರು ಜನ ಕೂರುವ ಅಧಿಕ ವಿಸ್ತಾರದ ಸೌಧಗಳೂ ಇದ್ದವು.

ವ್ಯವಸ್ಥೆ

ನಾಲಂದದಲ್ಲಿ ವಾಸಿಸುತ್ತಿದ್ದ ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ ಹಣದ ತಾಪತ್ರಯವೇ ಇರಲಿಲ್ಲ. ಕಟ್ಟಡಗಳು, ಜನರು ದಾನವಾಗಿ ಬಿಟ್ಟ ಫಲವತ್ತಾದ ಭೂಮಿಗಳು, ಜೊತೆಗೆ ಸರ್ಕಾರದ ಎಲ್ಲ ಸಹಾಯ–ಸರ್ಕಾರ ನೂರಾರು ಗ್ರಾಮಗಳ ಉತ್ಪತ್ತಿಯನ್ನೆಲ್ಲ ವಿದ್ಯಾಲಯಕ್ಕೆ ನಿಗದಿ ಮಾಡಿ ಬಿಟ್ಟಿತ್ತು. ಊಟ, ವಸತಿ, ವಸ್ತ್ರ, ಶಯನ, ವೈದ್ಯಚಿಕಿತ್ಸೆ, ಗ್ರಂಥ ಸಂಪಾದನೆ, ರಕ್ಷಣೆ ಎಲ್ಲವುಗಳ ಹೊಣೆಯನ್ನೂ ವಿಶ್ವಸ್ತರು ಹೊತ್ತಿದ್ದರು. ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೂ; ಗುರುಗಳಿಗೂ ಇದ್ದ ಕೆಲಸ, ಜ್ಞಾನಾರ್ಜನೆಯೊಂದೆ. ಬಿಹಾರ್, ಉತ್ತರ ಪ್ರದೇಶ, ವಂಗದೇಶ ಇವುಗಳಲ್ಲದೆ ಇತರ ವಿಷ್ಯದ ರಾಜ್ಯಗಳೂ ನಾಲಂದ ವಿಶ್ವವಿದ್ಯಾಲಯಕ್ಕೆ ಅಪಾರ ಧನಸಹಾಯ ಮಾಡುತ್ತಿದ್ದವು.ನಾಲಂದಕ್ಕೆ

ಸಂಬಂಧಿಸಿದ ಭೂಗರ್ಭ ಶೋಧನಾ ಇಲಾಖೆಯುವರು, ಧರ್ಮಪಾಲದೇವ, ಮತ್ತು ದೇವಪಾಲದೇವರ ಕಾಲದ ವಿಗ್ರಹಗಳನ್ನು ಕಂಡುಹಿಡಿದಿದ್ದಾರೆ. ಈ ಇಬ್ಬರು ರಾಜರೂ ವಂಗದೇಶಕ್ಕೆ ಸೇರಿದವರು. ಒಂದು ಶಾಸನ. ನಾಲಂದ ವಿಶ್ವವಿದ್ಯಾಲಯದ ಅಂತರರಾಷ್ಟ್ರ ಖ್ಯಾತಿಗೆ ಗುರುತಾಗಿದೆ. ಆ ಶಾಸನದಲ್ಲಿ ಸ್ವರ್ಣದ್ವೀಪದ (ಇಂಡೋನೇಶಿಯ) ಚಕ್ರವರ್ತಿಯಾದ ಶ್ರೀ ಬಾಲಪುತ್ರದೇವನು, ಮಗಧದ ರಾಜನಾದ ದೇವಪಾಲನಿಗೆ ಹೀಗೆ ಬರೆದಿದ್ದಾನೆ." "ನನ್ನ ಪರವಾಗಿ ನಾಲಂದ ವಿಶ್ವವಿದ್ಯಾನಿಲಯಕ್ಕೆ ಕಾಣಿಕೆ ಶಾಸನದಲ್ಲಿ ಕಾಣಿಕೆಗಳನ್ನು ನಿರೂಪಿಸಿದೆ. ಇದೇ ತಾಮ್ರಶಾಸನದಂತೆ,ಜಾವದ ಚಕ್ರವರ್ತಿ ಬಲಪುತ್ರದೇವನು ನಾಲಂದದಲ್ಲಿ ನಡೆಯುತ್ತಿದ್ದ ವಿಶ್ವವಿದ್ಯಾಲಯುವನ್ನು ನೋಡಿ ಅತ್ಯಂತ ಪ್ರೀತನಾಗಿ, ಅಲ್ಲಿ ಒಂದು ದೊಡ್ಡ ವಿಹಾರವನ್ನು ಕಟ್ಟಿಸಿ, ಬುದ್ಧನಲ್ಲಿದ್ದ ತನ್ನ ಭಕ್ತಿಗೆ ಹೀಗೆ ರೂಪವನ್ನು ಕೊಟ್ಟನು. ಇಂತಹ ವಿದೇಶದಾನಗಳು. ಆ ಕಾಲದಲ್ಲಿ ಇನ್ನೂ ಎಷ್ಟೋ ಬರುತ್ತಿದ್ದಿರಬೇಕು. ಆದರೆ ಇತಿಹಾಸಕಾರರಿಗೆ ಸಿಕ್ಕಿರುವುದು ಇದೊಂದು ಮಾತ್ರ. ನಾಲಂದದ ಮಹಾವಿಹಾರಿಯ ಆರ್ಯಭಿಕ್ಷು ಸಂಘ. ಏಷಿಯಾದಲ್ಲಿ ಎಲ್ಲರ ಪ್ರೀತಿಗೌರವಗಳಿಗೂ ಪಾತ್ರವಾಗಿದಿತು.

ಅರ್ಹರಿಗೆ ಮಾತ್ರ ಪ್ರವೇಶ

ಹ್ಯೂಯೆನ್‌ತ್ಸಾಂಗ್. ಭಾರತಕ್ಕೆ ಬಂದ ಕಾಲದಲ್ಲಿ ನಾಲಂದದಲ್ಲಿ ಹತ್ತು ಸಾವಿರ ವಿದ್ಯಾರ್ಥಿಗಳೂ ಸಾವಿರದ ಐದುನೂರು ಉಪಾಧ್ಯಾಯರೂ ಇದ್ದರು. (ಒಬ್ಬ ಉಪಾಧ್ಯಾಯನಿಗೆ ಹತ್ತಕ್ಕಿಂತ ಕಡಿಮೆ ಶಿಷ್ಯರು). ಉಪಾಧ್ಯಾಯರು ಪ್ರತಿಯೊಬ್ಬ ವಿದ್ಯಾರ್ಥಿಯ ಶಿಕ್ಷಣಕ್ಕೂ ತರಪೇತಿಗೂ ಪೂರ್ಣಲಕ್ಷ್ಯವನ್ನು ಕೊಡಲು ಅವಕಾಶವಿದ್ದಿತು. ಬಂದ ಅಭ್ಯರ್ಥಿಗಳನ್ನೆಲ್ಲ ವಿವೇಚನೆಯಿಲ್ಲದೆ ವಿಶ್ವವಿದ್ಯಾಲಯಕ್ಕೆ ಸೇರಿಸಿಕೊಳ್ಳುತ್ತಿರಲಿಲ್ಲ. ಅವರು ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ, ಉಳಿದ ರೀತಿಯಲ್ಲಿಯೂ ಅರ್ಹರಾಗಿರಬೇಕಾಗಿದ್ದಿತು. ನಾಲಂದ ವಿಶ್ವವಿದ್ಯಾಲಯಕ್ಕೆ ಪ್ರವೇಶ ದೊರಕಿದರೆ, ವಿದ್ಯಾರ್ಥಿಗಳು ತಾವು ಬಹಳ ಅದೃಷ್ಟಶಾಲಿಗಳೆಂದು ಭಾವಿಸುತ್ತಿದ್ದರು. ಹತ್ತು ಜನ ಅಭ್ಯರ್ಥಿಗಳಲ್ಲಿ ಮೂವರಿಗೆ ಮಾತ್ರ ಪ್ರವೇಶ ದೊರಕುತ್ತಿದ್ದಿತೆಂದು ಹ್ಯೂಯೆನ್‌ತ್ಸಾಂಗ್ ಹೇಳಿದ್ದಾನೆ.

ರತ್ನಸಾಗರ

ನಾಲಂದ ಸ್ನಾತಕೋತ್ತರ ಶಿಕ್ಷಣ ಸಂಸ್ಥೆಯಾಗಿದ್ದಿತು. ಅಲ್ಲಿಗೆ ಚೀನ, ಕೊರಿಯ. ಟಿಬೆಟ್, ತುರ್ಕಿಸ್ಥಾನ, ಮಂಗೋಲಿಯ ಮುಂತಾದ ಕಡೆಗಳಿಂದೆಲ್ಲ ವಿದ್ಯಾರ್ಥಿಗಳೂ ವಿದ್ವಾಂಸರೂ ಬರುತ್ತಿದ್ದರು. ಜ್ಞಾನಾರ್ಜನೆ ಮತ್ತು ಬೌದ್ಧಗ್ರಂಥಗಳ ಸಂಪಾದನೆ ಅವರ ಗುರಿಯಾಗಿತ್ತು. ನಾಲಂದದಲ್ಲಿ, ವಿಶ್ವದಲ್ಲಿ ಎಲ್ಲಿಯೂ ಇಲ್ಲದಿದ್ದ ಗ್ರಂಥಭಂಡಾರವಿದ್ದಿತು. ಅದಕ್ಕೆ 'ರತ್ನಸಾಗರ' ಎಂದು ಹೆಸರಿತ್ತು. ಇಲ್ಲಿಂದ. ಚೀನದ ಅನೇಕ ಯಾತ್ರಿಕರು ಅಪೂರ್ವಗ್ರಂಥಗಳ ನಕಲನ್ನು ಮಾಡಿಕೊಂಡು ತಮ್ಮ ದೇಶಕ್ಕೆ ಹೋಗಿ. ಆ ಗ್ರಂಥಗಳನ್ನು ತಮ್ಮ ಭಾಷೆಗೆ ಭಾಷಾಂತರಗೊಳಿಸಿಕೊಳ್ಳುತ್ತಿದ್ದರು. ಎಲ್ಲೆಲ್ಲಿ ಯಾವ ಯಾವ ಅಪೂರ್ವ ಗ್ರಂಥಗಳಿದ್ದವೋ. ಅವುಗಳ ಪ್ರತಿಗಳನ್ನೆಲ್ಲ ವಿದ್ವಾಂಸರು ನಕಲು ಮಾಡಿ ನಾಲಂದದಲ್ಲಿ ತಂದು ಸುರಕ್ಷಿತವಾಗಿಡುತ್ತಿದ್ದರು. ಹದಿಮೂರನೆಯ ಶತಮಾನದಲ್ಲಿ ತುರುಕರು ನಾಲಂದವನ್ನು ಬೆಂಕಿಗೆ ಆಹುತಿ ಮಾಡಿದರೂ ಕೂಡ. ಆ ವೇಳೆಗಾಗಲೇ ಅನೇಕ ಅಪೂರ್ವ ಗ್ರಂಥಗಳ ನಕಲುಗಳು. ನೇಪಾಳ, ಟಿಬೆಟ್ ಮುಂತಾದ ಕಡೆಗೆ ಹೋಗಿದ್ದವು. ಅಲ್ಲಿ ಅವು ಈಗಲೂ ಸುರಕ್ಷಿತವಾಗಿವೆ.

ಶಿಕ್ಷಣ ಕ್ರಮ

ನಾಲಂದ. ಶಿಕ್ಷಣ ಕ್ರಮದಲ್ಲಿ ವಿದ್ಯಾರ್ಥಿಯ ಸ್ವಶಕ್ತಿಯನ್ನೂ. ಪ್ರತಿಭೆಯನ್ನೂ ಬೆಳೆಸುವ ಮಾರ್ಗವನ್ನೇ ಅನುಸರಿಸುತ್ತಿದ್ದರು. "ಚರ್ಚೆಯಿಂದ ಕಲಿಯುವುದೇ" ಆ ಪದ್ಧತಿಯಾಗಿದ್ದಿತು. ಚರ್ಚೆಗಳಿಂದ ವಿದ್ಯಾರ್ಥಿಗಳಿಗೆ ವಿಷಯದಲ್ಲಿ ಹೆಚ್ಚು ಆಸಕ್ತಿಯುಂಟಾಗುತ್ತಿದ್ದಿತು. ಉಪಾಧ್ಯಾಯರೇ ಗಂಟೆಗಟ್ಟಲೆ ಉಪನ್ಯಾಸ ಮಾಡುವಾಗ ಉಂಟಾಗುವ ಬೇಸರಿಕೆ–ಈ ಕ್ರಮದಿಂದ–ವಿದ್ಯಾರ್ಥಿಗಳಿಗೆ ಕಡಿಮೆಯಾಗುತ್ತಿದ್ದಿತು. ಹ್ಯೂಯೆನ್‌ತ್ಸಾಂಗ್ ಹೀಗೆ ಹೇಳುತ್ತಾನೆ "ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳ ಕಾಲವೆಲ್ಲ

ಚರ್ಚೆಯಲ್ಲಿಯೇ ಕಳೆಯುತ್ತಿದ್ದಿತು. ಹೀಗೆ ಒಬ್ಬರನ್ನೊಬ್ಬರು ತಿದ್ದುತ್ತ ಅವರು ಜ್ಞಾನಾರ್ಜನೆ ಮಾಡುತ್ತಿದ್ದರು. ಅವರಿಗೆ ಕಾಲವೇ ಸಾಕಾಗುತ್ತಿರಲಿಲ್ಲ. ನಾಲಂದ ವಿಶ್ವವಿದ್ಯಾಲಯ ಉಪಾಧ್ಯಾಯರೂ ಶಿಷ್ಯರೂ ಒಟ್ಟಿಗೆ ಇದ್ದು ಕಲಿಯುವ ವಿದ್ಯಾಸಂಸ್ಥೆಯಾಗಿದ್ದಿತು. (ರೆಸಿಡೆನ್ಸಿಯಲ್). ಶಿಕ್ಷಕರು, ಶಿಷ್ಯರನ್ನು ಕಲೆಯ ವಾತಾವರಣದಲ್ಲಿ ಬೆಳೆಸುತ್ತಿದ್ದರು. ಪಾಠಶಾಲೆಗಳು, ನದಿ, ತೋಪು, ಉಪವನಗಳ ಮಧ್ಯೆ, ರಮ್ಯವಾದ ಪ್ರದೇಶಗಳಲ್ಲಿರುತ್ತಿದ್ದವು"

ಹೂಯೆನ್‌ತ್ಸಾಂಗ್, ನಳಂದ ವಿಶ್ವವಿದ್ಯಾಲಯದ ವಾತಾವರಣವನ್ನು ಕುರಿತು ಹೀಗೆ ಹೇಳುತ್ತಾನೆ.

"ಸುತ್ತಲೂ ನೀಲಿ ತಾವರೆಯ ಅರಳಿದ ದಳಗಳುಳ್ಳ ತಿಳಿನೀರಿನ ಕೊಳಗಳು ಪ್ರಕಾಶಿಸುತ್ತಿದ್ದವು. ಅಲ್ಲಲ್ಲಿ ಸುಂದರವಾದ ಕನಕಲವೃಕ್ಷಗಳು. ರಕ್ತವರ್ಣದ ಮನೋಹರವಾದ ಗುಚ್ಛರಾಶಿಗಳನ್ನು ಜೋತುಬಿಟ್ಟಿದ್ದವು. ಘನನಿಬಿಡವಾದ ಚೂತವೃಕ್ಷ ವನವು. ಅವುಗಳ ನಡುವೆ ತನ್ನ ನೆರಳನ್ನು ಪಸರಿಸಿತ್ತು. ಬೇರೆ ಬೇರೆ ಶಾಲಾಂಗಣಗಳಲ್ಲಿ, ಭಿಕ್ಷುಗಳ ಮನೆಗಳು ನಾಲ್ಕು ಅಂತಸ್ತುಗಳುಳ್ಳವಾಗಿ ಮೇಲೆದ್ದಿದ್ದುವು. ಕ್ರೀಡಾಮಂಟಪಗಳ ಕಂಬಗಳನ್ನು ನಾನಾ ವಿಧಗಳಾದ ಪ್ರಾಣಿಗಳ ಚಿತ್ರರೇಖೆಗಳಿಂದ ಅಲಂಕರಿಸಿದ್ದರು. ಮಂಟಪಗಳ ತೊಲೆಗಳು ಕಾಮನ ಬಿಲ್ಲಿನ ಎಲ್ಲ ಬಣ್ಣಗಳಿಂದಲೂ ,ಕಣ್ಣುಕೋರೈಸುತ್ತಿದ್ದವು. ಛಾವಣಿಯ ತೊಲೆಗಳಲ್ಲಿ ಆಕರ್ಷಕವಾಗಿ ಚಿತ್ರಗಳನ್ನು ರೂಪಿಸಿದ್ದರು. ಸ್ತಂಭಗಳನ್ನು ಅತಿಸೂಕ್ಷ್ಮವಾದ ಕೆತ್ತನೆಯ ಕೆಲಸದ ವರ್ಣಶಿಲೆ ಮುತ್ತು ಮುತ್ತುಗಳಿಂದ ಅಲಂಕರಿಸಿದ್ದರು. ಮಹಡಿಯ ತಾಳ್ವಾರ ಮತ್ತು ಮೆಟ್ಟಿಲುಗಳನ್ನು ಸುಂದರವಾಗಿ ಬಿಡಿಸಿದ್ದರು......"

ಗುರುಕುಲದ ಪದ್ಧತಿಯಿಂದ, ಉಪಾಧ್ಯಾಯರು ವಿದ್ಯಾರ್ಥಿಗಳೊಂದಿಗೆ ಹೆಚ್ಚು ಕಾಲವನ್ನು ಕಳೆಯುತ್ತಿದ್ದರು. ಅವರು ವಿದ್ಯಾರ್ಥಿಗಳ ಮಿತ್ರರಾಗಿ, ಚರ್ಚೆಗಳಲ್ಲಿಯೂ ವ್ಯಾಸಂಗದಲ್ಲಿಯೂ ಶಿಷ್ಯರಿಗೆ ಮಾರ್ಗದರ್ಶನ ಮಾಡುತ್ತಿದ್ದರು. ವಿಶ್ವವಿದ್ಯಾಲಯದಲ್ಲಿ ಕಲಿಸುತ್ತಿದ್ದ ಶಿಕ್ಷಣ, ಯಾವ ಒಂದು ಮತ ಅಥವಾ ಧರ್ಮಸಂಪ್ರದಾಯದ ಶಿಕ್ಷಣ ಮಾತ್ರವಾಗಿರಲಿಲ್ಲ. ಗುರುಗಳು ನೂರಾರು ಉಪನ್ಯಾಸಗಳನ್ನು ಮಾಡುತ್ತಿದ್ದರು. ಬೌದ್ಧಧರ್ಮ, ಬ್ರಾಹ್ಮಣಧರ್ಮ, ಮಾನವತಾವಾದ, ಇತರ ಧರ್ಮಗಳು ಸಾಹಿತ್ಯ, ವಿಜ್ಞಾನ ಕಲೆಗಳು, ಇವುಗಳಲ್ಲೆಲ್ಲ ಪಾಠಪ್ರವಚನ ನಡೆಯುತ್ತಿತ್ತು. ಬುದ್ಧಭಿಕ್ಷುಗಳ ಪೈಕಿ ಹೆಚ್ಚು ಮಂದಿ, ಮಹಾಯಾನ ಬೌದ್ಧಕೃತಿಗಳನ್ನೇ ಅಭ್ಯಾಸಮಾಡುತ್ತಿದ್ದರು. ಉಳಿದವರು ಬೌದ್ಧಧರ್ಮದ ಇತರ ಹದಿನೆಂಟು ನಿಗಮಗಳನ್ನು ವ್ಯಾಸಂಗಮಾಡುತ್ತಿದರು. ವೇದಗಳು ಮತ್ತು ಇತರ ಶಾಸ್ತ್ರಗಳ ಅಧ್ಯಯನ ಅಧ್ಯಾಪನಗಳೂ ನಡೆಯುತ್ತಿದ್ದವು. ಹೀಗೆ ಸರ್ವಸಮವಾಗಿ ಎಲ್ಲ ಶಾಸ್ತ್ರಗಳಿಗೂ ವಿದ್ಯೆಗಳಿಗೂ ಪ್ರೋತ್ಸಾಹವನ್ನು ಕೊಟ್ಟುದೇ. ನಾಲಂದ ವಿಶ್ವವಿದ್ಯಾಲಯದ ಸರ್ವತೋಮುಖ ಅಪೂರ್ವ ಬೆಳವಣಿಗೆಗೆ ಸಾಧಕವಾಯಿತು. ಅಲ್ಲಿಯ ವಿದ್ಯಾರ್ಥಿಗಳೂ ಗುರುಗಳೂ ಸಂಕುಚಿತ ಭಾವವನ್ನು ಬಿಟ್ಟು, ಮಾನವ ಜಗತ್ತಿನ ಸಮಸ್ತ ಜ್ಞಾನ ಕಲೆಗಳನ್ನೂ ತಮ್ಮದನ್ನಾಗಿ ಮಾಡಿಕೊಂಡಿದ್ದರು.

ಚರ್ಚೆ ಮತ್ತು ವಿವಾದಗಳಿಂದಲೇ (ವಾದೇ ವಾದೇ ಜಾಯತೇ ತತ್ತ್ವಬೋಧಃ) ಶಿಷ್ಯರು ಜ್ಞಾನಾರ್ಜನೆ ಮಾಡುತ್ತಿದ್ದರೂ, ವಿಶ್ವವಿದ್ಯಾಲಯದ ಪಾಠಕ್ರಮ ಪಟ್ಟಿಯನ್ನು ಬಹಳ ಎಚ್ಚರಿಕೆಯಿಂದ ತಯಾರಿಸಿದ್ದರು. ಆ ಪಾಠಕ್ರಮವನ್ನು ಅನುಸರಿಸುವುದರಿಂದ, ವಿದ್ಯಾರ್ಥಿಗಳಲ್ಲಿ ಸದ್ಗುಣಗಳ ಬೆಳವಣಿಗೆಯೂ ಚಾರಿತ್ರ್ಯ ಶುದ್ಧಿಯೂ ಸ್ವಾವಲಂಬನೆಯೂ ಉಂಟಾಗುತ್ತಿದ್ದಿತು. ವಿದ್ಯಾರ್ಥಿಗಳು ಐದು ವಿಷಯಗಳನ್ನು ಅವಶ್ಯಕವಾಗಿ ವ್ಯಾಸಂಗ ಮಾಡಲೇ ಬೇಕಾಗಿದ್ದಿತು. ಮೊದಲನೆಯದೇ ವ್ಯಾಕರಣ. ಅದಿಲ್ಲದಿದ್ದರೆ ವಿದ್ಯಾರ್ಥಿಗಳಲ್ಲಿ ಪಾಂಡಿತ್ಯವೇ ಉಂಟಾಗುತ್ತಿರಲಿಲ್ಲ. ಎರಡನೆಯದು ತರ್ಕ. ತರ್ಕ ವಿದ್ಯಾರ್ಥಿಗೆ ವಿವೇಕವನ್ನೂ ನಿರ್ಣಯಶಕ್ತಿಯನ್ನೂ ಉಂಟು ಮಾಡುತ್ತದೆ. ಮೂರನೆಯದು ವೈದ್ಯಕೀಯ ಶಿಕ್ಷಣ. ಇದರಿಂದ ವಿದ್ಯಾರ್ಥಿಯು ದೇಹಕ್ಕೆ ಸಂಬಂಧಪಟ್ಟ ವಿಷಯಗಳನ್ನೆಲ್ಲ ಅರಿತು ಆರೋಗ್ಯ, ವ್ಯಾಯಾಮಗಳಲ್ಲಿ ನುರಿತು, ತನ್ನನ್ನೂ ಕಾಪಾಡಿಕೊಂಡು, ಇತರರನ್ನೂ ಕಾಪಾಡುತ್ತಿದ್ದನು. ನಾಲ್ಕನೆಯದು ಜೀವನಕ್ಕೆ ಆವಶ್ಯಕವಾದ ಯಾವುದಾದರೂ ಕಸಬು ವ್ಯವಸಾಯ, ತೋಟಗಾರಿಕೆ, ಕೈಗಾರಿಕೆ ಮುಂತಾದ ಆಧಾರಿತ ವಿದ್ಯೆ ಅಥವಾ ವೃತ್ತಿಶಿಕ್ಷಣ. ಇದರಿಂದ ವಿದ್ಯಾರ್ಥಿಗೆ ಸ್ವಾವಲಂಬನೆಯುಂಟಾಗಿ, ಅವನು

ಯಾವಾಗಲೂ ಸಮಾಜಕ್ಕೆ ಹೊರೆಯಾಗದೆ, ತನ್ನ ಕಾಲಿನ ಮೇಲೆ ತಾನು ನಿಲ್ಲಲು ಶಕ್ತನಾಗುತ್ತಿದ್ದನು ಐದನೆಯ ವಿಷಯ. ವಿದ್ಯಾರ್ಥಿಯ ಅಭಿರುಚಿಗೆ ಅನುಗುಣವಾದ ಧಾರ್ಮಿಕ ವ್ಯಾಸಂಗ ಮತ್ತು ದರ್ಶನಗಳ ಅಧ್ಯಯನ. ವ್ಯಾಸಂಗಕ್ರಮ ಪಠ್ಯಕ್ರಮ ಇವುಗಳಲ್ಲಿ ನಾಲಂದ ವಿಶ್ವವಿದ್ಯಾಲಯದಲ್ಲಿದ್ದ ಉನ್ನತ ಆದರ್ಶ, ಇಂದಿಗೂ ನಮಗೆ ಮೇಲುಪಂಕ್ತಿಯಾಗಬಲ್ಲದು. ಬುದ್ಧಿ ಮತ್ತು ದೇಹದ ಬೆಳವಣಿಗೆಗೆ ಪರಸ್ಪರ ಪೂರಕವಾದ ಆ ಶಿಕ್ಷಣದಿಂದ, ವಿದ್ಯಾರ್ಥಿಗಳು ಪೂರ್ಣಮಾನವರಾಗಿ ಹೊರಹೊಮ್ಮುತ್ತಿದ್ದರು. ಅವರಲ್ಲಿದ್ದ ಎಲ್ಲ ಶಕ್ತಿಗಳೂ ವಿಕಾಸವಾಗುತ್ತಿದ್ದವು.

ಹೂಯೆನ್‌ತ್ಸಾಂಗ್‌ನು ನಾಲಂದದ ಕುಲಪತಿಗಳಾದ ಆಚಾರ್ಯ ಶೀಲಭದ್ರರ ಪಾದಗಳಲ್ಲಿ ಕುಳಿತು, ಧರ್ಮಶಾಸ್ತ್ರ, ಯೋಗ, ಶಬ್ದಶಾಸ್ತ್ರ, ವ್ಯಾಕರಣಗಳನ್ನು ಕಲಿತನು. ಜೊತೆಗೆ ಆತ, ತನ್ನ ಐದು ವರುಷಗಳ ಭಾರತ ವಾಸದಲ್ಲಿ, ಅನೇಕ ಬೌದ್ಧಗ್ರಂಥಗಳನ್ನು ವ್ಯಾಸಂಗ ಮಾಡಿದನು. ಅದೇ ಕಾಲದಲ್ಲಿ ನಾಲಂದದಲ್ಲಿ, ಬೌದ್ಧಧರ್ಮತಜ್ಞ, ಚಂದ್ರಪಾಲ ಮತ್ತು ಬೌದ್ಧಧರ್ಮನಿಪುಣ ಗುಣಮತಿ ಮತ್ತು ಸ್ಥಿರಮತಿ, ಮತ್ತು ವಾದಪ್ರವೀಣ ಪ್ರಭಮಿತ್ರ ಮತ್ತು ಸಂಭಾಷಣಾಪ್ರವೀಣ ಜಿನಮಿತ್ರ ಹಾಗೂ ಉದಾರಚರಿತ ಜ್ಞಾನಚಂದ್ರ–ಹೀಗೆ ಉದಾರಚರಿತರೂ, ಜ್ಞಾನಿಗಳೂ, ವಿದ್ವಾಂಸರೂ, ವಾಗ್ಮಿಗಳೂ ಆದ ಇತರ ನಿಸ್ಪೃಹ ವಿರಕ್ತ ಉದಾತ್ತ ವ್ಯಕ್ತಿಗಳು ನಾಲಂದದಲ್ಲಿ ಉಪಾಧ್ಯಾಯರಾಗಿದ್ದರು.

ಅದ್ವಿತೀಯ ಗುರುಗಳು

ನಾಲಂದದಲ್ಲಿದ್ದ ಅಂದಿನ ವಿದ್ವಾಂಸರು, ಆಗಿನ ಕಾಲಕ್ಕೆ ಏಷಿಯಾ ಖಂಡದಲ್ಲಿಯೇ ಅದ್ವಿತೀಯರೆಂದು ಪರಿಗಣಿಸಲ್ಪಟ್ಟವರು. ಆಚಾರ್ಯ ಶೀಲಭದ್ರರಿಗಿಂತ ಮುಂಚೆ, ಅವರಷ್ಟೆ ಪ್ರಸಿದ್ಧರಾಗಿದ್ದ, ಧರ್ಮ ಪಾಲರು ಕುಲಪತಿಗಳಾಗಿದ್ದರು. ಇಂಥವರ ಕೈಯಲ್ಲಿ ತಯಾರಾದ ಶಿಷ್ಯರಿಗೆ, ನಮ್ಮ ಸಮಾನ ಯಾರೂ ಇಲ್ಲ ಎಂಬ ಹೆಮ್ಮೆಯುಂಟಾದುದು ಆಶ್ಚರ್ಯವಲ್ಲ. ಇಂಥ ಒಂದು ಪ್ರಸಂಗವನ್ನು ಹೂಯೆನ್‌ತ್ಸಾಂಗ್ ತನ್ನ ದಿನಚರಿಯಲ್ಲಿ ನಮೂದಿಸಿದ್ದಾನೆ. ದಾರ್ಶನಿಕನಾದ ಲೋಕಾಯತ ಎಂಬಾತನು ನಲವತ್ತು ಪ್ರಮೇಯಗಳನ್ನು ಬರೆದು, ಅವುಗಳನ್ನು ವಿಶ್ವವಿದ್ಯಾಲಯದ ಗೋಡೆಗೆ ತಗಲು ಹಾಕಿದನು. "ಈ ತತ್ವಗಳನ್ನು ದೇಶದಲ್ಲಿ ಯಾರಾದರೂ ಸುಳ್ಳು ಅಥವಾ ತಪ್ಪು ಎಂದು ಸಾಧಿಸಿದರೆ, ನನ್ನ ತಲೆಯನ್ನೇ ಅವನಿಗೆ ಕತ್ತರಿಸಿ ಕೊಡುತ್ತೇನೆ" ಎಂದು ಬರೆದನು. ಹೂಯೆನ್‌ತ್ಸಾಂಗ್‌ನು, ಸವಾಲನ್ನು ಅಂಗೀಕರಿಸಿ, ಲೋಕಾಯತನನ್ನು ವಿದ್ವತ್‌ಸಭೆಯಲ್ಲಿ ಸೋಲಿಸಿದನು. ಆದರೆ ಅವನ ತಲೆಯನ್ನು ದಂಡವಾಗಿ ಕೇಳದೆ, ಅವನನ್ನು ಶಿಷ್ಯನನ್ನಾಗಿ ಅಂಗೀಕರಿಸಿ, ಸ್ನೇಹಬಾಂಧವ್ಯವನ್ನು ಸ್ಥಾಪಿಸಿದನು. ಐದು ವರುಷಗಳ ನಂತರ ಹೂಯೆನ್‌ತ್ಸಾಂಗ್, ನಾಲಂದವನ್ನು ಬಿಡುವ ವೇಳೆಗೆ, ಅವನಿಗೂ ಭಾರತೀಯರಿಗೂ ತುಂಬ ಸ್ನೇಹವುಂಟಾಗಿದ್ದಿತು. ಆಚಾರ್ಯ ಶೀಲಭದ್ರರೇ ಮುಂತಾದವರು, ಹೂಯೆನ್‌ಪತ್ಸಾಂಗ್‌ರನ್ನು ಭಾರತ ದಲ್ಲಿಯೇ ನಿಲ್ಲುವಂತೆ ಮನವೊಲಿಸಲು ಪ್ರಯತ್ನಿಸಿದರು. ಆದರೆ ಹೂಯೆನ್‌ತ್ಸಾಂಗನು "ಬುದ್ಧನ ಜನ್ಮಭೂಮಿಯಾದ ಈ ನಾಡನ್ನು ಪ್ರೀತಿಸದೆ ಇರಲು ಸಾಧ್ಯವೇ ಇಲ್ಲ. ಈ ದೇಶಕ್ಕೆ ನಾನು ಬಂದ ಉದ್ದೇಶ, ಬೌದ್ಧಧರ್ಮವನ್ನು ಆಳವಾಗಿ ಅಭ್ಯಾಸಮಾಡಿ ಪರಿಶೋಧನೆ ನಡೆಸುವುದಕ್ಕಾಗಿ. ನನ್ನ ದೇಶಬಾಂಧವರಿಗೆ ಸಹ ಲಾಭವಾಗಲೆಂದು. ನಾನು ಇಲ್ಲಿಗೆ ಬಂದುದರಿಂದ, ನನಗೆ ಅಪೂರ್ವವಾದ ಪ್ರಯೋಜನವಾಯಿತು. ನಾನು ಚೀನಕ್ಕೆ ಹೋಗಿ, ಇಲ್ಲಿ ಕಲಿತುದನ್ನು, ನನ್ನ ದೇಶ ಬಾಂಧವರ ಒಳ್ಳೆಯದಕ್ಕಾಗಿ ಉಪಯೋಗಿಸುತ್ತೇನೆ. ನಮ್ಮ ಭಾಷೆಗೆ ಬೌದ್ಧಗ್ರಂಥಗಳನು. ಭಾಷಾಂತರಿಸುತ್ತೇನೆ. ಇದರಿಂದ ನನಗೆ ನಿಮ್ಮ ವಿಷಯದಲ್ಲಿ ಯಾವ ಕೃತಜ್ಞತೆಯ ಭಾವವಿದೆಯೋ, ಅದೇ ಕೃತಜ್ಞತೆ ನನ್ನ ಇತರ ದೇಶಬಾಂಧವರಿಗೂ ಉಂಟಾಗುವುದು" ಎಂದು ಹೇಳಿದನು.

ಅಂತರ್‌ರಾಷ್ಟ್ರ ಸಾಂಸ್ಕೃತಿಕ ಬಾಂಧವ್ಯ

ಹೂಯೆನ್‌ತ್ಸಾಂಗ್, ಚೀಣಕ್ಕೆ ಹಿಂದಿರುಗಿದನಂತರ ಪೂಸಹ, ಅವನಿಗೂ ಆಚಾರ್ಯ ಶೀಲಭದ್ರರ ಶಿಷ್ಯ ಜ್ಞಾನಪ್ರಭರಿಗೂ ನಡುವೆ, ಪತ್ರವ್ಯವಹಾರ ನಡೆಯುತ್ತಲೇ ಇತ್ತು. ಆ ಪತ್ರ ವ್ಯವಹಾರದ ಪೈಕಿ, ಮೂರು ಕಾಗದಗಳು ಈಗಲೂ ಉಳಿದಿವೆ. ಅವುಗಳಿಂದ ಹೂಯೆನ್‌ತ್ಸಾಂಗ್ ಹೊರಟು ಹೋದ

ಮೇಲೆ ಸಹ, ನಾಲಂದದ ಪಂಡಿತರು ಚೀಣಕ್ಕೆ. ಸಂಸ್ಕೃತ ಗ್ರಂಥಗಳ ನಕಲುಗಳನ್ನು ಕಳುಹಿಸುತ್ತಿದ್ದರೆಂಬುದು ಗೊತ್ತಾಗುತ್ತದೆ. ಚೀಣಕ್ಕೆ ಹಿಂದಿರುಗಿದನಂತರ ಹೂಯೆನ್‌ತ್ಸಾಂಗ್‌ನು. ಬೌದ್ಧಗ್ರಂಥಗಳನ್ನು ಚೀಣೀ ಭಾಷೆಗೆ ತರ್ಜುಮೆ ಮಾಡುವುದರಲ್ಲಿ ತನ್ನ ಆಯುಸ್ಸನ್ನು ಕಳೆದನು. ಅವನು ತರ್ಜುಮೆ ಮಾಡಿದ ಬಹು ಭಾಗ ಗ್ರಂಥಗಳು. ನಾಲಂದ ವಿಶ್ವವಿದ್ಯಾಲಯದಲ್ಲಿ ಅವನಿಗೆ ದೊರೆತ ಗ್ರಂಥಗಳೇ ಆಗಿವೆ. ಅಂದಿನ ಚೀಣದ ಚಕ್ರವರ್ತಿಯೇ ಆ ಭಾಷಾಂತರಗಳಿಗೆ ಒಂದು ಪ್ರಸ್ತಾವನೆಯನ್ನು ಬರೆದು. ಆ ಗ್ರಂಥಗಳನ್ನು ಎಲ್ಲ ರಾಷ್ಟ್ರಗಳಲ್ಲಿಯೂ ಪ್ರಚಾರ ಮಾಡಬೇಕೆಂದು ಆಜ್ಞೆ ಮಾಡಿದನೆಂದೂ ಹೂಯೆನ್‌ತ್ಸಾಂಗ್ ಬರೆದಿದ್ದಾನೆ. ಈ ಕಾರ್ಯದಲ್ಲಿ ಭಾರತದ ಪಂಡಿತರೂ. ಚೀಣದ ಪಂಡಿತರೂ ಪರಿಶ್ರಮಿಸಿ. ಕೆಲಸಮಾಡಿದರು. ಇದರ ಫಲವಾಗಿ ಎರಡು ಸಾವಿರ ಸಂಸ್ಕೃತ ಗ್ರಂಥಗಳು. ಚೀಣ. ಟಿಬೆಟ್‌ಗಳಲ್ಲಿ ಪ್ರಸಾರಗೊಂಡು ಇಂದಿನವರೆಗೆ ಉಳಿದಿವೆ. ಭಾರತದಲ್ಲಿ ಹದಿಮೂರನೆಯ ಶತಮಾನದಲ್ಲಿ ಮುಸಲ್ಮಾನರು ನಲಂದ ಗ್ರಂಥ ಭಂಡಾರಕ್ಕೆ ಬೆಂಕಿ ಹಚ್ಚಿದಾಗ ಅನೇಕ ಗ್ರಂಥಗಳು ಭಸ್ಮವಾದರೂ. ಅದಕ್ಕೂ ಮುಂಚೆಯೇ ಅವುಗಳ ನಕಲುಗಳು ಚೀಣಕ್ಕೆ ರವಾನೆಯಾಗಿ ಅಲ್ಲಿ ಅವೂ ಅವುಗಳ ಭಾಷಾಂತರಗಳೂ ಉಳಿದಿರುವುದು ನಮ್ಮ ಅದೃಷ್ಟವೆಂದು ಹೇಳಬೇಕು. ಆ ಚೀಣೀ ಭಾಷಾಂತರಗಳಿಂದ ಈಗ ಅವನ್ನು ಭಾರತೀಯ ಭಾಷೆಗಳಿಗೆ ಅನುವಾದಿಸಿಕೊಳ್ಳಬೇಕಾಗಿದೆ.

ಹೂಯೆನ್‌ತ್ಸಾಂಗ್‌ನನಂತರ. ಇತ್‌ಸಿಂಗ್ ಎಂಬ ಮತ್ತೊಬ್ಬ ಚೀಣಿ ಯಾತ್ರಿಕ. ಭಾರತಕ್ಕೆ ಬಂದನು. ಹಿಂದೆ ನಾಲಂದಕ್ಕೆ ನೂರು ಗ್ರಾಮಗಳ ಉತ್ಪತ್ತಿಯನ್ನು ಕೊಡುತ್ತಿದ್ದುದು, ತನ್ನ ಕಾಲಕ್ಕೆ ಇನ್ನೂರು ಗ್ರಾಮಗಳ ಉತ್ಪತ್ತಿಗೆ ಏರಿತೆಂದು ಅವನು ಹೇಳುತ್ತಾನೆ. ನಾಲಂದದ ವಿದ್ವಾಂಸರೂ ಪಂಡಿತರೂ. ಜ್ಞಾನಜ್ಯೋತಿಯನ್ನು ತೆಗೆದುಕೊಂಡು ಜಗತ್ತಿನ ನಾನಾ ಭಾಗಗಳಿಗೆ ಹೋಗುತ್ತಿದ್ದರು. ಟಿಬೆಟ್ಟಿನ ಚಕ್ರವರ್ತಿ ಸ್ಟಾನ್ ಜಾನ್ ಗಾಂಪೋ (starn Jon Gampo) ಎಂಬಾತ. ತನ್ನ ದೇಶದಲ್ಲಿ ಬೌದ್ಧಧರ್ಮ ವಿಷಯಕವಾದ ಜ್ಞಾನವನ್ನು ಪ್ರಚಾರ ಮಾಡುವ ಉದ್ದೇಶದಿಂದ. ನಾಲಂದಕ್ಕೆ ತೋಶ್ಮಿ ಶಾಂಭಾಟ್ (Thoshmi Shambhatt) ಎಂಬ ಪಂಡಿತನನ್ನು ಕಳುಹಿಸಿದನು. ಆತನು ಆಚಾರ್ಯದೇವ ವಿದ್ಯಾಸಿಂಗ್‌ರಿಂದ ಬೌದ್ಧ ಮತ್ತು ಬ್ರಾಹ್ಮಣ ಗ್ರಂಥಗಳನ್ನೆಲ್ಲ ಅಭ್ಯಾಸ ಮಾಡಿದನು. ಅನಂತರ ಎಂಟನೆಯ ಶತಮಾನದಲ್ಲಿ ನಾಲಂದ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಆಚಾರ್ಯ ಶಾಂತಿರಕ್ಷಿತರು, ಟಿಬೆಟ್ ಚಕ್ರವರ್ತಿಯಿಂದ ಆಹ್ವಾನಿತರಾಗಿ ಅಲ್ಲಿಗೆ ಹೋಗಿದ್ದರು. ತಂತ್ರಶಾಸ್ತ್ರದಲ್ಲಿ ಪಾರಂಗತರಾದ ಆಚಾರ್ಯ ಕಮಲಶೀಲರು ಸಹ ಟಿಬೆಟ್ಟಿಗೆ ಭೇಟಿಯಿತ್ತಿದ್ದರು. ನಾಲಂದದ ಪಂಡಿತರು, ಟಿಬೆಟ್ ಭಾಷೆಯನ್ನು ಕಲಿತು, ಬೌದ್ಧಧರ್ಮ ಗ್ರಂಥಗಳನ್ನೂ ಸಂಸ್ಕೃತ ಗ್ರಂಥಗಳನ್ನೂ ಆ ಭಾಷೆಗೆ ತರ್ಜುಮೆ ಮಾಡಿದರು. ಆಗಲೇ ಟಿಬೆಟ್‌ನಲ್ಲಿ ಸ್ಥಾಪಿತವಾದ ಮೊದಲನೆಯ ಬುದ್ಧ ವಿಹಾರ (ಕ್ರಿ.ಶ. ೭೪೯ರಲ್ಲಿ ಆಚಾರ್ಯ ಶಾಂತಿಕ್ಷಿತರಿಂದ) ಕಟ್ಟಲ್ಪಟ್ಟಿತು. ನಾಲಂದದ ಕುಲಪತಿಯಾಗಿದ್ದ ನಾಗಾರ್ಜುನರು. ಆ ಮೊದಲೇ ಟಿಬೆಟ್ಟಿಗೆ ಭೇಟಿಯಿತ್ತುದಕ್ಕೆ ಆಧಾರಗಳಿವೆ. ಟಿಬೆಟ್ಟಿನ ತ್ರಿಪಿಟಕದಲ್ಲಿರುವ ಬೌದ್ಧಗ್ರಂಥಗಳನ್ನು ಮತ್ತೆ ಭಾರತೀಯ ಭಾಷೆಗಳಿಗೆ ಅನುವಾದಿಸಬೇಕಾಗಿದೆ. ಅದರಿಂದ ಭಾರತದ ಇತಿಹಾಸ. ಸಂಸ್ಕೃತಿಗಳ ಮೇಲೆ ಹೊಸ ಬೆಳಕು ಬೀಳುವುದು ಮಾತ್ರವಲ್ಲದೆ, ನಾಲಂದ ವಿಶ್ವವಿದ್ಯಾಲಯ ಸಾಂಸ್ಕೃತಿಕ ಪ್ರಚಾರಕ್ಕೆ ಎಂಥ ಕೆಲಸಮಾಡಿದೆ ಎಂಬುದೂ ಇನ್ನೂ ವಿಶದವಾಗಿ ಗೊತ್ತಾಗುತ್ತದೆ. ಅಲ್ಲದೆ ಕೊರಿಯ ದೇಶದ ವಿದ್ವಾಂಸರು ನಾಲಂದಕ್ಕೆ ಬಂದು ವಿನಯ ಮತ್ತು ಅಭಿಧರ್ಮಗ್ರಂಥಗಳನ್ನು ವ್ಯಾಸಂಗ ಮಾಡಿದರೆಂದು ನಂಬಲು ಆಧಾರವಿದೆ. ಅಪೂರ್ವ ಕೃತಿಗಳ ಕೊರಿಯನ್ ಅನುವಾದಗಳು ಈಗಲೂ ಇರಬಹುದೆಂದು ಪರಿಶೋಧಕರು ನಂಬುತ್ತಾರೆ.

ನಾಲಂದದ ಪ್ರಭಾವ, ಇತರ ದೇಶಗಳ ಮೇಲೆ ಪೂರ್ಣವಾಗಿ ಬಿದ್ದಿದ್ದಿತು. ಧರ್ಮ. ಸಾಹಿತ್ಯಗಳಲ್ಲಲ್ಲದೆ ಲಲಿತಕಲೆಗಳಲ್ಲಿ ಸಹ, ನಾಲಂದದ ಪ್ರಭಾವ. ನೇಪಾಳ. ಟಿಬೆಟ್. ಇಂಡೋನೇಶಿಯ ಮತ್ತು ಮಧ್ಯ ಏಷಿಯಾದಲ್ಲಿ ಕಾಣುತ್ತದೆ. ನಾಲಂದದಲ್ಲಿರುವ ಲೋಹದ ಪ್ರತಿಮೆಗಳು ಸುಂದರವಾಗಿ, ಮನಸ್ಸನ್ನು ಆಕರ್ಷಿಸುವುವಾಗಿವೆ. ಏಷಿಯದ ಅನೇಕ ರಾಷ್ಟ್ರಗಳ ಮೂರ್ತಿ ಶಿಲ್ಪದಲ್ಲಿ, ನಾಲಂದದ

ಛಾಯೆ ಎದ್ದು ಕಾಣುತ್ತಿದೆ. ನಾಲಂದ ಮನುಷ್ಯನ ಜ್ಞಾನಪಿಪಾಸೆಯ ಕುರುಹು; ಉನ್ನತಿಗೇರುವ ಮನಸ್ಸಿನ ಸಂಕೇತ. ಇಲ್ಲಿ ಧರ್ಮ, ದರ್ಶನ, ಭಾಷೆ, ಕುಶಲಕಲೆಗಾರಿಕೆ, ಎಲ್ಲಕ್ಕೂ ಸಮಾನವಾದ ಪ್ರಾಧಾನ್ಯತೆ ಯಿದ್ದಿತು. ಸತತೋದ್ಯೋಗದಲ್ಲಿ ತೊಡಗಿದ್ದಾಗ ಮಾತ್ರವೇ ದೇಶಕ್ಕೆ ಸಾಂಸ್ಕೃತಿಕ ಪುನರುಜ್ಜೀವನ ಪ್ರಾಪ್ತವಾಗುವುದು. ಅಂತಹ ಕಾಲ, ನಾಲಂದ ವಿಶ್ವವಿದ್ಯಾಲಯದ ಕಾಲಕ್ಕೆ ಭಾರತಕ್ಕೆ ಒದಗಿದ್ದಿತು.

ಇಂದಿನದಕ್ಕಿಂತ ಒಂದು ಹೆಜ್ಜೆ ಮುಂದೆ

ಉನ್ನತವಾದ ಶಿಕ್ಷಣ, ವಾದ, ಚರ್ಚೆಗಳಿಂದ ಜ್ಞಾನಾರ್ಜನೆ, ಗುರುಶಿಷ್ಯರಲ್ಲಿ ಪೂರ್ಣ ಸಮರಸ ಮತ್ತು ಮಿತ್ರತ್ವಭಾವನೆ, ಜಿಜ್ಞಾಸುಮನೋವೃತ್ತಿ, ಇವು ನಾಲಂದ ವಿಶ್ವವಿದ್ಯಾಲಯದ ಕೆಲವು ಲಕ್ಷಣಗಳು. ಅನೇಕ ವಿಷಯದಲ್ಲಿ ಈ ಪ್ರಾಚೀನ ವಿದ್ಯಾಲಯ ನಮ್ಮ ಇಂದಿನ ವಿಶ್ವವಿದಾಲಯಗಳಿಗಿಂತ ಬಹಳ ಮುಂದೆ ಹೋಗಿದ್ದಿತೆಂದು ಧಾರಾಳವಾಗಿ ಹೇಳಬಹುದು.

ಏಳನೆಯ ಶತಮಾನದಲ್ಲಿ ಖ್ಯಾತಿಪೆತ್ತಿದ್ದ ಬೌದ್ಧ ವಿದ್ಯಾಕೇಂದ್ರವಾದ ನಾಲಂದಾ ಈಗಿನ ದಕ್ಷಿಣ ಬಿಹಾರದ ರಾಜಗೃಹದ ಸಮೀಪದ ಬಡಗಾವ್ ಗ್ರಾಮದಲ್ಲಿತ್ತು. ಈ ವಿದ್ಯಾಪೀಠವನ್ನು ಆರಂಭಿಸಿದವರು ಯಾರು ಎಂಬುದು ತಿಳಿಯದು. ಐದನೆಯ ಶತಮಾನದಲ್ಲಿ ಪಾಟಲೀಪುತ್ರವನ್ನು ಸಂದರ್ಶಿಸಿದ ಫಾಹಿಯಾನನ ಬರವಣಿಗೆಗಳಲ್ಲಿ ಇದರ ಉಲ್ಲೇಖವಿಲ್ಲ. ಆದರೆ ಗುಪ್ತರ ಅರಸ ನರಸಿಂಹಗುಪ್ತ ಬಾಲಾದಿತ್ಯ (ಸು. ಕ್ರಿ. ಶ. ೪೭೦) ಇಲ್ಲಿ ಒಂದು ಸೊಗಸಾದ ದೇವಾಲಯವನ್ನು ಕಟ್ಟಿಸಿ ೮೦ ಅಡಿಗಳಿಗೂ ಮೀರಿದ ತಾಮ್ರ ವಿಗ್ರಹವನ್ನು ಪ್ರತಿಷ್ಠಿಸಿದನೆಂದು ಹ್ಯೂಯೆನ್‌ತ್ಸಾಂಗ್ ಹೇಳಿದ್ದಾನೆ. ಈ ಯಾತ್ರಿಕ ನಾಲಂದಾಕ್ಕೆ ಬಂದಾಗ ಶೀಲಭದ್ರ ಅದರ ಕುಲಪತಿಯಾಗಿದ್ದ. ೯ನೆಯ ಶತಮಾನದ ಆರಂಭದಲ್ಲಿ ಜಲಾಲಾಬಾದಿಗೆ ಸೇರಿದ ವೀರದೇವನೆಂಬ ಬ್ರಾಹ್ಮಣನೊಬ್ಬ ಕುಲಪತಿಯಾದ. ಈ ಸಮಯದಲ್ಲಿ ಮಗಧದ ಅರಸನಾದ ದೇವಪಾಲನ ಅನುಮತಿಯಿಂದ ಶೈಲೇಂದ್ರ ವಂಶದ ಅರಸನಾದ ಬಲಪುತ್ರ ದೇವನು ಜಾವಾದಿಂದ ಬಂದ ಬೌದ್ಧ ಸನ್ಯಾಸಿಗಳಿಗಾಗಿ ಇಲ್ಲಿ ಒಂದು ವಿಹಾರವನ್ನು ಕಟ್ಟಿಸಿದ. ಲಭ್ಯ ಅವಶೇಷಗಳನ್ನು ಪರಿಶೀಲಿಸಿದಾಗ ಬಹುಶಃ ಈ ವಿಶ್ವವಿಖ್ಯಾತ ವಿದ್ಯಾಪೀಠ ಅಗ್ನಿಗೆ ಆಹುತಿಯಾದಂತೆ ತೋರುತ್ತದೆ.

(ಬಾ.ರಾ.ಗೋ.)

ಕೆ. ರಘುಪತಿಭಟ್ಟ

ಸ್ಥಳನಾಮಗಳು

ಪೀಠಿಕೆ

'ಸ್ಥಳನಾಮ' ಹಳೆಯದಾಗಿರಬಹುದಾದರೂ, ವಿಜ್ಞಾನದ ಒಂದು ಶಾಖೆಯೆಂದು ಪರಿಗಣಿಸಬಹುದಾದ 'ಸ್ಥಳನಾಮಶಾಸ್ತ್ರ ಅಥವಾ ವಿಜ್ಞಾನ' (Toponomy) ಈಚಿನದು; ಅರ್ವಾಚೀನವಾದುದು. ನಮ್ಮ ದೇಶದಲ್ಲಿ ಕಾವ್ಯವಿಮರ್ಶೆಗಿಂತಲೂ ಹೆಚ್ಚಾಗಿ ಕಾವ್ಯಮೀಮಾಂಸೆಯೇ ಒಂದು ಪರಂಪರೆಯೆನ್ನಿಸುವಷ್ಟು ಬೆಳೆದು ಬಂದಿರುವಂತೆ, ಸ್ಥಳನಾಮವಿಮರ್ಶೆ ಅಥವಾ ವಿಜ್ಞಾನಕ್ಕಿಂತ ಸ್ಥಳನಾಮ ಮೀಮಾಂಸೆಯೇ ಹೆಚ್ಚು ಪ್ರಚುರವಾಗಿರುವುದನ್ನು ಮೊದಲ ನೋಟದಲ್ಲೇ ಗುರುತಿಸಬಹುದಾಗಿದೆ. ಸ್ಥಳನಾಮಶಾಸ್ತ್ರವು (Toponomy < topos (place) + onyma(= name G.K.) ಒಂದು ಸ್ಥಳದ ಹೆಸರಿನ ಕುರಿತಾಗಿ ಚರ್ಚಿಸುವ ಒಂದು ಶಾಸ್ತ್ರ ಯಾ ವಿಜ್ಞಾನಶಾಖೆ (nomy < nomos = law, the science of, topos = place=place-name) ಎಂದೂ ಸ್ಥಳನಾಮಶಾಸ್ತ್ರ–ನಡೆದು ಬಂದ ಹಾದಿ

ಸ್ಥಳನಾಮಶಾಸ್ತ್ರ-ನಡೆದುಬಂದ ಹಾದಿ

ಸ್ಥಳನಾಮಗಳ ಮಹತ್ವವನ್ನು ಮೊತ್ತಮೊದಲು ಗುರುತಿಸಿದ ಕೀರ್ತಿ ಜಿ. ಡಬ್ಲ್ಯು ಲೀಬ್ನಿಜ್ (೧೭೬೮) ಎಂಬ ವಿದ್ವಾಂಸನಿಗೆ ಸಲ್ಲುತ್ತದೆ.[1] ಸ್ಥಳನಾಮಗಳಿಗೆ ಮಹತ್ವಪೂರ್ಣವಾದ ಅರ್ಥವಿತ್ತೆಂದೂ, ಅಂಥ ಸ್ಥಳನಾಮಗಳ ಹಳೆರೂಪಗಳಿಂದ ಅವುಗಳ ಅರ್ಥವನ್ನು ದೃಢೀಕರಿಸಿಕೊಳ್ಳಬಹುದೆಂದೂ, ಮೂಲಭೂತ ಸಿದ್ಧಾಂತವೊಂದನ್ನು ವ್ಯಕ್ತಪಡಿಸಿದವನು ಅವನು. ಸ್ಥಳನಾಮಗಳ ಕ್ರಮಬದ್ಧ ಸಂಶೋಧನೆ ಮೊದಲಿಟ್ಟದ್ದು ೧೮೫೦ರಿಂದೀಚೆ ಮಾತ್ರ. ಕಳೆದ ಶತಮಾನದ ಅಂತಿಮ ಪಾದದಲ್ಲಿ (೧೮೭೦–೧೮೮೫) ಸ್ಥಳನಾಮಶಾಸ್ತ್ರವು ಪ್ರಗತಿಪರ ಮುನ್ನಡೆಯನ್ನು ಸಾಧಿಸಿತು.[2] ಈ ಕಾಲದ ಸ್ಥಳನಾಮ ವಿದ್ವಾಂಸರಲ್ಲಿ ಜೆ.ಜೆ. ಎಗ್ಲಿಯದು ದೊಡ್ಡ ಹೆಸರು.

ನಮ್ಮ ದೇಶದಲ್ಲಿ ಈ ಕ್ಷೇತ್ರವಿನ್ನೂ ಕನ್ನೆನೆಲ (virgin soil)ವಾಗಿಯೇ ಉಳಿದಿದೆ ಎನ್ನಬಹುದು. ಅಲ್ಲೊಂದು ಇಲ್ಲೊಂದು ಪ್ರಾದೇಶಿಕ ಸ್ಥಳನಾಮಾಧ್ಯಯನ ನಡೆದಿದೆ[3]. ಅದೇನಿದ್ದರೂ ಈ ಕ್ಷೇತ್ರದ ಸಾಧ್ಯತೆಗಳನ್ನು ಸೂಚಿಸುವ ಮುನ್ಸೂಚಿ ಎಂಬಂತಿದೆ.

---

1 Siverine Silva, *Toponomy of Canara* p. 1.

2 *Ibid.*, p. 5

3 ಎಚ್. ಸಂಕಾಲಿಯಾ. ಎಸ್. ಕೆ, ಚಟರ್ಜಿ, ಗೋಸ್ವಾಮಿ. ಶ್ರೀಮತಿ ಸುಮತಿ ಮ್ಯೂತೆ, ಎಸ್. ರಾಮಚಂದ್ರಮೂರ್ತಿ, ಕೆ. ನಾಚಿಮುತ್ತು ಮುಂತಾದ ವಿದ್ವಾಂಸರು ನಡೆಸಿರುವ ಅಧ್ಯಯನಗಳು ಉಲ್ಲೇಖನಾರ್ಹವಾದುವು.

ಹೆಸರಿನ ಹಿನ್ನೆಲೆ

ನಾಮಪದಗಳನ್ನು ರೂಢನಾಮ, ಅಂಕಿತನಾಮ ಮತ್ತು ಅನ್ವರ್ಥನಾಮ ಎಂದು ಮುಂತಾಗಿ ವಿಂಗಡಿಸುವುದಿದೆ. ಸ್ಥಳನಾಮಗಳು ಅನ್ವರ್ಥನಾಮಗಳಾಗಿರುವುದೇ ಜಾಸ್ತಿ. ಅನ್ವರ್ಥನಾಮಗಳೆಂದರೆ 'ಅರ್ಥ'ಕ್ಕೆ (ಗುಣಧರ್ಮಕ್ಕೆ) ಅನುಸಾರವಾಗಿ ನಾಮಪದಗಳು. ಈ ಅರ್ಥವನ್ನು ಸಂದರ್ಭ, ಸನ್ನಿವೇಶ ಎಂಬ ಅರ್ಥದಲ್ಲಿ ತೆಗೆದುಕೊಳ್ಳಬಹುದು.

ವ್ಯಕ್ತಿನಾಮ ಹಾಗೂ ಸ್ಥಳನಾಮಗಳ ನಿರ್ದೇಶನದಲ್ಲಿ ಸಾಮ್ಯವಿದೆ. ಒಂದು ಶಿಶು ಜೀವಧಾರಣೆ ಮಾಡಿದ ತಿಥಿ, ನಕ್ಷತ್ರ, ವಾರ, ಯೋಗ, ಕರಣಾದಿಗಳನ್ನೂ, ಮೂರು ತಲೆಮಾರಿನ ಹೆಸರು, ಗುರುಗಳು, ಇಷ್ಟದೈವದ ಹೆಸರು, ಮತ ಮುಂತಾದುವನ್ನೂ ಗಮನಿಸಿ ಅದಕ್ಕೆ ನಾಮಕರಣ ಮಾಡುವುದು ರೂಢಿ ತಾನೆ! ಅದೇ ಹೆಸರು ಕೊನೆಯ ಪಕ್ಷ ಆ ಮನೆಯಲ್ಲಾದರೂ ಬೇರೆ ಯಾರಿಗೂ ಇರದ ರೀತಿಯಲ್ಲಿ 'ವಿಶಿಷ್ಟ'(distinctive)ವಾಗಿ ಗುರುತಿಸಲಿಕ್ಕೇ, ಹೆಸರಿಡಬೇಕು. ಈ ಜಾತಕದ ಹಿನ್ನೆಲೆಯೇ ಆ ವ್ಯಕ್ತಿನಾಮದ context. ಕೆಲವೊಮ್ಮೆ ಸಾಹಿತ್ಯದಲ್ಲೂ ಕೆಲವು ಪದಗಳ ಅರ್ಥವನ್ನು ನಾವು ನಿರ್ಧರಿಸುವುದು ಅವು ಪ್ರಯುಕ್ತವಾಗಿರುವ ಸಂದರ್ಭವನ್ನು ನೋಡಿಯೇ ಹೊರತು, ಅದರ ಪೂರ್ವಾಪರವನ್ನು ಅನುಶೀಲಿಸಿಯೇ ಹೊರತು, ಶಬ್ದಕೋಶವನ್ನು ನೋಡಿ ಅಲ್ಲ. ಹಾಗೆಯೇ ಪ್ರತಿಯೊಂದು ಸ್ಥಳನಾಮಕ್ಕೂ ಒಂದೊಂದು ಜಾತಕ, ಒಂದೊಂದು ಸನ್ನಿವೇಶ ಇರುತ್ತದೆ. ಇದನ್ನ "ಓದಲು" ನಾವು ಆ ಆ ಸ್ಥಳಕ್ಕೇ ಭೇಟಿ ನೀಡಬೇಕಾಗುತ್ತದೆ; ಅರ್ಥಾತ್ ಭೂವಿವರಗಳನ್ನು—ಜೀವನಕ್ಕೆ ಆವಶ್ಯಕವಾದ ವಸ್ತುಗಳು, ಪ್ರಾಕೃತಿಕ ಸಾಧನಗಳು, ಪರಿಸರ ಮುಂತಾದ ಅಥವಾ topography ಅನ್ನು ಪರಿಶೀಲಿಸಿ ಆ ಹೆಸರು ಹುಟ್ಟಿಕೊಳ್ಳಲು ಇರುವ ಕಾರಣವನ್ನು ಶೋಧಿಸಬೇಕಾಗುತ್ತದೆ.[5] "ಹುಟ್ಟಿಸಿದ ದೇವರೇ ಜಾತಕವ ಬರೆದಿಹ"[6] ಎಂಬ ಮಾತು ಮಣ್ಣಿನ ಮಕ್ಕಳಾಗಿರುವ ಜಾನಪದರಿಗೆ ಅಥವಾ ಜನಸಾಮಾನ್ಯರಿಗೆ ಅನ್ವಯವಾಗುವಂತೆ ಮಣ್ಣಿಗೂ, ಅಥವಾ ಸ್ಥಳಕ್ಕೂ (ಸ್ಥಳನಾಮಕ್ಕೂ) ಅನ್ವಯವಾಗುವಂತಹದು. ನಾವು ಅನಾಗರಿಕರೆಂದು ಕರೆವ, ಹಳ್ಳಿಗಾಡಿನ ನಿರಕ್ಷರಕುಕ್ಷಿಗಳು ತಮ್ಮ ಮಕ್ಕಳಿಗೆ ಕಲ್ಲಪ್ಪ, ಗುಂಡಪ್ಪ, ಮುಕಣ್ಣ, 'ನಾಯಿ'(!) ಮುಂತಾದದ, 'ಹೀನಾಯ'ವೆನ್ನಿಸುವ ಹೆಸರಿಡಲೂ ಒಂದಲ್ಲೊಂದು ಆಶಯ-ಕಾರಣ ಇರುತ್ತದೆ. ಈ ಅರ್ಥದಲ್ಲಿ 'ಸುಸಂಸ್ಕೃತ' ಹೆಸರುಗಳಂತೆ ಈ ಹೆಸರುಗಳೂ ಸಹಜವೇ. ಸ್ಥಳನಾಮಗಳಲ್ಲೂ ಈ ಎರಡೂ ರೀತಿಯ ಹೆಸರುಗಳಿರಬಹುದು. ಸಂಶೋಧಕನ ದೃಷ್ಟಿಯಿಂದ ಇವುಗಳಿಗೆ ಸಮಾನವಾದ ಪ್ರಾಶಸ್ತ್ಯ ಇಲ್ಲದೆ ಪುರಸ್ಕಾರ ಸಲ್ಲುತ್ತದೆ; ಸಲ್ಲಬೇಕು. A. life close to nature produces names derived from nature ಎನ್ನುವುದೂ ಇದೇ ಅರ್ಥದಲ್ಲಿ. ಆ ನಾಮಕರಣದ ಹಿಂದಿರುವ ಆಶಯ, ಹಿನ್ನೆಲೆ ನಮಗೆ ಅರ್ಥವಾಗದಿದ್ದಾಗ, ಮೂಲತಃ ಅದು ಸಹಜವಾಗಿದ್ದರೂ, ನಮ್ಮ ಕಣ್ಣಿಗೆ ಕೃತಕವೆನ್ನಿಸಬಹುದು.

ಈ ಅಂಶವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಸ್ಥಳನಾಮಗಳನ್ನು ಸ್ವಾಭಾವಿಕ, ಪ್ರಾಕೃತಿಕ (natural/geographical)ವೆಂದೂ, ಕೃತಕ ಅಥವಾ ವೈಯಕ್ತಿಕ/ಸ್ಮಾರಕಾರ್ಥ (personal /commemorative)ವೆಂದೂ, ಎರಡು ಪ್ರಮುಖ ಭಾಗವಾಗಿ ವಿಂಗಡಿಸುವುದು ಸರಿಯೆನ್ನಿಸುತ್ತದೆ.

---

4 ಸಂಸ್ಕೃತದಲ್ಲಿ 'ಜೀವನ'ಕ್ಕೆ 'ನೀರು' ಎಂಬ ಅರ್ಥವೂ ಇದೆ. ಎಲ್ಲ ದೇಶಗಳ ಸ್ಥಳನಾಮಗಳಲ್ಲಿ ಬಹುತೇಕ ಭೂ ವಾಚಕ—ಅದರಲ್ಲೂ ಜಲವಾಚಕ (hydronyms) ನಾಮಗಳಿರುವುದು ತುಂಬ ಸ್ವಾರಸ್ಯಕರ.

5 ನಿತ್ಯಜೀವನದಲ್ಲಿ ಹೊಳೆ, ಕೆರೆ, ಘಟ್ಟ, ಕಣಿವೆ, ಮಣ್ಣು, ದಿಣ್ಣೆ ಮುಂತಾದುವು ತೀರ ಸಾಮಾನ್ಯವೆನಿಸಿ ಅವಜ್ಞೆಗೀಡಾದರೂ, ಇಂಥ ಪ್ರಾಕೃತಿಕ ಸನ್ನಿವೇಶವೇ ಸಂಸ್ಕೃತಿಯ, ಮಾನವ ಜನಾಂಗದ ಪ್ರಾಚೀನ ನಾಗರಿಕತೆಯ ತೂಗುತೊಟ್ಟಿಲಾಗಿದೆ ಎಂಬುದನ್ನು ಮನಗಾಣಬೇಕು. ಪ್ರಾಚೀನ ನಾಗರಿಕತೆಗಳೆಲ್ಲ ನದೀ ಕಣಿವೆಗಳಲ್ಲೇ ಬೆಳೆದು ಬಂದುದನ್ನು ನೋಡಿದರೆ ಭೂ ಸ್ಥಿತಿಯ ಮಹತ್ವದ ಅರಿವಾಗದಿರದು.

6 ಕುವೆಂಪು ; 'ಕರಿಸಿದ್ಧ' (ಕಥನ ಕವನಗಳು)

ಒಂದು ರೀತಿಯಲ್ಲಿ ಎರಡನೆಯ ವರ್ಗದವು ಮೊದಲನೆಯದಕ್ಕಿಂತ ಈಚಿನ, ಅರ್ವಾಚೀನ ರೂಪದ ಸ್ಥಳನಾಮ ಎನ್ನಬಹುದು. ಅಂದರೆ ಮೂಲತಃ ಮಾನವ ಜನಾಂಗದ ಕಣ್ಣು ನೆಟ್ಟದ್ದು ಜೀವನಾವಶ್ಯಕ ವಸ್ತುಗಳ ಮೇಲೆ. ಅಂದರೆ ಪ್ರಕೃತಿಯ ಮೇಲೆ. ಅವನ್ನೆಲ್ಲ ಧಾರಾಳವಾಗಿ ಪಡೆದು ಸಂತೃಪ್ತಿಯ ಜೀವನ ಬದುಕು ಸಾಗಿಸುತ್ತ ಬಂದಂತೆ ದೇವರು. ಧರ್ಮ. ರಾಜ್ಯ–ರಾಜ–ಆಡಳಿತ ಮುಂತಾದ ಕಲ್ಪನೆಗಳು ಬೆಳೆಯುವುದು ಮಾನವಜನಾಂಗದ ಸಾಂಸ್ಕೃತಿಕ ವಿಕಾಸದ ದೃಷ್ಟಿಯಿಂದ ಸಹಜವಾದುದು. ಬಹುಶಃ ಈ ಘಟ್ಟದಲ್ಲಿ ಎರಡನೆಯ ವರ್ಗದ ಹೆಚ್ಚಿನ ಸ್ಥಳನಾಮಗಳು ಹುಟ್ಟಿಕೊಂಡುವು ಎನ್ನಬಹುದು.

ಸ್ಥಳನಾಮಗಳ ಸ್ಥೂಲಸ್ವರೂಪ

ಸ್ಥಳನಾಮಗಳು ಸಾಮಾನ್ಯವಾಗಿ ಕನಿಷ್ಠ ಎರಡು ಪದಗಳುಳ್ಳ ಕೂಡುನುಡಿ (compound word) ಗಳಾಗಿರುತ್ತವೆ. ಇನ್ನೂ ಸೂಕ್ಷ್ಮವಾಗಿ ನೋಡಿದಲ್ಲಿ ಇವುಗಳಲ್ಲಿ ಪೂರ್ವಪದ (pre-position /prefix)ವು ವಿಶೇಷಾರ್ಥಕ (distinctive) ವಾಗಿಯೂ, ಪರಪದ (post–position /suffiix)ವು ಸಾಮಾನ್ಯಾರ್ಥಕವಾಗಿಯೂ ಇರುವುದನ್ನು ಹೆಚ್ಚಾಗಿ ಕಾಣಬಹುದು. ಉದಾ: ಬೆಳ್ಪಾಡಿ (ಬೆಳ್ಳ ರ + ಪಾಡಿ); ಅಂಬಲ್ಪಾಡಿ (ಅಂಬಲ + ಪಾಡಿ). ಇಲ್ಲಿ ಪರಪದದಲ್ಲಿ ಬಂದಿರುವ 'ಪಾಡಿ'[7] ಸಾಮಾನ್ಯಾರ್ಥಕವಾದುದಾಗಿದೆ. ಇಲ್ಲಿ 'ಪಾಡಿ' ಎಂಬುದು ಮೂಲಪದ ಕೂಡ. ಇದಕ್ಕೆ ಸಾಕ್ಷಿ–ಕಾಸರಗೋಡು ತಾಲೂಕಿನ 'ಪಾಡಿ' ಎಂಬ ಏಕಪದದ ಮಾಗಣೆಯ ಹೆಸರು. ಇನ್ನೊಂದು ಉದಾ: ಪೇರಂಪಳ್ಳಿ (ಪೇರಂ + ಪಳಿ); ವಾರಂಬಳ್ಳಿ (ವಾರಂ + ಪಳ್ಳಿ). ಇಲ್ಲಿ 'ಪಳ್ಳಿ'[8] ಎಂಬುದು ಸಾಮಾನ್ಯಾರ್ಥಕ ಮೂಲಪದ; ಪ್ರಾಚೀನ ರೂಪ. ಇದಕ್ಕೆ ನಿದರ್ಶನ–ಕಾರ್ಕಳ ತಾಲೂಕಿನ 'ಪಳ್ಳಿ' ಎಂಬ ಹೆಸರಿನ ಏಕಪದದ ಗ್ರಾಮ.

ಸ್ಥಳನಾಮ ಪ್ರಸಾರ

ಸ್ಥಳನಾಮವು ಸಾಮಾನ್ಯವಾಗಿ ಯಾವುದಾದರೊಂದು ನಿರ್ದಿಷ್ಟ ಕೇಂದ್ರಬಿಂದುವಿಗೆ ಉದ್ದಿಷ್ಟವಾಗಿದ್ದು ಕಾಲಕ್ರಮೇಣ ಆ ಹೆಸರು ಆಸುಪಾಸಿನಲ್ಲೆಲ್ಲ (ಅದರ ಜನಪ್ರಿಯತೆಯೊಂದಿಗೆ) ಹಬ್ಬಬಿಡುತ್ತದೆ. ನೀರಿಗೆ ಬಿದ್ದ ಎಣ್ಣೆ ಹನಿ. ಬಿದ್ದ ನಿರ್ದಿಷ್ಟ ಬಿಂದುವನ್ನು ಕಾಣಲಾಗದಿದ್ದರೂ ಸುತ್ತಲೂ ವ್ಯಾಪಿಸಿ ಬಿಡುತ್ತಲ್ಲ. ಹಾಗೆ. ಕೆಲವೊಮ್ಮೆ ಈ ನಿರ್ದಿಷ್ಟ ಕೇಂದ್ರಬಿಂದು ಜನರ ಸ್ಮೃತಿಯಿಂದ ಮರೆಯಾಗಿ ನುಸುಳಿ ಹೋಗಿಬಿಡಬಹುದು. ಉದಾ: 'ಬೆದ್ರಪಣೆ'. ಸುಳ್ಯ ತಾಲೂಕಿನ ಈ ಹೆಸರಿನ ಊರಲ್ಲಿ ಒಂದು ಕಡೆ ಬಿದಿರಿನ ಪತನ ವಿಶಿಷ್ಟವಾಗಿದ್ದು. ನಂತರ ಆ ನಿರ್ದಿಷ್ಟ ಗುರುತು (identification) ಸುತ್ತೆಲ್ಲ, ಒಂದು ಊರಿಗೆಲ್ಲ ಹಬ್ಬಿಬಿಟ್ಟಿತು. ಇನ್ನೂ ಕೆಲವು ಉದಾಹರಣೆಗಳು: ಸಾಬ್ರಕಟ್ಟೆ—ತಮ್ಮ ವ್ಯಾಪಾರ ವಹಿವಾಟು. ಲಾಭನಷ್ಟಗಳ ಕುರಿತಾಗಿ ಸಾಹೇಬರು (ಮುಸ್ಲಿಮರು) ಕೂತು ಮಾತಾಡುತ್ತಿದ್ದ ಕಟ್ಟೆ. ಈಗ ಇಲ್ಲವಾದರೂ. ಆ ಹೆಸರು ಆ ಪರಿಸರದಲ್ಲೆಲ್ಲ ಉಳಿದು ಬಿಟ್ಟಿದೆ. ಪಾತೆರಿಕಟ್ಟೆ (ಮಾತಾಡುವ (ತುಳು)ಕಟ್ಟೆ. ಬಿದ್ಕಲ್‌ಕಟ್ಟೆ (ಬಿದ್ದ ಕಲ್ಲುಳ್ಳ ಕಟ್ಟೆ). ಕಲ್ಲಂಕ. ಗುಡ್ಡೆ ಅಂಗಡಿ. ನಿಂತಕಲ್. ಬಂಟಕಲ್ ಮಂಚಕಲ್. ಸುಂಕದ ಕಟ್ಟೆ ಇತ್ಯಾದಿ. ಅಷ್ಟೇಕೆ? ಇಂದು ದ.ಕ. ಜಿಲ್ಲೆಯ ಒಂದು ತಾಲೂಕಿನ ಹೆಸರಾಗಿರುವ 'ಉಡುಪಿ'ಯ[9] ಕೇಂದ್ರಬಿಂದು–ಆ ಹೆಸರಿನ ಮೂಲಸ್ಥಾನ–ಯಾವುದು? ಉಡುಪಿಯ ನಾಲ್ಕುಬೀದಿ

---

7 ಇದೇ ಮುಂದೆ ಧ್ವನಿವ್ಯತ್ಯಾಸ ಹೊಂದಿ 'ಹಾಡಿ. ವಾಡಿ. ಓಡಿ, ಆಡಿ. ಡಿ......' ಮುಂತಾದ ರೂಪ ತಳೆಯಬಹುದು. ನೋಡಿ: ಶಂ. ಬಾ. ಜೋಶಿ : 'ಎಡೆಗಳು ಹೇಳುವ ಕಂನಾಡ ಕತೆ'.

8 'ಪಳ್ಳಿ'ಯೆ ಮುಂದೆ 'ಹಳ್ಳಿ. ವಳ್ಳಿ. ವಳಿ. ಒಳಿ. ಪಲ್ಲಿ. ಳಿ......' ಇತ್ಯಾದಿ ಧ್ವನಿವ್ಯತ್ಯಾಸ ಪಡೆಯಬಹುದು.

9 ಇದರ ಮೂಲರೂಪ 'ಉ'ಕಾರಾಂತವಾಗಿ (ಬಹುಶಃ ಉಡುಪು) ಇದ್ದಿರಬೇಕು. ಈಗಲೂ ತುಳುವಿನಲ್ಲಿ 'ಒಡ್ಪು' ಎಂದು ಉಕಾರಾಂತವಾಗಿರುವುದಲ್ಲದೆ, ಲಿಪಿಆಧಾರಗಳಲ್ಲಿ 'ಉಡುಪಿನ' ಎಂಬ ರೂಪದ ಪ್ರಯೋಗವಾಗಿರುವುದೂ ಇದನ್ನೇ ಸಮರ್ಥಿಸುವಂತಿದೆ.

(ರಥಬೀದಿ)–ಅಥವಾ ಇನ್ನೂ ಖಚಿತವಾಗಿ, ನಿರ್ದಿಷ್ಟಗೊಳಿಸಿ ಹೇಳುವುದಾದರೆ 'ಅನಂತೇಶ್ವರ' ದೇವಸ್ಥಾನ.[10]

ಸ್ಥಳನಾಮಗಳ ಪ್ರಾಚೀನ-ಅರ್ವಾಚೀನರೂಪಗಳು

ಸ್ಥಳನಾಮರೂಪಗಳನ್ನು ಚೆನ್ನಾಗಿ ಪರಿಶೀಲಿಸಿದರೆ, ಅವು ಏಕಕಾಲದಲ್ಲಿ ಹುಟ್ಟಿರದೆ ಭಿನ್ನ ಭಿನ್ನ ಕಾಲದಲ್ಲಿ ಹುಟ್ಟಿ, ಮಾನವ ಜನಾಂಗವು ಸಾಂಸ್ಕೃತಿಕವಾಗಿ ಬೆಳೆದು ಬಂದ ಭಿನ್ನ ಭಿನ್ನ ಘಟ್ಟಗಳನ್ನು ಸೂಚಿಸುವುದು ಗಮನಾರ್ಹವಾದ ಅಂಶ. ಊರು, ಗ್ರಾಮ, ನಾಡು, ಪುರ, ನಗರ ಮುಂತಾದವು ಮಾನವನ ಪ್ರಾಥಮಿಕ ಬಿಡಾರದ ಸೂಚಕವಾಗಿಲ್ಲ; ಊರಿಕೊಂಡು, ನೆಟ್ಟುಕೊಂಡು ಸ್ಥಿರವಾಗಿ ನಿಂತಕಾಲದ ನೆಲೆವೀಡುಗಳು. ಮಾನವನು ಮೂಲತಃ ಸಂಚಾರಿಯಾದ್ದು ಬೇಟೆಗಾರಿಕೆಯಿಂದ ಜೀವನ ಸಾಗಿಸುತ್ತಿದ್ದ. ದನಗಾರಿಕೆಯ ಹಂತದಲ್ಲಿ ಇವನ ತಾತ್ಕಾಲಿಕ ವಸತಿಸ್ಥಾನ, ಬೀಡು–ಪಟ್ಟಿ[11] (cf ಹಟ್ಟಿಯಂಗಡಿ: ಪಟ್ಟಿಪೊಂಬುಚ್ಚಪುರ). ಆದರೀಚಿನ ಘಟ್ಟದಲ್ಲಿ ಅಂದರೆ ಕೃಷಿಯ ಹಂತದಲ್ಲಿ ಹುಟ್ಟಿಕೊಂಡ ಊರುಗಳು 'ಹುಡಿ' (ಪು) ಎಂಬ ಪ್ರತ್ಯಯದೊಂದಿಗೆ ಹುಟ್ಟಿಕೊಂಡಿವೆ ಎಂಬುದು ಶಂ. ಬಾ. ಜೋಶಿ ಅವರ ಅಭಿಪ್ರಾಯ.[12]

ಹೀಗೆ ಮಾನವ ಜನಾಂಗ ಒಂದುಕಡೆ ಭದ್ರವಾಗಿ ಊರಿಕೊಂಡು, ನೆಲೆಯೂರಿದ ಮೇಲೆ ಸಂಘಸಂಸ್ಥೆಗಳು ಹುಟ್ಟಿಕೊಂಡವು. ಅವುಗಳನ್ನು ಹೇಳುವ ಹೆಸರುಗಳೂ ಈ ಘಟ್ಟದಲ್ಲೇ ಹುಟ್ಟಿಕೊಳ್ಳಲಾರಂಭಿಸಿದವು. ಚರಿತ್ರೆಯಲ್ಲಿ ಪ್ರಸಿದ್ಧಪುರುಷರ ಹೆಸರುಗಳು ಕೂಡ ಕೆಲ ಊರುಗಳಿಗೆ ಈ ಕಾಲದಿಂದೀಚೆಗೆ ಅನ್ವಯವಾಗಿದ್ದಿರಬೇಕು.

ಕೇವಲ ಇತ್ತೀಚಿನ ಊರುಗಳು

ದ.ಕ.ದಲ್ಲಿ ಇತ್ತೀಚೆಗೆ ಹುಟ್ಟಿಕೊಂಡ ಊರುಗಳಲ್ಲೊಂದು–'ಚೇತನಹಳ್ಳಿ'. ಕಾರ್ಕಳ ಜೇಸೀಸ್‌ನವರು ಬಡಜನರಿಗಾಗಿ ಬಿಟ್ಟ ದತ್ತಕಗ್ರಾಮ. ಈ ಹೆಸರಿನಲ್ಲಿ ಆ ಸಂಸ್ಥೆಯ ಆಶಯ–ಉದ್ದೇಶ ಚೆನ್ನಾಗಿ ವ್ಯಕ್ತವಾಗಿದೆ. ಕೆಲವು ತಿಂಗಳುಗಳ ಹಿಂದೆ ಮಂಗಳೂರಿನ ಕಿನ್ಯಾ ಗ್ರಾಮದಲ್ಲಿ ಸ್ವಯಂಸೇವಕರಿಂದ ನಿರ್ಮಿತವಾಗಿ ಭೂರಹಿತರಿಗೆ ದಾನವಾಗಿ ಕೊಡಲ್ಪಟ್ಟ 'ಬಲದಿನ ಹಳ್ಳಿ'. ಸಮಾಜ ಸಂಘಟಕರಾಗಿದ್ದ ಯುವಕ ಇಸ್ಮಾಯಿಲ್ಲರ ಮರಣಾನಂತರ ರೂಪುಗೊಂಡ ಅವರ ಸ್ಮಾರಕಾರ್ಥ ಊರು (–ಊರುಭಾಗ) 'ಇಸ್ಮಾಯಿಲ್ ನಗರ'. ಉದ್ಯಾವರ ಗ್ರಾಮ ಪಂಚಾಯತಿಯಲ್ಲಿ ಬಹುಮತದ ಮೇರೆಗೆ ಪುನರ್ನಾಮಕರಣ

---

10 ಈ ಭಾಗವು ಶಿವ–ನಾಗರ ಅಭೇದ ಅಥವಾ ಏಕತ್ರಿತ ಆರಾಧನೆಗೆ ಬಹಳ ಪ್ರಾಚೀನ ಕಾಲದಿಂದಲೂ ಪ್ರಸಿದ್ಧವಾದುದು. ಕಿಟ್ಟೆಲ್ ಕೋಶದಲ್ಲಿ ಉಡುಪ=serpent (ಉರಗ, ಸರ್ಪ), ಎಂದಿದೆ. 'ಉಡುಪ' ಎಂಬ ಕುಲನಾಮವುಳ್ಳ ಬ್ರಾಹ್ಮಣವರ್ಗದ ಇಷ್ಟದೈವ ನಾಗನೇ ಆಗಿರುತ್ತದೆ. ಇಲ್ಲಿನ ಅನಂತೇಶ್ವರ ದೇವರ ಆ ಹೆಸರು, ಪಾಣಿಪೀಠದ ನಾಲ್ಕು ಬದಿಗಳಲ್ಲಿ ನಾಲ್ಕು ನಾಗಗಳ ಕೆತ್ತನೆ ಇರುವುದು, ಮತ್ತು ದೇವಸ್ಥಾನದ ಆವರಣದಲ್ಲೇ ನಾಗನ ಶಿಲಾಮೂರ್ತಿಗಳಿರುವುದು–ಇದನ್ನೇ ಸಮರ್ಥಿಸುವಂತಿದೆ. ಡಾ. ಪಿ. ಗುರುರಾಜ ಭಟ್ಟರ ಪ್ರಕಾರ "......ನಾಗಾರಾಧನೆಗೆ ಖ್ಯಾತಿವೆತ್ತ ಪ್ರದೇಶ ಉಡುಪಿಯಾಗಿದ್ದಿರಬಹುದು......" ('ಉಡುಪಿಗೆ ಸಂಬಂಧಿಸಿದ ನಾಲ್ಕು ಐತಿಹಾಸಿಕ ಪ್ರಶ್ನೆಗಳು' ನವಯುಗ, ದೀಪಾವಳಿ ಸಂಚಿಕೆ, ೧೯೬೦)

11 ಈ ಭಾಗದ ಸುದೀರ್ಘ ವಿವರಣೆ ಶಂ.ಬಾ. ಜೋಶಿಯವರ 'ಎಡೆಗಳು ಹೇಳುವ ಕಂನಾಡ ಕತೆ'ಯಲ್ಲಿ ಬಂದಿದೆ. ಇದೇ ಈ 'ಪಟ್ಟಿ'ಯಿಂದಲೇ 'ಹಾಡು, ಬಾಡ, ಹಾಡಿ, ಪಟ್ಟಣ, ಆಡಿ, ಬಾಡು, ಬಾಳ, ವಾಡ, ವಳ, ವಲ, ವಾಟಿ, ವಾಟಕ, ವಠಾರ, ಪಾಟಕ, ಹಾಟಕ, ಪಾಳು, ಹಾಳು, ಆಳ, ಅಲ(?), ಪಳ್ಳಿ, ಪಾಳ್ಯ, ವಳ್ಳಿ ......ಓಳಿ, ಳಿ,ಲಿ......" ಮುಂತಾದ ಪದಗಳು ಇಲ್ಲವೆ, ಸ್ಥಳನಾಮ ಪ್ರತ್ಯಯಗಳು ನಿಷ್ಪನ್ನವಾಗಿವೆ ಎಂಬುದು ಅವರ ವಾದ.

12 ಅದೇ

ಗೊಂಡು ರೂಪಿತವಾದ 'ಸಂಪಿಗೆ ನಗರ' (ಹಳೆ 'ಬ್ಯಾಕೇರಿ'), ಸು. ನಾಲ್ಕು ತಿಂಗಳ ಹಿಂದೆ ಒಂದು ಗುಡ್ಡದ ಭಾಗದಲ್ಲಿ ತಲೆಯೆತ್ತಿ ನಿಂತ ಕಾರ್ಮಿಕರ ಕೇರಿ–'ಇಂದಿರಾನಗರ', ಹಾಗೂ ಸು. ಎರಡು ತಿಂಗಳ ಹಿಂದೆ ಹೊಸದಾಗಿ ನಾಮಫಲಕ ತಗುಲಿಸಿಕೊಂಡ ಉಡುಪಿ ಪುತ್ತೂರಿನ ಸಮೀಪದ 'ಹನುಮಂತ ನಗರ'–ಈ ಮುಂತಾದುವು ಇಂಥ ಕೆಲವು ಹೊಸ ಊರುಗಳಿಗೆ ನಿದರ್ಶನ. ಈ ಹೊಸ ಹೆಸರುಗಳನ್ನು ಹಳೆಯ ನಾಮರೂಪಗಳೊಂದಿಗೆ ಹೋಲಿಸಿ, ಅಧ್ಯಯನ ಮಾಡುವುದು. ಮಾನವನ ಜಾನಾಂಗಿಕ ಅಥವಾ ಸಾಂಸ್ಕೃತಿಕ ಚರಿತ್ರೆಯ, ವಿಕಾಸದ ಯಥಾರ್ಥಜ್ಞಾನದ ದೃಷ್ಟಿಯಿಂದ ತುಂಬ ಲಾಭದಾಯಕವಾದೀತು.

ಸ್ಥಳನಾಮಗಳಲ್ಲಿ ಬಹುರೂಪಗಳು

ಸ್ಥಳನಾಮರೂಪಗಳು ಕಾಲಕಾಲಕ್ಕೆ ಧ್ವನಿರೂಪದಲ್ಲಿ, ಉಚ್ಚಾರದಲ್ಲಿ ವ್ಯತ್ಯಾಸವಾಗುವಂತೆ, ಸಂಪೂರ್ಣ ಹೊಸದೆನ್ನಿಸುವ ರೀತಿಯಲ್ಲಿ ಪರ್ಯಾಯನಾಮರೂಪವನ್ನೂ (synonyms) ಪಡೆದುದುಂಟು. ಒಂದೇ ಊರಿನ ಹೆಸರಿನಲ್ಲಿರುವ ಬಹುರೂಪಗಳಿಗೆ ಭಿನ್ನಭಿನ್ನ ಸ್ಥಳಪುರಾಣ–ಐತಿಹ್ಯಗಳು, ಅಪವ್ಯಾಖ್ಯಾನಗಳು ಕಾರಣವಾದಂತೆ, ಮಾನವನ ಮೂಲಭೂತ ಪ್ರವೃತ್ತಿಯಾದ ಹೊಸತರ ಆಕಾಂಕ್ಷೆಯೂ ಕಾರಣವಾಗಿರಬಹುದು. ಕೆಲವು ಉದಾಹರಣೆಗಳನ್ನು ನೋಡಿ:

೧. ಬಾರಕೂರು–ಬಾರಹಕನ್ಯಾಪುರ, ವಾರಕೂಲ, ಭೈರಕ್ಕನೂರು, ವಾರಕೋಲ(?) ಬ (ಬಾ)ರಕನೂರು, ದ್ವಾರಕ
೨. ಕುಕ್ಕೆ–ಸುಬ್ರಹ್ಮಣ್ಯ, ಕುಮಾರಾದ್ರಿ, ವಾಸುಕಿಕ್ಷೇತ್ರ, ಆದಿತ್ಯಕ್ಷೇತ್ರ, ಪುಷ್ಪಗಿರಿ, ಅಹಿಪೇಶ್ವರ
೩. ಬ್ರಹ್ಮಾವರ–ಅಜಪುರ, ಬ್ರಹ್ಮಪುರ, ಗಜಪುರ, ಧ್ವಜಪುರ
೪. ಏಳೂರು–ವೇಣೂರು, ವೇಣುಪುರ, ಏಣೂರು, (ಏನೂರು)ಕಿಂಪುರ(?)
೫. ಉಡುಪಿ–ರಜತಪೀಠಪುರ, ರೌಪ್ಯಪೀಠ, ಇಂದುಕ್ಷೇತ್ರ, ಚಂದ್ರಕ್ಷೇತ್ರ
೬. ಶಿವಳ್ಳಿ–ಶಿವಪಳ್ಳಿ, ಶಿವಹಳ್ಳಿ, ಶಿವವಳ್ಳಿ, ಶಿವಬೆಳ್ಳಿ, ಶಿವರೂಪ್ಯ
೭. ಕೊಡವೂರು–ಕೋಥಾಶ್ರಮ, ಕಾನನದೇವತಾಸದನ

ಮೇಲಿನ ಉದಾಹರಣೆಗಳು ಹೇಗೆ ಮೂಲಾರ್ಥ ಮರೆಯಾದಾಗ ಅಪವ್ಯಾಖ್ಯಾನಕ್ಕೆ, ದಂತಕತೆಗಳಿಗೆ ಮತ್ತು ಧ್ವನಿವತ್ಯಾಸಗಳಿಗೆ ಇಂಬುಗೊಡುತ್ತದೆ ಎಂಬುದನ್ನು ಮನವರಿಕೆ ಮಾಡಿಸದಿರವು.

ರೂಪಾಂತರಕ್ಕೆ ಕಾರಣಗಳು

'ಕುಕ್ಕೆ' ಮುಂತಾದ ಪದಗಳ ಅರ್ಥಗ್ರಹಣದಲ್ಲಿನ ಕ್ಲಿಷ್ಟತೆ, ದುರೂಹತೆಗಳೇ ಕೆಲವು ದಂತಕತೆಗಳಿಗೆ ಹೊಸ ರೂಪಗಳಿಗೆ ದಾರಿಮಾಡಿಕೊಟ್ಟಿರುವುದನ್ನು ಕಾಣಬಹುದು. ಚಿತ್ರದ ಕುಕ್ಕೆ (ಬುಟ್ಟಿ), (ಕುಕ್ಷಿ, /cavity)–ಹೊಟ್ಟೆತುಂಬಿಸುವುದು ಅರ್ಥಾತ್ ಅನ್ನದಾನ. 'ಕುಕ್ಕ' = ಮಗ,ಮಗು (ತುಳು)–ಸ್ಕಂದ–ಸ್ಕಂದಾರಾಧನೆಯ ಕೇಂದ್ರ,–ಹೀಗೆಲ್ಲ ಈ ಶಬ್ದದ ಸುತ್ತ ಕಥಾಜಾಲ ಕವಿದಿದೆ. 'ಕುಕ್ಕೆ' ಎನ್ನುವ ಪದವು ಮೂಲದ್ರಾವಿಡ (proto-dravidian) ಪದವಾಗಿದ್ದು, ಬಹುಶಃ ಅದರ ಮೂಲರೂಪ 'ಕುಕ್ಕ್' (kukk) ಆಗಿರಬೇಕು. ಇದರರ್ಥ 'head, top, summit. point. extremity (cf kottu and kucha-point or tip ofthe feminine breast), hill rock, a steep rock...' ಎಂದಿದೆ.[13] ಎಷ್ಟೋ ದ್ರಾವಿಡ ಭಾಷಾ ಲಕ್ಷಣಗಳನ್ನುಳಿಸಿಕೊಂಡಿರುವ ಬಾಸ್ಕ್‌ಭಾಷೆಯಲ್ಲಿ, ಅದರ ಪರಿಸರದ, ಪರಿವಾರದ ಭಾಷಾವರ್ಗದಲ್ಲಿ ಈ ಪದ ಹೆಚ್ಚು ಕಮ್ಮಿ ಇದೇ ರೂಪದಲ್ಲಿದ್ದು, 'ಪರ್ವತ, ಪರ್ವತಶಿಖರ, ಎತ್ತರ' ಮುಂತಾದ

---

13 Lahovary (Eng. trans.) : *Dravidian Origin of the West*

ಅರ್ಥವನ್ನು ಒಳಗೊಂಡಿದೆ. ಮೂಲತಃ 'ಕುಕ್ಕೆ' ಎಂಬ ಸ್ಥಳನಾಮವು ಭೂವಾಚಕ (ಪರ್ವತವಾಚಕ) ವಾಗಿದೆಯೇ ಹೊರತು ದೈವವಾಚಕವಾಗಿಲ್ಲ. 'ಕುಕ್ಕೆಲಿಂಗ' ಎಂಬಲ್ಲಿ 'ಕುಕ್ಕೆ' ಎಂಬಲ್ಲಿರುವ 'ಲಿಂಗ' ಎಂತಲೂ. 'ಕುಕ್ಕೆ ಸುಬ್ರಹ್ಮಣ್ಯ' (ದ್ವಿರುಕ್ತಿಯಲ್ಲಿ) ಎಂಬಲ್ಲಿ 'ಕುಕ್ಕೆ' ಎಂಬ ಊರಲ್ಲಿರುವ 'ಸುಬ್ರಹ್ಮಣ್ಯ' ಎಂತಲೂ ಅರ್ಥ. ಅಲ್ಲದೆ ಕುಮಾರಾದ್ರಿ ಅಥವಾ ಶೇಷಾಚಲವೆನ್ನಿಸಿಕೊಂಡಿರುವ ಈ ಶಿಖರ ಸು. ೫೦೦೦ ಅಡಿಯಷ್ಟು ಎತ್ತರವಿದೆ. ಎತ್ತರದ ಪ್ರದೇಶ ಎಂಬರ್ಥದಲ್ಲಿ ಈ 'ಕುಕ್' ಪೂರ್ವಪ್ರತ್ಯಯದ ಇತರ ಸ್ಥಳನಾಮಗಳನ್ನು ಉದಾಹರಿಸಿದರೆ ಇದು ಮನದಟ್ಟಾದೀತು-ಕುಕ್ಕುಜೆ. ಕುಕ್ಕುಜಡ್ಕ. ಕುಕ್ಕುಂದೂರು. ಕೊಕ್ಕರ್ಣೆ. ಕುಕ್ಕೆಹಳ್ಳಿ. ಕುಕ್ಕಿಕಟ್ಟೆ. ಕೊಕ್ಕಡ. ಕೊಕ್ರಾಡಿ ಇ.

ಭಾಷಾಶಾಸ್ತ್ರದಲ್ಲಿ ಕೆಲವು ಪದಗಳಿಗೆ ಕಾಲಾಂತರದಲ್ಲಿ ಅರ್ಥವಿಸ್ತಾರ ಅಥವಾ ಸಂಕುಚಿತ-ಹೀನಾರ್ಥ ಕೊಡುವ ಪದಗಳಿಗೆ ಉತ್ತಮಾರ್ಥ ಪ್ರಾಪ್ತಿಯಾಗುವುದುಂಟು. ಸ್ಥಳನಾಮವೂ ಈ ಪ್ರಕ್ರಿಯೆಗೆ ಹೊರತಲ್ಲ. ಮೂಲತಃ ಅಸಹ್ಯವೆನ್ನಿಸುವ ಅಥವಾ ಹೀನಾರ್ಥಕವಾದ ಸ್ಥಳನಾಮ ರೂಪಗಳು ಚರಿತ್ರೆಯಲ್ಲಿ ಕಾಲಕಾಲದಲ್ಲಿ ಬದಲಾದುದು ಅಥವಾ ಸಂಸ್ಕರಿಸಲ್ಪಟ್ಟುದು ಕಂಡುಬರುತ್ತದೆ. ಮನುಷ್ಯನ ಸಾಂಸ್ಕೃತಿಕ ಪ್ರಗತಿ ಇಂಥ ಹಳೆಯ ರೂಪಗಳನ್ನು ಪೂರ್ಣ ವರ್ಜಿಸಿ ಸ್ಥಳನಾಮಗಳಿಗೆ ಹೊಸರೂಪವನ್ನೇ ಕೊಟ್ಟಿದೆ. ಇದಕ್ಕೆ ಉತ್ತಮ ಉದಾ. ಹೊನ್ನಾವರದ 'ಹಂದೀಪುರ'. 'ಹಳದೀಪುರ'ವಾದುದು. ಮುಸಲ್ಮಾನ ದೊರೆ ಹೈದರಾಲಿಯ ಆಳ್ವಿಕೆಯಲ್ಲಿ ಬದಲಾದ ರೂಪವಿದು.[14] ಧರ್ಮಶ್ರದ್ಧೆಯೂ ಇಂಥ ಕಡೆಗಳಲ್ಲಿ ರೂಪವ್ಯತ್ಯಾಸಕ್ಕೆ ಕಾರಣವಾದುದನ್ನು ಕಂಡುಕೊಳ್ಳಬಹುದು. ಹೀಗೆ ಒಂದು ರೀತಿಯ 'ಸಂಸ್ಕೃತೀಕರಣ'ವೂ ಈ ರೂಪವ್ಯತ್ಯಾಸಕ್ಕೆ ಪ್ರಬಲ ಕಾರಣವಾಗುತ್ತದೆ.

ಸಂಸ್ಕೃತೀಕರಣ ಪ್ರಕ್ರಿಯೆಗೊಳಗಾಗಿ ರೂಪಾಂತರಗೊಂಡ ಸ್ಥಳನಾಮಗಳನ್ನು ಎರಡು ರೀತಿಯಾಗಿ ವಿಂಗಡಿಸಬಹುದು: (೧) ಮೂಲಾರ್ಥವನ್ನು ಸಂಪೂರ್ಣವಾಗಿ ಮರೆಸುವ ಹೊಸರೂಪಗಳು (ಉದಾ: ಬೀಪಳ್ಳ. (ತುಳು. ಬೀ = ಮನುಷ್ಯನ 'ಬಹಿಷ್ಠ') ಅಶ್ವತ್ಥಪುರಿ. ಕಾಟಿಪಳ್ಳ ಇಂದಿರಾ ನಗರ. ಗುಂಡ್ಯಡ್ಕ. ಶ್ರೀನಿವಾಸಪುರ. ಪೇರೂರು. ಪರಮಪುರ ಇತ್ಯಾದಿ (೨) ಮೂಲಾರ್ಥವನ್ನುಳಿಸಿಕೊಂಡ. ಆದರೆ ಪ್ರೌಢ ಸಂಸ್ಕೃತ ಗ್ರಾಂಥಿಕ ಭಾಷೆಯಲ್ಲಿ ಹೇಳುವ ಸಮಾನಾರ್ಥಕಗಳು. ಉದಾ: ಇಡೆತುಮೆ(ಎಡಪೀರ್)—ಸಿದಂತರಾಖ್ಯಪುರ. ಕೊಡಿಪಾಡಿ—ಪ್ರಾಗ್ರ್ಯನಾಟ. ಬಾಳೆಕುದ್ರು—ರಂಭಾದ್ವೀಪ ಇತ್ಯಾದಿ.

ಮೂರನೆಯದಾಗಿ. ಧ್ವನಿವ್ಯತ್ಯಾಸವೂ 'ಸೌಲಭ್ಯಾಕಾಂಕ್ಷೆ'ಯೂ ಈ ಸ್ಥಳನಾಮ ರೂಪಗಳಲ್ಲಿ ವ್ಯತ್ಯಾಸವನ್ನುಂಟುಮಾಡಿವೆ; ತನ್ಮೂಲಕ ಅರ್ಥಗ್ರಹಿಕೆಗೆ ತೊಡಕುಂಟುಮಾಡಿವೆ. ಮೂಲತಃ ಏಳು ಊರುಗಳನ್ನೊಳಗೊಂಡ ಮಾಗಣೆ ಏಳೂರು. ಏಣೂರು[15]. ವೇಣೂರು. ವೇಣೂರಾಗಿ ಕೆಲವೊಮ್ಮೆ ಕಿಂಪುರ(?)ವೆಂದೂ ಗ್ರಂಥಗಳಲ್ಲಿ[16] ಬಳಕೆಯಾಗಿರುವುದಿದೆ. ಗುರುವಯ್ಯನ ಕೆರೆ[17] 'ಗುರುವಾಯನ ಕೆರೆ' ಆಗಲು ಸೌಲಭ್ಯಾಕಾಂಕ್ಷೆ ಕಾರಣ.

---

14 S. Silva : *Toponomy of Canara*

15 'ಳ'ಕಾರ 'ಣ'ಕಾರದಿಂದ ಪ್ರತಿನಿಧಾನ ಹೊಂದುವುದು ಭಾಷಾ ವಿಜ್ಞಾನದ ಧ್ವನಿಶಾಸ್ತ್ರ ನಿಯಮಕ್ಕೆ ಅನುಗುಣವಾಗಿಯೇ ಇದೆ. ಉದಾ: ತುಳು. ಕೊಂಡು + ಬಲ ಕೊಣಲ (ಕೊಂಡಲ) ಹಾಗೂ 'ಕೊಳ್ಳ': ಕಳ-ಕಣ; ಮೆಣಸು-ಮೆಲುಗು. ಬೆಳವಣಿಗೆ-ಬೇಳವಳಿಗೆ. ಇಂದ್ರಾಣಿ-ಇಂದ್ರಾಳಿ. ಇ

16 ಪಿ. ಲೋಕನಾಥಶಾಸ್ತ್ರೀ: ವೇಣೂರು ಮತ್ತು ಮೂಡಬಿದುರೆ-ಮಹಾ ಮಸ್ತಕಾಭಿಷೇಕ ಸೋವನೀರ್ ೧೯೫೩, ಶ್ರವಣಬೆಳಗೊಳ, ಪುಟ ೧೪೩

17 ಇದನ್ನು ಬಹುಶಃ ತನ್ನ ಸಂಪತ್ತಿನ ಪ್ರದರ್ಶನಕ್ಕಾಗಿ ಒಬ್ಬ ಗುರುವಯ್ಯನೆಂಬ ಲಿಂಗಾಯತ ಬಣಜಿಗ ನಿರ್ಮಿಸಿರಬೇಕೆಂದು ಬುಕನನ್ ಹೇಳುತ್ತಾನೆ. Francis Buchanan: *A Journey through Mysore, Canara and Malabar*, p. 253.

ವಿಜಯನಗರದರಸರ ಆಡಳಿತಾವಧಿಯಲ್ಲಿ, ಅವರ ಸಾಮ್ರಾಜ್ಯದ ಭಾಗವಾಗಿದ್ದ ತುಳುನಾಡಿನ ಹಲವಾರು ಊರುಗಳು–ಉಳಿದ ಭಾಗಗಳಲ್ಲಿಂತೋ ಅಂತೆ–ಪುನರ್ನಾಮಕರಣಗೊಂಡುವು ಎಂಬುದು ವಿದ್ವಾಂಸರ ಅಭಿಪ್ರಾಯ. ಅನ್ಯಭಾಷಾಪ್ರಭಾವವೂ ಈ ರೂಪವ್ಯತ್ಯಾಸಕ್ಕೆ ಸ್ವಲ್ಪಮಟ್ಟಿಗೆ ಕಾರಣ ವೆನ್ನಬಹುದು. ಬ್ರಿಟಿಷರ ಆಳ್ವಿಕೆಯಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಬರೆಯುವಾಗ. ಹೇಳುವಾಗ ಎಷ್ಟೋ ಊರುಗಳು ತಪ್ಪಾಗಿ ಉಚ್ಚರಿತವಾಗಿ ಈಗಲೂ ಹಾಗೆಯೇ ಉಳಿದುಬಿಟ್ಟಿವೆ. (ಕುಂದಾಪುರ: Kundāpura > Coondapore/Coondpur (ಕೂನ್ದಪೂರ್) ; ಮಂಗಳೂರು: Mangalūru > Mangalore (ಮ್ಯಾಂಗಲೋರ್) : ಕನ್ನಡ (ಉ.ಕ. ಜಿಲ್ಲೆ) > Canara (ಕ್ಯಾನರ) ಇತ್ಯಾದಿ.) ಈ ವ್ಯತ್ಯಾಸ ಗೌಣವೆನ್ನಿಸಿದರೂ ಕಾಲಾಂತರದಲ್ಲಿ ಇದೇ ಉಳಿದು ಮೂಲರೂಪ ಬಿಲವಾಗಿ ಅರ್ಥಗ್ರಹಣ ಕಷ್ಟದಾಗುವುದೆಂಬುದರಲ್ಲಿ ಸಂಶಯವಿಲ್ಲ.

ನಾಲ್ಕನೆಯದಾಗಿ, ಸ್ಥಳಪುರಾಣಗಳು ಮತ್ತಿತರ ಐತಿಹ್ಯಗಳು ಕೂಡ ಮೂಲನಾಮವನು ವ್ಯತ್ಯಸ್ತಗೊಳಿಸಿವೆ. ಇದಕ್ಕೆ ಉತ್ತಮ ಉದಾಹರಣೆ 'ಕದರಿ'. ಇದು ಸೂಚಿಸುವ ಅರ್ಥ ನಿಲುಕದಿದ್ದಾಗ ಕಲ್ಪನೆಯ ಜಾಲ ಮತ್ತು ಅದರ ಅಭಿವ್ಯಕ್ತಿಗೆ ಹೇಳಿಸಿದಂಥ ಸಂಸ್ಕೃತ ಭಾಷೆ, ಇದರ ಸುತ್ತ ಕತೆ ಕಟ್ಟಿವಾಗ, 'ಕದಿರಿ'ಯ ಸ್ಥಾನದಲ್ಲಿ 'ಕದರಿಕಾವನ'. 'ಕದಳೀವನ' 'ಸುವರ್ಣಕದಳೀಕ್ಷೇತ್ರ' ಮುಂತಾದ ರೂಪಗಳು ಕಾಣಿಸಿಕೊಂಡವು. ಕದರೀ ಎಂಬುದು 'ಹರಿಣಾಸ್ತರ' (ಜಿಂಕೆಯ ಒಂದು ಜಾತಿ) ಎಂಬುದನ್ನು ಸೂಚಿಸು ವುದರಿಂದ[18] ಇದು ಬೌದ್ಧರ ಅಸ್ತಿತ್ವ ಇಲ್ಲಿ ಒಂದು ಕಾಲದಲ್ಲಿದ್ದುದನ್ನು ಸೂಚಿಸುವ ವಿಶಿಷ್ಟ 'ಸ್ಥಳನಾಮ' ಎಂದು ವ್ಯಾಖ್ಯಾನಿಸುವವರೂ ಇದ್ದಾರೆ. ಆದರೆ ಕದರೀ (ಕದರಿ = ಕದ್ರಿ) ಅಂದರೆ ಎತ್ತರದ ಗುಡ್ಡ ಎಂಬರ್ಥ. ಆಂಧ್ರಪ್ರದೇಶದಲ್ಲೊಂದು 'ಕದರಿ' ಎಂಬ ಸ್ಥಳವಿದೆ. ಭೂವಿವರ ರೀತ್ಯಾ ಅಲ್ಲೂ ಇದೇ ಅರ್ಥ ಹೊಂದುತ್ತದೆ. ಸ್ಥಳಪುರಾಣಗಳಲ್ಲಿ 'ಕದರಿ'ಗೆ ಪರ್ಯಾಯನಾಮವಾಗಿ ಬಳಸುತ್ತಿದ್ದರೆನ್ನಲಾದ 'ಕುಡುಮ'[19] ಎಂಬ ಅಚ್ಚಗನ್ನಡ (ಅಥವಾ ದ್ರಾವಿಡ) ಪದವಾಗಲೀ, ರೂಢಿಯಲ್ಲಿ ಬಳಸುವ 'ಕದರಿಗುಡ್ಡ' ಎಂಬ ದ್ವಿರುಕ್ತಿಯಾಗಲೀ, ಇದನ್ನೇ ಸಮರ್ಥಿಸುವಂತಿದೆ. ಇದೇ ಈ ಅಚ್ಚಗನ್ನಡ 'ಕುಡುಮ'–ಪದದ ಅರ್ಥ ವ್ಯಾಖ್ಯಾನಕೆ ಕ್ಲಿಷ್ಟವೆನ್ನಿಸಿಯೋ ಏನೋ, ಅದನ್ನು ಸಂಸ್ಕೃತೀಕರಿಸಿ. 'ಧರ್ಮಸ್ಥಳ' (ಕುಡು–ಕೊಡು. ದಾನಮಾಡು ಎಂಬಂತೆ) ಎಂದು ಕರೆದುದೂ ಉಂಟು. 'ಧರ್ಮಸ್ಥಳ' ಎಂಬ ಇನ್ನೊಂದು ಸ್ಥಳವೂ ಗುಡ್ಡವಾಗಿದ್ದು, ಆಡುಭಾಷೆಯಲ್ಲಿ ಅದಕ್ಕೆ 'ಕುಡುಮ' ಎಂಬ ಹೆಸರೇ ಹೆಚ್ಚು ಪ್ರಚಲಿತವಿದೆ.[20]

ಇಂಥ ರೂಪಾಂತರಕ್ಕೆ. ಸಂಸ್ಕೃತೀಕರಣಕ್ಕೆ ಅರ್ಚಕರು, ಪಂಡಿತರು, ಪುರೋಹಿತರು, ಯಕ್ಷಗಾನದ ಅರ್ಥಧಾರಿಗಳು. ಹರಿದಾಸರು ಮುಂತಾದವರು ಕೂಡ ಹಿನ್ನೆಲೆಯಾಗಿ ನಿಂತಿದ್ದಾರೆಂಬುದನ್ನು ಮರೆಯಕೂಡದು. ಅಲ್ಲದೆ ಹುಟ್ಟೂರ ಮೇಲಣ ಅಭಿಮಾನ (ಅಂಧಾಭಿಮಾನ), ಸಂಸ್ಕೃತದ ಮೇಲಣ ವ್ಯಾಮೋಹ. ತಂತಮ್ಮ ಊರಿಗೆ ಪ್ರಾಚೀನತೆಯನ್ನು ನಿರ್ದೇಶಿಸುವ–ಆ ಮೂಲಕ ನಿಷ್ಠಾವಂತ

---

18 ಕದಲಿ. a kind of deer. Kittel. p. 378. of ಕದಳೀ ಕಂದಳೀ ಚೀನಚಮೂರು ಪ್ರಿಯಕಾ (ವಪಿ)। ಸಮೂರುಶ್ಚೇತಿ ಹರಿಣಾ ಅಮಿ. ಅಜಿನಯೋನಯಃ ॥ ಅಮರಕೋಶ. ದ್ವಿತೀಯಕಾಂಡ. ಶ್ಲೋ. ೨೨೯. ಪು. ೭೪

19 'ಕುಡುಮ' ಅಂದರೂ ಗುಡ್ಡ, ಬೆಟ್ಟ ಎಂಬರ್ಥ. ಕುಡಿ. ಕುಟಿ. ಕೋಡು. ಗುಡ್ಡ. ಕುಡ ಮುಂತಾದ ಪದಗಳೆಲ್ಲ ಒಂದೇ ಮೂಲದಿಂದ ಬಂದಿರಬೇಕು.

20 ಧರ್ಮಸ್ಥಳದ ಮಂಜುನಾಥೇಶ್ವರ ಲಿಂಗವು ಕದರಿಯ ಮಂಜುನಾಥೇಶ್ವರನ ಅಂಶವುಳ್ಳದ್ದೆಂದೂ ಅಲ್ಲಿನ ಅಣ್ಣಪ್ಪ ದೈವವು ಇಲ್ಲಿ ಕೊಳದಲ್ಲಿದ್ದ. ಕಾಶಿಯಿಂದ ತಂದಿದ್ದೆನ್ನಲಾದ. ಮಂಜುನಾಥ ಲಿಂಗವನ್ನು ಹೊತ್ತುಕೊಂಡು ಹೋಗಿ ಧರ್ಮಸ್ಥಳದಲ್ಲಿ ತಂದು ಹಾಕಿದ ಹಾಗೆ ಪ್ರಬಲವಾದ ಐತಿಹ್ಯವಿದೆ. ಭೂವಿವರ. ಸ್ಥಳನಾಮ ಮತ್ತು ಸನ್ನಿಧಿ ರೀತ್ಯಾ ಇದಕ್ಕೆ ಪುಷ್ಟಿ ಸಿಗುವಂತಿದೆ. ಈಗಲೂ ಕದರಿಯ ಪ್ರಸಾದ ಬಂದ ಮೇಲೆಯೇ ಧರ್ಮಸ್ಥಳದ ಉತ್ಸವದಲ್ಲಿ ಉತ್ಸವಮೂರ್ತಿ ಹೊರಡುತ್ತದೆ.

ಭಕ್ತರನ್ನು ಸ್ವಲಾಭಕ್ಕಾಗಿ ಉಪಯೋಗಿಸಿಕೊಳ್ಳುವ ಆಕಾಂಕ್ಷೆ, ಈ ರೂಪವ್ಯತ್ಯಾಸದ ಹಿಂದೆ ನಿಂತು ಕೆಲಸಮಾಡಿರುವುದು ಖಂಡಿತ; ಹಾಗೂ ಸ್ವಯಂವ್ಯಕ್ತ.

ಇಲ್ಲಿ ಇನ್ನೊಂದು ಅಂಶವನ್ನು ಹೇಳಬೇಕು. ಕೆಲವೊಮ್ಮೆ ಸ್ಥಳನಾಮ ಭಾಗಗಳು ಹೊಸ ವಾಸ್ತವ್ಯದೊಂದಿಗೆ, ವಲಸೆಯೊಂದಿಗೆ ಒಂದು ಪ್ರತ್ಯೇಕ ಊರೆಂಬಂತೆ ತಲೆಯೆತ್ತುತ್ತವೆ. ಜನಸಾಂದ್ರತೆ ಜಾಸ್ತಿಯಾಗುತ್ತಿರುವ ಈ ಕಾಲದಲ್ಲಿ, ಅದರಲ್ಲೂ ನಗರದಲ್ಲಿ ಈ ಮಾತು ಅಕ್ಷರಶಃ ನಿಜವೆನ್ನಿಸುತ್ತದೆ.[21] ಇದಕ್ಕೊಂದು ಉದಾಹರಣೆ–ಮಣಿಪಾಲ ಗುಡ್ಡದ ಕೆಳಗೆ ನಿರ್ಜನವಾಗಿದ್ದ ಪ್ರದೇಶದಲ್ಲಿ ಈಗೀಗ ಹೊಸ ಹೊಸ ಮನೆಗಳು ಎದ್ದಿವೆ. ಮಣಿಪಾಲ ಮತ್ತು ಇಂದ್ರಾಣಿ(ಳಿ)ಗಳ ನಡುವಣ ಈ ಕೇರಿ 'ವಿದ್ಯಾರತ್ನನಗರ' ಎಂಬ ಹೆಸರಿನಲ್ಲಿ ಹೊಸ ಊರೆಂಬಂಥ ಅನುಭವವನ್ನುಂಟುಮಾಡುತ್ತದೆ.

ಏನೇ ಇರಲಿ, ಸಂಶೋಧಕನ ಅಥವಾ ಸತ್ಯಶೋಧಕನ ದೃಷ್ಟಿಯಿಂದ ಸ್ಥಳಪುರಾಣ, ಸ್ಥಳೈತಿಹ್ಯಕ್ಕಿಂತ, ಏಕೆ, ಸ್ಥಳನಾಮಕ್ಕಿಂತ ಮುಖ್ಯವಾದುದು (ಮತ್ತು ಪ್ರಾಚೀನವಾದುದು) ಸ್ಥಳ–ಸ್ಥಳವೈಶಿಷ್ಟ್ಯ ಅಥವಾ ಭೂಸ್ಥಿತಿ (topography) ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು. ಈಗಲೂ ಇಂಥ ಸ್ಥಳಗಳೇ ಸತ್ಯದ ಮೂಕಸಾಕ್ಷಿಯಾಗಿ, ಶೋಧಕರಿಗೆ ಸವಾಲಾಗಿ, ಅದೇ ಗಾಂಭೀರ್ಯದಿಂದ ತಲೆಯೆತ್ತಿ ನಿಂತಿವೆ; ಎದುರು ನೋಡುತ್ತಿವೆ.

ಸ್ಥಳನಾಮಗಳಲ್ಲಿ 'ದ್ವಿಕ'ಗಳು

ನದಿ, ಕೆರೆ, ಗುಡ್ಡ, ಬೆಟ್ಟ, ಕಾಡುಕೋಡು, ಬಯಲು, ಕಣಿವೆ ಮುಂತಾದವುಗಳನ್ನು ಸೂಚಿಸುವ ಸ್ಥಳಗಳಲ್ಲಿ ಹಲವು ಪರಸ್ಪರ ಪೂರಕವಾಗಿ, ಒಂದಕ್ಕೊಂದು ಸಂಬಂಧವಿರುವಂತೆ ಕಾಣಿಸುವ, ಊರಹೆಸರುಗಳಿವೆ. ಬಯಲು ಪ್ರದೇಶದಲ್ಲಿ ಒಂದು ನದಿ ಹರಿದು ಒಂದು ಊರನ್ನು ಇನ್ನೊಂದರಿಂದ ಪ್ರತ್ಯೇಕಿಸಿದರೂ, ಆ ಎರಡು ಊರುಗಳ ನಾಮನಿರ್ದೇಶನದಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಹೀಗೆ, ಇಂಥ ಪರಸ್ಪರ ಸಂಬಂಧಿಸಿದ ಸ್ಥಳನಾಮಗಳನ್ನು (relative terms in place-names) 'ದ್ವಿಕ'ಗಳೆಂದು ಕರೆಯಬಹುದೇನೋ. ಉದಾ: ಫಲ್ಗುಣೀ ನದಿಯ (ಗುರುಪುರ ಹೊಳೆ) ಒಂದು ಬದಿಗೆ 'ಪೊಳಲಿ' ಎಂಬ ಹೆಸರಾದರೆ ಇನ್ನೊಂದು ಬದಿಗೆ 'ಮಳಲಿ' ಎಂದೇ ಹೆಸರು. ಎರಡೂ ಪದಗಳ ಅರ್ಥ ಪರಸ್ಪರ ಸಮಾನವಾಗಿದೆ.[22] ಮೇಲೆ–ಕೆಳಗೆ (ಮಿತ್ತಮೊಗರು–ತಿರ್ತ್ ಮೊಗರು),[23] ತೆಂಕು–ಬಡಗು (ತೆಂಕ–ಬಡ ಅಂದರೆ ತೆಂಕ ಎರ್ಮಾಳ ಮತ್ತು ಬಡಗು ಎರ್ಮಾಳ), ಮೂಡು–ಪಡು (ಮೂಡ

---

[21] ನಿರ್ಜನಿತ ಭೂಭಾಗದಲ್ಲಿ ವಸತಿ ಸೌಕರ್ಯಗಳು ಹೆಚ್ಚಾಗಿ ಜನಸಂಖ್ಯೆ–ಜನವಾಸ್ತವ್ಯ ಅಧಿಕವಾಗುತ್ತ ಬಂದಂತೆ ಸಂಚಾರ–ಪ್ರಯಾಣ ಸೌಕರ್ಯಗಳ ಅಗತ್ಯವೂ ಹೆಚ್ಚುತ್ತದೆ. ಆಗ ಸಿಟಿ ಬಸ್ಸುಗಳು ಹೊಸ ಹೊಸ ನಿಲುತಾಣಗಳನ್ನು ಏರ್ಪಡಿಸಿಕೊಳ್ಳಬೇಕಾಗುತ್ತದೆ. ಹೊಸ ಹೊಸ ಸ್ಥಳಗಳೊಂದಿಗೆ ಹೊಸಹೊಸ ಸ್ಥಳನಾಮಗಳೂ ಹುಟ್ಟಿ ಹಬ್ಬುವುದೂ ಹೆಚ್ಚು ಕಮ್ಮಿ ಹೀಗೇ ತಾನೆ?

[22] ತುಳುವಿನಲ್ಲಿ 'ಪೊಳಲಿ'ಯನ್ನು 'ಪುರಾಲ್' ಎಂದು ಕರೆಯುತ್ತಾರೆ. ಪುರಾಲ್ ಅಂದರೆ ಮಳಲು (ಮರಳು) ಎಂದೇ ಅರ್ಥ. (ಸಂಸ್ಕೃತದಲ್ಲಿ ಇದೇ ಅರ್ಥವನ್ನುಳಿಸಿಕೊಂಡ 'ಪುಳಿನಕ್ಷೇತ್ರ' ಎಂಬ ರೂಪವಿದೆ.) 'ಪುರಾಲ್' 'ಅಕ್ಷರಪಲ್ಲಟ' (metathesis) ನಿಯಮಾನುಸಾರ 'ಪೊಳಲ್' (ಪೊಳಲಿ) ಎಂದು ಕನ್ನಡದಲ್ಲಿ ರೂಪಾಂತರ ಹೊಂದಿರಬಹುದು.

[23] ಮೂಲತಃ ಇದು 'ಮೊಗರು' (=ದ್ವೀಪಖಂಡ: delta) ಮಾತ್ರವಾಗಿತ್ತು. ನಂತರ ಇದರ ಮೇಲುಭಾಗದಲ್ಲೂ, ಕೆಳಭಾಗದಲ್ಲೂ ಜನವಸತಿ ಜಾಸ್ತಿಯಾಗಿ, ಒಂದು ದೊಡ್ಡ ಊರಾಗಿ, ಒಂದನ್ನು ಇನ್ನೊಂದರಿಂದ ಪೃಥಕ್ಕರಿಸಿ ಗುರುತಿಸುವ (identification) ಸೌಲಭ್ಯಕ್ಕಾಗಿ ಈ ಪರಸ್ಪರ ಪೂರಕ (relative) ನಾಮಗಳು ಬಂದಿರಬೇಕು. ತುಳುಭಾಷೆಯಲ್ಲಿ ಮಿತ್ತ್=ಮೇಲೆ; ತಿರ್ತ್ (...ಸಿರ್ತ್...ಹಿತ್ತ್)=ಕೆಳಗೆ–ಅಂದರೆ ಮೊಗರಿನ ಮೇಲೆ, ಮೊಗರಿನ ಕೆಳಗೆ ಎಂದೇ ಅರ್ಥ.

ಪಾಂಬೂರು–ಪಡುಪಾಂಬೂರು), ಆ (ಎಡೆ)–ಈ(ಎಡೆ) (ಅಣ್ಣ–ಇಣ್ಣ), ಹಳೆ–ಹೊಸ (ಹಳೆಯಂಗಡಿ-ಹೊಸಂಗಡಿ), ಪಿರಿ–ಕಿರಿ (ಪಿರೇಬಂಡಾಡಿ–ಕಿರೇಬಂಡಾಡಿ) ಮುಂತಾದುವೆಲ್ಲ ಇಂಥ ದ್ವಿಕಗಳು ಹುಟ್ಟಿಕೊಳ್ಳುವ ವಿಧಾನವನ್ನು ದಿಗ್ದರ್ಶಿಸುತ್ತವೆ.[24]

ಸ್ಥಳನಾಮಗಳಲ್ಲಿ ಹಾಸ್ಯಕಥನಗಳು

ಮೂಲತಃ ಸ್ಥಳನಾಮಗಳು ಪುರಾಣಕಥೆ, ಕಾವ್ಯಕಲ್ಪನೆ, ಹಾಸ್ಯ, ಮುಂತಾದುವನ್ನು ಒಳಗೊಂಡಿರಲಿಲ್ಲ. ಇದು ಸಾಮಾನ್ಯವಾಗಿ ಸಹಜತು, ವಲಸೆ ಸಂಗತಿಗಳ ವಿಷಯದಲ್ಲೂ ಅಷ್ಟೇ ನಿಜ. ಜೀವನದ ಸ್ವಜತೆಯ ಅನುಭವ ಪಡೆಯುವಲ್ಲಿ ವಲಸೆಗಾರ ಆಲಂಕಾರಿಕ ಯಾ ಹಾಸ್ಯಕಥನಗಳ ಕುರಿತಾಗಿ ಯೋಚಿಸದೆ, ಪ್ರಕೃತಿಯು ತನ್ನ ಕಣ್ಣಿಗೆ ಹೇಗೆ ಕಾಣಿಸಿತೋ ಹಾಗೆ ಕಂಡು ಮತ್ತು ಸ್ವಯಂವೇದ್ಯವಾದ ಹೆಸರಿತ್ತ. ಆದರೆ ಆ ಮೂಲಾರ್ಥ ಕಾಲಾಂತರದಲ್ಲಿ ಮನುಷ್ಯನ ಬುದ್ಧಿಗೆ ಎಟುಕದಿದ್ದಾಗ, ಬೇರೊಂದು ರೀತಿಯಲ್ಲಿ ಅವನು ಅದನ್ನ ಅರ್ಥ (ಅಪಾರ್ಥ) ಮಾಡಿಕೊಂಡು ಇತರರಿಗೆ ತಿಳಿಯಪಡಿಸಿದ. ಇದೊಂದು ರೀತಿಯ ಅಗ್ಗದ ಕರ್ಣರಂಜನೆಯಾಗಿ ಬಿಟ್ಟು ತುಂಬಾ ಪ್ರಚಲಿತವಾಯಿತು. ಕೆಲವು ಉದಾ.ಗಳು: (೧) ಕಟ್ಪಾಡಿ–ಕಡೆಕಾರ್–ಕುತ್ಪಾಡಿ ಇವು ಉಡುಪಿ ತಾಲೂಕಿನಲ್ಲಿರುವ ಪರಸ್ಪರ ತಾಗಿಕೊಂಡಿರುವ ಊರುಗಳು. ಈ ಪದಗಳು ಸೂಚಿಸುವ ಅರ್ಥವನ್ನು ಗ್ರಹಿಸುವ ಪ್ರಾಮಾಣಿಕ ಪ್ರಯತ್ನ ಮಾಡದ ಮನುಷ್ಯನ ಚಪಲ ಬುದ್ಧಿ ಒಂದು ಉಪಾಖ್ಯಾನವನ್ನು ಪ್ರಯೋಗಿಸಿತು. ಆ ಪ್ರಕಾರ ಬಭ್ರುವಾಹನನು) ಅರ್ಜುನನ ಅಶ್ವಮೇಧದ ಕುದುರೆಯನ್ನು 'ಕಟ್ಪಾಡಿ' ಎಂಬ ಕಡೆ 'ಕಟ್ಪಾಡಿ' (ತು = 'ಕಟ್ಟಿ ಹಾಕು' ಎಂದು ಆಜ್ಞೆ ವಿಧಿಸಿದನಂತೆ; 'ಕಡೆಕಾರ್' ಎಂಬಲ್ಲಿ ಕುದುರೆಯ ಕಾಲಿನ ಕಡೆ–ತುದಿಯನ್ನು (ತು.) 'ಕುತ್ಪಾಡಿ' ಎಂಬಲ್ಲಿ 'ತುಂಡರಿಸಿ' (ತು. ಕತ್ತರಿಸಿ ಹಾಕಿ) ಎಂದೂ ಘೋಷಿಸಿದನಂತೆ.[25] ಅಂದಿನಿಂದ ಆ ಹೆಸರು ಉಳಿದುಬಿಟ್ಟಿತು. ಜನಪ್ರಿಯವಾಯಿತು– ಎಂಬ ಈ ಕತೆಯಲ್ಲಿ ಹುರುಳಿಲ್ಲ ಎಂದು ಬೇರೆ ಹೇಳಬೇಕಾಗಿಲ್ಲ. (೨) ಕುಂದಾಪುರ ತಾಲೂಕಿನಲ್ಲಿ 'ನಾವುಂದ' ಎಂಬ ಊರಿದೆ. ಇಬ್ಬರು ಹುರಿಯಾಳುಗಳು 'ನಾಮುಂದು ನಾಮುಂದು' ಎಂಬಂತೆ ಸ್ಪರ್ಧಾಮನೋಭಾವದಿಂದ ಗುರಿಯ ತನಕ ಓಡಿ ಗುರಿ ಮುಟ್ಟಿದರಂತೆ. ಅದ್ದರಿಂದ, ನಾವುಂದ (< ನಾ + ಮುಂದ?) ಎಂಬ ಹೆಸರು ಪ್ರಚುರವಾಯಿತೆಂಬ ಕತೆ. (೩) ಊರಹೆಸರುಗಳ ಮಾಲೆಯನ್ನೇ ಬಳಸಿ ಹುಟ್ಟಿಕೊಂಡ ಇನ್ನೊಂದು ಕತೆ ತುಂಬ ಹಾಸ್ಯಾಸ್ಪದವಾಗಿದೆ. ಅದೇ 'ಪಾಣೆ–ಕೊಡಂಗೆ–ಗುದ್ದೊಳಿ–ದೆಪ್ಪೊಳಿ–ಬಿದೋಳಿ'. ಒಬ್ಬ ಬ್ರಾಹ್ಮಣ ವಟುವಿನ 'ಕೊಡಂಗೆ' (ತು. ಪಂಟೆ)ಯನ್ನು ಅವನಿಗೆ ಗುದ್ದಿ, ತೆಗೆದು, ಅವನ ದಾರಿಯಲ್ಲಿ ಅವನನ್ನು ಬಿಡಬಹುದು– ಎಂಬ ಅರ್ಥಕೊಡುವ ಕತೆಯಿದು. (೪) ಇನ್ನೊಂದು ಇಂಥ ಸ್ಥಳನಾಮಮಾಲೆ ತೀರ ಅಶ್ಲೀಲವಾದ

---

24 ಕೆಲವೊಮ್ಮೆ ಇಂಥ ದ್ವಿಕಗಳು ಇತಿಹಾಸಗರ್ಭದಲ್ಲಿ ಮರೆಯಾಗಿರಬಹುದಾದ, ಅಥವಾ ಅಪ್ರಖ್ಯಾತವಾಗಿರುವ ಪೂರಕಸ್ಥಳನಾಮಗಳ ಕಡೆಗೆ ಬೊಟ್ಟು ಮಾಡುವುದು. ಉದಾ.ಗೆ–'ಪಿರಿಯಡಕ' ಎಂಬ ಊರಿನ ಭಾಗವಾಗಿ ಅಥವಾ ಪೂರಕನಾಮವಾಗಿ 'ಕಿರಿಯಡಕ' ಇದ್ದಿರಲೇಬೇಕು. ಆದರೆ ಅದು ಎಲ್ಲಿದೆಯೋ (ಹತ್ತಿರದಲ್ಲೇ ಇರುವುದು ಸಹಜ) ಗೊತ್ತುಹಚ್ಚಬೇಕು. ಏಕೆಂದರೆ, ಬಡವ–ಶ್ರೀಮಂತ ಎಂದಾಗ ಎರಡು ಸಹ ಸಂಬಂಧ (association) ದೊಂದಿಗೆ ಅದು ಅರ್ಥಪೂರ್ಣವಾಗುವಂತೆ, ಒಂದನ್ನು ಇನ್ನೊಂದರಿಂದ ಪ್ರತ್ಯೇಕಿಸಿ ಹೇಳಿದಾಗ ಹೇಗೆ ಅದಕ್ಕೆ ಅರ್ಥವಿಲ್ಲವೋ (ಅಂದರೆ ಬಡತನವಿಲ್ಲದೆ ಶ್ರೀಮಂತಿಕೆಯಿಲ್ಲ; ಶ್ರೀಮಂತಿಕೆಯಿಲ್ಲದೆ ಬಡತನವಿಲ್ಲ–ಒಂದನ್ನೊಂದು ಬಿಟ್ಟಿಲ್ಲ) ಹಾಗೆ 'ಪಿರಿ' (ಹಿರಿದು) ಎಂಬ ವಿಶೇಷಣಕ್ಕೆ ಒಂದು ಊರು ಪಾತ್ರವಾಗಬೇಕಾದರೆ, ಸನಿಹದಲ್ಲಿ 'ಕಿರಿ' (ಕಿರಿದು) ಎಂಬ ವಿಶೇಷಣವುಳ್ಳ ಊರೊಂದು ಇರುವುದು ಅನಿವಾರ್ಯ.

25 ಈ ಊರುಗಳ ಸಮೀಪದಲ್ಲಿ 'ಮಣಿಪುರ' ಎಂಬ ಗ್ರಾಮವಿದೆ. ಇದು ಬಭ್ರುವಾಹನನ ಊರೆಂದು ನಂಬುವ ಇಲ್ಲಿನ ಜನ ಬಭ್ರುವಾಹನನ ಕೋಟೆಯ ಅವಶೇಷಗಳನ್ನೂ ತೋರಿಸುತ್ತಾರೆ. ಅದ್ದರಿಂದ ಈ ಕಥೆಯ ಹುಟ್ಟಿಗೆ 'ಮಣಿಪುರ' ಮತ್ತು ಅದಕ್ಕೆ ಸಂಬಂಧಿಸಿದ ಬಭ್ರುವಾಹನನ ಕುರಿತಾದ ಪ್ರಾಮಾಣಿಕತೆ ಕೂಡ ಪ್ರೇರಣೆ ನೀಡಿದೆ ಎಂದು ಕಾಣುತ್ತದೆ.

ಕತೆಯನ್ನು ಹೇಳಿ ಸ್ಥಳದಲ್ಲಿ ಜನಮೆಚ್ಚಿಸುವ ಕಸುಬಿನಲ್ಲಿ ಬಳಸಲ್ಪಟ್ಟಿದೆ–'ನೇತ್ರಾವತಿ–ಉಳ್ಳಾಲ–ಪಚ್ಚನಾಡಿ—ಜೆಪ್ಪು–ಕುಡ್ಲ–ಮರ್ಕ್ರಿ'[26]. ಈ ರೀತಿಯ ಅಶ್ಲೀಲ ವಿಚಾರಮಾಡುವುದೇ ದಿನಚರಿಯಾಗುಳ್ಳ ಜನಗಳಿಗೆ ಎಷ್ಟೋ ಸ್ಥಳನಾಮಗಳು ಹೊಸ ಹೊಸ ಕಥಾಸೃಷ್ಟಿಗೆ ಎಡೆಮಾಡಿಕೊಡುತ್ತವೆ. ಊರಹೆಸರುಗಳನ್ನು ನಾವು ಎಷ್ಟೊಂದು ಲಘುವಾಗಿ, ಹಾಸ್ಯದ ಸಾಮಗ್ರಿಯಾಗಿ ಬಳಸುತ್ತೇವೆ ಎಂಬುದಕ್ಕೆ ಇದೊಂದು ಉತ್ತಮ ನಿದರ್ಶನ.

ತುಳುನಾಡಿಗೆ ವಿಶಿಷ್ಟವಾದ ಸ್ಥಳನಾಮಾಂಶಗಳು

ಒಂದು ಊರನ್ನು ಇನ್ನೊಂದರಿಂದ ಪ್ರತ್ಯೇಕಿಸಿ ಹೇಳುವ ಅಗತ್ಯ ಎಲ್ಲಕಡೆ ಇದ್ದರೂ, ಸ್ಥಳನಾಮವನ್ನು ನಿರ್ಧರಿಸುವ ಅಂಶ ಇದೊಂದೇ ಅಲ್ಲ. 'ಹೆಸರಿಗಾಗಿ ಹೆಸರು' ಎಂಬ ಸಿದ್ಧಾಂತವೂ ಸರಿಯಲ್ಲ. ಆಯಾಯ ಪ್ರದೇಶದ ಭೌಗೋಳಿಕ ಸ್ಥಿತಿಗತಿಗಳಿಗೆ ಅಥವಾ ವೈಶಿಷ್ಟ್ಯಗಳಿಗೆ ಅನುಗುಣವಾಗಿ ಸ್ಥಳನಾಮರೂಪಗಳು ಒಂದು ಪ್ರದೇಶದಿಂದ ಇನ್ನೊಂದರಲ್ಲಿ ಒಡೆದು ನಿಲ್ಲುವಂತಿರುತ್ತವೆ. ಪಶ್ಚಿಮ ಕರಾವಳಿ ಪ್ರದೇಶವಾದ ತುಳುನಾಡಿಗೆ ವಿಶಿಷ್ಟವಾದ ಸ್ಥಳನಾಮಾಂಶಗಳು ಅಥವಾ ಭಾಗಗಳು (preposition ಅಥವಾ post position) ಕೆಲವಿವೆ. ಉದಾ. ದೊಗರು (ನೀರಿನಿಂದ ಆವೃತವಾಗಿರುವ ಪ್ರದೇಶ–ದ್ವೀಪದಂಥ ಭೂಭಾಗ: delta), ಉಳಿಯ (= ನಡುಗುಡ್ಡೆ), ಅಡ (ಸ್ವಲ್ಪ ಎರಗಿದ್ದು ಸಮತಟ್ಟಾದ ಪ್ರದೇಶ) ಅಜ, ಕಜ, ಪಟ್ಣ (= ಮೊಗವೀರರ ಕೇರಿ ಅಥವಾ colonisation) ಇತ್ಯಾದಿ.

ಸ್ಥಳನಾಮಗಳಲ್ಲಿ ಅನುಕರಣ

ಒಂದೇ ಹೆಸರಿನ ಊರುಗಳು ಹಲವಾರಿರಬಹುದು–ಹತ್ತಿರಹತ್ತಿರವೆ ಇರಬಹುದು; ಇಲ್ಲವೆ, ಇನ್ನೊಂದು ತಾಲೂಕಿನಲ್ಲಿ, ಜಿಲ್ಲೆಯಲ್ಲಿ; ರಾಜ್ಯದಲ್ಲಿ ಕೂಡ ಇರಬಹುದು. ಈ ಸಂಗತಿ ಆಕಸ್ಮಿಕ ಘಟನೆಯೇನಲ್ಲ. ಇಂಥ ಸ್ಥಳನಾಮಾನುಕರಣಕ್ಕೆ ಒಂದು ಪ್ರದೇಶದ ಜನವರ್ಗಕ್ಕೆ ಇನ್ನೊಂದು ಪ್ರದೇಶದವರೊಂದಿಗಿರುವ ಸಾಂಸ್ಕೃತಿಕ ಸಂಬಂಧ-ಸಂಸರ್ಗ, ಕೊಳುಕೊಡೆ, ಯಾ ವಲಸೆ ಕಾರಣವಾಗಿದ್ದಿರಬಹುದು. ಅದಕ್ಕಿಂತಲೂ ವಿಶೇಷವಾಗಿ ಸಮಾನ ಭೂ ವೈಶಿಷ್ಟ್ಯವೇ ಮುಖ್ಯ ಕಾರಣವಾಗಿರಬಹುದೆನ್ನಿಸುತ್ತದೆ. ಒಂದು ಪ್ರದೇಶದ ಜನ ತಮ್ಮ ಭಾಷೆಯಲ್ಲಿ ಒಂದು ನಿರ್ದಿಷ್ಟ ಸ್ಥಳಕ್ಕೆ ಹೆಸರಿಡುತ್ತಾರೆ. ಪ್ರಾಯಶಃ ಅಂಥ ಇನ್ನೊಂದು ಹೆಸರು ಅನ್ಯಪ್ರದೇಶದಲ್ಲಿ ಇದೆ ಎಂಬುದನ್ನು ತಿಳಿಯದೆ. ಇನ್ನೊಂದು ಪ್ರದೇಶದ ಭಾಷೆಯಲ್ಲೂ ಭೂವಾಚಕವಾಗಿ ಅದೇ ರೂಪದ ಪದವಿದ್ದಿರಬಹುದು. ದ್ರಾವಿಡ ಭಾಷೆಗಳು (ತಕತುತೆಮ)[27] ಮೂಲತಃ ಒಂದೇ ಮೂಲದಿಂದ (Proto Dravidian) ಹುಟ್ಟಿ ಬಂದುವಾದುದರಿಂದ ಈ ಶಬ್ದರೂಪಗಳಲ್ಲಿರುವ ಸಾಮ್ಯ ಸ್ವಾಭಾವಿಕವಾದುದೇ ಆಗಿದೆ. ಹಟ್ಟಿಯಂಗಡಿ (ಕುಂದಾಪುರ ತಾ. ಮತ್ತು ಶಿವಮೊಗ್ಗದ ಹಟ್ಟಿ ಹೊಂಬುಜ್ಜಪುರ)[28], ಚಿತ್ರಾಪುರ, ಸಕಲೇಶಪುರ (ಮತ್ತು ಸಕಲೇಶ್ವರ

26 ಇಲ್ಲಿ 'ನೇತ್ರಾವತಿ' (ನದಿ)ಯನ್ನು ಹೆಣ್ಣೆಂದು ಕಲ್ಪಿಸಿ, ಅವಳೊಂದಿಗೆ ಮಲಗುವ(!?) ವರೆಗಿನ ನಿರ್ಧಾರವನ್ನು ಹೇಳುವ ಆಶಯವಿದೆ. ಇಲ್ಲಿನ ಸ್ಥಳನಾಮರೂಪಗಳು ತುಳುಭಾಷೆಯಲ್ಲಿ ವ್ಯವಹಾರದಲ್ಲಿ ಆ ಅರ್ಥವನ್ನು ಕೊಡುತ್ತವೆ ಎಂಬುದನ್ನೂ ಗಮನಿಸಬೇಕು.

27 'ದ್ರಾವಿಡ' ಎಂದಾಗ 'ತಮಿಳು' ಎಂಬ ಸಂಕುಚಿತಾರ್ಥವೂ ಆಗುವುದರಿಂದ ಸದ್ಯಕ್ಕೆ ಈ ಸಂಜ್ಞೆಯನ್ನು ಬಳಸುವುದು ಉಚಿತವೆನ್ನಿಸುತ್ತದೆ. ಇಲ್ಲಿ ಒಂದೊಂದು ಅಕ್ಷರವೂ ಒಂದೊಂದು ದ್ರಾವಿಡಭಾಷೆಯ ಪ್ರಥಮಾಕ್ಷರವನ್ನು ಸೂಚಿಸುವ ಸಂಜ್ಞೆಯಾಗಿದೆ. (ತ–ತಮಿಳು: ಕ–ಕನ್ನಡ: ತು–ತುಳು; ತೆ–ತೆಲುಗು; ಮ–ಮಲೆಯಾಳ).

28. ದ.ಕ.ದ ಈ 'ಹಟ್ಟಿ'ಗೂ ಘಟ್ಟದ ಮೇಲಣ 'ಹಟ್ಟಿ'ಗೂ ಸುಮಾರು ಕ್ರಿ.ಶ. ೯ನೇ ಶ.ದ ವೇಳೆಯಲ್ಲಿ ಸಾಂಸ್ಕೃತಿಕ ಸಂಬಂಧ ಬೆಳೆದು ಬಂದಿದ್ದನ್ನೂ, ಇವೆರಡೂ ಜೈನರ ಪ್ರಾಚೀನ ಹಾಗೂ ಪ್ರಸಿದ್ಧ ಕೇಂದ್ರಗಳಾಗಿರುವುದನ್ನೂ ಗಮನಿಸಿದರೆ, ಈ ಅನುಕರಣೆ ಆಕಸ್ಮಿಕವೆಂದು ಕೈಬಿಡುವಂತಿಲ್ಲ: ಬಹುಶಃ ಶಿವಮೊಗ್ಗೆಯ ಆ ಹಟ್ಟಿಯೇ ಈ ಹಟ್ಟಿಯ ನಾಮಧಾರಣೆಗೆ ಮೂಲವೆಂದೂ, ವಲಸೆಯಿಂದ ಬಂದಿರಬಹುದಾದ ಹೆಸರೆಂದೂ ನಂಬಬಹುದು.

ಸಕಲೇಶಪುರ. ಪುತ್ತೂರು ತಾ.ನ ಬೆಳಿಪ್ಪಾಡಿ ಗ್ರಾಮದಲ್ಲಿರುವ ಊರು) ಮುಂತಾದುವು ಮೊದಲನೆಯ ವರ್ಗದವು. ಪುತ್ತೂರು (ಉಡುಪಿ ತಾ. ಪುತ್ತೂರು ತಾ., ಆಂಧ್ರಪ್ರದೇಶ ಮುಂ). ಕಲ್ಯಾಣಪುರ (ಉಡುಪಿ ತಾ. ದಿಲ್ಲಿಯ ಸಮೀಪ, ಬಿಹಾರಿನ ಸಮೀಪ). ಕಾರಂಗಲ್ಪಾಡಿ (ಮಂಗಳೂರು. ಬಂಗಾಳ. ರಾಣಿಬೆನ್ನೂರು, ಧಾರವಾಡ), ಮಂಗಳೂರು (ಮಂಗಳೂರು ತಾ. ಬಿಜಾಪುರ. ಚಿಕ್ಕಮಗಳೂರು), ಅತ್ತೂರು (ಮಂಗಳೂರು. ಕಾರ್ಕಳ), ಉದ್ಯಾವರ (ಉಡುಪಿ, ಕಾಸರಗೋಡು), ಕಡೆಕಾರ್ (ಉಡುಪಿ, ಮಂಗಳೂರು), ಜೈಲೂರು (ಉಡುಪಿ, ಕಾರ್ಕಳ, ಉ.ಕ. ಜಿಲ್ಲೆ, ಮುಂ.), ಕೋಟ (ಉಡುಪಿ, ಆಂಧ್ರ ಪ್ರದೇಶ ಮುಂ.) ಇವೇ ಮುಂತಾದವು ಎರಡನೆಯ ವರ್ಗಕ್ಕೆ ಸೇರುವ ಅನುಕರಣಗಳು.

ವಲಸೆಯಿಂದಿರಲಿ ಭೂವಿವರರೀತ್ಯಾ ಇರಲಿ, ಇಂಥ ಅನುಕರಣಗಳು ಏಕಕಾಲದಲ್ಲಿ ತಲೆ ದೋರಿರವೆ ಕಾಲಾನುಕ್ರಮದಲ್ಲಿ ನಡೆದುವು ಎಂದು ಒಪ್ಪಬೇಕು. ಆಳವಾಗಿ ಶೋಧಿಸಿದ್ದೆ ಆದರೆ ಇಂಥ ಅನುಕರಣೆಯ ನಡುವಣ ಕಾಲದ ಅಂತರವನ್ನು ಸ್ಥೂಲವಾಗಿಯಾದರೂ ಕಂಡುಕೊಳ್ಳುವ ಸಂಭವವಿದೆ.

ಈ ಅನುಕರಣೆ ಎಲ್ಲ ಕಾಲದಲ್ಲಿ ಸಹಜವಾಗಿ. ಬಹುತೇಕ ಸಂದರ್ಭಗಳಲ್ಲಿ, ಅಂಥ ಸ್ಥಳನಾಮ ಇನ್ನೊಂದಿದೆ ಎಂಬ ಗೊಡವೆಯೇ ಇರದೆ, ನಡೆಯುತ್ತಿರುತ್ತವೆ ಎಂಬುದಕ್ಕೆ ಒಂದು ಸರಳ ಉದಾಹರಣೆ ಕೊಡಬಹುದು. ಎಲ್ಲೆಲ್ಲಿ ಗುಡ್ಡೆ (ಗುಡ್ಡ) ಇದ್ದು, ಅಲ್ಲೊಂದು ಅಂಗಡಿ ಏಳುತ್ತದೊ. ಅಲ್ಲೆಲ್ಲ ಒಂದೊಂದು 'ಗುಡ್ಡೆ ಅಂಗಡಿ' ರೂಪುಗೊಳ್ಳುತ್ತದೆ. ಉಡುಪಿ ತಾಲೂಕಿನಲ್ಲೆ ಇಂಥ ಗುಡ್ಡೆಅಂಗಡಿಗಳು ಏಳೆಂಟುಇವೆ. ನಾವು ಆಗಲೆ ನೋಡಿರುವಂತೆ ಅಂಗಡಿ ತೆರೆದ ದಿನದಿಂದ ವ್ಯವಹಾರದಲ್ಲಿ ಬರುವ ಈ ಹೆಸರು, ಆ ಊರಿನ ಮತ್ತು ಆ ಅಂಗಡಿಯ ಪ್ರಗತಿ ಮತ್ತು ಯಶಸ್ಸಿನೊಂದಿಗೆ ಹಬ್ಬಿಬಿಡುವುದೇ ಅಲ್ಲದೆ; ಆ ಆಸುಪಾಸಿಗೆಲ್ಲ ಅದೇ ಹೆಸರು ರೂಢವಾಗಿ ಬೇರೂರುತ್ತದೆ.

ವೈಯಕ್ತಿಕ ಅಥವಾ ಸ್ಮಾರಕ ಸ್ಥಳನಾಮಗಳು

ಕೃತಕ ಸ್ಥಳನಾಮಗಳೆಂಬ ವರ್ಗದಲ್ಲಿ ಇವು ಅಳವಡುತ್ತವೆ. ಒಬ್ಬ ಪ್ರಸಿದ್ಧ ವ್ಯಕ್ತಿಯಿಂದ, ಅಥವಾ ಒಂದು ಜಾತಿವರ್ಗದಿಂದ. ಇಲ್ಲವೆ. ಪ್ರಸಿದ್ಧ ಘಟನೆಯೊಂದರಿಂದ ಸ್ಫೂರ್ತವಾದ ಈ ಹೆಸರುಗಳು ಸಂಪೂರ್ಣವಾಗಿ 'ಕೃತಕ'ವಲ್ಲದಿದ್ದರೂ, ಪ್ರಾಕೃತಿಕ ನಾಮಗಳೊಂದಿಗೆ ಹೋಲಿಸಿ ನೋಡಿದಾಗ. ನಮ್ಮ ಅಧ್ಯಯನ ಸೌಲಭ್ಯಕ್ಕಾಗಿ ಹಾಗೆ ವರ್ಗೀಕರಿಸಬಹುದು ಅನ್ನಿಸುತ್ತದೆ. ಇಂಥ ಕೆಲವು ಸ್ಥಳ ನಾಮಗಳು: ಕಾಶಿಬೆಟ್ಟು. ಜಾತ್ರಿಬೆಟ್ಟು. ಅಜ್ಜಿಬೆಟ್ಟು, ಕುರುಡಪದವು, ಪೆಂಡ್ಲೆಂಟ್‌ಪೇಟೆ, ಸೆಟ್ಟಿಬೆಟ್ಟು, ಮುನಿಯೂರು. ಫರಂಗಿಪೇಟೆ, ನ್ಯಾಯತೋಟ. ಬಾಬುಗುಡ್ಡೆ, ಬಬ್ಬುಕಟ್ಟೆ. ಪುರುಷರಕಟ್ಟೆ, ಅತಿಕಾರಿಬೆಟ್ಟು. ಬಗ್ಗೆರಬೆಟ್ಟು. ಹಂಪನಕಟ್ಟೆ(?). ಕುಲಶೇಖರ. ಸೂರಂಬೈಲು(?). ಪೊನ್ನಂಪೇಟೆ. ಅನಂತಾಡಿ. ಕಾಶೀಪಟ್ಣ. ಬುಕ್ಕಪಟ್ಣ. ಜೈನಂಪೇಟೆ, ಕಂಚುಗಾರಕುಟ್ಲು, ಬ್ರಾಹ್ಮಣರಕುಟ್ಲು ಇತ್ಯಾದಿ ಇತ್ಯಾದಿ.

ಸ್ಥಳನಾಮಾಧ್ಯಯನದ ಮಹತ್ವ

"ಚರಿತ್ರೆ ನಿರುತ್ತರವಾಗುವಲ್ಲಿ ಅಥವಾ ಮೌನವಾಗಿಬಿಡುವಲ್ಲಿ ಸ್ಥಳನಾಮ ಉಸಿರಬಲ್ಲುದು". "ಹೆಸರಲ್ಲೇನಿದೆ?" ಎಂಬುದು ಸ್ಥಳನಾಮಗಳ ಕುರಿತಾಗಿ ಸೂಕ್ಷ್ಮವಾದ ಅಧ್ಯಯನ ನಡೆಸುವ ಪೂರ್ವದ ಪ್ರಶ್ನೆ ಅಥವಾ ಸ್ಥಿತಿಯಾದರೆ. "ಹೆಸರಲ್ಲೇನಿಲ್ಲ?" ಎಂಬುದು. ಅದರ ಅಧ್ಯಯನದ ನಂತರದ ಪ್ರಶ್ನೆ ಯಾ ಸ್ಥಿತಿ. ಈ "ಸ್ಥಿತ್ಯಂತರ" ನಮ್ಮಲ್ಲಿಂದು ಉಂಟಾಗಬೇಕಾಗಿದೆ. ಏಕೆಂದರೆ. ಈ ಸ್ಥಳನಾಮಗಳು ಭೂಗೋಳ. ಭೂವಿವರ. ಭೌತಿಕ ಸ್ಥಿತಿಗತಿಗಳು—ಪ್ರಕೃತಿ ಸಂಪತ್ತಿನ ವೈಪುಲ್ಯ.[29] ಕಾಡುಪ್ರಾಣಿಗಳು

29 ಸಸ್ಯಸಂಪತ್ತನ್ನೂ ಗಿಡಮೂಲಿಕೆಗಳ ಆಧಿಕ್ಯವನ್ನೂ ಉದ್ದೇಶಿಸುವ ಸ್ಥಳನಾಮಗಳು ತುಳುನಾಡಿನಲ್ಲೂ ಸಾಕಷ್ಟಿವೆ. ಉದಾ: ಬಸರೂರು. ಸರಳಿಬೆಟ್ಟು. ತೋಣಸೆ. ಹಂಗಾರಕಟ್ಟೆ (ಹಂಗಾರಕನ ಕಟ್ಟೆ), ಬಾಳಿಕುದ್ರು, ಕುಟಚಾದ್ರಿ ಇ.

ಮತ್ತು ಅವುಗಳ ಹಾವಳಿ[30], ಚಾರಿತ್ರಿಕ ಘಟನೆಗಳು[31], ರಾಷ್ಟ್ರೀಯ ಹಾಗೂ ಜಾತೀಯ ವಲಸೆ_ನೆಲೆಗಳು; ಜನಾಂಗಿಕ ಅಥವಾ ಆನುವಂಶಿಕ ಆಡಳಿತವ್ಯವಸ್ಥೆ, ಅಧಿಕಾರ ವಿಭಜನೆ,[32] ಸಮಾಜ ಸಂಯೋಜನೆ, ಸಾಮುದಾಯಿಕ ರೀತಿರಿವಾಜುಗಳು, ಪರಂಪರೆಗಳು, ಪೂಜಾವಿಧಾನಗಳು, ಆರಾಧ್ಯ ದೈವಗಳು[33], ನಿಸರ್ಗಪ್ರಕೃತಿಯನ್ನು ಕುರಿತ ನಿಗೂಢ ಸಂಗತಿಗಳು... ಹೀಗೆ ಎಷ್ಟೋ ಅಂಶಗಳ ಮೇಲೆ ದಟ್ಟವಾದ ಬೆಳಕು ಬೀರುವಲ್ಲಿ ಸಂಶಯವಿಲ್ಲ. ಭಾಷೆ–ಭಾಷೆಗಳ ನಡುವಣ ಸಂಬಂಧವೇ ಅಲ್ಲದೆ ಅಗ್ರಾಂಥಿಕವಾದ ತುಳುವಿನಂಥ ಸುಸಂಸ್ಕೃತ ಭಾಷೆಯ ಸ್ವರೂಪ ಜ್ಞಾನವನ್ನುಂಟುಮಾಡುವಲ್ಲಿ ಸ್ಥಳನಾಮ ಜಿಜ್ಞಾಸೆ ತುಂಬ ಉಪಯುಕ್ತವಾಗಬಲ್ಲುದು. ಪ್ರಕೃತಿಯೊಂದಿಗೆ ಆದಿಮಾನವನ ಅಥವಾ ಮೊದಲು ವಾಸ್ತವ್ಯ ಹೂಡಿದವನ ಹೋರಾಟ, ಅವನ ಅದೃಷ್ಟ–ದುರದೃಷ್ಟ, ಮುಂತಾದವುಗಳನ್ನೂ ಅರುಹಬಲ್ಲುದು. ಅಲ್ಲದೆ, ಇಂದು ವ್ಯವಹಾರದಲ್ಲಾಗಲಿ ಲಿಖಿತ ದಾಖಲೆಗಳು ಅಥವಾ ಶಬ್ದಕೋಶಗಳಲ್ಲಾಗಲಿ ಸಿಗದ ಕೆಲವು ಪ್ರಾಚೀನ ಪದಗಳ ಅರ್ಥವನ್ನು ಈ ಸ್ಥಳನಾಮರೂಪಗಳು ನಮಗೆ ತೆರೆದು ತೋರಿಸುತ್ತವೆ.[34] ಹೀಗೆ, ಜನಾಂಗದ ಸಾಂಸ್ಕೃತಿಕ ನೆಲೆಗಟ್ಟು–ಅವಸ್ಥೆ (cultural stage) ಮತ್ತು ಸಾಂಸ್ಕೃತಿಕ ಧೋರಣೆ–ಪ್ರವೃತ್ತಿ (cultural tendency)ಗಳನ್ನೂ, ಅವುಗಳೊಳಗಿನ ಭಿನ್ನಭಿನ್ನ ಭಾಗಗಳನ್ನೂ ಇವು ನಿರ್ದೇಶಿಸುತ್ತವೆ.

ಆದ್ದರಿಂದ, ಒಂದು ರಾಷ್ಟ್ರದ ಸ್ಥಳೀಯ ನಾಮ ವಿಶೇಷಗಳು (nomenclature) ಅದರ ಆತ್ಮವೃತ್ತಾಂತ ಬರೆದ ಭಾಷೆಯಾಗಿದೆ; ಬೇರೆ ಯಾವುದೇ ಇತರ ದಾಖಲೆಗಳಲ್ಲಿ ಮಾನವ ಜನಾಂಗದ ಶೈಶವ ಚರಿತ್ರೆಯು ಇಷ್ಟೊಂದು ಅಚ್ಚಳಿಯದ ಹಾಗೂ ಪ್ರಮಾಣಾರ್ಹ ರೂಪದಲ್ಲಿ ಮುದ್ರಿತವಾಗಿಲ್ಲ–ಎಂದು ಹೇಳಬಹುದು.[35] ಆ ಕಾರಣ, ನಾವಿಂದು ಸ್ಥಳೀಯ ಚರಿತ್ರೆಯನ್ನು ಪುನಾರಚಿಸುವ ಮುನ್ನ ಸ್ಥಳನಾಮರೂಪಗಳ ಪ್ರಾಚೀನ ಹಾಗೂ 'ಯಥಾರ್ಥ'[36] ರೂಪಗಳನ್ನು ಶೋಧಿಸಿ ಗುರುತಿಸುವುದು ಅತ್ಯಗತ್ಯವಾಗಿದೆ.

---

30 ಪಿಲಿಯೂರು, ಆನೆಕಲ್, ಪಂಜಿಕಲ್, ಪುಚ್ಚೆಮೊಗರು(?), ಪೂಚೆಕಾಡು (ಪೂಚೆ = ಬೆಕ್ಕು), ಕುದುರೆಬಿತ್ತಿಲು, ಕಾಟಿಪಳ್ಳ ಮುಂತಾದವನ್ನು ಇದಕ್ಕೆ ಉದಹರಿಸಬಹುದು.

31 ಉದಾ: ವೀರಕಂಭ, ಬೊಪ್ಪೆ, ಸ್ವರ್ಗ(?) ಮುಂತಾದುವು.

32 ಕಾಪು ('ಕಾಪ' ಎಂಬ ಅಧಿಕಾರಿಯಿಂದ), ಕೊಟ್ಟಾರ (∠ ಕೊಟ್ಟಾರಿ), ಕುರಿಯ (∠ (ಗುರ್ಕಾರ?) ಗುತ್ತು (∠ ಗುತ್ತಿನಾಯ), ಅತಿಕಾರಿಬೆಟ್ಟು (∠ ಅಧಿಕಾರಿ + ಬೆಟ್ಟು), ಶ್ರೀಮಂತೂರು (∠ ಸಾಮಂತನ + ಊರು) ಮುಂತಾದುವು.

33 ಮಲ್ಲಾರ್ (∠ ಮಲೆರಾಯ ಭೂತ?), ಮುಂಡ–(∠ ಮುಂಡತ್ತಾಯ), ಜಾರ (∠ ಜಾರಂತಾಯ), ತೋಡಿಕಾನ (ತೊಡಕಿನಾಯ?), ಕೊಡಮಣ್ಣೂರು (∠ ಕೊಡಮಣಿತ್ತಾಯ?) ಅಡಕ (ಸ್ಥಳ) ಇ. (∠ ಅಡ್ಕತ್ತಾಯ?) ಮುಂತಾದುವು.

34 "ಆದ್ದರಿಂದ ಯಾವ್ಯಾವಾಗ ಒಂದು ನದಿ, ಪರ್ವತ, ಅರಣ್ಯ, ದೇಶ, ಪಟ್ಟಣ, ಅಥವಾ ಹಳ್ಳಿಯ ಹೆಸರನ್ನು ನಾವು ಸರಿಯಾಗಿ ತಿಳಿದುಕೊಂಡಿರುವುದಿಲ್ಲವೋ, ಆಗಾಗೆಲ್ಲ ನಾವು ಆದಿಮ ಭಾಷೆಯ ಅರ್ಥವನ್ನು ಮರೆತುಬಿಟ್ಟಿರುವುದಾಗಿ ತಿಳಿದುಕೊಳ್ಳಬೇಕು." ಉದ್ಧೃತ S. Silva *Toponomy of Canara*, p. 109.

35 ಉದ್ಧೃತ, ಅದೇ, ಪುಟ. ೬

36 'ಯಥಾ + ಅರ್ಥ'–ಅಂದರೆ, ಲೇಖನದ ಆರಂಭದಲ್ಲಿ ಹೇಳಿದ 'ಅರ್ಥ' context

ಎಲ್. ಪ್ರಹ್ಲಾದರಾವ್

ಚಿಂತನ

I

ಮೊಸಳೆ

ಹೊಳೆ ದಾಟುವವರೆಗೂ ಮೊಸಳೆಯೊಡನೆ ವೈಮನಸ್ಯ ಕಟ್ಟಿಕೊಳ್ಳಬಾರದು. ಇದು ವಾಚ್ಯವಾಗಿಯೂ ಆಲಂಕಾರಿಕವಾಗಿಯೂ ಸತ್ಯವಾದ ಮಾತು. ಶಿವಮೊಗ್ಗೆಯ ಪಿಳ್ಳಂಗೇರಿಯ ಹತ್ತಿರದ ತುಂಗಾ ನದಿಯ ಆಚೆಯ ದಡದಲ್ಲಿ ನಾಲ್ಕಾರು ಮೊಸಳೆಗಳು ಯಾವಾಗಲೂ ಬಿಸಿಲು ಕಾಯಿಸುತ್ತ ಮಲಗಿರುತ್ತವೆ. ಅದನ್ನು ಕಂಡರೆ ಈಚೆ ದಡದಲ್ಲಿರುವ ನಮಗೆ ನೀರಿಗಿಳಿಯುವ ಧೈರ್ಯ ಬರುವುದಿಲ್ಲ. ಪ್ರಾಣ ಭಯ ಒಂದು ಇದೆ ನೋಡಿ. ಮೊಸಳೆಯಂತೂ ಬಹಳ ಕ್ರೂರವಾದ ಪ್ರಾಣಿ. ನೀರಿನಲ್ಲಿದ್ದರೆ ಅದಕ್ಕೆ ಆನೆಯ ಬಲ ಎನ್ನುತ್ತಾರೆ. ಅದಕ್ಕೇ ನಮ್ಮ ಹಿರಿಯರು ಹೇಳುವುದು–ಗೊತ್ತಿಲ್ಲದ ನೀರಿಗೆ ಇಳಿಯಬೇಡ ಎಂದು. ಆದರೆ. ಹೊಳೆಯಲ್ಲಿ ಮೊಸಳೆ ಇದೆಯೆಂದು ಯಾರೂ ಹೊಳೆಗೆ ಇಳಿಯುವುದನ್ನು ಬಿಟ್ಟಿಲ್ಲ. ಸ್ನಾನ ಮಾಡುತ್ತಾರೆ. ಬಟ್ಟೆ ಒಗೆದುಕೊಳ್ಳುತ್ತಾರೆ. ಮುಸುರೆ ಬೆಳಗುತ್ತಾರೆ. ದನಕರುಗಳಿಗೆ ಮೈತೊಳೆಸುತ್ತಾರೆ. ದೂರದವರೆಗೂ ಈಜುವುದೂ, ಈ ದಂಡೆಯಿಂದ ಆ ದಂಡೆಗೆ ಈಜಿಹೋಗುವುದೂ ಉಂಟು. ಹಾಗೆ ನೋಡಿದರೆ ಮೊಸಳೆ ಇಲ್ಲದ ಹೊಳೆ ಯಾವುದು? ಪರಮಪವಿತ್ರವಾದ ಗಂಗಾನದಿಯಲ್ಲಿ ಮೊಸಳೆಗಳಿವೆ. ಆದರೆ ಗಂಗಾ ಯಮುನಾ ನದಿಗಳಲ್ಲಿ ಜನ ಸ್ನಾನಮಾಡುವಷ್ಟು ಬೇರಾವ ನದಿಗಳಲ್ಲೂ ಮಾಡರು. ಕುಂಭಮೇಳದಲ್ಲಿ ಪ್ರಯಾಗದಲ್ಲಿ ಸೇರುವಂಥ ಜನಜಂಗುಳಿ ಪ್ರಪಂಚದ ಇನ್ನಾವ ಜಾತ್ರೆಯಲ್ಲೂ ಸೇರುವುದಿಲ್ಲವಂತೆ. ಇದು ಜೀವನ.

ಇದರ ತಾತ್ಪರ್ಯವೇನೆಂದರೆ ಎಲ್ಲ ಮೊಸಳೆಗಳೂ ಎಲ್ಲರನ್ನೂ ಕಚ್ಚುವುದಿಲ್ಲ. ನಿಜ. ಆದರೆ ಹೊಳೆ ದಾಟಬೇಕಾದವನು ಅದರಲ್ಲೇ ವಾಸಿಸುವ ಕ್ರೂರಪ್ರಾಣಿಯಾದ ಮೊಸಳೆಯ ವೈಮನಸ್ಯ ಕಟ್ಟಿಕೊಂಡರೆ ಆಗುತ್ತದೆಯೆ?

ಕಚೇರಿಯಲ್ಲಿ ಚಾಕರಿ ಮಾಡುವ ಎಲ್ಲರಿಗೂ ಇದು ಅನುಭವಕ್ಕೆ ಬಂದೇ ಇರುತ್ತದೆ. ಮೂವತ್ತು ವರ್ಷ ಮಾಡಬೇಕಾಗಿರುವ ಚಾಕರಿಯೇ ಹೊಳೆ ಇದ್ದ ಹಾಗೆ. ಮೇಲಧಿಕಾರಿ ಮೊಸಳೆ ಇದ್ದ ಹಾಗೆ. ಅಧಿಕಾರ ಬಂತೆಂದರೆ ಕೆಲವರು ಕ್ರೂರಿಗಳು ನಿಷ್ಕರುಣಿಗಳು ಆಗುತ್ತಾರೆ ಎಂಬ ಮಾತಂತೂ ಸತ್ಯ. ಅಧಿಕಾರ ವ್ಯಕ್ತಿಯನ್ನು ಕೆಡಿಸುತ್ತದೆ, ಪೂರ್ಣ ಅಧಿಕಾರ ವ್ಯಕ್ತಿಯನ್ನು ಪೂರ್ಣ ಕೆಡಿಸುತ್ತದೆ ಎಂದು ಹಿರಿಯರು ಹೇಳಿದ್ದಾರೆ. ಹೀಗಾಗದ ಒಳ್ಳೆಯ ಅಧಿಕಾರಿಗಳು ಇಲ್ಲವೆಂದಲ್ಲ. ಇದ್ದಾರೆ. ಆದರೆ ಅಧಿಕಾರ ಬಂದಾಗ ಮೈಮರೆವ ಜನ ಬಹಳ. ತಮ್ಮ ಕೆಲಸದ ಹೊರೆಯನ್ನೂ ಜವಾಬ್ದಾರಿಯನ್ನೂ ಕೆಳಗಿನ ಕೆಲವರ ಮೇಲೆ ಹೊರಿಸಿ ಆರಾಮವಾಗಿ ಕಾಲ ಕಳೆವವರುಂಟು. ಒಮ್ಮೆ ಒಂದು ವಿಷಯದಲ್ಲಿ ಕೊಟ್ಟ ತೀರ್ಪನ್ನು ಅದೇ ರೀತಿಯ ಮತ್ತೊಂದು ವಿಷಯದಲ್ಲಿ ಬದಲಿಸುವವರುಂಟು. ನೀವು ಮಾಡುತ್ತಿರುವುದು ಸರಿಯಲ್ಲವೆಂದು ಹೇಳಿದ ನೌಕರರನ್ನು ಗದರಿಸಿ ಅವರ ಮೇಲೆ ಕಣ್ಣಿಟ್ಟವರುಂಟು. ವಾರ್ಷಿಕ ಗುಪ್ತ ವರದಿಯಲ್ಲಿ ಸಲ್ಲದ ಆರೋಪಗಳನ್ನು ಮಾಡಿದವರುಂಟು. ತಮಗನುಕೂಲ

ನಾಗಿದ್ದು ಕಾಲಾಯ ಬದಲಾಯ ಬಂದುದರಲ್ಲಿ ತಮಗೆ ಸಹಪಾಲು ಕೊಟ್ಟವನನ್ನು ರಕ್ಷಿಸಿದವರುಂಟು. ಬಡ್ತಿ ಕೊಡಿಸಿದವರುಂಟು. ಎಂಥ ಆಡಳಿತ ವ್ಯವಸ್ಥೆಯಲ್ಲೂ ಇಂಥ ಸಂಗತಿಗಳು ಸರ್ವಸಾಮಾನ್ಯ. ಅಧಿಕಾರದ ಪರಮಾವಧಿ ದುರುಪಯೋಗಕ್ಕೆ ಹೆಚ್ಚಿನ ಆಸ್ಪದ ಇರುವುದು ನಿರಂಕುಶಪ್ರಭುತ್ವದಲ್ಲಿ. ಇಲ್ಲವೆ ಸೈನಿಕ ಪ್ರಭುತ್ವದಲ್ಲಿ. ಅಂಥಲ್ಲಿ ಆಡಳಿತ ವರ್ಗವೆಲ್ಲ ಮೇಲಧಿಕಾರಿಯ ಆಜ್ಞೆಗೆ ಅನುಸಾರವಾಗಿ ನಡೆಯುವ ಯಂತ್ರವಾಗಿಬಿಡುತ್ತದೆ. ಅಲ್ಲಿ ಪ್ರಜೆಗಳ ಹಿತ, ಅವರಿಗೆ ಸಲ್ಲಬೇಕಾದ ನ್ಯಾಯ ಗೌಣವಾಗುತ್ತವೆ. ಹೀಗೆ ಆಗಿದೆಯಲ್ಲಾ ಎಂದು ಹೇಳಿಕೊಳ್ಳುವ ಧೈರ್ಯ ಕೂಡ ಪ್ರಜೆಗಳಿಗೆ ಇರುವುದಿಲ್ಲ. ಪ್ರಚಾರ ಮಾಧ್ಯಮಗಳೆಲ್ಲ ಆಡಳಿತಗಾರರ ಕೈಯಲ್ಲಿರುತ್ತವಾಗಿ ಅವರು ಹೇಳಿದ್ದೇ ನಿಜವಾಗುತ್ತದೆ. ಎಲ್ಲ ನೆಮ್ಮದಿಯಾಗಿದೆಯೆಂದು ಅವರು ಪ್ರಚಾರ ಮಾಡುತ್ತಾರೆ. ಆದರೆ ಅನುಭವಿಸುವ ಜನ ಮಾತ್ರ ಮೂಕಪಶುಗಳಂತೆ ಒಳಗೊಳಗೇ ಸಂಕಟ ಪಡುತ್ತಿರುತ್ತಾರೆ.

ಪ್ರಜಾಸತ್ತಾತ್ಮಕ ಆಡಳಿತವಿರುವ ದೇಶಗಳಲ್ಲಿ ಪರಿಸ್ಥಿತಿ ಇದಕ್ಕಿಂತ ಉತ್ತಮವಾಗಿರುತ್ತದೆ. ಅಂದರೆ ಪ್ರಜೆಗಳಿಂದ ಚುನಾಯಿತರಾದ ಮಂದಿಯೇ ಆಡಳಿತಸೂತ್ರಗಳನ್ನು ಹಿಡಿದಿರುತ್ತಾರಾಗಿ ಅವರು ತಪ್ಪಿದಲ್ಲಿ ಪ್ರಜೆಗಳಿಗೆ ಆ ಬಗ್ಗೆ ಪ್ರಶ್ನೆಮಾಡುವ ಅಧಿಕಾರವಿರುತ್ತದೆ. ಅಲ್ಲದೆ ತಮಗೆ ಹಿತವಾದುದನ್ನು ಮಾಡಿ ಎಂದು ಹೇಳುವ ಅಧಿಕಾರವಿರುತ್ತದೆ. ಇಂಥ ಆಡಳಿತ ಕ್ರಮದಲ್ಲಿ ಪ್ರಜೆಗಳಿಗೆ ಪೂರ್ಣ ವಾಕ್‌ಸ್ವಾತಂತ್ರ್ಯ ಉಂಟು. ಆದ್ದರಿಂದ ದಿನಬೆಳಗಾದರೆ ಪತ್ರಿಕೆಗಳಲ್ಲಿ ಯಾವ ಒಂದು ವಿಷಯದ ಬಗ್ಗೆಯೂ ಪರವಾದ ವಿರೋಧವಾದ ಅಭಿಪ್ರಾಯಗಳು ಬರುತ್ತಿರುತ್ತವೆ. ಚರ್ಚೆಗಳು ನಡೆಯುತ್ತಿರುತ್ತವೆ. ಇವನ್ನೆಲ್ಲ ನೋಡಿದರೆ ದೇಶದಲ್ಲೆಲ್ಲ ಏನೋ ದೊಡ್ಡ ಗೊಂದಲವಾಗಿದೆ ಅನ್ನಿಸಬಹುದು. ಆದರೆ ಅಂಥದೇನೂ ಆಗಿರುವುದಿಲ್ಲ. ಜನ ಸಾಕಷ್ಟು ನೆಮ್ಮದಿಯಿಂದಲೇ ಇರುತ್ತಾರೆ.

ಮೊಸಳೆಗಳು ಮಾತ್ರ ಕೆಟ್ಟವು. ಹೊಳೆ ದಾಟುವವರೆಲ್ಲ ಸಭ್ಯರು ಎಂದು ಹೇಳುವುದಕ್ಕಾಗುವುದಿಲ್ಲ. ಅವರಲ್ಲೂ ಮೊಸಳೆಯನ್ನು ಮೀರಿಸುವಂಥ ಜನರಿದ್ದಾರೆ. ಕೆಲವರಂತೂ ಕೊಕ್ಕೆಹಾಕುವುದರಲ್ಲಿ ನಿಸ್ಸೀಮರು. ಕೈಬೆಚ್ಚಗಾಗದೆ ಅವರು ಯಾವ ಕೆಲಸವನ್ನೂ ಮಾಡರು. ಕಾನೂನಿನ ಕೆಳಗೆ ಸಲೀಸಾಗಿ ನುಸುಳುವುದನ್ನು ಅವರು ಬಲ್ಲರು. ಕರಿದನ್ನು ಬಿಳಿಮಾಡುವ, ಬಿಳಿದನ್ನು ಕರಿಮಾಡುವ ನಿಪುಣತನ ಅವರಲ್ಲಿದೆ. ಒಟ್ಟಿನಲ್ಲಿ ಈ ಎರಡು ಗುಂಪಿನವರಿಂದಲೂ ದೇಶಕ್ಕೆ ಆಗುವ ಹಾನಿ ಅಪಾರ. ಲಂಚಕೋರ, ದುಷ್ಟ, ಶೀಲಭ್ರಷ್ಟ ಅಧಿಕಾರಿಯೊಬ್ಬನನ್ನು ಕೆಳಗಿಳಿಸಿ ಹೊಸಬನೊಬ್ಬನನ್ನು ತರುವ ಯತ್ನದಲ್ಲಿದ್ದ ಜನರನ್ನು ಕುರಿತು ಈಸೋಪ್ ಹೇಳಿದಂತೆ–ಹೊಸ ತಿಗಣೆಗಿಂತ ಹಳೆಯದೇ ಒಳ್ಳೆಯದು–ಎಂದು.

ಆಡಳಿತ ಇರುವುದು ಬಹುಜನರ ಹಿತಕ್ಕೆ, ಬಹುಜನರ ಸುಖಕ್ಕೆ ಎನ್ನುವುದನ್ನು ಹೊಳೆಯಲ್ಲಿರುವ ಮೊಸಳೆಗಳೂ ನದಿ ದಾಟಬೇಕಾದ ಜನರೂ ತಿಳಿಯುವುದು ಒಳ್ಳೆಯದು.

II

ಪತ್ರಿಕೆಗಳ ವರದಿ

ದಿನಬೆಳಗಾದರೆ ಪತ್ರಿಕೆಗಳಲ್ಲಿ ಬರುವ ಸುದ್ದಿಸಮಾಚಾರಗಳನ್ನು ನೋಡಿದರೆ ಯಾರಿಗಾದರೂ ಒಂದು ತರಹ ಷಾಕ್ ಆಗುತ್ತದೆ. ರೈಲು ಕಂಬಿ ತಪ್ಪಿದ್ದು, ಬಸ್ಸು ನಾಲೆಗೆ ಉರುಳಿದ್ದು, ಸ್ಕೂಟರು ಲಾರಿಗೆ ಢಿಕ್ಕಿ ಹೊಡೆದದ್ದು, ಯಾವುದೋ ಹಳ್ಳಿಯಲ್ಲಿ ಸಾಮೂಹಿಕವಾಗಿ ಕಗ್ಗೊಲೆಯಾದದ್ದು, ಇನ್ನಾವುದೋ ಒಂದು ಕಡೆ ಉಪವಾಸ ಮುಷ್ಕರ ಪ್ರಾರಂಭವಾದ್ದು, ಮತ್ತೊಂದು ಕಡೆ ಮಾಲೀಕರನ್ನು ಕಾರ್ಮಿಕರು ಘೇರಾವೊ ಮಾಡಿದ್ದು, ಅತ್ಯಾಚಾರ, ಬಾಲಕನ ಅಪಹರಣ, ಹಗಲು ದರೋಡೆ, ಆತ್ಮಹತ್ಯೆ, ಭ್ರಷ್ಟಾಚಾರ, ಹೀಗೆ ಮನಸ್ಸನ್ನು ಕಲಕಿ ನೆಮ್ಮದಿಯನ್ನು ಹಾಳುಮಾಡುವ ನೂರೆಂಟು ಸಂಗತಿಗಳು ದಿನ ದಿನ ಪ್ರಕಟವಾಗುತ್ತವೆ. ಇದು ಸಾಲದೋ ಎಂಬಂತೆ ರಾಜಕೀಯ ವಾದವಿವಾದಗಳು ಮೊದಲ ಪುಟದ ಮುಕ್ಕಾಲು ಭಾಗವನ್ನು ಆಕ್ರಮಿಸಿದ್ದು ನಮ್ಮ ಮೊದಲ ಗಮನವನ್ನು ತಮ್ಮ ಕಡೆ ಸೆಳೆಯುತ್ತವೆ.

ಪಕ್ಷಗಳ ನಡುವಣ ಜಗಳ. ಪಕ್ಷಾಂತರದ ಪಿಡುಗು. ಪರಸ್ಪರ ಆರೋಪಣೆಗಳು. ಅನುಗುಣವಾದ ಸಮರ್ಥನೆಗಳು–ಹೀಗೆ ರಾಜಕೀಯದ ಗೊಂದಲ ನಮ್ಮ ಬುದ್ಧಿಯನ್ನು ಮಂಕುಮಾಡುವ ವಿಷಯಗಳು ವರದಿಯಾಗಿರುತ್ತವೆ.

ಇವುಗಳನ್ನೆಲ್ಲ ನೋಡಿದ ಹಿರಿಯರು ಬರುಬರುತ್ತ ಕಾಲ ಕೆಟ್ಟುಹೋಗುತ್ತಿದೆ. ನಮ್ಮ ಕಾಲದಲ್ಲಿ ಹೀಗೆ ಇರಲಿಲ್ಲ ಎನ್ನುವುದುಂಟು. ಮುದುಕರುಗಳೆಲ್ಲ ಸಾಮಾನ್ಯವಾಗಿ ಇದನ್ನೇ ಹೇಳುವುದು. ತಮ್ಮ ಕಾಲ ಚೆನ್ನಾಗಿತ್ತು. ಈಗ ಕಾಲ ಕೆಟ್ಟುಹೋಗಿದೆ ಎನ್ನುವುದು ಅವರ ಪಲ್ಲವಿ. ಅದಕ್ಕೆ ಬೆಲೆ ಕೊಡಬೇಕಾದ್ದಿಲ್ಲ ಎನ್ನುವವರೂ ಇದ್ದಾರೆ. ಇನ್ನು ಕೆಲವರು ಅದನ್ನು ನಿಜ ಎಂದು ಒಪ್ಪುವುದೂ ಉಂಟು. ಹಿಂದೆ ಪತ್ರಿಕೆಗಳೇ ಇರಲಿಲ್ಲ. ಇದ್ದರೂ ಅವುಗಳು ಸಮಗ್ರವಾಗಿ ವಿಷಯಗಳನ್ನು ವರದಿಮಾಡುತ್ತಿರಲಿಲ್ಲ. ಸುದ್ದಿಗಳ ಬಗ್ಗೆ ಜನರಿಗೆ ಇದ್ದ ಆಸಕ್ತಿಯೇ ಕಡಿಮೆ. ಪತ್ರಿಕೆ ಕಚೇರಿಗಳಿಗೆ ಶೀಘ್ರವಾಗಿ ಸುದ್ದಿ ತಲಪಿಸುವ ವ್ಯವಸ್ಥೆಯೂ ಇರಲಿಲ್ಲ. ಅಷ್ಟು ಹೊರತು ಹಿಂದಿನ ಕಾಲಕ್ಕೂ ಈಗಿನ ಕಾಲಕ್ಕೂ ಏನೂ ವ್ಯತ್ಯಾಸವಿಲ್ಲ. ಇಂದು ಎಷ್ಟು ಅಪಚಾರಗಳು ನಡೆಯುತ್ತವೆಯೋ ಅಷ್ಟೇ ಹಿಂದೂ ನಡೆಯುತ್ತಿದ್ದುವು. ಇವತ್ತು ಅವೆಲ್ಲ ವರದಿಯಾಗುತ್ತಿವೆ. ಹಿಂದೆ ಅವು ವರದಿಯಾಗುತ್ತಿರಲಿಲ್ಲ. ಹಾಗೆ ನೋಡಿದರೆ ಮಾನವಸ್ವಭಾವ ಯಾವತ್ತಿಗೂ ಒಂದೇ ಎಂದು ಅವರ ವಾದ. ಅದಕ್ಕೆ ಇವರು ಹೇಳುತ್ತಾರೆ. ಎಲ್ಲಾದರೂ ಉಂಟೆ. ಇವತ್ತು ಜನಸಂಖ್ಯೆ ಅಧಿಕವಾಗಿ ಬೆಳೆದಿದೆ. ನಾಗರಿಕತೆ ವೈವಿಧ್ಯಮಯವಾಗಿ ಅಪಾರ ಪರಿಮಾಣದಲ್ಲಿ ವೃದ್ಧಿಹೊಂದಿದೆ. ಒಂದು ಕಡೆ ಸುಖಾಭಿಲಾಷೆ ಹೆಚ್ಚುತ್ತಿರುವಂತೆ ಮತ್ತೊಂದು ಕಡೆ ನೈತಿಕ ಮೌಲ್ಯದ ಬಗ್ಗೆ ಇರಬೇಕಾದ ಕಾಳಜಿ ಕಾಣುತ್ತಿಲ್ಲ. ಎಗ್ಗಿಲ್ಲದ ಮನುಷ್ಯ ದುಷ್ಕೃತ್ಯಗಳನ್ನು ಮಾಡತೊಡಗುತ್ತಾನೆ. ಅಂಥ ಜನ ಇವತ್ತು ತೀರ ಅಧಿಕ ಸಂಖ್ಯೆಯಲ್ಲಿದ್ದಾರೆ. ಆದ್ದರಿಂದಲೇ ದಿನಪತ್ರಿಕೆಗಳಲ್ಲಿ ದೌರ್ಜನ್ಯದ ವರದಿಗಳೇ ಹೆಚ್ಚಾಗಿ ಬರುತ್ತಿವೆ. ಸಾತ್ತ್ವಿಕ ಜನರ, ಸರಳ ಜೀವಿಗಳ. ಸತ್ಯವಂತರ. ಸಮಾಜ ಹಿತೈಷಿಗಳ. ಧರ್ಮಿಷ್ಠರ. ಸುಮತಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಆದ್ದರಿಂದಲೇ ಯಾವ ಪತ್ರಿಕೆಯೂ ಅಂಥವರ ಬಗ್ಗೆ ಅವರ ಜೀವನ ವಿಶೇಷಗಳ ಬಗ್ಗೆ ವರದಿಮಾಡುತ್ತಿಲ್ಲ–ಅಂತ.

ಅದಕ್ಕೆ ಇವರ ಪ್ರತಿವಾದಿಗಳು ಹೇಳುವ ಸಮಜಾಯಿಷಿ ಸ್ವಾರಸ್ಯವಾಗಿದೆ. ಪತ್ರಿಕೆಯಲ್ಲಿ ಯಾವ ವಿಷಯ ವರದಿಯಾಗಬೇಕಾದರೂ ಅದು ಅಪರೂಪದ್ದಾಗಿರಬೇಕು. ಆಶ್ಚರ್ಯ ಹುಟ್ಟಿಸುವಂತಿರಬೇಕು. ಎಲ್ಲರ ಗಮನವನ್ನೂ ಸೆಳೆವಂತಿರಬೇಕು. ದೌರ್ಜನ್ಯ ಅಪರೂಪವಾದ್ದರಿಂದ ಅದನ್ನೇ ಪತ್ರಿಕೆಗಳು ವರದಿಮಾಡುತ್ತಿವೆ. ಸೌಜನ್ಯ ಸಭ್ಯತೆ ಸಾಮಾನ್ಯವಾದ. ಸಾರ್ವತ್ರಿಕವಾಗಿ ಕಂಡುಬರುವ ವಿಷಯಗಳಾದ್ದರಿಂದ ಅವು ವರದಿಯಾಗುತ್ತಿಲ್ಲ. ನಮ್ಮ ಕಾಲ ಕೆಟ್ಟಿಲ್ಲ ಎನ್ನುವುದಕ್ಕೆ ಇದೇ ಸಾಕ್ಷಿ–ಎಂದು ಇವರ ವಾದ.

ಕ್ರಿಸ್ತಪೂರ್ವ ನಾಲ್ಕನೆಯ ಶತಮಾನದಲ್ಲಿ ಗ್ರೀಸಿನಲ್ಲಿ ಒಬ್ಬ ಪ್ರಸಿದ್ಧ ಸಿನಿಕ ತತ್ತ್ವಶಾಸ್ತ್ರಜ್ಞ ಇದ್ದ. ಅವನ ಹೆಸರು ಡೈಯಸ್ನೈಸಸ್. ಆತ ಮಹಾ ವಿರಕ್ತ. ಅವನ ಪಾಂಡಿತ್ಯವನ್ನು ಮೆಚ್ಚಿದ ಅಲೆಕ್ಸಾಂಡರ್ ಮಹಾಶಯ ಅವನಲ್ಲಿಗೆ ಬಂದು ನಿನಗೇನು ಬೇಕೋ ಹೇಳು. ಕೊಡುತ್ತೇನೆ–ಎಂದಾಗ ಅಯ್ಯಾ ಮಹಾಶಯ ದಯಮಾಡಿ ಬಿಸಿಲಿಗೆ ಅಡ್ಡಬರಬೇಡ. ಅತ್ತ ಸರಿ ಎಂದನಂತೆ. ಅಂಥಾ ವಿರಕ್ತ ಡೈಯಸ್ನೈಸಸ್ ಹಾಡೇ ಹಗಲು ಲಾಂದ್ರವನ್ನು ಕೈಲಿ ಹಿಡಿದು ಓಡಾಡುತ್ತಿದ್ದನಂತೆ. ಏಕೆ ಹಾಗೆ ಮಾಡುತ್ತಿದ್ದೀಯ ಎಂದು ಕೇಳಿದವರಿಗೆ ಆತ–ನಿಜವಾದ ಮಾನವನನ್ನು ಹುಡುಕುತ್ತಿದ್ದೇನೆ–ಎಂದು ಹೇಳುತ್ತಿದ್ದನಂತೆ.

ಅಂದಿನ ಗ್ರೀಸಿನ ಪರಿಸ್ಥಿತಿ ಹೇಗಿತ್ತೋ ದೇವರೇ ಬಲ್ಲ. ನಮಗಂತೂ ಅಂಥ ಪರಿಸ್ಥಿತಿ ಬರುವುದು ಬೇಡ. ನಮ್ಮಲ್ಲಿ ನಿಜವಾದ ಮಾನವರ ಸಂಖ್ಯೆ ಒಂದಕ್ಕೆ ಹತ್ತಾಗಿ ಹೆಚ್ಚಲಿ ಎಂಬುದೇ ನನ್ನಂಥವರ ಹಾರೈಕೆ.

III

ಧಗೆ

ಈ ವರ್ಷದಂಥ ಬಿಸಿಲಿನ ಬೇಸಗೆಯನ್ನು ನಾವೆಂದೂ ಕಂಡಿರಲಿಲ್ಲ ಎಂದು ನಾನು ನನ್ನ ಸ್ನೇಹಿತರು ಅನೇಕ ಸಲ ಅಂದುಕೊಂಡಿದ್ದೇವೆ. ಅದೇನು ಕೇವಲ ನಮ್ಮ ಕಲ್ಪನೆಯೋ, ನಿಜಕ್ಕೂ ಅದು ಹಾಗೆ ಆಗಿದೆಯೋ ದೇವರಿಗೇ ಗೊತ್ತು. ಹೋದ ವರ್ಷ ಅದರ ಹಿಂದಿನ ವರ್ಷ ಬಂದ ಬೇಸಗೆಗಳ ನೆನಪು ಇನ್ನೂ ಮಾಸಿಲ್ಲ. ಆಗಲೂ ಅಷ್ಟು ಬಿಸಿ ಧಗೆ ಎಂದು ನಿಟ್ಟುಸಿರು ಬಿಟ್ಟದ್ದುಂಟು. ಬೇಸಗೆ ಚಳಿಗಾಲ ಮಳೆಗಾಲಗಳು ಪ್ರತಿವರ್ಷ ಬರುತ್ತವೆ. ಹೋಗುತ್ತವೆ. ಅದು ಋತುಧರ್ಮ. ವರ್ಷ ವರ್ಷಕ್ಕೆ ಬೇಸಗೆಯ ಬಿಸಿಲತಾಪ ಹೆಚ್ಚಾಗುತ್ತಿದೆಯೋ. ಇಲ್ಲವೆ ಅದನ್ನು ತಾಳಿಕೊಳ್ಳುವ ಶಕ್ತಿ ನಮ್ಮಲ್ಲಿ ಕಡಿಮೆಯಾಗುತ್ತಿದೆಯೋ ತಿಳಿಯದು. ಬಹುಶಃ ಎರಡೂ ಇದ್ದಿರಬೇಕು. ನಿಜದ ಸಂಗತಿ ಎಂದರೆ ಈ ಹಿಂದಿನ ಎರಡು ವರ್ಷಗಳಲ್ಲಿ ಮಳೆ ಚೆನ್ನಾಗಿ ಆಗಿಲ್ಲ.

ಮಾನಸಗಂಗೋತ್ರಿಯ ಬಯಲು ಪ್ರದೇಶದಲ್ಲಿ ಸೊಂಟಮಟ್ಟ ಬೆಳೆದು ನಿಲ್ಲುತ್ತಿದ್ದ ಹುಲ್ಲನ್ನು ಕಂಡು ಮೂರು ವರ್ಷ ಆಯಿತು. ವರ್ಷೇ ವರ್ಷೇ ಅದನ್ನು ಹರಾಜುಹಾಕುವ ಪದ್ಧತಿ ಇದೆ. ಅದನ್ನು ಹರಾಜಿನಿಂದ ಜನ ಹೊರೆಗಟ್ಟಲೆ ಹುಲ್ಲನ್ನು ಕೊಯ್ದು ಒಯ್ಯುತ್ತಿದ್ದರು. ಕೆಲವು ದನಗಳಂತೂ ಕಾವಲುಗಾರರ ಕಣ್ಣು ತಪ್ಪಿಸಿ ಬಂದು ರಾತ್ರಿಯಲ್ಲಿ ಹುಲ್ಲು ಮೇಯುತ್ತಿದ್ದುವು. ಹೊರಗೆ ಎಲ್ಲಿ ಕಣ್ಣಾಡಿಸಿದರೂ ಹಸಿರು ಅಲೆ. ಕಣ್ಣಿಗೆ ತಂಪು. ಮೇಲೆ ನೀಲವಾದ ಆಕಾಶ. ಆಕಾಶದ ಶುಭ್ರನೀಲಿ ಹುಲ್ಲಿನ ಹಚ್ಚ ಹಸಿರು ಈ ಎರಡೂ ದೇವರು ನಮಗೆ ಕೊಟ್ಟಿರುವ ವರಪ್ರಸಾದ. ನಿರಂತರವಾಗಿ ಬೀಸುವ ತಂಗಾಳಿ ಬಳಲಿದ ದೇಹಕ್ಕೆ ಬೆಂದ ತಲೆಗೆ ತಗಲಿದರೆ ಅಮೃತಪ್ರಾಶನ ಮಾಡಿದಂತಾಗುತ್ತದೆ. ಪ್ರಾಗಿತಿಹಾಸ ವಿಭಾಗದ ಮುಂದುಗಡೆಯ ತಗ್ಗಿನಲ್ಲಿ ಒಂದು ಆಲದ ಮರವಿದೆ. ಬಹಳ ಹಳೆಯದು. ಅದರ ಕೆಳಗೆ ಪುಣ್ಯಾತ್ಮರು ಕಲ್ಲು ಬೆಂಚುಗಳನ್ನು ಹಾಕಿದ್ದಾರೆ. ನಡುಬೇಸಗೆಯ ಮಧ್ಯಾಹ್ನಗಳಲ್ಲಿ ಅಲ್ಲಿ ಹೋಗಿ ಕುಳಿತರೆ ಬೆಟ್ಟದ ತೊರೆಯಲ್ಲಿ ಮಿಂದಷ್ಟು ಹಿತವಾಗುತ್ತದೆ. ಆದರೆ ಈ ವರ್ಷದ ಬೇಸಗೆಯಲ್ಲಿ ಅಂಥ ಅನುಭವ ಒಂದು ದಿನವೂ ಆದಂತಿಲ್ಲ. ಬೆಳಗ್ಗೆ ಏಳು ಗಂಟೆಗಾಗಲೆ ನಿಗಿನಿಗಿ ಬಿಸಿಲು. ಹತ್ತು ಗಂಟೆಗಾಗಲೆ ನೆಲ ಸುಡುವುದಕ್ಕೆ ಪ್ರಾರಂಭ. ಕಾಗೆ ಗುಬ್ಬಿಗಳು ಕೂಡ ಪಪಾಯಿ ಮರದ ದಟ್ಟ ನೆರಳಿನ ಮಧ್ಯೆ ಕೂಗದೆ ಕೂತುಬಿಡುತ್ತವೆ. ಗಾಳಿ ಘನೀಭೂತವಾದಂತೆ ತೋರುತ್ತದೆ. ಅದು ಬೀಸಿದ್ದೇ ಕಾಣೆ. ದೂರದ ಬೇವಿನ ಮರದಲ್ಲಿ ಒಂದು ಎಲೆಯೂ ಅಲುಗಾಡುತ್ತಿಲ್ಲ. ಕೊಠಡಿಯ ಫ್ಯಾನು ನಿರಂತರ ತಿರುಗುತ್ತಿದೆ, ಬರಿಯ ಒರಳು ಕಲ್ಲಿನಲ್ಲಿ ಗುಂಡು ಆಡಿಸಿದಂತೆ. ತಿರುಗುತ್ತ ತಿರುಗುತ್ತ ಹೊರಗಿನ ಬಿಸಿಲ ಧಗೆಯನ್ನು ಒಳಗೆಲ್ಲ ಹರಡುತ್ತಿದೆ. ಕಿಟಕಿಯಿಂದ ಹೊರಗೆ ಕಣ್ಣು ಹಾಯಿಸುವಂತಿಲ್ಲ. ಝಳ ರಪ್ಪನೆ ಕಣ್ಣುಗಳನ್ನು ಬಡಿಯುತ್ತದೆ. ಬಯಲಿನಲ್ಲಿ ಬೆಳ್ಳಿಮುದ್ದೆಗಳನ್ನು ಇಟ್ಟಂತೆ ಕಾಣುತ್ತಿದ್ದ ಬೆಳ್ಳಕ್ಕಿಗಳು ಎಲ್ಲಿ ಹೋದುವು? ಗಂಡು ಹೆಣ್ಣುಗಳೊಂದಾಗಿ ಕಿಚಪಿಚ ಕೂಗಿ ಹಿಡಿದಾಡುತ್ತಿದ್ದ ಗೊರವಂಕಗಳೆಲ್ಲಿ? ಅಂಗಳದ ನಡುವಣ ತೊಟ್ಟಿಯಲ್ಲಿ ನೀರು ಬತ್ತಿಹೋಗಿದೆ. ಸಂಜೆ ನಾಲ್ಕಕ್ಕೆ ನೀರು ಕುಡಿಯಲು ಅಲ್ಲಿಗೆ ದಿನವೂ ಬರುವ ಪಾರಿವಾಳಗಳು ದಂಡೆಯಲ್ಲಿ ಕೂತು ಇಣಿಕಿ ನೋಡಿ ನೀರಿಲ್ಲದ್ದನ್ನು ಕಂಡು ಹಪ್ಪನೆ ಹಾರಿಹೋಗುತ್ತವೆ. ನಲ್ಲಿಯಲ್ಲಿ ನೀರು ಬಂದರೆ ಬಂತು. ಇಲ್ಲದಿದ್ದರೆ ಇಲ್ಲ. ಬಂದಾಗ ನೀರು ಬಿಸಿಯಾಗಿ ಮರಳುತ್ತಿರುತ್ತದೆ. ಹೂಜಿಯ ನೀರು ತಣ್ಣಗಿಲ್ಲ. ಬಾಯಾರಿಕೆ ಆಗಿ ನಾಲಗೆ ಒಣಗುತ್ತದೆ. ಎಷ್ಟು ನೀರು ಕುಡಿದರೂ ದಾಹ ಮಾತ್ರ ಅಡಗುವುದಿಲ್ಲ. ಹೊಟ್ಟೆಗೆ ಬೆಂಕಿ ಹಾಕಿದಂತಾಗುತ್ತಿದೆ. ಐಸ್‌ಕ್ರೀಮು ಐಸ್‌ಕೋಲ್ಡ್ ಪಾನೀಯಗಳ ಅಂಗಡಿಗಳಲ್ಲಿ ಜನ ಕಿಕ್ಕಿರಿದು ತುಂಬಿದ್ದಾರೆ. ಹಗಲಿಗಿಂತ ರಾತ್ರಿ ಸೆಕೆ ಹೆಚ್ಚು. ಬೆವರು ಧಾರಾಕಾರವಾಗಿ ಇಳಿಯುತ್ತಿದೆ. ಕೈಗೆ ಕಟ್ಟಿದ ಗಡಿಯಾರ ಭಾರವಾಗುತ್ತಿದೆ. ಅಷ್ಟೇಕೆ ಜನಿವಾರ ಕೂಡ ಬೇಡವೆನಿಸುತ್ತಿದೆ. ತಣ್ಣೀರ ಸ್ನಾನ ಮಾಡೋಣವೆ? ಒದ್ದೆ ಬಟ್ಟೆಯಲ್ಲೇ ಇರೋಣವೆ? ಹವಾ ನಿಯಂತ್ರಿತ ಕೊಠಡಿಗಳಲ್ಲೇ ಕೂಡೋಣವೆ? ಅನ್ನ ನಾಲಗೆಗೆ ರುಚಿಸುತ್ತಿಲ್ಲ. ಯಾವ ಶೈತ್ಯೋಪಚಾರವೂ ಕೇವಲ ಕ್ಷಣಿಕವೆನಿಸುತ್ತಿದೆ. ಆ ಕ್ಷಣದಲ್ಲಿ ಅದರಿಂದ ಸ್ವಲ್ಪ ತಂಪೆನಿಸಿದರೂ ಮರುಕ್ಷಣದಲ್ಲಿ ಧಗೆ ಇಮ್ಮಡಿಸಿದಂತೆ

ಭಾಸವಾಗುತ್ತದೆ. ಯಾವಾಗಲೋ ಒಮ್ಮೆ ಆಕಾಶದಲ್ಲಿ ಮೋಡಗಳು ಕಾಣಿಸಿಕೊಳ್ಳುತ್ತವೆ. ಅವುಗಳಲ್ಲಿ ನೀರಿನ ಅಂಶ ಎಷ್ಟಿದೆಯೋ ಪರಮಾತ್ಮನಿಗೇ ಗೊತ್ತು. ನಸುಗೆಂಪಾಗಿ ನಿಗಿನಿಗಿ ಕಾಣುತ್ತಿರುವ ಅವನ್ನು ನೋಡಿದರೆ ಕಾಯಿಸಿದ ತಮಟೆಗಳಂತೆ ಕಾಣುತ್ತವೆ. ಆಗಾಗ ತಮಟೆ ಬಡಿದಂತೆ ಗುಡುಗುವುದೂ ಉಂಟು. ಮೋಡಗಟ್ಟಿದಾಗ ಕೆಂಡದ ಮೇಲೆ ಬೂದಿ ಕೂತಂತಾಗಿ ಬಿಸಿಲ ತೀಕ್ಷ್ಣತೆ ಸ್ವಲ್ಪ ಕಡಿಮೆಯಾದಂತೆ ಭಾಸವಾಗುತ್ತದೆ. ಇನ್ನೇನು ಮಳೆ ಬರುತ್ತದೆ ಎಂದು ಭ್ರಮಿಸಿದ ದಡ್ಡ ಕಾಗೆಗಳು ಕಾವ್ ಕಾವ್ ಎಂದು ಗೂಡಿನ ಕಡೆ ಓಡುತ್ತವೆ. ತಾವು ತುಂಬ ದೂರಾಲೋಚನೆ ಉಳ್ಳವರೆಂದುಕೊಂಡ ಮುದುಕರು ಕೆಲವರು ಹಾಗೂ ಸೈ ಹೀಗೂ ಸೈ ಎಂದು ಕೊಂಕಳಿಗೆ ಛತ್ರಿ ತಗಲಿಸಿಕೊಂಡು ಹೊರಡುತ್ತಾರೆ. ಯಾವುದೋ ಕಲ್ಲು ಪೊಟರೆಯ ಕಗ್ಗತ್ತಲಲ್ಲಿ ಅಡಗಿ ಕೂತ ಕಪ್ಪೆಗಳು ಮಳೆ ಬಂದೇ ಬರುತ್ತದೆಂಬ ಖಾತರಿಯಿಂದ ವಟಗುಟ್ಟುತ್ತವೆ. ಬೇಸಗೆಯ ಧಗೆ ಇನ್ನೂ ಹೆಚ್ಚುತ್ತದೆ. ಅದನ್ನು ನಿವಾರಿಸಿಕೊಳ್ಳಲು ನಾನು ನೀವು ವೈಯಕ್ತಿಕವಾಗಿ ಏನೂ ಮಾಡುವಂತಿಲ್ಲ. ಯಾವ ಬೀಸಣಿಗೆ ಯಾವ ತಂಪು ಪಾನೀಯ ಯಾವ ಶೀತಕ ಅಥವಾ ಹವಾ ನಿಯಂತ್ರಣ ನಮ್ಮ ದಾಹವನ್ನು ಶಮನ ಮಾಡೀತು? ದಾಹ ಶಮನವಾಗಬೇಕಾದರೆ ಮಳೆ ಬರಬೇಕು. ಧಾರಾಕಾರವಾಗಿ ಮಳೆ ಹುಯ್ಯಬೇಕು. ಹಾಗಾದಾಗ ಇಡೀ ವಾತಾವರಣ ಐದು ನಿಮಿಷದಲ್ಲಿ ತಣ್ಣಗಾಗುತ್ತದೆ. ನೆಲ ನೆಂದು ತಂಪಾಗುತ್ತದೆ. ಗಾಳಿ ಶೀತಲವಾಗುತ್ತದೆ. ಇಡೀ ಲೋಕ ಸಹನೀಯವಾಗುತ್ತದೆ. ಅಷ್ಟೆ.

ಅದಕ್ಕೇ ನಮ್ಮವರು ಹೇಳಿದ್ದು. ವ್ಯಕ್ತಿ ತಾನೊಬ್ಬನೇ ಸುಖವಾಗಿರುತ್ತೇನೆಂದು ಬಯಸುವುದು ಸರಿಯಲ್ಲ. ಅದು ಆಗದ ಹೋಗದ ಕೆಲಸ. ಸರ್ವೇ ಜನಾಃ ಸುಖಿನೋ ಭವಂತು. ಇದು ವಿವೇಕ. ಲೋಕ ಸುಖವಾಗಿದ್ದರೆ ನಮಗೆ ಸುಖ.

IV

ಕಾಡಾನೆ

ಕಾಡಿನಲ್ಲಿ ತಾನೇ ತಾನಾಗಿ ಸ್ವೇಚ್ಛೆಯಿಂದ ವಾಸ ಮಾಡುವ ಆನೆಗಳನ್ನು ಹಿಡಿದು ಪಳಗಿಸುವುದಾದರೆ ಮಾನವನಿಗೆ ಬಹಳ ಹೆಮ್ಮೆಯ ಸಾಹಸದ ಕೆಲಸ. ಮೊದಮೊದಲು ಆನೆ ಹಿಡಿಯಲು ಅವನು ಮಾಡುತ್ತಿದ್ದುದು ಇಷ್ಟೆ. ಆನೆಗಿಂತ ದೊಡ್ಡದಾದ ಗುಂಡಿ ತೆಗೆಯುವುದು. ಅದರ ಮೇಲೆ ತೆಳುವಾಗಿ ಸೊಪ್ಪು ಸದೆ ಹರಡುವುದು. ಅತ್ತ ಸುಳಿದ ಆನೆ ಎಚ್ಚರ ತಪ್ಪಿ ಗುಂಡಿಗೆ ಬಿದ್ದರೆ ಅದನ್ನು ನಿಧಾನವಾಗಿ ಪಳಗಿಸಿಕೊಳ್ಳುವುದು. ಅನೇಕ ವೇಳೆ ಗುಂಡಿಗೆ ಬಿದ್ದ ಆನೆಗೆ ಕಾಲು ಊನವಾಗುತ್ತಿತ್ತು. ಮೈಗೆ ಜಖಂ ಆಗುತ್ತಿತ್ತು. ದಂತ ಮುರಿದು ಹೋಗುತ್ತಿತ್ತು. ಹಾಗಾದಾಗ ಅಂಥ ಆನೆಯನ್ನು ಮನುಷ್ಯ ಕೊಂದು ಹಾಕಿ ಬಿಡುತ್ತಿದ್ದ. ಬದುಕಿದ್ದು ಗಟ್ಟಿಮುಟ್ಟಾಗಿ ಉಳಿದು ಬಂದರೆ ಒಂದು ರೀತಿಯ ಲಾಭ. ಊನವಾದರೆ ಮತ್ತೊಂದು ರೀತಿಯ ಲಾಭ. ತಿನ್ನಲು ಮಾಂಸ. ವ್ಯಾಪಾರಕ್ಕೆ ದಂತ. ಚರ್ಮ. ಹಿಂದೆ ಐರೋಪ್ಯರು ಆಫ್ರಿಕನರನ್ನು ನಡೆಸಿಕೊಂಡದ್ದೂ ಹೀಗೆಯೆ. ಅನಿರೀಕ್ಷಿತವಾಗಿ ಅವರ ಮೇಲೆ ಬಿದ್ದು ಒದೆ ಕೊಟ್ಟು ನೂರಾರು ಜನರಿಗೆ ಕೈಗೆ ಕೋಳ ಹಾಕಿ ಹಡಗಿನಲ್ಲಿ ದನಕ್ಕಿಂತ ಕಡೆಯಾಗಿ ತುಂಬಿಕೊಂಡು ಸ್ವದೇಶಕ್ಕೆ ಹೋಗುತ್ತಿದ್ದರು. ದಾರಿಯಲ್ಲಿ ಸತ್ತವನು ಸತ್ತ. ರೋಗ ಹತ್ತಿ ನರಳಿದವನು ನರಳಿದ. ಗಂಡಸೆನ್ನದೆ ಹೆಂಗಸೆನ್ನದೆ ಎಲ್ಲರನ್ನೂ ಅವರು ಹೀನಾಯವಾಗಿ ಕಂಡರು. ಹೀಗೆ ಹಿಡಿದೊಯ್ದ ಜನರನ್ನು ಪೇಟೆ ಬೀದಿಗಳಲ್ಲಿ ಹರಾಜು ಹಾಕಿದರು. ಹರಾಜಿನಲ್ಲಿ ಇವರನ್ನು ಕೊಂಡ ಮಾಲೀಕರು ಇವರನ್ನೆಲ್ಲ ತಮ್ಮ ತೋಟದಲ್ಲಿನ ಗುಲಾಮರಾಗಿ ನಡೆಸಿಕೊಂಡರು.

ಪ್ರಾಣಿಪ್ರಪಂಚದಲ್ಲಿ ಮನುಷ್ಯ ಪ್ರಪಂಚದಲ್ಲಿ ಸ್ವಾತಂತ್ರ್ಯ ಹೋಗಿ ಗುಲಾಮಗಿರಿ ಬಂದದ್ದು ಹೀಗೆ. ಸಿಂಹವನ್ನು ಬಿಟ್ಟರೆ ಅರಣ್ಯ ಸಾಮ್ರಾಜ್ಯಕ್ಕೆ ರಾಜನಾಗುವ ಯೋಗ್ಯತೆ ಇರುವುದು ಆನೆಗೆ ಮಾತ್ರ. ಅದರ ಆಕಾರ ಬೃಹತ್ತಾದದ್ದು. ಮಾಟ ಒಪ್ಪವಾದದ್ದು. ನಡೆ ಗಂಭೀರವಾದದ್ದು. ಎಷ್ಟೋ ವೇಳೆ ಆನೆಗೆ ಸಿಂಹ ಹೆದರಿ ಹಿಂಜರಿಯುವುದುಂಟು. ಬಲಶಾಲಿ ಮಾತ್ರ ಸ್ವಾತಂತ್ರ್ಯಕ್ಕೆ ಅರ್ಹನೆಂಬುದಕ್ಕೆ ಆನೆ ಒಳ್ಳೆಯ ನಿದರ್ಶನ. ಊರ ಆನೆಗಳನ್ನು ಮಾತ್ರ ನೋಡಿದ ನಮಗೆ ಕಾಡಾನೆ ಹೇಗಿರುವುದೆಂ

ಕಲ್ಪನೆ ಸರಿಯಾಗಿ ಬರುವುದಿಲ್ಲ. ಆ ಗಡಸು. ಆ ರೂಕ್ಷತೆ. ಆ ಚರಬಿ. ಆ ಅಹಂಕಾರ! ಆನೆ ಹೋದದ್ದೇ ದಾರಿ. ಅದನ್ನು ತಡೆಯುವ ಶಕ್ತಿ ಯಾರಿಗಿದೆ. ಅದಕ್ಕೆ ಇತರ ಪಶುಪ್ರಾಣಿಗಳಾಗಲಿ ಗಿಡಮರಗಳಾಗಲಿ ಯಾವ ಲೆಕ್ಕ. ಅಂಥ ಪ್ರಾಣಿಯ ಸ್ವಾತಂತ್ರ್ಯಹರಣಕ್ಕೆ ಆಧುನಿಕ ಮಾನವ ಕಂಡುಕೊಂಡಿರುವ ಹೊಸ ಉಪಾಯವೇ ಖೆಡ್ಡ. ಖೆಡ್ಡ ಕಾರ್ಯಕ್ರಮ ನಡೆಸಲು ಲಕ್ಷಾಂತರ ರೂಪಾಯಿ ವ್ಯಯವಾಗುತ್ತದೆ. ಸಾವಿರಾರು ಜನ ಕೆಲಸ ಮಾಡಬೇಕಾಗುತ್ತದೆ. ಅವರ ಸನ್ನಾಹಕ್ಕೇ ಆರು ತಿಂಗಳು ಬೇಕಾಗುತ್ತದೆ. ಖೆಡ್ಡ ನೋಡಲು ಸಾವಿರಾರು ಜನ ಸೇರುತ್ತಾರೆ. ಅದನ್ನು ಬಣ್ಣ ಬಣ್ಣಗಳಲ್ಲಿ ಚಿತ್ರೀಕರಿಸಿಕೊಳ್ಳುವುದೂ ಉಂಟು. ಹಿಂದೆ ರಾಜ ಮಹಾರಾಜರುಗಳಿಗಂತೂ ಇದೊಂದು ವಿನೋದವಾಗಿತ್ತು.

ಸೋಲಿಗರು ತಂಡತಂಡವಾಗಿ ನಾಲ್ಕೂ ಕಡೆಗಳಿಂದ ಸುತ್ತುಗಟ್ಟಿ ಕಾಡಾನೆಗಳನ್ನು ಖೆಡ್ಡ ಇರುವ ಸಮೀಪಕ್ಕೆ ತರುತ್ತಾರೆ. ಆನೆ ಎಷ್ಟೇ ಧೈರ್ಯಶಾಲಿ ಪ್ರಾಣಿಯಾದರೂ ಕಾಡುಜನರ ಕೂಗು ಗದ್ದಲ. ಕೈಯ ಪಂಜು. ತಮಟೆ ತುತ್ತೂರಿಗಳ ಶಬ್ದ—ಇವಕ್ಕೆ ಅಂಜುತ್ತವೆ. ಅಂಜಿದ ಆನೆಗಳು ಏನನ್ನೂ ಯೋಚನೆ ಮಾಡದೆ ಕಾಡಿನ ಅಂತರಾಳಕ್ಕೆ ನುಗ್ಗುತ್ತವೆ. ಸೋಲಿಗರಾದರೂ ನಿಧಾನವಾಗಿ ಅವನ್ನು ಹಿಂಬಾಲಿಸುತ್ತಾರೆ. ಅನಿವಾರ್ಯವೆನಿಸಿದಾಗ ಆನೆಗಳು ನೀರಿಗಿಳಿದು ಮುಂದೆ ಮುಂದೆ ಸಾಗುತ್ತವೆ. ಹಾಗೆ ಸಾಗುತ್ತಾ ಕೊನೆಗೆ ತಮಗೇ ಅರಿವಿಲ್ಲದಂತೆ ಖೆಡ್ಡ ಪ್ರವೇಶ ಮಾಡುತ್ತವೆ. ಕೂಡಲೆ ಖೆಡ್ಡದ ಬಾಗಿಲು ಮುಚ್ಚಿಬಿಡುತ್ತದೆ. ಆಗ ಆನೆಗಳಿಗೆ ಗೊತ್ತಾಗುತ್ತದೆ ತಮ್ಮ ಜನ್ಮಸಿದ್ಧವಾದ ಸ್ವಾತಂತ್ರ್ಯದ ಕೊಲೆ ಆಯಿತೆಂದು. ಅತ್ತ ಇತ್ತ ಅಲುಗಾಡಲು ಸ್ಥಳವಿಲ್ಲ. ಸುತ್ತ ದಪ್ಪ ಕಂಬದ ದೊಡ್ಡ ಗೋಡೆ. ದ್ರೋಣ ರಚಿಸಿದ ಕೋಟೆಯ ಒಳಗಡೆ ಅಭಿಮನ್ಯು ಹೊಕ್ಕಂತಾಗುತ್ತದೆ. ಒಳಗೆ ಹೋದುದು ಆಯಿತು. ಹೊರಗೆ ಬರಲು ಆಗದು. ಆನೆಗಳು ರೋಷದಿಂದ ಘೀಂಕಾರ ಮಾಡುತ್ತವೆ. ಕುಂಭಸ್ಥಳದಿಂದ ಮರದ ಗೋಡೆಯನ್ನು ತಳ್ಳುತ್ತವೆ. ಕಾಲಿನಿಂದ ನೆಲವನ್ನು ಅಪ್ಪಳಿಸುತ್ತವೆ. ಮೋಜು ನೋಡುತ್ತ ನಿಂತಿರುವ ಶಿಷ್ಟವರ್ಗದವರನ್ನು ಇತರ ಪ್ರೇಕ್ಷಕರನ್ನು ಕಣ್ಣಿನಿಂದಲೇ ನುಂಗುವಂತೆ ನೋಡುತ್ತವೆ. ರೋದಿಸುತ್ತವೆ. ಕೆಲವು ಆನೆಗಳಂತೂ ಸತ್ಯಾಗ್ರಹ ಹೂಡಿ ಅನ್ನ ನೀರು ಮುಟ್ಟದೆ ಸತ್ತುಹೋಗುವುದೂ ಉಂಟು. ಉಳಿದ ಆನೆಗಳೂ ಅದೇ ರೀತಿ ಮಾಡುತ್ತವೆ. ಆದರೆ ಯಶಸ್ವಿಯಾಗದೆ ಸೋಲುತ್ತವೆ. ಮನುಷ್ಯ ಈ ಕಾಡಾನೆಗಳನ್ನು ಪಳಗಿದ ಆನೆಗಳಿಂದ ಹದಕ್ಕೆ ತರುತ್ತಾನೆ. ಪಳಗಿಸುತ್ತಾನೆ. ಅದೇ ವಿಚಿತ್ರ. ಪಳಗಿದ ಆನೆಗಳು ಕಾಡಾನೆಗಳ ಮೈಗೆ ಮೈ ತಗುಲಿಸಿ ನಿಲ್ಲುತ್ತವೆ. ತಮ್ಮ ಸೊಂಡಿಲಿನಿಂದ ಅವುಗಳ ದೇಹವನ್ನು ನೇವರಿಸುತ್ತವೆ. ಹುಲ್ಲು ಕಬ್ಬು ಎತ್ತಿ ಬಾಯಿಗಿಡುತ್ತವೆ. ಏನೂ ಆಗಿಲ್ಲವೇನೋ ಎಲ್ಲ ಸರಿಯಾಗಿಯೇ ಇದೆಯೇನೋ ಎಂಬ ಭ್ರಮೆ ಹುಟ್ಟಿಸುತ್ತವೆ. ಸಿಬ್ಬಂದಿಯವರು ಸಮಯ ನೋಡಿ ಕಾಡಾನೆಗಳ ಕಾಲಿಗೆ ಮಿಣಿ ಬಿಗಿಯುತ್ತಾರೆ. ಅವೋ ಹಸಿವು ತೃಷ್ಣೆಯಿಂದ ಕಂಗಾಲಾಗಿರುತ್ತವೆ. ಭಯದಿಂದ ಅವುಗಳ ಬುದ್ಧಿ ಮಂಕಾಗಿರುತ್ತದೆ. ಹಸಿವು ತೃಷೆ ಯಾರ ಮಾತು ಕೇಳುತ್ತವೆ. ಆಪತ್ಕಾಲದಲ್ಲಿ ನಾಯಿ ಮಾಂಸ ತಿಂದವರಿದ್ದಾರೆ. ನಿಧಾನವಾಗಿ ಆನೆಗಳು ಹುಲ್ಲು ತಿಂದು ನೀರು ಕುಡಿಯುತ್ತವೆ. ತಮ್ಮ ಹೆಗಲನ್ನೇರಿ ಕೂಡುವ ಮಾವಟಿಗನನ್ನು ಅವನ ಕಾಲ ಒದೆತವನ್ನು ಅವನ ಅಂಕುಶದ ಪೆಟ್ಟನ್ನು ಸಹಿಸಲು ಕಲಿಯುತ್ತವೆ. ಅದೊಂದು ಹೃದಯ ವಿದ್ರಾವಕ ಸನ್ನಿವೇಶ. ಎಂಥವರ ಕಣ್ಣಲ್ಲೂ ನೀರು ತರಿಸುವಂಥದು.

ನನಗೆ ಅನಿಸುತ್ತದೆ–

ಕಾಡಾನೆಯ ಪರಮ ಶತ್ರು ಸಾಕಿದ ಆನೆಯೇ ಎಂದು!

ನಿಜ. ಸ್ವತಂತ್ರ ಭಾರತವನ್ನು ಬ್ರಿಟಿಷರು ಖೆಡ್ಡಕ್ಕೆ ಸೇರಿಸಿದ ಮೇಲೆ ಅವರಲ್ಲಿ ಸಿಕ್ಕಿಬಿದ್ದ ವೀರಾಧಿವೀರ ಆನೆಗಳನ್ನು ಪಳಗಿಸಿ ಪಾರತಂತ್ರ್ಯಕ್ಕೆ ಒಗ್ಗಿಸಿದ್ದು ಸಾಕಿದ ಆನೆಗಳೇ. ಅವರ ಸಹಾಯವಿಲ್ಲದಿದ್ದರೆ ಪರಕೀಯರು ನಮ್ಮನ್ನು ನೂರ ಐವತ್ತು ವರ್ಷ ಆಳುತ್ತಿದ್ದರೆ?

V

ಪರಿಸರ

ಪರಿಸರ ಎಂದ ಕೂಡಲೆ ನಮ್ಮ ಮನಸ್ಸಿಗೆ ಬರುವುದು ನಮ್ಮ ಸುತ್ತಲಿನ ಸನ್ನಿವೇಶ. ಅಂದರೆ ನಾವಿರುವ ಮನೆ, ನೆರೆಹೊರೆ, ಹಿಂದು ಮುಂದಿನ ರಸ್ತೆಗಳು, ನೀರು, ಗಾಳಿ, ಬೆಳಕು, ಗಿಡಮರಗಳು. ಮುಂತಾದುವೆಲ್ಲ ಸೇರಿ ಸನ್ನಿವೇಶ ಏರ್ಪಡುತ್ತದೆ. ಮನೆಮನೆಗೆ ಹೇಗೋ ಊರಿಗೆ, ನಾಡಿಗೆ ಹಾಗೆ. ಮನುಷ್ಯನ ಸುಖ ಜೀವನಕ್ಕೆ ಪರಿಸರದ ಸ್ವಚ್ಛತೆ ಅಗತ್ಯವಾದ ಅಂಶವಾದುದರಿಂದ ವಿಜ್ಞಾನಿಗಳು ಈಚೆಗೆ ಪರಿಸರ ಮಾಲಿನ್ಯದ ಬಗ್ಗೆ ಹೆಚ್ಚಿನ ಕಾಳಜಿ ತೋರಿಸತೊಡಗಿದ್ದಾರೆ. ಶುದ್ಧವಾದ ಕುಡಿಯುವ ನೀರು ಸಿಗುತ್ತಿಲ್ಲ. ಓಸೋನ್ ಹಾಗೂ ಆಮ್ಲಜನಕ ಭರಿತವಾದ ಶುದ್ಧವಾದ ಗಾಳಿಗೆ ಅಭಾವ ಉಂಟಾಗುತ್ತಿದೆ. ದೊಡ್ಡ ಗಿರಣಿಗಳ ಹೊಗೆ, ರಸ್ತೆಯ ದೂಳು ಮೊದಲಾದವುಗಳಿಂದ ವಾತಾವರಣ ಕೆಡುತ್ತಿದೆ. ಗಿಡ ಮರಗಳ ಅಭಾವ ಇದಕ್ಕೆ ಪುಷ್ಟಿ ಕೊಡುತ್ತಿದೆ. ಹೀಗೆ ಪರಿಸ್ಥಿತಿ ಮುಂದುವರಿದರೆ ಮನುಷ್ಯ ಆರೋಗ್ಯವಾಗಿ ಬದುಕಲಾರದಂಥ ಪರಿಸ್ಥಿತಿ ಒದಗಬಹುದೆಂದು ವಿಜ್ಞಾನಿಗಳ ಆತಂಕ.

ಈ ಎಲ್ಲ ಮಾತು ಬಾಹ್ಯ ಪರಿಸರ ಮತ್ತು ಅದರ ಮಾಲಿನ್ಯವನ್ನು ಕುರಿತದ್ದು. ಇದರ ಜೊತೆಗೆ ಆಂತರಿಕ ಪರಿಸರದ ಮಾಲಿನ್ಯವೂ ಸೇರುತ್ತಿದೆ ಎಂಬುದನ್ನು ನಾವೀಗ ಇನ್ನೂ ಹೆಚ್ಚು ಕಳಕಳಿಯಿಂದ ಗಮನಿಸಬೇಕಾಗಿದೆ. ಮನುಷ್ಯನ ಆರೋಗ್ಯಕ್ಕೆ ಗಾಳಿ ನೀರು ಬೆಳಕು ಆಹಾರ ಹೇಗೆ ಅಗತ್ಯವೋ ಹಾಗೆ ಮಾನಸಿಕ ಸ್ವಾಸ್ಥ್ಯವೂ ಅಗತ್ಯ. ಮನಸ್ಸಿಗೆ ನೆಮ್ಮದಿ ಇಲ್ಲದ ಮೇಲೆ ಏನಿದ್ದರೂ ಪ್ರಯೋಜನವಿಲ್ಲ. ಅಕ್ಕಿ, ಗೋದಿ, ಸಕ್ಕರೆ, ಸೀಮೆಎಣ್ಣೆ, ಒಳ್ಳೆಣ್ಣೆ ಮೊದಲಾದ ಅಗತ್ಯ ವಸ್ತುಗಳು ಸಿಕ್ಕದಂತಾದಾಗ ಮನುಷ್ಯನ ಮನಸ್ಸು ಅದನ್ನೇ ಕುರಿತು ಚಿಂತಿಸತೊಡಗುತ್ತದೆ. ಅದರ ಸಂಪಾದನೆಯಲ್ಲೇ ಜೀವನವೆಲ್ಲ ವ್ಯಯವಾಗಿ ಬಿಡುತ್ತದೆ. ನಿದ್ದೆ ಬರುವುದಿಲ್ಲ. ಹಾಗೆಯೆ, ವರ್ಷೇ ವರ್ಷೇ ಪದಾರ್ಥಗಳ ಬೆಲೆ ಏರತೊಡಗಿ ಬರುವ ಸಂಬಳದಲ್ಲಿ ಸಂಸಾರ ಸಾಗಿಸುವುದು ಕಷ್ಟವಾದಾಗ ಜಮಾ ಖರ್ಚನ್ನು ಸರಿದೂಗಿಸುವಲ್ಲೇ ನಮ್ಮ ಜಾಣತನವೆಲ್ಲ ವ್ಯಯವಾಗಿಬಿಡುತ್ತವೆ. ಚಿತ್ತಸ್ವಾಸ್ಥ್ಯ ಕೆಡುತ್ತದೆ. ಸಂಸಾರ ದೊಡ್ಡದಾಗಿದ್ದು ಮಕ್ಕಳು ಮರಿಗಳ ವಿದ್ಯಾಭ್ಯಾಸ, ಮದುವೆ ಆಗಬೇಕಾಗಿದ್ದರಂತೂ ಮನಸ್ಸಿನ ಪರಿಸ್ಥಿತಿ ಬಿಗಡಾಯಿಸಿ ಕೊಳ್ಳುತ್ತದೆ. ಹಣದ ಅಭಾವ ಒಂದು ಕಡೆಯಾದರೆ ಸಾಮಾಜಿಕ ಧಾರ್ಮಿಕ ಸಂಪ್ರದಾಯಶೀಲತೆ ಇನ್ನೊಂದು ಕಡೆ ಒಟ್ಟಾಗಿ ನಮ್ಮನ್ನು ಕೆಣಕುತ್ತವೆ. ರಿಜಿಸ್ಟರ್ ಮದುವೆಯನ್ನೋ, ಅಂತರ ಜಾತೀಯ ವಿವಾಹವನ್ನೋ ಮನಸ್ಸು ಒಪ್ಪುವುದಿಲ್ಲ. ವ್ಯಕ್ತಿ ಸ್ವಾತಂತ್ರ್ಯವಿದ್ದರೂ ಸಮಾಜದ ಹೆದರಿಕೆ ಒಂದು ಇದೆಯಲ್ಲ. ಸಾಲದಕ್ಕೆ ಅಗತ್ಯವಿದ್ದೋ ಇಲ್ಲದೆಯೋ ಒದಗಿ ಬರುವ ಇತರ ಬದಲಾವಣೆಗಳು ಬೇರೆ. ದೇವರ ಧರ್ಮದ ಬಗ್ಗೆ ನಮಗಿರುವ ಕಲ್ಪನೆಗಳು ಬಹಳ ಮಟ್ಟಿನ ಮಾನಸಿಕ ಪರಿಸರ ಮಾಲಿನ್ಯಕ್ಕೆ ಕಾರಣವಾಗಿವೆ. ಧರ್ಮದಿಂದ ನಾವು ಕೆಟ್ಟಷ್ಟು ಅಧರ್ಮದಿಂದ ಕೆಟ್ಟಿಲ್ಲವೆಂದು ಕಾಣುತ್ತದೆ. ಮತಧರ್ಮದ ಅಮಲು ಮದ್ಯದ ಅಮಲಿಗಿಂತ ಕಟುವಾದ್ದು ಎನ್ನುತ್ತಾರೆ. ಇಷ್ಟೊಂದು ಮತಸುಧಾರಣೆಗಳಾಗಿದ್ದರೂ ವೈಜ್ಞಾನಿಕ ಮನೋಧರ್ಮ ಬೆಳೆದಿದ್ದರೂ ಮತ ಜಾತಿ ಪಂಥ ಪಂಗಡಗಳ ಅಲ್ಪ ಬುದ್ಧಿ ನಮ್ಮನ್ನು ಇನ್ನೂ ಬಿಟ್ಟಿಲ್ಲ.

ಇನ್ನು ಪತ್ರಿಕೆಗಳಲ್ಲಿ ದಿನ ನಿತ್ಯ ಬರುವ ಸುದ್ದಿ ಸಮಾಚಾರಗಳು ಮನಸ್ಸನ್ನು ಹೃದಯವನ್ನು ಉದ್ರೇಕಿಸುವಂತಿರುತ್ತವೆ. ಕಲಕುವಂತಿರುತ್ತವೆ. ಉದಾಹರಣೆಗೆ ಈಚೆಗೆ ಲೈಂಗಿಕ ವಿಷಯಗಳ ಬಗ್ಗೆ, ವಿಕೃತ ಕಾಮದ ಬಗ್ಗೆ, ಅತ್ಯಾಚಾರದ ಬಗ್ಗೆ ಪ್ರಕಟವಾಗುತ್ತಿರುವ ಲೇಖನಗಳೇ ಇದಕ್ಕೊಂದು ನಿದರ್ಶನ. ಲೈಂಗಿಕ ವಿಷಯಗಳ ಬಗ್ಗೆ ನಮ್ಮ ಧೋರಣೆ ಹೇಗಿರಬೇಕೆಂದರೆ–ಪ್ರಣಯ ಶಕ್ತಿ ಎನ್ನುವುದು ಪ್ರಾಯದ ಕುದುರೆಯಂತೆ; ಅದಕ್ಕೆ ಲಗಾಮು ಹಾಕಿ ಯುಕ್ತವಾಗಿ ನಡಸುವುದನ್ನು ಕಲಿಯಬೇಕು. ಅದು ಎಂದಿಗೂ ಹೊರಲಾರದ ಹೇರು ಹೊತ್ತ ಮುದಿಗುದುರೆಯಾಗಬಾರದು. ಅನುಚಿತ ಪ್ರಚೋದನೆಗಳಿಂದ ಈ ಅಪಾಯ ಉಂಟಾಗುವ ಸಂಭವವಿದೆ. ಇವೆಲ್ಲಕ್ಕಿಂತ ಹೆಚ್ಚಾಗಿ, ರಾಜಕೀಯಕ್ಕೆ ಹೆಚ್ಚಿನ ಪ್ರಾಶಸ್ತ್ಯ ಬಂದಿರುವುದೂ ಮನಸ್ಸಿನ ಅಸ್ವಸ್ಥೆಗೆ ಕಾರಣವಾಗಿದೆ. ಪಕ್ಷ ಪಂಗಡಗಳ ವಾದವಿವಾದಗಳಿಂದ ಮನಸ್ಸು ಕಲುಷಿತಗೊಳ್ಳುತ್ತದೆ. ರಾಜಕೀಯ ಎನ್ನುವುದು ಮುತ್ತಿನ ಸರದಲ್ಲಿನ ದಾರದಂತಿರಬೇಕು.

ಅದು ಕಣ್ಣಿಗೆ ಕಾಣಬಾರದು. ಆದರೆ ಮುತ್ತುಗಳನ್ನು ದಾರ ಹೇಗೆ ಒಂದಾಗಿ ಹಿಡಿದಿರುತ್ತದೊ ಹಾಗೆ ಜನತೆಯನ್ನು ಒಂದುಗೂಡಿಸಬೇಕು.

ನನ್ನ ಅಭಿಪ್ರಾಯ ಇಷ್ಟೆ:

ಬಾಹ್ಯ ಪರಿಸರಕ್ಕಿಂತ ಆಂತರಿಕ ಪರಿಸರ ಹೆಚ್ಚು ಮುಖ್ಯ. ಅದು ಮಲಿನವಾಗಬಾರದು. ಅದರಿಂದ ಇನ್ನೂ ಹೆಚ್ಚಿನ ಅಪಾಯ.

VI

ಚಿನ್ನ

ಹೊಟ್ಟೆಗೆ ಹಿಟ್ಟು ಕೇಳೋದು, ಉಡಲು ಬಟ್ಟೆ ಕೇಳೋದು ಅಗತ್ಯದ ಬಯಕೆಗಳಾದರೆ ಚಿನ್ನ ಬೇಕು ಎನ್ನುವುದು ಅತಿ ಆಸೆಯೆನಿಸುತ್ತದೆ. ಆಶ್ಚರ್ಯವೆಂದರೆ ಉಡಲು ಬಟ್ಟೆ ಮಾಡುವುದನ್ನು ಇನ್ನೂ ಕಲಿಯದೆ ಬತ್ತಲೆ ತಿರುಗುತ್ತಿದ್ದ ಪ್ರಾಚೀನ ಮಾನವ ಕೂಡ ನದೀ ತೀರಗಳಲ್ಲಿನ ಮರಳ ರಾಶಿಗಳಲ್ಲಿ ಕೊಚ್ಚಿ ಬರುತ್ತಿದ್ದ ಚಿನ್ನದ ಹರಳುಗಳನ್ನು ಸರವಾಗಿ ಮಾಡಿಕೊಂಡು ಕೊರಳಲ್ಲಿ ಧರಿಸುತ್ತಿದ್ದನಂತೆ. ಪ್ರಾಚೀನ ಭಾರತೀಯರಿಗೆ ಗಣಿಗಾರಿಕೆ ಮತ್ತು ಲೋಹಗಳ ಬಳಕೆ ಗೊತ್ತಿತ್ತು. ಹರಪ್ಪ ಮತ್ತು ಮೊಹೆಂಜೊದಾರೋ ಜನ ತಾಮ್ರ ಚಿನ್ನ ಬೆಳ್ಳಿ ಕಂಚು ಸೀಸ–ಇವನ್ನು ಬಳಸುತ್ತಿದ್ದರೆನ್ನಲು ಸಾಕಷ್ಟು ದಾಖಲೆಗಳಿವೆ. ಕ್ರಿ.ಪೂ. ಸುಮಾರು ೧೫೦೦ರ ಹೊತ್ತಿಗೆ ತವರ ಬಳಕೆಗೆ ಬಂದಿರಬೇಕು. ಅಲ್ಲಿಂದ ೬೦೦ ವರ್ಷಗಳ ಅನಂತರ ಕಬ್ಬಿಣ; ಅದಾದ ೪೦೦ ವರ್ಷಗಳ ಅನಂತರ ಉಕ್ಕು ಬಳಕೆಗೆ ಬಂದವು. ಕಂಚು ಮಾನವನ ಹಿತಕ್ಕೆ ಸಿಕ್ಕಲು ಇನ್ನೂ ಕೆಲವು ಶತಮಾನ ಉರುಳಬೇಕಾಯಿತು.

ಲೋಹಶಾಸ್ತ್ರದ ವಿಷಯ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಸಾಕಷ್ಟು ವಿವರವಾಗಿ ಬಂದಿದೆ. ಔಷಧಿಗಳ ದೃಷ್ಟಿಯಿಂದ ಲೋಹಗಳನ್ನು ಹೇಗೆ ಬಳಸಬೇಕೆಂಬ ವಿಷಯ ಚರಕ ಸುಶ್ರುತರು ತಿಳಿಸಿದ್ದಾರೆ. ಹಾಗೆ ನೋಡಿದರೆ, ಶಿಲಾಯುಗದಲ್ಲಿದ್ದ ಮಾನವ ಪ್ರಗತಿಪಥದಲ್ಲಿ ಒಂದು ಹೆಜ್ಜೆ ಮುಂದಿಟ್ಟದ್ದೆಂದರೆ ತಾಮ್ರ, ಕಬ್ಬಿಣ ಮತ್ತು ಕಂಚುಗಳ ಬಳಕೆಯನ್ನು ಕಂಡುಕೊಂಡಾಗ. ಉಕ್ಕು ಬಂದಾಗ ಇನ್ನೂ ಒಂದು ಹೆಜ್ಜೆ ಮುಂದೆ ಹೋದಂತಾಯಿತು. ಇಷ್ಟಾದರೂ ಅಷ್ಟೇನೂ ಉಪಯೋಗಕ್ಕೆ ಬಾರದ ಚಿನ್ನದ ಆಸೆಯನ್ನು ಮಾತ್ರ ಮಾನವ ಬಿಡಲಾರದೆ ಹೋದ. ಅಷ್ಟ ಧಾತುಗಳಲ್ಲಿ ಚಿನ್ನಕ್ಕೆ ಮೊದಲ ಸ್ಥಾನ ಇದೆ. ಅನಂತರ ಬೆಳ್ಳಿ, ತಾಮ್ರ, ಕಂಚು ಬರುತ್ತವೆ. ಚಿನ್ನವನ್ನು ಸುವರ್ಣ, ಸ್ವರ್ಣ ಎನ್ನುತ್ತಾರೆ. ಅದು ಸೂರ್ಯನ ಅಂಶದಿಂದ ಉಂಟಾದುದಂತೆ. ತುಕ್ಕು ಹಿಡಿಯದ ಕಲೆ ಕೂಡದ ಮೃದುವಾದ ಸದಾ ಥಳಥಳನೆ ಹೊಳೆಯುವ ಚಿನ್ನವನ್ನು ಲೋಹಗಳ ರಾಜನೆಂದು ಕರೆದಿದ್ದಾರೆ. ಬೆಳ್ಳಿಗೆ ಎರಡನೆಯ ಸ್ಥಾನ. ಅದು ಚಂದ್ರನ ಅಂಶದಿಂದ ಉಂಟಾದುದು. ಪರ್ಷಿಯದ ದೊರೆ ಡೇರಿಯಸನಿಗೆ ಭಾರತ ಚಿನ್ನದ ಹುಡಿಯ ರೂಪದಲ್ಲಿ ತನ್ನ ಗೌರವ ಕಾಣಿಕೆಯನ್ನು ಸಲ್ಲಿಸಿತಂತೆ; ಸಾಮಂತ ಪ್ರಭುಗಳು ಬೆಳ್ಳಿಯ ರೂಪದಲ್ಲಿ ಕಪ್ಪ ಒಪ್ಪಿಸಿದರಂತೆ. ಚರಿತ್ರಕಾರ ಹಿರೋಡಟಸ್ ಒಂದು ಸ್ವಾರಸ್ಯವಾದ ಕತೆ ಹೇಳುತ್ತಾನೆ–ಭಾರತದಲ್ಲಿ ಚಿನ್ನವನ್ನು ಭೂಗರ್ಭದಿಂದ ಹೊರ ತೆಗೆಯಲು ಇರುವೆಗಳನ್ನು ಬಿಡುತ್ತಾರೆ–ಎಂದು. ಚಿನ್ನ ಏನು ಭೂಮಿಯಲ್ಲಿ ಹಾಗೆ ಹಾಗೆ ಸಿಗುತ್ತದೆಯೆ? ಸಿಕ್ಕರೂ ಅದನ್ನು ನೆಲದಡಿಯಿಂದ ಹೊರತರಬಲ್ಲ ಇರುವೆಗಳಿವೆಯೆ? ಅವನು ಹೇಳುವ ಇರುವೆಗಳಿಗೆ ಬಲವಾದ ಕೊಂಬುಗಳು ಇದ್ದುವಂತೆ. ಬಹುಶಃ ಅಗೆಯುವ ಪಿಕಾಸಿಗಳನ್ನು ಆತ ಹಾಗೆ ವರ್ಣಿಸಿರಬಹುದೆ? ಲಡಾಕ್ ಮತ್ತು ಟಿಬೆಟ್‌ಗಳಲ್ಲಿ ಹಿಂದೆ ನೆಲ ಅಗೆಯಲು ಕಾಡಕುರಿಯ ಕೊಂಬುಗಳಿಗೆ ಮರದ ಕಾವು ಹಾಕಿ ಒಂದು ಬಗೆಯ ಪಿಕಾಸಿಯನ್ನು ಮಾಡಿಕೊಳ್ಳುತ್ತಿದ್ದರಂತೆ. ಇವೆಲ್ಲ ಚಿನ್ನದ ಬಗ್ಗೆ ಜನಕ್ಕೆ ಇರುವ ಆಸೆ, ಕಲ್ಪನೆ, ಗೌರವಗಳನ್ನು ಎತ್ತಿ ತೋರುತ್ತವೆ. ತಾನು ಮುಟ್ಟಿದ್ದೆಲ್ಲ ಚಿನ್ನವಾಗಿ ಬಿಟ್ಟರೆ–ಎಂದು ಮಾನವ ಅನೇಕ ಬಾರಿ ಯೋಚನೆ ಮಾಡಿರಬೇಕು. ಅದರ ಸುಳುವು ನಮಗೆ ಮೈದಾಸನ ಕತೆಯಲ್ಲಿ ಕಾಣುತ್ತದೆ. ಆತ ದೇವರನ್ನು ಬೇಡಿದ

ಅದನ್ನೆ. ದೇವರು ತಥಾಸ್ತು ಎಂದ. ಮೈದಾಸ ಮುಟ್ಟಿದ್ದೆಲ್ಲ ಚಿನ್ನವಾಯಿತು. ಮುಟ್ಟಿದ ಅನ್ನ ನೀರು, ಕೂತ ಸಿಂಹಾಸನ, ನಿಂತ ನೆಲ, ಅಪ್ಪಿ ಮುದ್ದಿಸಿದ ಪುಟ್ಟ ಮಗಳು ಎಲ್ಲ ಚಿನ್ನವಾಗಿಬಿಟ್ಟವು. ಮೈದಾಸ ದಿಗ್‌ಭ್ರಮೆಗೊಂಡ. ಹುಚ್ಚನಂತಾದ. ಹೆಂಡತಿಯ ಕಾಟವೂ ತಪ್ಪಿ ಆ ತೂಕದ ಚಿನ್ನ ಸಿಗುವಂತಾದರೆ ಮೈದಾಸನ ಬಯಕೆಯನ್ನು ಸಂತೋಷದಿಂದ ಒಪ್ಪಬಹುದಲ್ಲ ಎನ್ನುವ ಜನರೂ ಇದ್ದಾರೆ. ಅದು ವ್ಯಂಗ್ಯದ ಮಾತಾಯಿತು ಬಿಡಿ.

ಚಿನ್ನದ ಆಶೆಯಿಂದ ಮನುಷ್ಯ ಮಾಡದುದೇ ಇಲ್ಲ. ಅದರಿಂದ ಕೊಲೆ ಸುಲಿಗೆಗಳಾಗಿವೆ. ಹಗಲು ದರೋಡೆಗಳಾಗಿವೆ. ಅದರ ಕಳ್ಳ ಸಾಗಾಣಿಕೆ ನಡೆದಿದೆ. ಅದರ ನಿಯಂತ್ರಣ ಜಾರಿಗೆ ಬಂದಿದೆ. ಅದರ ಬೆಲೆ ೬೦ ಇದ್ದದ್ದು ೬೦೦, ೭೦೦ ಆದರೂ ಅದರ ವ್ಯಾಮೋಹ ತಗ್ಗಿಲ್ಲ. ಗಂಡಸಿಗೆ ಅದು ಹಣದ ಪ್ರತೀಕ. ಹೆಂಗಸಿಗೆ ಅದು ಅಲಂಕಾರದ ಪರಾಕಾಷ್ಠೆ. ಚಿನ್ನ ಒಂದೇ ಚಿನ್ನ ಬೇರೆಯದು ಯಾವುದೂ ಚಿನ್ನವಲ್ಲ ಎಂದು ತಿಳಿದಿದ್ದರಿಂದಲೇ ಇಷ್ಟು ಕಷ್ಟ ಕೋಟಲೆಗಳು ಹುಟ್ಟಿಕೊಂಡಿವೆ. ಕಣ್ಣು ತೆರೆದು ನೋಡಿದರೆ ಎಲ್ಲ ಚಿನ್ನವೆ. ಓಸೋನ್ ಭರಿತವಾದ ಬೆಳಗಿನ ತಂಗಾಳಿ, ಹಿತವಾದ ಹೊಂಬಿಸಿಲು, ವರ್ಷಋತುವಿನ ಮೊದಲಲ್ಲಿ ಬರುವ ಬಿರುಮಳೆ, ಹಾಲು ಚೆಲ್ಲಿದಂತೆ ಲೋಕವನ್ನೆಲ್ಲ ಆವರಿಸುವ ಹುಣ್ಣಿಮೆಯ ಬೆಳದಿಂಗಳು, ಹಾಲು, ಹಣ್ಣು, ಜೇನು, ಪ್ರೇಮ, ವಾತ್ಸಲ್ಯ, ಪ್ರೀತಿ, ವಿಶ್ವಾಸಗಳು, ಗೆಳೆತನ, ಸಾಹಿತ್ಯ, ಕಲೆ, ನೃತ್ಯ, ಸಂಗೀತ, ನಾಟಕ–ಇವುಗಳಲ್ಲಿ ಯಾವುದು ಚಿನ್ನವಲ್ಲ! ಹೊಂಬಣ್ಣದ ಬತ್ತದ ರಾಶಿ, ಜೋಳ, ಗೋದಿ, ಹಸುವಿನ ಬೆಣ್ಣೆ–ಇವೇನು ಚಿನ್ನವಲ್ಲವೆ! ಮಾವು, ಮಲ್ಲಿಗೆ, ನವಿಲು, ಗಿಣಿ, ಇವು ಯಾವ ಚಿನ್ನಕ್ಕೆ ಕಡಿಮೆ? ಇವನ್ನೆಲ್ಲ ಬಿಟ್ಟುಕೊಟ್ಟು ನಾನು ಮುಟ್ಟಿದ್ದೆಲ್ಲ ಚಿನ್ನವಾಗಲಿ ಎಂಬ ಹುಂಬತನ ನಮ್ಮದಾಗಬಾರದು.

ಈ ಸುಂದರವಾದ ವಸುಂಧರೆಯಲ್ಲಿ ನಾವು ಕಾಣುವುದೆಲ್ಲ ಸುವರ್ಣವೇ, ಚಿನ್ನವೆ.

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಮಾನವಿಕ ಕರ್ಣಾಟಕ
★ ಪ್ರಬುದ್ಧ ಕರ್ಣಾಟಕ
★ ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಆಜೀವ ಸದಸ್ಯತ್ವ: ನೂರು ರೂಪಾಯಿಗಳು)

(ಪ್ರತಿಯೊಂದಕ್ಕೂ)

ಡೈರೆಕ್ಟರ್

'ಪ್ರಸಾರಾಂಗ'

ಮಾನಸ ಗಂಗೋತ್ರಿ, ಮೈಸೂರು–೫೭೦೦೦೬